

శాలా పత్రిక

ಕನ್ನಡ ಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೬೯.] ಜನವ್ಯೂವರಿ ೧೮೯೪ಳ. [ಸಂಚಿಕೆ ೧.

ಅನುಕ್ರಮಣಿಕೆ.

	ಪುಟ.
ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ...	೧
ದೀಪಾವಳಿಯ ಸೂಟಿಯು ಪ್ರಾರಂಭದಲ್ಲಿ ಕಾಲೇಜದ ವಿದ್ಯಾರ್ಥಿಗಳಿಗೆ ರಾ ರಾ ಸವದಿಯವರು ಮಾಡಿದ ಉಪದೇಶ	೭
ಮಕ್ಕಳ ನೀತಿಶಿಕ್ಷಣವು	೧೧
ಕಲಿಸುವ ಪದ್ಧತಿಗಳು	೧೬
ಸೂಚನೆಗಳು.	೨೧
ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು ೧೮೯೩.	೨೨

CONTENTS.

Educational Intelligence and Useful Notes ...	1
Address to CollEGE Students on the Eve of the Divali Vacation by Mr. Savadi... ...	7
The Moral Training of Children	11
Methods of Teaching	16
Departmental Notices	21
Dharwar Training College Certificate Examination—1893.	22

DHARWAR:

PRINTED AT THE KARNATIC BOOK DEPOT PRESS,

1894.

ಕನ್ನಡ ಶಾಲಾಪತ್ರಕದ ವರ್ಗಣಿ ವರ್ಷಕ್ಕೆ ಮುಂಗಡ ... ೧೫ ಆಣೆ
ಒಂದು ಸಂಚಿಕೆಗೆ ... ... ೨ ಆಣೆ

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ.	೪	ಪಂಕ್ತಿಗಳವರೆಗೆ	೧ ರೂ
ಮೂರುಸಾರೆ ಇಟ್ಟರೆ	೧೦	,,	,,
ಆರುಸಾರೆ ಇಟ್ಟರೆ.	೧೬	,,	,,

ಸೂಚನೆಗಳು.

೧. ಶಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು

೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಹಾಸಲು ಬೀಳುವದು.

೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ೫ ನ್ಮಡಿ ಫೀ ಬೀಳುವದು.

೪. ಪ್ರಕಟನೆಯ ಕೂಡ ಹಣ ಕಳುಹಲಿಕ್ಕೆ ಬೇಕು.

೫. ಟಿಕೀಟು ಇಟ್ಟ ಹೊರ್ತು ಉತ್ತರ ಶಿಗಲಾರದು.

RAOJI B. KARANDIKAR.
ವ್ಯವಸ್ಥಾಪಕ, ಕನ್ನಡ ಶಾಲಾಪತ್ರಕ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಕ್ಷಣೋತ್ಕರ್ಷಮುಂ ।
ನಿಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ಜಯದಿಂದಿತ್ತಪೆವೋದುವರ್ಗೆಸಗುಣಂ ತೋರಲ್ಕೆಕೈಕೊಂಬುದೈ ।
ಸಯಿಯಿಂದೋಷವತಿದ್ದವೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩೯.] ಜಾನೆವರಿ ೧೮೯೯. [ಸಂಚಿಕೆ ೧.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಐಲೀಕಡೆಗೆ ಶಿಕ್ಷಣಸಂಬಂಧವಾಗಿ ಮ್ಯುನಿಸಿಪಾಲಿಟಿಯವರು ನಡಸುವಂತೆ ಅನುಸರಿಸತಕ್ಕ ಕೆಲವು ನಿಯಮಗಳನ್ನು ಮಾಡಿ, ಆ ನಿಯಮಗಳನ್ನು ಕುರಿತು ಬೇರೆ ಬೇರೆ ಮ್ಯುನಿಸಿಪಾಲಿಟಿಯವರ ಅಭಿಪ್ರಾಯಗಳನ್ನು ಸರಕಾರದವರು ಕೇಳಿದ್ದಾರೆ. ಆ ನಿಯಮಗಳು ಯಾವವೆಂದರೆ:—

೧. ಪ್ರತಿಯೊಂದು ಮ್ಯುನಿಸಿಪಾಲಿಟಿಯವರು "ಸ್ಕೂಲ ಕಮಿಟಿ" ಎಂಬದೊಂದು ಸಭೆಯನ್ನು ನೇಮಿಸತಕ್ಕದ್ದು.

೨. ಶಿಕ್ಷಣಸಂಬಂಧವಾಗಿ ಸರಕಾರೀ ವಿದ್ಯಾಖಾತೆಯಲ್ಲಿ ನಡಿಯುತ್ತಿರುವ ನಿಯಮಗಳಂತೆಯೇ ಮ್ಯುನಿಸಿಪಾಲಿಟಿಯ ಪಾಠಶಾಲೆಗಳಲ್ಲಿ ಅಭ್ಯಾಸವು ನಡಿಯತಕ್ಕದ್ದು. ಆದರೆ ಸ್ಥಳಿಕ ಅನುಕೂಲ ಪ್ರತಿಕೂಲತೆಗಳಂತೆ ಈ ನಿಯಮಗಳಲ್ಲಿ ವಿಶೇಷ ಪರವಾನಿಗೆಯಿಂದ ಕೆಲಮಟ್ಟಿಗೆ ಹೆಚ್ಚು ಕಡಿಮೆ ಮಾಡಬಹುದು.

೩. ಜಾತಿಭೇದವನ್ನು ಲಕ್ಷಕ್ಕೆ ತಾರದೆ ಶ್ರೀಮಂತರಿಗೂ ಬಡವರಿಗೂ ಸರಿಯಾಗಿ ಶಿಕ್ಷಣ ದೊರೆಯುವಂತೆ ವ್ಯ

ವಸ್ಥೆ ಇಡತಕ್ಕದ್ದು. ಈ ಶಾಲೆಗಳ ಪರೀಕ್ಷೆಗಳನ್ನೂ ಮೇಲ್ವಿಚಾರಣೆಯನ್ನೂ ಸರಕಾರೀ ವಿದ್ಯಾಖಾತೆಯ ಅಧಿಕಾರಸ್ಥರು ಮಾಡುವರು.

೪. ಪ್ರತಿಯೊಂದು ಮ್ಯುನಿಸಿಪಾಲಿಟಿಯವರು ವರ್ಷಕ್ಕೊಮ್ಮೆ ಮಾಡತಕ್ಕ ಬಜೆಟಿನಲ್ಲಿ "ಎಜ್ಯುಕೇಶನ ಬಜೇಟು" ಎಂಬ ಒಂದು ವಿಶೇಷ ಸವರು ಮಾಕಿ, ಅದರಲ್ಲಿ ಆದಾಯವೆಚ್ಚಗಳ ಬೇರೆ ಬೇರೆ ರಕಮುಗಳನ್ನು ಕ್ರಮವಾಗಿ ತೋರಿಸತಕ್ಕದ್ದು.

೫. ಸರಕಾರವವರು ಮ್ಯುನಿಸಿಪಾಲಿಟಿಯವರಿಗೆ ಕೊಟ್ಟಂಥ ನೌಕರರಿಗೆ ಪೆನ್‌ಶನ್, ಸಂಬಳ, ಅಕ್ಟಿಂಗ ಆಲೋಯನ್ಸು, ರಜೆ ಮುಂತಾದವುಗಳು "ಸಿವ್ಹಿಲ್ ಸರ್ವೀಸ ರೆಗ್ಯುಲೇಶನ್ನುಗಳಲ್ಲಿ" ಹೇಳಿರುವ ನಿಯಮುಗಳಂತೆ ದೊರೆಯುತಕ್ಕದ್ದು.

೬. ೧೦ ರೂಪಾಯಿಗಿಂತ ಹೆಚ್ಚು ಸಂಬಳದ ಸ್ಥಳಗಳನ್ನು ಟ್ರೇನ್ಡ ಜನರಿಗೆ ಅಥವಾ ೧೦ ರೂಪಾಯಿಗಿಂತ ಹೆಚ್ಚು ತಲಬುಳ್ಳ ಸರಕಾರೀ ನೌಕರರಿಗೆ ವೊದಲು ಕೊಡತಕ್ಕದ್ದು.

೭. ಈ ನಿಯಮುಕ್ಕೆ ಅನುಸರಿಸಿ ಯಾವತ್ತು ನೇಮಣೂಕುಗಳನ್ನು ಮಾಡುವ ಅಧಿಕಾರವು ಮ್ಯುನಿಸಿಪಾಲಿಟಿಯವರಿಗೂ ಸ್ಕೂಲಕಮಿಟಿಯವರಿಗೂ ಉಂಟು.

೮. ಶಾಲೆಗಳ ಸಂಬಂಧದ ಕೆಲಸಗಳನ್ನು ಕೈಕೊಳ್ಳಲಿಕ್ಕೆ ಸಾಮರ್ಥ್ಯವಿಲ್ಲವ ಮ್ಯುನಿಸಿಪಾಲಿಟಿಯವರು, ಆ ಸಂಬಂಧದಿಂದ ಮೆ. ಡೈರೆಕ್ಟರ ಆಫ ಪಬ್ಲಿಕ ಇನಸ್ಟ್ರುಕ್ಷನ್ನರವರ ಕತೆಗೆ ಬರಕೊಂಡರೆ, ಆ ಶಾಲೆಗಳ ವ್ಯವಸ್ಥೆಯನ್ನು ಸರಕಾರದ ವಿದ್ಯಾಖಾತೆಯ ಮುಖಾಂತರವಾಗಿಯೇ ಮಾಡುವರು.

೯. ಶಾಲೆಗಳನ್ನು ಮ್ಯುನಿಸಿಪಾಲಿಟಿಯವರ ವಶಕ್ಕೆ ಕೊಡುವಾಗ್ಗೆ ಅವುಗಳಲ್ಲಿ ತೆಗೆದುಕೊಳ್ಳುತ್ತಿರುವ ಫೀವರಗ

ಳಲ್ಲಿ ಮೆ. ಡೈರೆಕ್ಟರ ಆಫ ಪಬ್ಲಿಕ ಇನಸ್ಟ್ರಕ್ಷನ್ನರವರ ಅ
ಪ್ಪಣೆಯ ಹೊರ್ತು ಹೆಚ್ಚು ಕಡಿಮೆ ಮಾಡುವ ಅಧಿಕಾರವು
ಮ್ಯುನಿಸಿಪಾಲಿಟಿಯವರಿಗಿಲ್ಲ. ವೈನಾಕ್ಯುಲರ ಮಾಸ್ತರ
ರ ಕೋಡಿನಲ್ಲಿ ಹೇಳಿರುವ ನಿಯಮಗಳಿಗೆ ಸರಿಯಾಗಿ, ಶಾ
ಲೆಗಳಲ್ಲಿ ಮಾಫೀ ಹುಡುಗರ ಸಂಖ್ಯೆಯು ಇರತಕ್ಕದ್ದು.
ಗವರ್ನಮೆಂಟ ಮತ್ತು ಲೋಕಲಬೋರ್ಡ ಸ್ಕೂಲರಶಿಪ್ಪು
ಗಳ ಸಂಬಂಧವಾಗಿ ಇರುವ ನಿಯಮಗಳಿಗೆ ಸರಿಯಾಗಿ ಮ್ಯು
ನಿಸಿಪಾಲಿಟೀ ಸ್ಕೂಲರಶಿಪ್ಪುಗಳನ್ನು ಕೊಡತಕ್ಕದ್ದು.

೧೦. ಮ್ಯುನಿಸಿಪಾಲಿಟಿಯ ಹದ್ದಿನೊಳಗೆ ಸ್ವತಂತ್ರ ಜನ
ರು ಹಾಕಿದಂಥ ಮತ್ತು ಸರಕಾರೀ ಇನಾಮು ಪಡೆಯುವ
ಇಚ್ಛೆಯುಳ್ಳಂಥ ಪ್ರಾಥಮಿಕ ಶಾಲೆಗಳ ರಜಿಸ್ಟರವನ್ನು ಇ
ಡತಕ್ಕದ್ದು, ಮತ್ತು ಅವುಗಳಲ್ಲಿ ಯೋಗ್ಯವಾದ ಶಾಲೆಗಳ
ಬಗ್ಗೆ ವಿದ್ಯಾಖಾತೆಯವರ ಕಡೆಗೆ ಸಿಫಾರಸು ಮಾಡತಕ್ಕದ್ದು.

ಪುಣೆಯಲ್ಲಿರುವ "ಎಜ್ಯುಕೇಶನ ಸೊಸಾಯಿಟಿ" ಎಂ
ಬ ಸಂಘದವರು ಶಿಕ್ಷಣದ ಸಂಬಂಧವಾಗಿ ಮಾಡುತ್ತಿರುವ
ಪ್ರಯತ್ನಗಳನ್ನು ಕುರಿತು ನಾವು ಆಗಾಗ್ಗೆ ಬರೆದು ನಮ್ಮ
ವಾಚಕರಿಗೆ ತಿಳಿಸಿರುತ್ತೇವಷ್ಟೇ. ಅವರ ಮೇಲ್ವಿಚಾರ
ಣೆಗೆ ಒಳಗಾದ "ನ್ಯೂ ಇಂಗ್ಲಿಷಸ್ಕೂಲ" ಎಂಬ ವಿದ್ಯಾಲ
ಯದಲ್ಲಿ ಮೇಲಾದ ಶಿಕ್ಷಣವು ದೊರೆಯುತ್ತದೆ. ಈ ವಿ
ದ್ಯಾಲಯಕ್ಕೆ ವಿಶೇಷವಾಗಿ ಪರಸ್ಥಳದ ವಿದ್ಯಾರ್ಥಿಗಳು ಹೋ
ಗುತ್ತಿರುವವರಿಂದ, ಅವರು ಸ್ವತಂತ್ರವಾದ ಭೋಜನಗೃ
ಹಗಳಲ್ಲಿ ಊಟಮಾಡಿ, ಬಾಡಿಗೆಯಿಂದ ಬೇರೆ ಮನೆಗಳ
ನ್ನು ಹಿಡಿದು, ಇರಬೇಕಾಗುತ್ತದೆ. ಚಿಕ್ಕ ಚಿಕ್ಕ ಹುಡು
ಗರು ತಾಯಿತಂದೆಗಳನ್ನು ಬಿಟ್ಟು, ಪುಣೆಯಂಥ ದೊಡ್ಡ
ಪಟ್ಟಣದಲ್ಲಿ ಸ್ವತಂತ್ರವಾಗಿ ಇದ್ದು, ಅಭ್ಯಾಸ ಮಾಡುವ

ದು, ಬಹಳ ದುಸ್ತರದ ಕೆಲಸವೆಂದು ಪ್ರತ್ಯೇಕವಾಗಿ ಹೇಳುವ ಪ್ರಯೋಜನವಿಲ್ಲ. ಈ ಮೇರೆಗೆ ವಿದ್ಯಾರ್ಥಿಗಳಿಗೆ ಆಗುತ್ತಿರುವ ಅನಾನುಕೂಲತೆಯನ್ನು ನೋಡಿ "ಸೊಸೈಟಿಯವರು" ನ್ಯೂ ಇಂಗ್ಲಿಷಸ್ಕೂಲಿಗೆ ಸೇರಿದ ಬಂದು ಭೋಜನಗೃಹವನ್ನು ಸ್ಥಾಪನೆ ಮಾಡತಕ್ಕವರಿದ್ದಾರೆ. ಈ ಗೃಹದಲ್ಲಿ ವಿದ್ಯಾರ್ಥಿಗಳ ಊಟಉಡಿಗೆ, ಶಯನಗೃಹ, ಅಭ್ಯಾಸ, ವ್ಯಾಯಾಮ ಮುಂತಾದವುಗಳ ವಿಷಯವಾಗಿ ತಕ್ಕ ವ್ಯವಸ್ಥೆ ಮಾಡತಕ್ಕವರಿದ್ದಾರಪ್ಪೇ ಅಲ್ಲ, ಆದರೆ ಅವರ ವಿದ್ಯಾಗುರುಗಳು ಸಹ ಅವರ ಬಳಿಯಲ್ಲಿಯೇ ವಾಸಿಸಿ, ಅವರಿಗೆ ಸುನೀತಿ, ಸದಾಚರಣೆ ಮುಂತಾದ ಗುಣಗಳು ಹತ್ತುವಂತೆ ಮಾಡುವರು. ಈ ಪ್ರಕಾರದ ಪ್ರಯತ್ನವು ನಮ್ಮ ದೇಶದಲ್ಲಿ ನಡೆದದ್ದು ಇದೇ ಮೊದಲು. ಈ ಸ್ತುತ್ಯ ಉದ್ಯೋಗಕ್ಕೆ ಯಶಸ್ಸು ಬರಲೆಂದು ನಾವು ಮನಃಪೂರ್ವಕವಾಗಿ ಆಶಿಸುತ್ತೇವೆ.

ಯುರೋಪ ಖಂಡದೊಳಗೆ ಶಿಕ್ಷಣವಲ್ಲಿ ಹಿಂದೆ ಬಿದ್ದಂಥ ದೇಶಗಳಲ್ಲಿ ಓದಲಿಕ್ಕೂ ಬರೆಯಲಿಕ್ಕೂ ಬರುವಂಥ ಸ್ತ್ರೀ ಪುರುಷರ ಪ್ರಮಾಣವು ಕೆಳಗೆ ಬರೆದಂತೆ ಇರುತ್ತದೆ:—

ಪಂಗಾರಿಯಲ್ಲಿ ಸಾವಿರಕ್ಕೆ ೪೦೮ ಜನ ಪುರುಷರಿಗೆ ೨೮೩ ಜನ ಸ್ತ್ರೀಯರಿಗೆ, ಇಟಲಿಯಲ್ಲಿ ೩೭೭ ಜನ ಪುರುಷರಿಗೆ ೨೩೬ ಜನ ಸ್ತ್ರೀಯರಿಗೆ, ಪೋರ್ತುಗಾಲದಲ್ಲಿ ೨೫೦ ಜನ ಪುರುಷರಿಗೆ ೧೦೮ ಜನ ಸ್ತ್ರೀಯರಿಗೆ ಓದಲಿಕ್ಕೂ ಬರಿಯಲಿಕ್ಕೂ ಬರುತ್ತದೆ. ಆದರೆ ಹಿಂದುಸ್ತಾನದಲ್ಲಿ ಬಂದು ಸಾವಿರ ಜನ ಸ್ತ್ರೀಪುರುಷರಲ್ಲಿ ೧೦೯ ಜನ ಪುರುಷರಿಗೆ ೬ ಜನ ಸ್ತ್ರೀಯರಿಗೆ ಓದಲಿಕ್ಕೂ ಬರೆಯಲಿಕ್ಕೂ ಬರುತ್ತದೆ. ಇದರಿಂದ ಯುರೋಪ ಖಂಡದಲ್ಲಿ ಕಡಿಮೆ ಸುಧಾರಿಸಿದವರು

ಎಂದು ಹೇಳಲ್ಪಡುವ ದೇಶಗಳನ್ನು ಸಹ ಹಿಂದುಸ್ತಾನವು ಸರಿಗಟ್ಟಲಾರದೆಂದು ಸ್ಪಷ್ಟವಾಗಿ ತಿಳಿಯುವದು.

ಇಚಲಕರಂಜಿಯ ಶ್ರೀಮಂತ ಬಾಬಾಸಾಹೇಬರು ತಮ್ಮ ಊರಲ್ಲಿ ಬಟ್ಟೆಗಳನ್ನು ನೇಯುವ ಜನರಿಗೆ ಚನ್ನಾಗಿ ಸಹಾಯ ಮಾಡುತ್ತಿದ್ದಾರೆ. ಅದರಿಂದ ಈಗ ಅಲ್ಲಿ ಶಹಾಪುರೀ, ನಾರಾಯಣಪೇಟೀ ಮುಂತಾದ ಹೆಚ್ಚಿನ ಸೀರೆಗಳೂ ಧೋತರಗಳೂ ಎಂಬ ಊರಲ್ಲಿ ಆಗುವಂಥ ಪೀತಾಂಬರಗಳೂ ಹುಟ್ಟಹತ್ತಿವೆ. ಅವರು ನೇಕಾರರ ಸಲುವಾಗಿ ಮಗ್ಗದ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಪಕ್ಕಾ ಬಣ್ಣ ಹಾಕುವ ಉದ್ಯೋಗಕ್ಕೆ ಉತ್ತೇಜನ ಕೊಡಹತ್ತಿದ್ದಾರೆ. ಈ ಮೇರೆಗೆ ಉಳಿದ ಶ್ರೀಮಂತರೂ ಸಹಾಯ ಮಾಡಿದರೆ, ಹಿಂದುಸ್ತಾನದ ಪಾಚೀನ ಕೈಗಾರಿಕೆಗಳು ತಿರುಗಿ ಬೇಗನೆ ಉದಯಕ್ಕೆ ಬರುವವೆಂದು ಹೇಳಲಿಕ್ಕೆ ಏನೂ ಸಂದೇಹವಿಲ್ಲ.

ಶ್ರೀ [illegible] ಜಾಗದ್ಗಾರುಗಳು ಕೊಯಿಮತ್ತೂರಿನ ಕಡೆಗೆ ಹೋದಾಗ್ಗೆ, ಅಲ್ಲಿಯ ಶಿಷ್ಯರು ಸುಮಾರು ೫೬ ಜಾವಿರ ರೂಪಾಯಿಗಳನ್ನು ಅವರಿಗೆ ಕಾಣಿಕೆಯಾಗಿ ಕೊಟ್ಟರು. ಅಲ್ಲಿಯ ಮೆ. ಕಲೆಕ್ಟರಸಾಹೇಬರು ಈ ಸುದ್ದಿಯನ್ನು ಕೇಳಿ ಈ ಹಣದ ಮೇಲೆ ಪಾಪ್ತಿಯುಕರವನ್ನು ತೆಗೆದುಕೊಂಡರು. ಕರವನ್ನು ತೆಗೆದುಕೊಳ್ಳುವ ಕಾಲಕ್ಕೆ ಸ್ವಾಮಿಗಳು ಈ ಹಣವ ವಿಸಿಯೋಗವು ಧರ್ಮಕೃತ್ಯಗಳಿಗೆ ಆಗುತ್ತಿರುವವರಿಂದ ಕರತೆಗೆದುಕೊಳ್ಳಬಾರದೆಂದು ಎಷ್ಟು ಹೇಳಿದರೂ ಕೇಳಲಿಲ್ಲ. ಕಟ್ಟಕಡೆಗೆ ಅವರು ಸರಕಾರಕ್ಕೆ ಈ ಸಂಬಂಧವಾಗಿ ಅಪೀಲು ಮಾಡಲು ಅವರು ಅದರ ಬಗ್ಗೆ ಯೋಗ್ಯ ವಿಚಾರಮಾಡಿ, ಧರ್ಮ ಕೃತ್ಯಕ್ಕಾಗಿ ವ್ಯ

ಯವಾಗುವ ಹಣದಮೇಲೆ ಪ್ರೀತಿಯು ಕಡಿಮೆಗೆದುಕೊಳ್ಳ ಬಾರದೆಂದು ನಿರ್ಣಯಿಸಿದರು.

ಊರ್ಜಿತಸ್ಥಿತಿಯನ್ನು ಹೊಂದುವದಕ್ಕೆ ಉಪಾಯಗಳು—

೧. ಉದ್ಯೋಗ ತಪ್ಪಬೇಡಿರಿ.

೨. ವ್ಯವಹಾರದ ಸಂಬಂಧದಲ್ಲಿ ನಗೆಚಾಟಿಕೆಯನ್ನು ಮಾತಬೇಕಿರಿ.

೩. ಕಂಡ ಕಂಡವರ ಮೇಲೆ ನಿಷ್ಪ್ರಯೋಜಕ ಬೇಡಿರಿ.

೪. ಸ್ವಂತ ವಿಚಾರದಿಂದ ನಡೆಯಿರಿ.

೫. ಹೊತ್ತಿಗೆ ಸಿದ್ಧರಾಗಿರಿ; ತಡಮಾಡಬೇಡಿರಿ.

೬. ಬಂದು ಕೆಲಸದಲ್ಲಿ ತೊಡಗಿರುವಾಗ, ಮತ್ತೊಂದು ಕೆಲಸದ ಸಂದಿಯನ್ನು ತೆಗೆಯಬೇಡಿರಿ.

೭. ಕ್ರಮವಾಗಿಯೂ ಯೋಗ್ಯತಾನುಸಾರವಾಗಿಯೂ ನಿಯಮಕ್ಕೆ ಸರಿಯಾಗಿಯೂ ಹೊತ್ತು ಹೊತ್ತಿಗೆ ಕೆಲಸಮಾಡಿರಿ.

೮. ಅನ್ಯರ ಕೆಲಸಗಳಲ್ಲಿಯೂ ನಿಮಗೆ ತಿಳಿಯುವ ಹೋರೆಗಳಲ್ಲಿಯೂ ಕೈಹಾಕಬೇಡಿರಿ.

೯. ಪರರ ಭರವಸೆ ಹಿಡಿಯಬೇಡಿರಿ.

೧೦. ಕೊಟ್ಟ ಮಾತಿಗೆ ತಪ್ಪಬೇಡಿರಿ.

೧೧. ವೈಗಳ್ಳತನದಿಂದ ಹೊತ್ತುಗಳೆಯಬೇಡಿರಿ.

೧೨. ಅನ್ಯರಿಗೆ ಸಹಾಯ ಮಾಡಿರಿ; ಆದರೆ ಹೆಸರು ಪಡೆಯಬೇಕೆಂಬ ಹೆಮ್ಮೆಗೆ ಬಳಗಾಗಿ ನಿಮ್ಮ ಯೋಗ್ಯತೆಮೀರಿ ಕೆಲಸ ಮಾಡಬೇಡಿರಿ.

೧೩. ಇಲ್ಲ ಅನ್ನಲಿಕ್ಕೆ ಯಾರ ಭಿಡೆಯನ್ನೂ ಹಿಡಿಯಬೇಡಿರಿ.

೧೪. ನಮ್ಮ ಭಾವದಿಂದಲೂ, ನ್ಯಾಯದಿಂದಲೂ ವರ್ತಿಸಿರಿ, ಹೆರವರನ್ನು ದಯದಿಂದಲೂ ಪ್ರೀತಿಯಿಂದಲೂ ನಡಿಸಿಕೊಳ್ಳಿರಿ.

ADDRESS TO COLLEGE STUDENTS ON THE EVE OF THE DIVALI VACATION BY Mr. SAVADI.

ದೀಪಾವಳಿಯ ಸೂಟಿಯ ಆರಂಭದಲ್ಲಿ ಕಾಲೇಜದ ವಿದ್ಯಾರ್ಥಿಗಳಿಗೆ ರಾ. ರಾ. ಸವದಿಯವರು ಮಾಡಿದ ಉಪದೇಶವು.

ಪ್ರಿಯ ವಿದ್ಯಾರ್ಥಿಗಳೇ, ಇನ್ನು ಮೇಲೆ ನಮ್ಮ ನಿಮ್ಮ ವಿಯೋಗವು ಬೇಗನೆ ಆಗತಕ್ಕದ್ದುಂಟು. ಆದದ್ದರಿಂದ ನಮ್ಮೆಲ್ಲರಿಗೆ ಅಸಮಾಧಾನವುಂಟಾಗಿದೆ. ಆದರೆ ನಾವು ಈ ಅಸಮಾಧಾನವಲ್ಲಿಯೇ ಮುಳುಗಿರದೆ, ನಾವು ನಮ್ಮ ಕರ್ತವ್ಯವನ್ನು ಮಾಡುವದು ಉಚಿತವು. ಆ ಕಾರಣ ವಿದ್ಯಾಗೌರವ, ಶಾಲಾಗುರುಗಳ ಕರ್ತವ್ಯಕರ್ಮ ಇವುಗಳನ್ನು ಕುರಿತು ನಾಲ್ಕು ಮಾತುಗಳನ್ನು ಹೇಳುತ್ತೇವೆ. ಆ ವುಗಳನ್ನು ಸಾವಧಾನ ಚಿತ್ತದಿಂದ ಕೇಳಿಕೊಂಡು, ನೀವು ಗುರುಸ್ಥಾನಾಪನ್ನರಾದಮೇಲೆ ಅವುಗಳನ್ನನುಸರಿಸಿ ನಡೆದು, ಐಹಿಕ ಮತ್ತು ಪಾರಲೌಕಿಕ ಸುಖಗಳನ್ನು ಪಡೆಯುವಿರೆಂದು ತುಂಬಾ ನಂಬುತ್ತೇವೆ.

೧. ಶಾಲಾಗುರುಗಳ ಉದ್ಯೋಗದ ಮಹತ್ವವು— ಗುರುರ್ಬ್ರಹ್ಮಾ ಗುರುರ್ವಿಷ್ಣು ಗುರುರ್ದೇವೋ ಮಹೇಶ್ವರಃ। ಗುರುಸ್ಸಾಕ್ಷಾತ್ಪರಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥೧॥ ಈ ಮೇರೆಗೆ ಗುರುಗಳ ಮಹಾತ್ಮ್ಯವು ಹೆಚ್ಚಿನದೆಂದು ನಮ್ಮ ಪ್ರಾಚೀನರು ಹೇಳಿದ್ದಾರೆ. ಗುರುಶಬ್ದವಾವರೂ ಅವನು ಮಹತ್ವವುಳ್ಳವನೆಂದು ತಿಳಿಸುತ್ತದೆ. ಗೌರವಶಬ್ದವು ಸಹ

ಗುರುಕುಲದಿಂದಲೇ ಹುಟ್ಟಿರುವಕಾರಣ, ಗುರುತ್ವವೇ ಗೌರವದ ಮುಖ್ಯಕಾರ್ಯಪಾವಂತಾಯಿತು. ಜನಿತಾಚೋಪನೀತಾಚಯಸ್ತುವಿದ್ಯಾಂ ಪ್ರಯಚ್ಛತಿ । ಅನ್ನದಾತಾಭಯತ್ರಾತಾಪಂಚೈತೇಪಿತರಃಸ್ಮೃತಾಃ ॥ ಹಡೆದವನೂ, ಮುಂಜಿಯಮಾಡಿದವನೂ ವಿದ್ಯೆಯನ್ನು ಕಲಿಸಿದವನೂ, ಅನ್ನವನ್ನುಕೊಟ್ಟವನೂ, ಸಲಹಿದವನೂ, ಭಯುವೊದಗಿದಾಗ ರಕ್ಷಿಸಿದವನೂ, ತಂದೆಗೆ ಸಮಾನರೆಂದು ಅನಿಸಿಕೊಳ್ಳುತ್ತಾರೆ. ಮುತ್ತೆ ವಿದ್ಯಾವದಾತಿವಿನಯಂ ವಿನಯಾದ್ಯಾತಿಪಾತ್ರತಾಂ । ಪಾತ್ರತ್ವಾದ್ಧನಮಾಪ್ನೋತಿಧನಾದ್ಧರ್ಮಂತತಃಸುಖಂ ॥ ೧ ॥ ವಿದ್ಯೆಯಿಂದವಿನಯವನ್ನೂ, ವಿನಯದಿಂದ ಪಾತ್ರತ್ವವನ್ನೂ, ಪಾತ್ರತ್ವದಿಂದ ಧನವನ್ನೂ, ಧನದಿಂದ ಧರ್ಮವನ್ನೂ, ಧರ್ಮದಿಂದ ಸ್ಥಿರವಾದ ಪಾರಲೌಕಿಕ ಸಾಖ್ಯವನ್ನೂ ಪೊರಕುವವೆಂದು ಮೇಲಿನ ಶ್ಲೋಕದ ಅರ್ಥವು. ಧನವನ್ನೂ ಪಾರಲೌಕಿಕ ಸುಖವನ್ನೂ ಗಳಿಸಿಕೊಡುವಂಥ ವಿದ್ಯೆಯನ್ನು ಕಲಿಸುವ ಶಾಲಾಗುರುಗಳ ಮಹತ್ವವು ಇಷ್ಟೇ ಇರುತ್ತದೆಂದು ವರ್ಣಿಸುವದು ಅಸಾಧ್ಯ. ಧನವಂತು ಈ ಲೋಕದ ಕಲ್ಪವೈಕ್ಷವಾಗಿದೆ. "ಹಣವಿಲ್ಲದವನು ಹೆಣಕ್ಕಿಂತಕಡೆ" "ದುಡ್ಡಿಲ್ಲದವನು ಕಡಿಗಿಂತ ಹಗುರು" ಎಂಬ ಗಾದೆಗಳಿಂದ ಐಹಿಕ ಸುಖೋಪಭೋಗಕ್ಕೂ ಸಂಸಾರಯಾತ್ರೆಗೂ ದುಡ್ಡಿನ ಅವಶ್ಯಕತೆಯು ಹೆಚ್ಚಿನದೆಂಬದು ವ್ಯಕ್ತವಾಗುತ್ತದೆ. ಆದರೆ ದುಡಿನಿಂದ ಧರ್ಮಗಳಿಸಿಕೊಂಡು, ಆ ಧರ್ಮದಿಂದ ಪಾರಲೌಕಿಕ ಸುಖವನ್ನು ಪಡೆಯುವದೇ ಎಲ್ಲ ಕೆಲಸಗಳಲ್ಲಿ ಮೇಲಾದದ್ದು. ಆದ್ದರಿಂದ ಎಲ್ಲ ಮೇಲಾದ ಉದ್ಯೋಗಗಳಲ್ಲಿ ವಿದ್ಯಾಗುರುವಿನ ಉದ್ಯೋಗವು ಬಹಳಾಗಿದೆ. ಧರ್ಮೋಪದೇಶ, ಶಾಲಾಧ್ಯಾಪನ, ಈ ಉದ್ಯೋಗಗಳು ಎಲ್ಲಕ್ಕೂ ಮೇಲಾವವೂ, ಮಾನಪ್ರದವಾದವೂ ಎಂದು ಪಾಶ್ಚಿಮಾತ್ಯ

ರು ಹೇಳುವ ಮಾತು ದಿಟವು. ಕ್ಷುಧಾರ್ತನಾದ ಅಭ್ಯಾಗ
ತನಿಗೆ ಬಪ್ಪೊತ್ತು ಊಟಕ್ಕೆ ಹಾಕಿದರೆ ಬರುವ ಪುಣ್ಯವು
ಮೇರು ಸಮವಾದ ಬಂಗಾರವನ್ನು ಇಲ್ಲಪೆ ಕೋಟಿ ಗೋವು
ಗಳನ್ನು ದಾನಮಾಡಿದ ಪುಣ್ಯಕ್ಕೆ ಸರಿಯಾಗಿರುವದೆಂದು ಪು
ರಾಣಗಳು ಸಾರುತ್ತವೆ. ಅಂದಮೇಲೆ ಮನುಜನಿಗೆ ಅಮರ
ಣ ಅನ್ನವನ್ನು ಕೊಡುವ ವಿದ್ಯಾದಾನ ಮಾಡುವಂಥ ಪುಣ್ಯ
ಕ್ಕೆ ಜೋಡಾದ ಪುಣ್ಯವು ಇನ್ನೊಂದುಂಟೇ? ಇಂಥ ವಿ
ದ್ಯಾದಾನವನ್ನು ನೀವು ಮಾಡತಕ್ಕವರಿದ್ದೀರಿ. ಇದರಿಂದ
ನೀವು ಕೈಕೊಂಡ ಉದ್ಯೋಗವು ಬಹು ಘನವಾದದ್ದೆಂದು
ನೀವು ತಿಳುಕೊಳ್ಳದೆ ಇರಲಿಕ್ಕಿಲ್ಲೆಂದು ನಾವು ನಂಬುತ್ತೇ
ವೆ. ಪ್ರತಿಯೊಂದು ಉದ್ಯೋಗ ಮಾಡುವವನ ಘನತೆಯ
ನ್ನು ಅವನಿಗೆ ದೊರೆಯುತ್ತಿರುವ ಸಂಬಳದಿಂದ ಅಳೆಯು
ವದು ತಕ್ಕದ್ದಲ್ಲ. ಯಾಕೆಂದರೆ ಕೆಲವು ಅನಿವಾರ್ಯ ಕಾ
ರಣಗಳಿಗಾಗಿ ಈಗಿನ ಶಾಲಾಗುರುಗಳಿಗೆ ಬೇರೆ ಖಾತೆಯವ
ರಷ್ಟು ತಲಬು ದೊರೆಯದೆ ಇದ್ದರೂ ಕೆಲವು ಕಾಲಾಂತರವ
ಮೇಲೆ ಅವು ತಕ್ಕಷ್ಟಾವರೂ ದೊರೆಯಬಹುದೆಂದು ಕೋ
ರುತ್ತೇವೆ. ಅರ್ಥಶಾಸ್ತ್ರದ ಮೇರೆಗೆ ಸಂಬಳವು ಬೇಡಿಕೆ
ಪೂರೈಕೆಗಳನ್ನು ಅವಲಂಬಿಸಿರುತ್ತದೆ. ಬೇಡಿಕೆಯು ಸ್ವ
ಲ್ಪಾಗಿ ಪೂರೈಕೆ ಹೆಚ್ಚಾದರೆ ಸಂಬಳವು ಕಡಿಮೆಯಾಗುವದು
ಸಹಜ. ಅವರೆ ವಿದ್ಯಾದಾನಕ್ಕೆ ಸರಿಯಾದ ಸಂಬಳವು ಯಾ
ವದೆಂದರೆ, ಅದರಿಂದುಂಟಾಗುವ ಪುಣ್ಯಾಂಶವೇ ಹೊರತು
ರಜತ ನಿರ್ಮಿತ ನಾಣ್ಯಗಳಲ್ಲ. ಯಾಕೆಂದರೆ ಬೆಲೆ ಇಲ್ಲ
ದ್ದಕ್ಕೆ ಬೆಲೆಯನ್ನು ಗೊತ್ತುಮಾಡುವ ಬಗೆಹ್ಯಾಗೆ? ನಿಮ್ಮ
ಉದ್ಯೋಗದಿಂದ ಬರುವ ಪುಣ್ಯಾಂಶವನ್ನು ಮನಸಿನಲ್ಲಿ
ಟ್ಟರೆ ನೀವು ಎಂದೂ ಅತೃಪ್ತರಾಗದೆ ನಿಮ್ಮ ಮಹತ್ವದ
ಉದ್ಯೋಗವನ್ನು ತ್ರಿಕರಣ ಪೂರ್ವಕವಾಗಿ ನೆರವೇರಿಸುವಿ

ರೆಂದು ನಾವು ನಂಬುತ್ತೇವೆ. ಬೇರೆ ಉದ್ಯೋಗಸ್ಥರಿಗೆ ದೊರೆಯುವಷ್ಟು ಮಾನವು ನಿಮಗೆ ದೊರೆಯುವದಿಲ್ಲೆಂದು ಖೇದಪಡಬೇಡರಿ. ಅಜ್ಞಾನಿಗಳಾದ ಜನರು ಶಿಕ್ಷಾಧಿಕಾರ ಶಸ್ತ್ರವುಳ್ಳ ಮನುಷ್ಯನಿಗೆ ಮನಃಪೂರ್ವಕವಾಗಿ ಮಾನಕೊಡುವದಿಲ್ಲ ಅದರೆ ಅಂಜಿಕೆಯಿಂದ ಮಾತ್ರ ಮಾನ ಮಾಡುತ್ತಾರೆ. ನೋಡಿರಿ, ಜನರು ಮಾರೆಮ್ಮನಿಗೆ ಅಂಜುವಷ್ಟು ಮಾರಮಣನಿಗೆ ಅಂಜುವದಿಲ್ಲ. ಸೊಂಡೆಯುಳ್ಳ ಆನೆಗಿಂತ ಕೊಂಡೆಯುಳ್ಳ ಚೇಳಿಗೆ ಹೆಚ್ಚು ಹೆದರುತ್ತಾರೆ. ಅದದ್ದರಿಂದ ಚೇಳು ಆನೆಗಿಂತ ಘನವಾದದ್ದೆಂದು ಹೇಳಬಹುದೋ? ಎಂದಿಗೂ ಹೇಳಲಿಕ್ಕೆ ಆಗುವದಿಲ್ಲ. ಅದರಂತೆಯೇ ನಿಮ್ಮ ಉದ್ಯೋಗವು ಅನ್ಯರಿಗೆ ಹೆದರಿಕೆಯನ್ನುಂಟುಮಾಡುವದಿಲ್ಲ. ಆದದ್ದರಿಂದ ಅವಿಚಾರಿಗಳೂ ಅಸಮಂಜಸರೂ ಆದ ಜನರು ಅದಕ್ಕೆ ತಕ್ಕಷ್ಟು ಮಾನ ಕೊಡುವದಿಲ್ಲ. ಇಷ್ಟರಿಂದಲೇ ನಿಮ್ಮ ಉದ್ಯೋಗದ ಯೋಗ್ಯತೆಯು ಕಡಿಮೆಯಾಯಿತೆಂದು ಎಣಿಸತಕ್ಕದ್ದಲ್ಲ. ಪಾಶ್ಚಿಮಾತ್ಯರಲ್ಲಿ ಬೇರೆ ಎಲ್ಲ ಅಧಿಕಾರಸ್ಥರಿಗಿಂತಲೂ ಶಾಲಾಗುರುವು ಹೆಚ್ಚು ಮಾನವನ್ನೂ ಪೂಜ್ಯಸ್ಥಾನವನ್ನೂ ಹೊಂದುತ್ತಿರುವದು ನಮ್ಮೆಲ್ಲರಿಗೂ ಗೊತ್ತುಂಟು.

ಮೇಲೆ ವಿವರಿಸಿದ ಕಾರಣಗಳಿಂದ ಶಾಲಾಗುರುವಿನ ಉದ್ಯೋಗವು ಪರಲೋಕದ ಸೋಪಾನವೆಂಬ ಮಾತು ಸಿದ್ಧವಾಯಿತು. ಇನ್ನು ಅವನಿಂದ ಐಹಿಕ ಕಲ್ಯಾಣವೆಷ್ಟುಮಟ್ಟಿಗೆ ಆಗುತ್ತದೆಂಬದನ್ನು ಕುರಿತು ವಿಚಾರ ಮಾಡುವಾ. ಗುರುವಿನ ಉದ್ಯೋಗವು ಸಾಕ್ಷಾತ್ ದ್ರವ್ಯೋತ್ಪಾದಕವಾಗಿರದಿದ್ದರೂ, ಅದು ಪರಂಪರೆಯಾಗಿ ದ್ರವ್ಯೋತ್ಪಾದನಕ್ಕೆ ಕಾರಣೀಭೂತವಾಗಿರುತ್ತದೆಂದು ತೋರಿಸಿಕೊಡಬಹುದು. ವಿದ್ಯಾಸಂಸ್ಕೃತರಾದ ಪ್ರಜೆಗಳಿರುವ ದೇಶದಲ್ಲಿ ಅಪರಾಧ

ಗಳು ಕಡಿಮೆಯಾಗುವವು; ಅಪರಾಧಗಳು ಕಡಿಮೆಯಾದರೆ ಪೋಲೀಸ ನ್ಯಾಯಖಾತೆಗಳ ವೆಚ್ಚವು ಕಡಿಮೆಯಾಗುವದು; ವೆಚ್ಚವು ಕಡಿಮೆಯಾದರೆ ಪ್ರಜೆಗಳ ಮೇಲಿನ ಕರಗಳ ಭಾರವು ಕಡಿಮೆಯಾಗುವದು. ಕರಗಳು ಕಡಿಮೆಯಾದದ್ದರಿಂದ ಉಳಿಯುವ ಪ್ರಜೆಗಳ ದ್ರವ್ಯವು ವ್ಯವ್ಯೋತ್ಪಾದಕ ಕೆಲಸಗಳಲ್ಲಿ ವಿನಿಯೋಗಿಸಲ್ಪಟ್ಟರೆ, ದೇಶದ ಸಂಪತ್ತು ಬೆಳೆಯುವದು. ಐಸಲಂಡದಲ್ಲಿ ವಿದ್ಯಾಪ್ರಸಾರವು ಅತಿಶಯವಾಗಿರುವದರಿಂದ ಅಲ್ಲಿ ಕಾರಾಗೃಹಗಳೂ ಪೋಲೀಸ ಖಾತೆಯೂ ಇಲ್ಲವಂತೆ! ಕೃಷಿಕರ್ಮ ಶಾಸ್ತ್ರಾಭ್ಯಾಸವನ್ನು ಮಾಡಿದವರ ಸಂಖ್ಯೆಯು ದೇಶದಲ್ಲಿ ಹೆಚ್ಚಾದರೆ ಭೂಮಿಯಲ್ಲಿ ಹೆಚ್ಚು ಧಾನ್ಯ ಬೆಳೆಯುವದು. ಹೆಚ್ಚು ಧಾನ್ಯ ಬೆಳೆಯುವದರಿಂದ ಹೆಚ್ಚು ದ್ರವ್ಯಾರ್ಜನೆಯಾಗುವದಂತು ಸುಲಭವೇ. ಇದೇ ಮೇರೆಗೆ ಬೇರೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಆದರೆ ವಿಸ್ತಾರ ಭಯಕ್ಕಾಗಿ ಈ ಭಾಗವನ್ನು ಇಲ್ಲಿಗೇ ಮುಗಿಸುತ್ತೇವೆ. ಈ ವಿವರಣೆಯಿಂದ ಶಾಲಾಧ್ಯಾಪಕನ ಉದ್ಯೋಗವು ಲೋಕಕಲ್ಯಾಣಕಾರಕವಾಗಿಯೂ ಪರಲೋಕ ಸಾಧನಕ್ಕೆ ಸುಲಭೋಪಾಯವಾಗಿಯೂ ಇರುತ್ತದೆಂದು ಸ್ಪಷ್ಟವಾಗುತ್ತದೆ.

THE MORAL TRAINING OF CHILDREN.

ಮಕ್ಕಳ ನೀತಿಶಿಕ್ಷಣವು.

(೨೩ನೆಯ ಪುಟದಿಂದ ಮುಂದೆ ಸಾಗಿದ್ದು.)

ಬುತ್ತಾಯಿಯಿಂದ ಸಹ ಮಾಡಿಸಲಿಕ್ಕೆ ಆಗದಂಥ ಅಪ್ಪಣೆಗಳನ್ನು ಕೊಡುವದೇ ಬಹುಶಃ ಮಕ್ಕಳಲ್ಲಿ ಅವಿಧೇಯತ್ವವನ್ನುಂಟು ಮಾಡುತ್ತದೆ. ಆಗಾಗ್ಗೆ ಈ ತರದ ಅಪ್ಪಣೆಗಳನ್ನು ಹೊಂದುವಂಥ ಮಕ್ಕಳು ತಾಯಿಯ ನುಡಿಗೆ ದುರ್ಲಕ್ಷ ಮಾಡುತ್ತಾರೆ. ಈ ಪ್ರಕಾರದ ದುರ್ಲಕ್ಷವು ಇವರ ಮೈ

ಯುಂಡಿತಂದರೆ ತೀರಿತು. ಅವರು ಮುಂದೆ ತಾಯಿಗಳು ಎಷ್ಟು ಬೆವರಿಸಿದರೂ, ಅಪ್ಪಾ, ಅಣ್ಣಾ ಎಂದು ಗದ್ದಲ ಹುಟಿಗಳನ್ನು ಹಿಡಿದು ಹೇಳಿದರೂ ಅವರ ಮಾತನ್ನು ಕೇಳುವದಿಲ್ಲ.

ಒಂದು ದಿವಸ ಸಾಯಂಕಾಲಕ್ಕೆ ತಂದೆಯು ತನ್ನ ಚಿಕ್ಕ ಮಗನಾದ ರಂಗನನ್ನು ಕರೆದು ಅವನಿಗೆ "ಅಂಕಲಿಪಿ ಪುಸ್ತಕವನ್ನು" ಓದಹೇಳಿದನು. ಆ ಹೊತ್ತಿಗೆ ಅವನಿಗೆ ಹಟಬಂದಿತ್ತು. ಅವನಿಗೆ ಮೂಲಾಕ್ಷರಗಳು ಬರುತ್ತಿದ್ದರೂ ಅವನು ಓದಲಿಲ್ಲ. ತಂದೆಯು ಮೊದಲನೇ ಅಕ್ಷರದ ಮೇಲೆ ತನ್ನ ಬೊಟ್ಟು ಇಟ್ಟು, ರಂಗಾ, ಈ ಅಕ್ಷರದ ಹೆಸರೇನೆಂದು ಕೇಳಿದನು. ಅದಕ್ಕೆ ಅವನು ಆ ಅಕ್ಷರವನ್ನು ನೋಡುತ್ತ ಜೋಲುಮೋರೆ ಹಾಕಿಕೊಂಡು ಸುಮ್ಮನೆ ಕುಳಿತುಕೊಂಡನು. ತಂದೆಯು:—"ನಾನು ಈಗ ಈ ಹುಡುಗನ ಹಟವನ್ನು ನಡಿಸಗೊಟ್ಟರೆ ಮುಂದೆ ಸಹ ಇವನು ಇದರಂತೆಯೇ ನನ್ನ ಅಪ್ಪಣೆಗಳನ್ನು ಮೀರುವದಕ್ಕೆ ಪ್ರಯತ್ನಿಸಬಹುದು. ಆದರಿಂದ ಈಗ ಇವನಿಗೆ ಸೈಲು ಬಿಡುವದು ಬಳ್ಳಿಯದಲ್ಲ" ಎಂದು ತನ್ನ ಮನಸಿನಲ್ಲಿಯೇ ವಿಚಾರಮಾಡಿ, ಮಗನಿಗೆ ಪ್ರೀತಿಯಿಂದ ಹೇಳಿದ್ದು:—ರಂಗಾ, ಈ ಅಕ್ಷರವು ಆ ಇರುತ್ತದೆ. ಇದನ್ನು ಉಚ್ಚರಿಸು ನೋಡುವಾ?

ರಂಗ—ನನಗೆ ಅದನ್ನು ಅನ್ನಲಿಕ್ಕೆ ಬರುವದಿಲ್ಲ.

ತಂದೆ—ನಿನಗೆ 'ಅ' ಎಂದು ಅನ್ನಲಿಕ್ಕೆ ಬರುವದಿಲ್ಲವೋ?

ರಂಗ—ಅದು ನನಗೆ ಬರುವದಿಲ್ಲ; ನಾನು ಅದನ್ನು ಅನ್ನುವದಿಲ್ಲ.

ತಂದೆ—ನೀನು ಅವನ್ನು ಅನ್ನಲಿಕ್ಕೆಬೇಕು.

ರಂಗನು ಅವನ್ನು ಓದಲಿಕ್ಕೆ ಅಲ್ಲಗಳೆದನಿಷ್ಟೇ ಅಲ್ಲ;

ಆದರೆ ಅದನ್ನು ಓದುವದಿಲ್ಲೆಂದು ಹಟ ಹಿಡಿದನು. ನಾನು ಇಷ್ಟಕ್ಕೇ ಬಿಟ್ಟರೆ, ಆಗಲೆ ವಿಚಾರ ಮಾಡಿದಂತೆ, ಇದರ ಪರಿಣಾಮವಾಗುವದೆಂದು ಗ್ರಹಿಸಿ, ಅವನನ್ನು ಅಲ್ಲಿಂದ ಎ ಬ್ಬಿಸಿ ಬಂದು ಕೋಣೆಯಲ್ಲಿ ಕರಕೊಂಡು ಹೋಗಿ ಶಿಕ್ಷಿಸಿ ದನು. ಆ ಮೇಲೆ ಅವನನ್ನು ಮೊದಲಿನ ಸ್ಥಳಕ್ಕೆ ಕರ ಕೊಂಡು ಬಂದು ಅವನ ಕೈಯಲ್ಲಿ ಪುಸ್ತಕಕೊಟ್ಟು, ಆ ಅ ಕ್ಷರವನ್ನು ನುಡಿಯ ಹೇಳಿದನು. ಆದರೆ ಅವನು ಅದನ್ನು ಓದಲಿಲ್ಲ. ಆ ಮೇಲೆ ತಂದೆಯು ಮತ್ತೆ ಅವನನ್ನು ಕೋ ಣೆಯಲ್ಲಿ ಕರಕೊಂಡು ಹೋಗಿ ಚನ್ನಾಗಿ ಶಿಕ್ಷಿಸಿ ತಿರುಗಿ ಕ ರಕೊಂಡು ಬಂದು ಓದಹೇಳಿದನು. ಆ ಪಟವೋರೆಯಾದ ಹುಡುಗನು ಮತ್ತು ಓದಲಿಲ್ಲ. ಆ ಮೇಲೆ ತಂದೆಯು ಪಿತ್ತ ನ್ನು ತಲೆಗೇರಿತು. ಅವನು ಪುನಃ ಅವನನ್ನು ಕೋಣೆಯ ಲ್ಲಿ ಬಹಳ ಬಳಿತಾಗಿ ತಳಿಸಿ, ತಿರುಗಿ ಕರಕೊಂಡು ಬಂದು, ಓದಲಿಕ್ಕೆ ಹೇಳಿದರೂ, ಅವನು ತನ್ನ ಹಟ ಬಿಡಲಿಲ್ಲ. ತಂ ದೆಯು ಇಷ್ಟಕ್ಕೆ ಬಿಟ್ಟರೆ ಮುಂದೆ ಇವನಿಗೆ ನನ್ನ ಆಜ್ಞೆ ಯನ್ನು ಸುಲಭವಾಗಿ ಮುರಿಯುವದಕ್ಕೆ ಅಸ್ಪದವಾಗುವದೆಂ ದು ತಿಳಿದು, ಪುನಃ ಅವನನ್ನು ಶಿಕ್ಷಿಸಬೇಕೆಂದು ಯೋಚಿಸಿ ದನು. ಇದನ್ನೆಲ್ಲ ನೋಡುತ್ತ ಆ ಹುಡುಗನ ತಾಯಿಯು ಬಳಿಯಲ್ಲಿಯೇ ಕೂತಿದ್ದಳು. ಅವಳ ಹೃದಯವು ಬಳಗಿಂ ದೊಳಗೆ ಕಳವಳ ಪಟ್ಟರೂ ಅದೆಲ್ಲ ತನ್ನ ಮಗನ ಕಲ್ಯಾ ಣಕ್ಕಾಗಿಯೇ ಇರುತ್ತದೆಂದು ತಿಳುಕೊಂಡು ನಿರುಪಾಯ ದಿಂದ ಸುಮ್ಮನೇ ಇದ್ದಳು. ತಂದೆಯು ಸಿಟ್ಟಿನಿಂದ ತನ್ನ ಮಗನ ಕೈಹಿಡಿದು ಮತ್ತೆ ಎಳಕೊಂಡು ಕೋಣೆಗೆ ನಡೆ ದನು. ಆಗ, ಆ ಹುಡುಗನು ಇನ್ನುಮೇಲೆ ತಂದೆಯು ಆ ಪ್ರಾಣಿಯನ್ನು ಹಾಲಿಸಿದ ಹೊರತು ಗತಿ ಇಲ್ಲೆಂದು ಗ್ರಹಿಸಿ, ದೀನಮುಖದಿಂದ, ಅಪ್ಪಾ, ಇನ್ನುಮೇಲೆ ನನ್ನನ್ನು ಬ

ಡಿಯುವೇತ, ನಿನ್ನ ಕಾಲು ಬೀಳುತ್ತೇನೆ, ನೀನು ಹೇಳಿದಂತೆ ಕೇಳುತ್ತೇನೆ." ಎಂದು ನುಡಿದನು. ಮಗನ ಈ ನುಡಿಯನ್ನು ಕೇಳಿ ತಂದೆಯು ಪರಮ ಹರ್ಷಿತನಾಗಿ, ಅವನ ಕೈಯಲ್ಲಿ ಪುಸ್ತಕವನ್ನು ಕೊಟ್ಟು 'ಅ' ಉಚ್ಚರಿಸ ಹೇಳಿದನು. ಆಗ ಅವನು 'ಅ' ಎಂದು ಸ್ಪಷ್ಟವಾಗಿಯೂ ಗಟ್ಟಿಯಾಗಿಯೂ ಉಚ್ಚರಿಸಿದನು. ಆ ಮೇಲೆ ತಂದೆಯು ಮಗನಿಗೆ ಹೇಳಿದ್ದು:—ರಂಗಾ, ನೀನು ಈ ಪುಸ್ತಕವನ್ನು ನಿನ್ನ ಹಡತವಳ ಬಳಿಗೆ ತೆಗೆದುಕೊಂಡು ಹೋಗಿ, ಇದೇ ಅಕ್ಷರವನ್ನು ಅವಳಿಗೆ ಓದಿಹೇಳು. ತಾಯಿಯು ಮಗನ ಮೈಮೇಲೆ ಪ್ರೀತಿಯಿಂದ ಕೈಯಾಡಿಸಿ, ತಮ್ಮಾ ಆ ಅಕ್ಷರ ಯಾವದು? ಅವರ ಹೆಸರೇನು? ಎಂದು ಕೇಳಿದಳು. ಅದಕ್ಕೆ ರಂಗನು, ಇದು 'ಅ' ಎಂದು ಹೇಳಿದನು. ಅದನ್ನು ಕೇಳಿ ತಾಯಿಗೆ ಮಿತಿಮೀರಿ ಸಂತೋಷವಾಯಿತೆಂದು ಅಲ್ಲಿ ಹೇಳುವ ಪ್ರಯೋಜನವಿಲ್ಲ. ಆ ಮೇಲೆ ಆ ಮುದ್ದುಗನು ತಾಯಿತಂದೆಗಳಿಗೆ ವಿಧೇಯನಾಗಿ ನಡಕೊಳ್ಳುತ್ತಿದ್ದನು. ಎಷ್ಟೋ ತಿಳಿಗೇಡಿ ತಾಯಿತಂದೆಗಳು ಈ ಮೇರೆಗೆ ಮಕ್ಕಳನ್ನು ಚಿಕ್ಕತನದಲ್ಲಿ ಶಿಕ್ಷಿಸುವದು ಕ್ರೂರತನವೆಂದು ಭಾವಿಸುವರು. "ಗಿಡವಿದ್ದಾಗ ಬಾಗದು ಮರವಾದಾಗ ಬಾಗೀತೆ" ಎಂಬ ಗಾದೆಯಂತೆ ಮಕ್ಕಳನ್ನು ಚಿಕ್ಕಂದಿನಲ್ಲಿಯೇ ತಮ್ಮ ಅಂಕಿತವಲ್ಲಿ ಇಟ್ಟುಕೊಳ್ಳಲಿಕ್ಕೆ ತಾಯಿತಂದೆಗಳು ಪ್ರಯತ್ನ ಮಾಡದಿದ್ದರೆ, ಅವರ ಮಕ್ಕಳು ಮನಬಂದಂತೆ ನಡೆದು ಮುಂದಾಗಿ ತರತರದ ಸಂಕಟಗಳಿಗೆ ಗುರಿಯಾಗುವರು.

ನಿಜವಾದ ವಿಧೇಯತ್ವದ ಕೆಲವು ಲಕ್ಷಣಗಳನ್ನು ಕೆಳಗೆ ಹೇಳುತ್ತೇವೆ. ಅವು ಯಾವವೆಂದರೆ:—

೧. ವಿಧೇಯತ್ವವಲ್ಲಿ ತತ್ಪರತೆ ಇರತಕ್ಕದ್ದು. ಯಾವ ದಾವರೊಂದು ಅಪ್ಪಣೆಯನ್ನು ಎರಡು ಮೂರುಸಾರೆ ಕೊ

ಟ್ಟವೇಲೆ ಹುಡುಗರು ಅದನ್ನು ಪಾಲಿಸುವದು ಸರಿಯಲ್ಲ. ಅಪ್ಪಣೆಯನ್ನು ಕೊಟ್ಟಕೂಡಲೇ ಅವರು ಅದರಂತೆ ನಡೆಯಲಿಕ್ಕೆಬೇಕು.

೨. ಚರ್ಚೆ ಮಾಡಲಿಕ್ಕೆ ಅಥವಾ ಮನವೊಲಿಸುವದಕ್ಕೆ ಇಂಬು ಇರಬಾರದು. ಹುಡುಗನಿಗೆ ಯಾವದೊಂದು ಕೆಲಸ ಹೇಳಿವ ಕೂಡಲೆ, ಅವನು ಅದಕ್ಕೆ ಹತ್ತಬೇಕು. ಹೀಗೆಮಾಡದೆ, ಇದನ್ನು ಯಾಕೆ ಮಾಡಬೇಕು? ಇದರಿಂದೇನು ಪ್ರಯೋಜನ? ಮುಂತಾದವುಗಳನ್ನು ಕೇಳಿಕೊಂಡು, ತನ್ನ ಮನಸಿಗೆ ಬಂದರೆ ಆ ಕೆಲಸ ಹಿಡಿಯುವದು ತಕ್ಕದ್ದಲ್ಲ. ಬಾಯಿ ಪೇಳಿ ದೊಡ್ಡ ಹುಡುಗರಿಗೆ ಮಾತ್ರ ಇಂಥ ಪ್ರಯೋಜನಗಳನ್ನು ಅಪ್ಪಣೆ ಕೊಡುವ ಪೂರ್ವದಲ್ಲಿ ತಿಳಿಸಿ ಹೇಳಬಹುದು. ಅವರೆ ಸಣ್ಣ ಸಣ್ಣ ಮಕ್ಕಳು ಹೇಳಿದ್ದನ್ನು ಮಾಡತಕ್ಕದ್ದು. ಇಷ್ಟೇ ಅವರ ಕರ್ತವ್ಯವು.

೩. ಲಂಚದ ಆಥವಾ ಭಯದ ಸಂಬಂಧವು ಎಷ್ಟು ಮಾತ್ರವು ಇರಕೂಡದು. ಕೆಲವರು ತಿಳಿಗೇಡಿ ತಾಯಿತಂದೆಗಳು, ಮಕ್ಕಳು ತಮ್ಮ ಮಾತು ಕೇಳಿದರೆ, ತಿನ್ನತಕ್ಕ ಪದಾರ್ಥಗಳನ್ನಾಗಲಿ ದುಡ್ಡು ಕಾಸುಗಳನ್ನಾಗಲಿ ಕೊಡುತ್ತೇವೆಂದು ಹೇಳುವರು. ಅವರ ಮಕ್ಕಳು ಬಹ್ಮೊಮ್ಮೆ ಹೇಳಿವ ಕೆಲಸ ಮಾಡುವದಕ್ಕಿಂತ ಮೊದಲೇ "ನಿಮ್ಮ ಮಾತು ಕೇಳಿದರೆ ನಮಗೇನು ಕೊಡುತ್ತೀರಿ" ಎಂದು ಕೇಳುವರು. ಈ ಕೆಲಸವಲ್ಲಿ ಭಯುವ ಸಂಬಂಧವಾದರೂ ಇರಬಾರದು. ಇಂಥ ಹುಡುಗರು ತಾಯಿತಂದೆಗಳು ತಮ್ಮನ್ನು ಬಡಿಯುಲಿಕ್ಕೆ ಕೈಎತ್ತಿದ ಹೊರತು ಅವರ ಮಾತನ್ನು ಕೇಳುವವಿಲ್ಲ.

೪. ಅದು ಆನಂದಕರವಾವದ್ದಿರಬೇಕು. ಹೇಳಿದ ಕೆಲಸವನ್ನು ಉದಾಸೀನತೆಯಿಂದ ಮಾಡುವದು ಕೆಲಸದ್ದಲ್ಲ. ಅವನ್ನು ಉಲ್ಲಾಸದಿಂದ ಮಾಡಲಿಕ್ಕೆಬೇಕು.

(ಮುಂದೆ ಸಾಗುವದು).

METHODS OF TEACHING.

ಕಲಿಸುವ ಪದ್ಧತಿಗಳು.

ನಿ ಬಂ ಧ.

(ಪೀಠಿಕೆಯು ಪುಟದಿಂದ ಮುಂದೆ ಸಾಗಿದ್ದು.)

ಗಡಿಯಾಲಗಳು.

೧. ಗಡಿಯಾಲವೆಂದರೇನು ?

೨. ಮೂಲಉತ್ಪತ್ತಿ

(ಅ) ಬಾಬಿಲನದ ಜನರು

(ಬ) ಆಲಫ್ರೇಡ ದಿ ಗ್ರೇಟ ನೆಂಬ ಅರಸನು.

(ಕ) ನೀರಿನ ಗಡಿಯಾಲವು.

(ಡ) ಉಸುಬಿನ ಗಡಿಯಾಲವು.

ರಚನೆ.

ತರಗಳು.

(ಅ) ಗೋಪುರದ ಗಡಿಯಾಲವು.

(ಬ) ಮನೆಯೊಳಗಿನ ಗಡಿಯಾಲಗಳು.

(ಕ) 'ಟಾಯಿಮು ಪೀಸಗಳು'

(ಡ) 'ಅಲಾರ್ಮಗಳು'

೩. 'ವಾಚುಗಳು'

(ಅ) ಅಳತೆ.

(ಬ) ಬೆಲೆ.

೪. ಲಾಭಗಳು.

(ಅ) ಮನೆ, ಕಚೇರಿ ಕೆಲಸಗಳನ್ನು ನಿಯಮಿತಪಡಿಸೋಣ.

(ಬ) ಕಾಲನಿಯಮವನ್ನು ಕಲಿಸೋಣ.

(ಕ) ಅಲಂಕಾರ.

೫. ಸರಿಯಾಗಿ ಹೊತ್ತು ತೋರಿಸೋಣ.

೬. ಕೈಗಾರಿಕೆ.

(ಅ) ಜಿನೋವಾ ಪಟ್ಟಣವು.

(ಬ) ರಿಪೇರಿ ಮಾಡುವವರು.

೭. ಹಿಂದುಸ್ಥಾನದಲ್ಲಿ ಗಡಿಯಾಲ, ವಾಚುಗಳನ್ನು ಯಾವಾಗ ಮಾಡುವರು.

೧. ಗಡಿಯಾಲವೆಂದರೆ ಹೊತ್ತು ತೋರಿಸುವ ಯಂತ್ರವು.

೨. ವೇಳೆಯನ್ನು ತಿಳುಕೊಳ್ಳುವದಕ್ಕಾಗಿ ಬಹು ಪ್ರಾಚೀನಕಾಲದಿಂದ ಯಂತ್ರಗಳನ್ನು ಉಪಯೋಗಿಸುತ್ತಿದ್ದರೆಂಬು ತೋರುತ್ತದೆ. ಬಾಬಿಲನ ಪಟ್ಟಣದ ಜನರು ಛಾಯಾಯಂತ್ರದ ಯುಕ್ತಿಯನ್ನು ಹುಡಿಕಿ ತೆಗದರಂತೆ. ಬಳಗಡೆಯಲ್ಲಿ ವೇಳೆಯನ್ನು ಸರಿಯಾಗಿ ತೋರಿಸುವ ಗಡಿಯಾಲಗಳಲ್ಲಿ ಇದು ಬಂದಾಗಿದೆ. ಛಾಯಾ ಯಂತ್ರದ ಮೇಲೆ ಬಂದ ಬಿಟ್ಟನ್ನ ತಗಡೂ ಇವರ ಮಧ್ಯಬಿಂದುವಿನಲ್ಲಿ ಬಂದು ನೀಟಾ

ಪ ಶಂಕುವೂ ಕೂಡ್ರಿಸಿರುತ್ತವೆ. ಈ ಯಂತ್ರವನ್ನು ಬಿಸಿ ಲೊಳಗೆ ಇಟ್ಟರೆ ಆ ಶಂಕುವಿನಿಂದ ಬೀಳುವ ಛಾಯೆಯು ಎಷ್ಟು ಹೊತ್ತಾಯಿತೆಂಬದನ್ನು ತೋರಿಸುತ್ತದೆ. ಬಿಸಿಲು ಬಿದ್ದಾಗ ಮಾತ್ರ ಇದರ ಉಪಯೋಗವು ಆಗುತ್ತದೆ. ಗ್ರೀಕ, ರೋಮನ ಜನರು ನೀರಿನ ಗಡಿಯಾಲವನ್ನು ಉಪಯೋಗಿಸುತ್ತಿದ್ದರು. ಬಂದು ಪಾತ್ರೆಯು ಛಿದ್ರದೊಳಗಿಂದ ಮತ್ತೊಂದು ಪಾತ್ರೆಯೊಳಗೆ ಕ್ರಮವಾಗಿ ನೀರು ಸೋರುವದರಿಂದ ಇದಕ್ಕೆ ನೀರಿನ ಗಡಿಯಾಲವೆಂಬ ಹೆಸರು ಬಂದದೆ. ಹಿಂದೂಜನರು ಈಗ ಸಹ ನೀರಿನ ಗಡಿಯಾಲಗಳನ್ನು ಉಪಯೋಗಿಸುತ್ತಾರೆ. ವಿವಾಹ ಮುಂತಾದ ಶುಭಕಾರ್ಯಗಳಲ್ಲಿ ಮುಹೂರ್ತವನ್ನು ತಿಳುಕೊಳ್ಳುವದಕ್ಕಾಗಿ ಬಂದು ಗಂಗಾಳದೊಳಗಾಗಲಿ, ಪಾತೇಲಿಯೊಳಗಾಗಲಿ ನೀರು ತುಂಬಿ ಆದರಲ್ಲಿ ಬಂದು ರಂಧ್ರವುಳ್ಳ ಬಟ್ಟಲವನ್ನು ಇಡುತ್ತಾರೆ. ಇದಕ್ಕೆ ಗಳಿಗೆ ಬಟ್ಟಲವೆಂದು ಅನ್ನುತ್ತಾರೆ. ಇಂತಿಷ್ಟು ಬಟ್ಟಲವು ತುಂಬಿದ ಬಳಿಕ ಕಾರ್ಯಸಮಾರಂಭವ ಮಂಗಲಕರವಾದ ಮುಹೂರ್ತ ಬವಗುತ್ತದೆಂದು ನಿರ್ಣೈಸುವರು. ಅಲೆಕ್ಸಾಂಡ್ರಿಯದ ದಿಗ್ಮೇಟನೆಂಬವನು ಮೇಣಬತ್ತಿ ಗಡಿಯಾಲವನ್ನು ಶೋಧಿಸಿ ತೆಗದನಂತೆ. ಅದು ಹ್ಯಾಗಂದರೆ ಅಂಶಗಳನ್ನು ಕೊರೆದು ಹಚ್ಚಿಟ್ಟ ಮೇಣಬತ್ತಿಯು ಸುಮಾರು ಹೋದಹಾಗೆ ದಿವಸದ ಹೊತ್ತು ತಿಳಿಯುತ್ತಿತ್ತು. ಉಸುಬಿನ ಗಡಿಯಾಲಗಳು ಸಹ ಬಹು ಕಾಲದಿಂದ ಪ್ರಚಾರದಲ್ಲಿರುತ್ತವೆ. ಇವು ನೀರಿನ ಗಡಿಯಾಲಗಳಿಗಿಂತ ಬೆಚ್ಚು ಅಚ್ಚು ಕಟ್ಟುಳ್ಳವುಗಳಾಗಿರುತ್ತವೆ. ಯಾಕಂದರೆ ಉಸುಬಿನ ದಾರೆಯು ಬಂದು ಪಾತ್ರೆಯಿಂದ ಮತ್ತೊಂದು ಪಾತ್ರೆಯೊಳಗೆ ಸಣ್ಣ ತೂತಿನಿಂದ ಸಮವಾಗಿ ಬೀಳುತ್ತದೆ. ಅಂದರೆ ನೀರಿನ ಗಡಿಯಾಲಗಳಲ್ಲಿ ಬಂದೇ ಗತಿಯು ಇರುವದಿಲ್ಲ. ಈ ಮೇಲೆ ವಿವರಿಸಿದ ಗಡಿಯಾಲಗಳು ಈಗ ಹೆಚ್ಚಾಗಿ ಪ್ರಚಾರದಲ್ಲಿಲ್ಲ.

೩. ಈಗ ಇರುವ ಗಡಿಯಾಲಗಳಿಗೆ ಮುಖಬಿಲ್ಲೆಗಳಿರುತ್ತವೆ. ಅವುಗಳ ಮೇಲೆ ವರ್ತುಲಾಕಾರವಾಗಿ ೧ ರಿಂದ ೧೨ ರ ವರೆಗೆ ರೋಮನ ಅಂಕೆಗಳು ಹಾಕಿರುತ್ತವೆ. ನಟ್ಟನಡುವೆ ಎರಡು ಮುಳ್ಳುಗಳು ಕೂಡ್ರಿಸಿರುತ್ತವೆ. ಅವು ಆ ತಗಡಿನ ಸುತ್ತಲು ತಿರಿಗಿ ವೇಳೆಯನ್ನು ತೋರಿಸುತ್ತವೆ. ಇವುಗಳಲ್ಲಿ ಕಿರಿದಾದದ್ದು ತಾಸು ತೋರಿಸುವವರಿಂದ ಅದಕ್ಕೆ ತಾಸಿನ ಮುಳ್ಳೆಂದೆನ್ನುತ್ತಾರೆ. ಇದು ಒಂದು ತಾಸಿನಲ್ಲಿ ಐದು ಮಿನಿಟು ಮಾತ್ರ ಸರಿಯುತ್ತದೆ. ಅದರೆ ಮಿನಿಟು ಮುಳ್ಳೆಂಬ ಉದ್ದವಾಗಿರುವ ಮುಳ್ಳು ಅಷ್ಟೇ ವೇಳೆಯಲ್ಲಿ ಆ ವರ್ತುಲವನ್ನೆಲ್ಲ ಸುತ್ತಿ ಬರುತ್ತದೆ. ಜೆಲೆಯುಳ್ಳ ಗಡಿಯಾಲಗಳಲ್ಲಿ ಶೇಕಂದವನ್ನು ತೋರಿಸುವ ಮತ್ತೊಂದು ಮುಳ್ಳು ಇರುವದು. ಈ ಮುಳ್ಳುಗಳಿಗೆ ಗತಿ ಕೊಡುವದಕ್ಕೂ ಅವುಗಳನ್ನು ಕ್ರಮಗೊಳಿಸುವದಕ್ಕೂ ಮುಖಬಿಲ್ಲೆಯ ಹಿಂಭಾಗದ ಪೆಟ್ಟಿಗೆಯೊಳಗೆ ಅನೇಕ ಚಕ್ರಗಳಿರುತ್ತವೆ. ಇವುಗಳ ವ್ಯಾಪಾರವು ಮೊದಲು ಭಾರವಾದ ಅಂದೋಲಕದಿಂದಲೇ ಸಾಗುತ್ತಿತ್ತು. ಅದರೆ ಈಗ ಇವುಗಳ ವ್ಯಾಪಾರವು 'ಸ್ಪ್ರಿಂಗ' ಎಂಬ ಸೂತ್ರದ ಸಹಾಯದಿಂದ ನಡಿಯುವದು. ಚಕ್ರಗಳ ಗತಿಯನ್ನು ಕ್ರಮಪಡಿಸುವದಕ್ಕೆ ಅಂದೋಲಕವು ಬಂದು ಮುಖ್ಯವಾದ ಸಾಧನವಾಗಿದೆ. ಅದು ಅತ್ತಿತ್ತ ಹೊಯ್ದಾಡುವಾಗ ಟಿಕ್ ಟಿಕ್ ಎಂಬ ಶಬ್ದವಾಗುತ್ತದೆ.

೪. ಯಂತ್ರದಿಂದ ನಡಿಯುವಂಥ ಗಡಿಯಾಲಗಳಾದರೂ ಶೋಧಿಸಿ ತೆಗೆಯಲ್ಪಟ್ಟ ಬಲವು ಶತಮಾನಗಳಾದವು. ಈ ತರವ ಗಡಿಯಾಲಗಳಲ್ಲಿ ಅತಿ ದೊಡ್ಡವೆಂದರೆ ಗೋಪುರದ ಗಡಿಯಾಲಗಳೇ. ಈ ದೊಡ್ಡ ಯಂತ್ರಗಳು ವೇಳೆಯನ್ನು ತೋರಿಸುವವಕ್ಕಾಗಿ ಪಟ್ಟಣಗಳಲ್ಲಿರುವ ಗೋಪುರಗಳ ಮೇಲೆ ಕೂಡ್ರಿಸಿರುತ್ತವೆ. ಇವುಗಳಲ್ಲಿ ಬಳಗಿರುವ ಗಂಟೆಯು

ನ್ನು ಬಡಿದು ತಾಸುಗಳನ್ನು ತಿಳಿಸುವ ಸೂಚ್ಯವು ಸಹ ಇರುವದು. ಈ ತರಬೊಂದು ಬಹು ಮನೋಹರವಾದ ಗಡಿಯಾಲವು ರೈನ್ ನದೀ ಭಡವ ಮೇಲಿರುವ ಸ್ಟ್ರಾಸಬರ್ಗ ಪಟ್ಟಣದ ಬೀನಸ್ಥಾನದ ಗೋಡೆಯ ಮೇಲೆ ಬಹು ಪುರಾತನದ ಕಾಲದಿಂದಿರುವದು. ಇದು ಮೇಳೆಯನ್ನು ತೋರಿಸುವದಲ್ಲದೆ ಜೋತಿಷ್ಯಶಾಸ್ತ್ರದ ಸಂಬಂಧವಾದ ಹಬ್ಬಿನ ಮುಖ್ಯ ಪಾಟುಗಳನ್ನು ಸಹ ತೋರಿಸುತ್ತದೆ. ಮನುಷ್ಯರಲ್ಲಿ ಉಪಯೋಗಿಸುವ ಅನೇಕ ಸಣ್ಣ ಗಡಿಯಾಲಗಳು ಪ್ರತಿವರ್ಷವೂ ತಯಾರಾಗುತ್ತವೆ. ಇವುಗಳಲ್ಲಿ ಕೆಲವುಗಳನ್ನು ಹೆಚ್ಚು ಪ್ರಯಾಸದಿಂದ ಮಾಡಿರುವ ಕಾರಣ ಅವಕ್ಕೆ ಹೆಚ್ಚು ಬೆಲೆ ಬೀಳುತ್ತದೆ. ಇನ್ನುಗಳಲ್ಲಿ ಬಹಳವಾಡಿ ಸೋಜಿಗವಾದ ಯಂತ್ರಗಳಿರುತ್ತವೆ. ಈ ಯಂತ್ರಗಳ ಮೂಲಕ ಗಡಿಯಾಲದಲ್ಲಿ ಕೂಡ್ರಿಸಿದ ವಾದ್ಯ ಪೆಟ್ಟಿಗೆಯು ಪ್ರತಿ ಬಂದು ತಾಸಿಗೆ ಬಾರಿಸುತ್ತಿರುತ್ತದೆ. ಪಕ್ಷಿಗಳು ಹಾಡುತ್ತವೆ. ಮನುಷ್ಯ ಶ್ವಾಸದಾದಿಗಳ ಗೊಂಬೆಗಳು ಆಟವಾಡುತ್ತವೆ. ಆಗ್ಗವಾಗಿ ಕಿರುವ ಕೆಲವು ಗಡಿಯಾಲಗಳಲ್ಲಿ ತಾಸುಗಳನ್ನು ಬಾರಿಸುವ ಗಂಟೆಗಳಿರುವದಿಲ್ಲ. ಸಾಧಾರಣವಾಗಿ ರಾತ್ರೀ ವೇಳೆಯಲ್ಲಿ ಗಟ್ಟಿಯಾಗಿ ಬಾರಿಸಿ ಜನರಿಗೆ ಜೀಕಾದಾಗ ಎಚ್ಚರಪಡಿಸುವದಕ್ಕಾಗಿ ಕೆಲವು ಗಡಿಯಾಲಗಳಲ್ಲಿ 'ಅಲಾರ್ಮ' ಗಳೆಂಬ ಗಂಟೆಗಳು ಕೂಡ್ರಿಸಲ್ಪಟ್ಟಿರುತ್ತವೆ.

೫. ಜರ್ಮನೀ ಪ್ರಾಂತದೊಳಗಿನ ನ್ಯೂರೆಂಬರ್ಗವೆಂಬ ಪಟ್ಟಣವಲ್ಲಿ ವಾಚುಗಳನ್ನು ಮೊದಲು ಸಿದ್ಧಮಾಡಿದರು. ವಾಚುಗಳೆಂದರೆ ಬೊಕ್ಕಣದೊಳಗೆ ಇಟ್ಟುಕೊಳ್ಳುವಂಥ ಸಣ್ಣ ಗಡಿಯಾಲಗಳು. ಆವುಗಳಿಗೆ ನ್ಯೂರೆಂಬರ್ಗತತ್ತಿಗಳೆಂದೆನ್ನುತ್ತಿದ್ದರು. ಇವುಗಳ ಯಂತ್ರಗಳು ಸಾಧಾರಣವಾಗಿ ಬಂಗಾರ, ಬೆಳ್ಳಿ, ಇಲ್ಲವೆ ಮಿಶ್ರಲೋಹದಿಂದ ಮಾಡಿದ ಕರಡಿಗೆಯಂಥ ಮುಚ್ಚಳಗಳೊಳಗೆ ಕೂಡ್ರಿಸಲ್ಪಟ್ಟಿರುತ್ತ

ವೆ. ಈ ತರದ ಕರಡಿಗೆಗಳು ಪೂರ್ಣವಾದ ಒಲ್ಲಪೆ ಮು
ಕ್ಕಾಲು ಅಥವಾ ಅರ್ಧ ವರ್ತುಲಾಕಾರವಿರುತ್ತವೆ. ಮು
ಖಬಿಲ್ಲೆಯನ್ನು ಸಾಧಾರಣವಾಗಿ ಬೆಳ್ಳೀ ಪಾಣ್ಣಿನಿಂ
ದ ಮಾಡಿ ಅದರ ಮೇಲೆ ಕರೇ ಬಣ್ಣದಿಂದ ಅಂಕೆಗಳನ್ನು
ಹಾಕುತ್ತಾರೆ. ವಾಚುಗಳೊಳಗಿನ ಚಕ್ರ ಮುಂತಾದ
ಯಂತ್ರಗಳು ಬಹು ಸೂಕ್ಷ್ಮವಾಗಿರುತ್ತವೆ. ಮತ್ತು ಭಾ
ರೀ ಕ್ರಯ ಬೀಳುವ ವಾಚುಗಳಲ್ಲಿರುವ ತಿರುಗಣೀ ಕೂತಿ
ನೊಳಗೆ ವಜ್ರ, ಕೆಂಪು ಮುಂತಾದ ರತ್ನಗಳನ್ನು ಕೂಡ್ರಿ
ಸಿರುತ್ತಾರೆ. ಗಂಡಸರು ಉಪಯೋಗಿಸುವ ವಾಚುಗಳು
ದೊಡ್ಡವಾಗಿಯೂ ಗಟ್ಟಿಯಾಗಿಯೂ ಇರುತ್ತವೆ. ಮತ್ತು
ಹೆಂಗಸರ ಸಲುವಾಗಿ ಮಾಡಿದ ವಾಚುಗಳು ಸಣ್ಣಗಿಯೂ
ಸೂಕ್ಷ್ಮವಾಗಿಯೂ ಇರುವವು. ಸ್ತ್ರೀಯರ ಕೈಯೊಳಗಿನ
ಬಳೆಗಳ ಮೇಲೂ ಉಂಗುರಗಳ ಮೇಲೂ ಸಹ ಕೂಡ್ರಿಸ
ಲಿಕ್ಕೆ ಬರುವಂಥ ವಾಚುಗಳನ್ನು ಬಹು ಸಣ್ಣವಾಗಿ ಇತ್ತೀಚ
ಮಾಡಹತ್ತಿದ್ದಾರೆ. ವಾಚುಗಳ ಬೆಲೆಯು ಅವುಗಳೊಳಗೆ
ಕೂಡ್ರಿಸಿರುವ ಯಂತ್ರಗಳನ್ನೂ ಹೊರಗಿನ ಕರಡಿಗೆಯ
ತರಗಳನ್ನೂ ಹೊಂದಿ ಇರುವದು. ತಪ್ಪದೇ ಕ್ರಯ
ದಿಂದ ನಡಿಯುವ ಚಿನ್ನದ ವಾಚುಗಳಿಗೆ ೧೦೦೦ ರೂಪಾಯಿ
ಗಳ ವರೆಗೆ ಬೆಲೆ ಬೀಳುತ್ತದೆ. ಆದರೆ ಇತ್ತೀಚ ಮಧ್ಯ
ಮತರದ ಗಡಿಯಾಲಗಳು ಬಹು ಅಗ್ಗವಾಗಿ ಮಾರಹತ್ತಿವೆ.
ಈಗ ಉತ್ತಮವಾದ 'ನಿಕಲಸಿಲ್ವರ' ದ ವಾಚುಗಳು ಸಹ
೧೦ ರುಪಾಯಿಗೆ ಸಿಗುತ್ತವೆ. ಮೊದಲು ಶ್ರೀಮಂತರು ತ
ಮ್ಮ ದೊಡ್ಡಸ್ತಿಕೆಯನ್ನು ತೋರಿಸುವದಕ್ಕಾಗಿಯೇ ವಾಚು
ಗಳನ್ನು ಉಪಯೋಗಿಸುತ್ತಿದ್ದರು. ಆದರೆ ಈಗ ಮಧ್ಯ
ಮಸ್ಥಿತಿಯ ಜನರು ಸಹ ಇವುಗಳನ್ನು ಕೊಳ್ಳಹತ್ತಿದ್ದಾರೆ.

ಮುಂದೆ ಸಾಗುವದು.)

DEPARTMENTAL NOTICES.

ನೋಟೀಸು.

ನಂಬರು ೪೯–೨೪.

ಸನ್ ೧೮೭೨ನೇ ಇಸವಿಯ ಆಕ್ಟೋಬರ ತಿಂಗಳ ಕನ್ನಡ ಶಾಲಾಪತ್ರಿಕೆಯ ೧೪ರಿಂದ ೧೬ನೇ ಪುಟಗಳಲ್ಲಿ ಛಾಪಿಸಿರುವ ನಿಯಮಗಳಂತೆ "ವರ್ಧಮಾನಯಜೀಜ್" ಎಂಬ ಇನಾಮು ಗಳಿಗಾಗಿ ಪರೀಕ್ಷೆಯನ್ನು ಕೆಳಗೆ ಸಹಿ ಮಾಡಿದವರು ಸನ್ ೧೮೭೪ನೇ ಇಸವಿಯ ಆಕ್ಟೋಬರ ತಿಂಗಳ ೧ನೇ ತಾರೀಖು ಸೋಮವಾರ ದಿವಸ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ತೆಗದುಕೊಳ್ಳುವರು. ೪೦ ರೂಪಾಯಿಗಳದು ಒಂದು, ೩೦ ರೂಪಾಯಿಗಳದು ಮತ್ತೊಂದು, ಹೀಗೆ ಎರಡು ಇನಾಮು ಗಳುಂಟು. ಈ ಪರೀಕ್ಷೆಗೆ ಬರಲಪೇಕ್ಷಿಸುವ ಉಪೋದ್ಘಾರರು ತಮ್ಮ ಅರ್ಜಿಗಳನ್ನು ಸನ್ ೧೮೭೪ನೇ ಇಸವಿಯ ಸಪ್ಟೆಂಬರ ೩೦ನೇ ತಾರೀಖಿನ ಪೂರ್ವದಲ್ಲಿ ಅಥವಾ ಪರ ವಾವಧಿ ಆ ತಾರೀಖಿನ ದಿವಸ ಕೆಳಗೆ ಸಹಿ ಮಾಡಿದವರ ಕಡೆಗೆ ಕಳುಹಬೇಕು. ಪರೀಕ್ಷೆಯು ಜೆಳಿಗೆ ೧೦॥ ಘಂಟಿ ಗೆ (ಮುದ್ರಾಸವೇಳೆ) ಪ್ರಾರಂಭವಾಗುವದು.

ಧಾರವಾಡ,
ತಾ॥ ೧೧–೯–೧೮೭೩.

S. V. Patwardhan,
ಎಜ್ಯುಕೇಶನಲ್ ಇನಸ್ಪೆಕ್ಟರ
ದಕ್ಷಿಣಭಾಗ.

ನೋಟೀಸು.

ಸನ್ ೧೮೭೪।೭೫ನೇ ಇಸವಿಯಲ್ಲಿ ಆಗತಕ್ಕ ಧಾರ ವಾಡ ಟ್ರೇನಿಂಗ ಕಾಲೇಜವ ೩ನೇ ಮತ್ತು ೪ನೇ ವರ್ಷ ಗಳ ಸರ್ಟಿಫಿಕೇಟ ಪರೀಕ್ಷೆಗಳಿಗಾಗಿ ಕೆಳಗೆ ಕಾಣಿಸಿದ ಕನ್ನ ಡ ಮತ್ತು ಸಂಸ್ಕೃತ ವಿಷಯಗಳು ನೇಮಿಸಲ್ಪಟ್ಟಿರುತ್ತವೆ. ಹೊರಗಿನಿಂದ ಪರೀಕ್ಷೆಗೆ ಬರುವವರು ಸಹ ಇವುಗಳನ್ನೇ ಓದಿಕೊಂಡು ಬರತಕ್ಕದ್ದು.

೩ನೇ ವರ್ಷ.

ಕನ್ನಡ. (ಅ) ಕಬ್ಬಿಗರಕಾವ, ಮೊದಲಿನ ೧೫೦ ಪದ್ಯಗಳು.

(ಬ) ಬಸವಪುರಾಣ, ೧೩ನೇ ಸಂಧಿಯ ಆರಂಭದಿಂದ ೧೫೦ ಪದ್ಯಗಳು.

(ಕ) ಶಬರಶಂಕರವಿಲಾಸ, ೪ನೇ ಆಶ್ವಾಸದ ಆರಂಭದಿಂದ ೧೫೦ ಪದ್ಯಗಳು.

(ಡ) ಶಬ್ದಮಣಿದರ್ಪಣ—೨ನೇ ವರ್ಷದ ಅಭ್ಯಾಸವಲ್ಲದೆ ನಾಮಪ್ರಕರಣ ಮತ್ತು ೪೯, ೬೬, ೬೯, ೧೬೪, ೧೬೫, ೧೬೯, ೨೧೩, ೨೫೯, ೨೫೯, ೨೬೦ ಮುಂತಾದ ೧೦ ಸೂತ್ರಗಳು.

ಸಂಸ್ಕೃತ. ೨ನೇ ಪುಸ್ತಕ, ಕಾಯದೆಯಲ್ಲಿ ಹೇಳಿದಷ್ಟು. ಕಾಲಿದಾಸಕೃತ ಶಾಕುಂತಲನಾಟಕದ ಮೊದಲಿನ ೪ ಅಂಕಗಳು.

೨ನೇ ವರ್ಷ.

ಕನ್ನಡ. (ಅ) ಜಯಮಿನಿಯ ೭ | ೮ | ೯ ಸಂಧಿಗಳು.

(ಬ) ಶಬ್ದಮಣಿದರ್ಪಣ—ಆಖ್ಯಾತಪ್ರಕರಣ ಮತ್ತು ೩, ೪, ೬, ೫, ೮, ೯, ೧೧, ೧೩, ೧೪, ೧೫, ೧೬, ೩೧, ೩೧, ೪೦, ೪೫, ೪೯, ೫೧, ೫೩, ೫೪, ೫೫, ೫೬, ೫೭, ೫೮, ೫೯, ೬೫, ೬೮, ೭೦, ೭೦, ೭೩, ೭೪, ೭೯, ೮೩, ೮೪, ೮೪, ೮೬, ೮೭, ೯೩, ೯೪, ೧೦೬, ೧೩೬, ೧೬೪, ೧೬೫, ೧೬೭, ೧೬೮, ೨೧೩, ೨೫೪, ೨೫೫ ಮುಂತಾದ ೪೦ ಸೂತ್ರಗಳು.

ಸಂಸ್ಕೃತ ೨ನೇ ಪುಸ್ತಕ, ಕಾಯದೆಯಲ್ಲಿ ಹೇಳಿದಷ್ಟು. ಹಿತೋಪದೇಶ, ಮಿತ್ರಭೇದ, ವಿಗ್ರಹ ಇವೆರಡು ಸಂಧಿಗಳು.

ಧಾರವಾಡ ಟ್ರೇ. ಕಾಲೇಜ, ತಾ॥ ೧೫ ಡಿಸೆಂಬರ ೧೮೯೩.

Raoji B. Karandikar.
ಪ್ರಿನ್ಸಿಪಾಲ.

DHARWAR TRAINING COLLEGE CERTIFICATE EXAMINATION—1893.

ಕಾಲೇಜಿನ ಸರ್ಟಿಫಿಕೇಟು ಪರೀಕ್ಷೆಯಪ್ರಶ್ನೆಗಳು.

೧ನೆಯ ವರ್ಷ.

ಕನ್ನಡ.

(ಬಲಕ್ಕೆ ಬರೆದ ಅಂಕೆಗಳು ಪ್ರಶ್ನೆಗಳ ಪೂರ್ಣಗುಣಗಳು.)

೧. ಕೆಳಗೆ ತೋರಿಸಿದ ಶಬ್ದಗಳನ್ನು ಸಂಧಿಯಿಂದ ಕೂಡಿಸು.
(*a*) ಅಲ್ಲಿ+ಆಗಲಿ. (*b*) ಮಹಾ+ಋಷಿ. (*c*) ಕಾ+ಅಪ್ಪಾ. (*d*) ಮನಸ್+ಅಂಧಕಾರ. (*e*) ಅದರಿಂದ+ಏ (ಅವಧಾರಣಾರ್ಥಕ) (*f*) ಗುರು+ಅಲ್ಲಿ.
ಮೊದಲಿನ ಮೂರು ಸಂಧಿಗಳ ವಿಷಯವಾಗಿ ನೇಮುಗಳನ್ನು ಬರೆ. ೯

೨. ಕೆಳಗೆ ಬರೆದ ಧಾತುಗಳ ಭೂತನ್ಯೂನ್ಯ ಭೂತಕೃದ್ವ್ಯಾಜಕ ಭೂತ ಆಖ್ಯಾತ (ನಪುಂಸಕೈಕವಚನ) ರೂಪಗಳನ್ನು ಬರೆ. ೪

ಉಗು, ಮಿದಿ, ಈ, ಹೊಗು, ಕೀಳು.

೩. ಪ್ರಧಾನ ಮತ್ತು ಗೌಣದ್ವಿತೀಯಗಳು ಬೇರೆ ಬೇರೆ ಧಾತುಗಳ ಕೂಡ ಪ್ರಯೋಗಿಸಲ್ಪಡುವದರಿಂದ ತೋರಿಸುವ ಅರ್ಥ ವಿಶೇಷಗಳು ಯಾವವು ವಿವರಿಸು. ೪

೪. ಲಕ್ಷಣವಾಚಕ ಆಖ್ಯಾತ, ಅರಿಸಮಾಸ, ಊನಕ್ರಿಯಾಪದ, ಉಪಸರ್ಗ, ನಿಪಾತ ಇವುಗಳ ಲಕ್ಷಣಗಳನ್ನು ಬರೆದು ಉದಾಹರಣೆ ಕೊಡು. ೧೦

೫. ಉಂಬಳಿ, ಎಣೆಯ, ಐಶದ, ಹಿಂಗಾರಿ, ಕೂರ್ಪಾಳಿ, ಕೆನ್ನೈದಿಲೆ ಇವುಗಳ ಅರ್ಥವನ್ನೂ ವ್ಯುತ್ಪತ್ತಿಯನ್ನೂ ಬರೆ. ೬

೬. ರಕ್ತಾಶಯ, ಗಾಢಾಂಧಕಾರ, ಕೊರಳುಕೊಂಕಿನ, ಅರುವೆರಲಾಗಿ, ಇತ್ತಂಡೆ, ಈ ಸಮಾಸಗಳು ಯಾವವು ಮತ್ತು ಇವುಗಳನ್ನು ಬಿಡಿಸಿ ತೋರಿಸು. ೬

೭. ಶ್ರಮವಿಭಾಗವೆಂದರೇನು? ಅದರಿಂದಾಗುವ ಮುಖ್ಯ ಲಾಭಗಳು ಯಾವವು? ಪ್ರಕಾಶ ಕಿರಣಗಳ ರಸಾಯನ ವ್ಯಾಪಾರವನ್ನು ತೋರಿಸುವ ಒಂದು ಪ್ರಯೋಗವನ್ನು ವಿವರಿಸು. ೧೦

೮. ಕೆಳಗೆ ಬರೆದ ವಾಕ್ಯಗಳನ್ನು ಯೋಗ್ಯ ಕಂಡಲ್ಲಿ ಉದಾಹರಣೆಗಳನ್ನು ಕೊಟ್ಟು ಪೂರ್ಣವಾಗಿ ಟೀಕಿಸು. ೨೦

(*a*) ಒಂದು ತಂಬಿಗೆ ನೀರು ಅರ್ಧ ತಂಬಿಗೆಯಷ್ಟು ಆಕಾರವುಳ್ಳದ್ದು ಎಂದೂ ಆಗಲಿಕ್ಕಿಲ್ಲ.

(*b*) ಪ್ರನಾಹಿಗಳ ಸ್ನೇಹಾಕರ್ಷಣವು ಬಹಳ ಕಡಿಮೆ ಇರುವ ಕಾರಣ ಅವುಗಳ ಭಾರವು ಎಲ್ಲ ದಿಕ್ಕುಗಳಲ್ಲಿ ಬೀಳುತ್ತದೆ.

(*c*) ಸನುತೋಲದ ಮೂಲಕವಾಗಿ ವಾತಾವರಣದ ಭಾರವು ನನಗೆ ತಿಳಿಯುವದಿಲ್ಲ.

(*d*) ವಾಯುರೂಪ ಪದಾರ್ಥಗಳ ವಿಶಿಷ್ಟ ಗುರುತ್ವವನ್ನೂ ಸ್ಥಳ ಶಿಕ್ಕಷ್ಟು ಪಸರಿಸುವ ಗಣವನ್ನೂ ಆಶ್ರಯಿಸಿ ವಿಮಾನಗಳನ್ನು ಕಟ್ಟುವರು.

(*e*) ಜೋಲಿಗಳು ಸಣ್ಣವಿರಲಿ ದೊಡ್ಡವಿರಲಿ ಅವುಗಳಿಗೆ ಕಾಲವು ಸಮಾನವೇ ಹತ್ತುತ್ತದೆ.

(*f*) ನಡತೆಗಳಿಗೆ ಕೊಡೆಯು ಸಾವ್ಯವನ್ನು ಕೊಟ್ಟರೆ ಸಲ್ಲುವದು.

೯. ಕೆಳಗೆ ಬರೆದ ಕವಿತೆಗಳ ಅರ್ಥವನ್ನು ಅವುಗಳೊಳಗಿನ ಶಬ್ದಗಳನ್ನು ಲೋಪಿಸದೆ ನಿನ್ನ ಭಾಷೆಯಲ್ಲಿ ಬರೆಯಿರಿ.

(*a*) ಸುರೆಯಂ ಸೇವಿಸದಾತಬಲ್ಲನೆ ಮಹಾಯೋಗೀಂದ್ರರೆಂದೆಂಬುದಂ । ಧೊರೆಯೋಳ್ತೇಜವನಾಂತವಂ ಬಡವರಂ ತಾಂನೊಳ್ಪನೇಕಂಗಳಿಂ ॥ ಪಿರಿಯನ್ಮೂನಿಗಳಿಂದು ಕಾಂಬನೆ ಮಹಾದುರ್ಮಾರ್ಗಿಯೆಂತಾದೊಡಂ । ದುರುಳಂ ಬಲ್ಲನೆ ಬಾಳ್ವರಂ ಹರಹಂಕಾ ಶ್ರೀಚಿನ್ನ ಸೋಮೇಶ್ವರಾ ॥

(*b*) ಕಾಮುನ ಸಾಮಜಂ ಮುಧುಮುಹೀಶನ ಕೋಶಗೃಹಂ ಮುಧುನ್ಮತ । ಸ್ತೋಮುದಭೋಗ ಭೂವಿಮುಲಯಾನಿಲನಾಡುವ ನಾಡುವೆಟ್ಟನು ॥ ಲ್ಲೀವೃದುಲಾಸ್ಯಶಾಲೆ ಶುಕವೃಂದದ ಜೀವಣದಾಗರಂಬಳಿ । ಕ್ಕೀಮುರನುಲ್ತೆ ಮಾಮುರವೆನುತ್ತಜನಿಟ್ಟನೊರಲ್ದು ನಾನುನುಂ ॥

(*c*) ಎಲೆ ಶಬರ ನಿನ್ನ ಪೃಥುಭುಜ ।
ಬಲವೊಳ್ಳಿತ್ತೆಸುಗೆ ಪೊಸತು ಬಿಲ್ಲಾಳ್‌ತನದೊಳ್ ॥
ಕಲಿನೀನಲ್ಲದೆ ಪೆರರಾರ್ ।
ಚಲದಿಂ ಸನುನಿನಿಸಿ ಕಾದಿದೈ ಬಿಡದೆನ್ನೊಳ್ ॥

೧೦. ಮೇಲಿನ ಕವಿತೆಗಳು ಯಾವ ವೃತ್ತದವು ಅವುಗಳ ಹೆಸರುಗಳನ್ನೂ ಲಕ್ಷಣಗಳನ್ನೂ ಬರೆ.

ವರ್ಗಣೀ ವಸೂಲು.*

ಧಾರವಾಡ ಜಿಲ್ಲೆ.

	ರೂ.	ಆ.	ಪೈ.
ರಾ. ಸಾ. ಡೆ. ಎ. ಇ. ಧಾರವಾಡ ಇವರಿಂದ ಲೋ. ಬೋ. ಸಾಲಿಗಳ ಬಾಬತು ೧೪೯೯ನೇ ಸಪ್ಟಂಬರ ಅಕ್ಟೋಬರ ತಿಂಗಳುಗಳಬಗ್ಗೆ.	೫೧	೧೪	೦
ಧಾರವಾಡ ಮ್ಯು. ಸ್ಕೂಲುಗಳ ೧೦ ಬಾಬತು ೧೪೯೯ನೆಯು ಅಕ್ಟೋಬರ ನವಂಬರ ಡಿಸೆಂಬರ ತಿಂಗಳುಗಳಬಗ್ಗೆ.	೨	೧೪	೦

ವಿಜಾಪೂರ ಜಿಲ್ಲೆ.

ರಾ. ಸಾ ಡೆ. ಎ. ಇ. ವಿಜಾಪೂರ ಇವರಿಂದ ಲೋ. ಬೋ. ಮ್ಯು. ಸಾಲಿಗಳ ಬಾಬತು ಅಕ್ಟೋಬರ ತಿಂಗಳುಬಗ್ಗೆ.	೧೯	೨	೩

ಕಿರುಕುಳ.

ಕೃಷ್ಣಾಜಿ ರಾಮರಾವ ನೆಗಳೂರ ಮಿ. ಸ್ಕೂಲ ನೂ. ಧಾರವಾಡ ಇವರಿಂದ ೧೪ ಸಾಲಿನಬಗ್ಗೆ.	೦	೧೫	೦
ಸ್ಕೂಲಮಾಸ್ತರೆ ಸಾಂವಶಿ ತಾಲೂಕ ಕುಂದಗೋಳ ಸಂಸ್ಥಾನ ಜಮಖಂಡಿ ಇವರಿಂದ ೧೪೯೪ನೆಯು ಸಾಲಿನಬಗ್ಗೆ.	೦	೧೫	೦
ಹರಿ ಅಣ್ಣಾಜಿ ಗೋರೆ ಅ. ಮಾಸ್ತರ ಸೋಲಾಪೂರ ಇವರಿಂದ ೧೪೯೪ ಇಸವಿಯಬಗ್ಗೆ.	೦	೧೫	೦

---

* ಸೂಚನೆ—ಇದರೊಳಗೇನಾದರೂ ತಪ್ಪು ಇದ್ದರೆ ಮಾಸ್ತರ ಜನರು ಅಗತ್ಯವಾಗಿ ತಿಳಿಸಬೇಕು.

ಪ್ರಕಟನೆ.

ನಮ್ಮ ಡಿಪೋವಲ್ಲಿ ಶಾಲೋಪಯೋಗಿ ಯಾವತ್ತು ತರದ ಸರಕಾರಿ ಹಾಗು ಖಾಸಗೀ ಮತ್ತು ಇನ್ನು ಅನೇಕ ತರದ ಪುಸ್ತಕಗಳು ಕ್ರಯಕ್ಕೆ ದೊರೆಯುತ್ತವೆ. ಬೇಕಾದವರು ರೋಕ್ಕ ಹಣ ಕೊಟ್ಟು ಅಥವಾ ವ್ಯಾಲ್ಯುಪೇಬಲ್‌ದ್ವಾರ ತರಿಸಿಕೊಳ್ಳಬೇಕು.

ಕಮಿಷನ್ ದರ ಕೆಳಗೆ ಬರೆದಂತೆ.

ಸರಕಾರಿ—ಐದು ರೂಪಾಯಿಯಿಂದ ಹತ್ತು ರೂಪಾಯಿಗಳವರೆಗೆ ೧ ರೂಪಾಯಕ್ಕೆ ೧ ಆಣೆ ಪ್ರಕಾರವಾಗಿಯೂ, ಹತ್ತು ರೂಪಾಯಿಗಳಿಂದ ನೂರು ರೂಪಾಯಿಗಳ ವರೆಗೆ ೧ ರೂಪಾಯಕ್ಕೆ ೂ ಆಣೆ ಪ್ರಕಾರವಾಗಿಯೂ ಕಮಿಷನ್ ಕೊಡುವದು.

ಖಾಸಗಿ—ಐದು ರೂಪಾಯಿಯಿಂದ ಹತ್ತು ರೂಪಾಯಿಗಳವರೆಗೆ ೧ ರೂಪಾಯಕ್ಕೆ ೪ ಆಣೆ ಪ್ರಕಾರವಾಗಿಯೂ, ಹತ್ತು ರೂಪಾಯಿಗಳಿಂದ ನೂರು ರೂಪಾಯಿಗಳ ವರೆಗೆ ೧ ರೂಪಾಯಕ್ಕೆ ೬ ಆಣೆಯಂತೆಯೂ ಕಮಿಷನ್ ಕೊಡುವದು.

ರಜಿಷ್ಟರ ಮಾಡಿ ಹಕ್ಕು ಪಡಕೊಂಡ ಖಾಸಗಿ ಬುಕ್ಕುಗಳಿಗೂ ಮತ್ತು ರೂಪಾಯದ ಅಂಶಕ್ಕೂ ಕಮಿಷನ್ ಕೊಡಲಾರದು. ತಿಕೀಟು ಇಡದ ವಿನಹಾ ಉತ್ತರ ದೊರಿಯಲಾರದು.

ಹುಬ್ಬಳ್ಳಿ,
ತಾ|| ೩೫–೧೦–೯೩. } ಶಿವಲಿಂಗಸ್ವಾಮಿ,
ಬುಕ್‌ಸೆಲರ ಹುಬ್ಬಳ್ಳಿ.

ಕನ್ನಡಶಾಲಾಪತ್ರಿಕೆ.

KANARESE SCHOOL PAPER.

ಪುಸ್ತಕ ೭೯.] ಫೆಬ್ರುವರಿ ೧೮೯೪. [ಸಂಚಿಕೆ ೨.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ... ೨೫
೨. ದೀಪಾವಳಿಯ ಸೂಟಿಯ ಆರಂಭದಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಗೆ ರಾ ರಾ. ಸವದಿಯವರು ಮಾಡಿದ ಉಪದೇಶ ೩೩
೩. ಮಕ್ಕಳ ನೀತಿಶಿಕ್ಷಣವು ೩೮
೪. ಕಲಿಸುವ ಪದ್ಧತಿಗಳು ೪೧
೫. ನೋಟೀಸು ೪೫
೬. ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು ೧೮೯೩. ೪೬

CONTENTS.

1. Educational Intelligence and Useful Notes ... 25
2. Address to CollEGE Students on the Eve of the Divali Vacation by Mr. Savadi... ... 33
3. The Moral Training of Children 38
4. Methods of Teaching 41
5. Departmental Notices 45
6. Dharwar Training College Certificate Examination—1893. 46

DHARWAR:
PRINTED AT THE KARNATIC BOOK DEPOT PRESS,
1894.

ಪ್ರಕಟನೆ.

ಕನ್ನಡ ಕಯ್ಪಿಡಿಯ ಪೂರ್ವಾರ್ಧ ಎನ್ನೇ ಆವೃತ್ತಿ.
(ಪಳೆಗನ್ನಡ ಹೊಸಗನ್ನಡ ವ್ಯಾಕರಣ.)

ಈ ವ್ಯಾಕರಣದ ಮೊದಲನೆಯಾವೃತ್ತಿ ಮುದ್ರಿಸಿದ ಪ್ರತಿಗಳೆಲ್ಲ ತೀರಿದುದರಿಂದಲೂ ಬಹುಜನರು ಕಯ್ಪಿಡಿಯನ್ನು ಮತ್ತೆ ಅಚ್ಚು ಮಾಡಿಸಿರಿ ಎಂದೂ ಹೇಳಿದುದರಿಂದಲೂ ಬಹು ಜನರು ಬೇಕುತ್ತಿರುವದರಿಂದಲೂ ವಿದ್ಯಾರ್ಥಿಗಳಿಗೆ ಅನುಕೂಲನಾಗುವಂತೆ ತಿದ್ದಿ ಕಾಠಿಣ್ಯವನ್ನೆಲ್ಲ ತೆಗೆದು ಹಾಕಿ, ಅನುಕೂಲವಾಗುವ ಹೊಸ ನಿಯಮಗಳನ್ನು ಸೇರಿಸಿ ಚಕ್ಕಲ್ಲೋ ಮೊಳೆಗಳಿಂದ ಉತ್ತಮ ಕಾಗದಗಳ ಮೇಲೆ ಎನ್ನೇ ಆವೃತ್ತಿ ಅಚ್ಚು ಹಾಕಿಸಿ ಪುಸ್ತಕಗಳನ್ನು ಮಾರಾಟಕ್ಕೆ ಸಿದ್ಧ ಮಾಡಿಸಿದ್ದೇವೆ. ಬೇಕಾದವರು ವ್ಯಾಲ್ಯುಪೇಬಲಿನಿಂದ ತರಿಸಿಕೊಳ್ಳಬೇಕು. ನುಡಿಗಟ್ಟು ವ್ಯಾಕರಣದ ಪ್ರತಿಗಳು ತೀರಿವೆ, ಎನ್ನೇ ಆವೃತ್ತಿ ಮುದ್ರಿಪಿಸುವ ಕೆಲಸ ನಡೆದದೆ, ಕಾರಣ ನುಡಿಗಟ್ಟನ್ನು ಬೇಡುವವರು ಇನ್ನೂ ನಾಲ್ಕು ತಿಂಗಳ ವರೆಗೆ ಸಮಾಧಾನ ಮಾಡಿರಿ.

ಕಯ್ಪಿಡಿ ಪೂರ್ವಾರ್ಧದ ಬೆಲೆ.

ಸಾದಾ ಬೈಂಡು ಪ್ರತಿಯೊಂದಕ್ಕೆ ೧೦ ಆಣೆ.
ಬಂಗಾರದಕ್ಷರಗಳ ಬೈಂಡು ೧ ರೂ.

ಪತ್ರ ಬರೆಯುವವರು ಸುವಾಚ್ಯ ಅಕ್ಷರಗಳನ್ನು ಬರೆಯಬೇಕು. ತಾ|| ೨೫–೧೦–೨೪ ಆಸ್ಪಿ.

ಧೋಂಡೋ ನರಸಿಂಹ ಮುಳಬಾಗಲು,
ಕನ್ನಡ ಅಧ್ಯಾಪಕ ಟ್ರೇನಿಂಗ ಕಾಲೇಜ ಧಾರವಾಡ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಭಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆಸುಗುಣಂ ತೋರಲ್ಕೆಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೭ನೆ.] ಫೆಬ್ರುವಾರಿ ೧೮೬೯ನೆ ಇ. [ಸಂಚಿಕೆ ೨ನೆ.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ಟ್ರೇನಿಂಗ ಕಾಲೇಜ ಕೋಡಿನಲ್ಲಿ "ಟ್ರೇಂಡ ಜನರನ್ನು ಅವರು ಪಡಕೊಂಡ ಸರ್ಟಿಫಿಕೇಟುಗಳಿಗೀಂತ ಕಡಿಮೆ ಜಾಗೆಗಳಿಗೆ ನೇಮಿಸಿದ್ದರೆ, ಅವರಿಗೆ ಅವಷ್ಟು ತೀವ್ರವಾಗಿ ಅವರ ಸರ್ಟಿಫಿಕೇಟುಗಳಲ್ಲಿದ್ದಷ್ಟು ಸಂಬಳ ಸಿಗುವಂತೆ ಬಡತಿ ಮಾಡಲಾಗುವದು" ಎಂದು ಬರೆದಿರುತ್ತದಷ್ಟೇ ಅವರೆ ಈವಾಕ್ಯದಲ್ಲಿದ್ದ "ಅವಷ್ಟು ತೀವ್ರವಾಗಿ" ಎಂಬ ಶಬ್ದಗಳ ನಿಶ್ಚಯಾತ್ಮಕ ಅರ್ಥವು ಈವರೆಗೂ ಆಗಿದ್ದಿಲ್ಲ. ಕೆಲವು ಜನ ಮಾಸ್ತರರಿಗೆ ಸರ್ಟಿಫಿಕೇಟಿನ ಪ್ರಕಾರ ಪಗಾರದೊರೆಯುಬೇಕಾದರೆ ೫।೬।೮ ವರ್ಷಗಳು ಹತ್ತುತ್ತಿದ್ದವು. ಅವರೆನನ್ನ ಭಾಗದ ಇನಸ್ಪೆಕ್ಟರರಾದ ಮೆ. ಸಿ. ವಿ. ಪಟವರ್ಧನ ರೊರೆಗಳು ಬಡಮಾಸ್ತರರ ಸ್ಥಿತಿಯನ್ನು ಲಕ್ಷಕ್ಕೆ ತಂದು "ಅವಷ್ಟು ತೀವ್ರವಾಗಿ" ಅಂದರೆ ಎಂಟು ಹತ್ತು ತಿಂಗಳು ಬಿಸಳವಾದರೆ ಬಂದು ಬಂದೂವರೆ ವರ್ಷಕ್ಕಿಂತ ಹೆಚ್ಚು ಅವಧಿಯು ಇರಬಾರದೆಂದು ಗೊತ್ತುಪಡಿಸಿ ಈವರ್ಷ ಮಾ

ರ್ಚತಿಂಗಳಲ್ಲಿ ಮಾಸ್ತರ ಜನರಿಗೆ ಬಡತೀ ಕೊಡುವರೆಂಬ ಆನಂದದ ಸುದ್ದಿಯನ್ನು ತಿಳುಹಲಿಕ್ಕೆ ನಾವು ಬಹಳ ಸಂತೋಷಪಡುತ್ತೇವೆ. ಮಿ. ಪಟವರ್ಧನ ಸಾಹೇಬರು ಹೆಡ್ಡ ಮಾಸ್ತರರ ಸಂಬಳವು ೧೦ ರೂಪಾಯಿಗಳಿಗಿಂತ ಕಡಿಮೆ, ಅಶಿಸ್ಟೆಂಟ ಮಾಸ್ತರರ ಸಂಬಳವು ೭ ರೂಪಾಯಿಗಳಿಗಿಂತ ಕಡಿಮೆ ಇರಬಾರದೆಂಬ ನೇಮವನ್ನು ಮಾಡಿ, ಅದರಂತೆ ಕಳೆದ ಎರಡು ವರ್ಷಗಳಿಂದ ಅಮಲು ನಡಿಸುತ್ತಲಿದ್ದಾರೆ. ಇದೇ ನಿಯಮವು ಮಧ್ಯ ಉತ್ತರಭಾಗಗಳಲ್ಲಿಯೂ ನಡಿಯಲಿಕ್ಕೆ ಬೇಕೆಂದು ಇತ್ತಿತ್ತಲಾಗಿ ಗೊತ್ತಾಗಿದೆ. "ಆದಷ್ಟು ತೀವ್ರವಾಗಿ" ಎಂಬ ಶಬ್ದಗಳ ಅರ್ಥವನ್ನು ಗೊತ್ತುಪಡಿಸಿ, ಆಅರ್ಥಾನುರೋಧದಿಂದ ಮಾಸ್ತರ ಜನರಿಗೆ ಮಾರ್ಚದ ೧ನೇ ತಾರೀಖಿನಿಂದ ಬಡತಿಯ ಬಗ್ಗೆ ಸಿಫಾರಸು ಮಾಡಬೇಕೆಂದು ಡಿಪ್ರೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರಿಗೆ ಹುಕುಮುಗಳು ಹೋಗಿರುತ್ತವೆಂದು ನಮಗೆ ಸಾಧಾರವಾಗಿ ತಿಳಿಯುತ್ತದೆ.

ಮಾಸ್ತರ ಜನರಿಗೆ ತಕ್ಕಷ್ಟು ಪಗಾರಕೊಟ್ಟು ಸಮಾಧಾನಕರವಾದ ಕೆಲಸವನ್ನು ಅವರಿಂದ ಅಪೇಕ್ಷಿಸುವದು ನ್ಯಾಯವಾವದ್ದಿಂತಲೂ ಹೊಟ್ಟಿಗೆ ಸೂಲದ ಸಂಬಳವ ಕೊಟ್ಟು ಅವರಿಗೆ ವೈತುಂಬ ಕೆಲಸ ಮಾಡಹೇಳುವದು ಸರಿಯಾವದ್ದಲ್ಲಿಂತಲೂ ಬಹು ದಿವಸದಿಂದ ನಮ್ಮ ಅಭಿಪ್ರಾಯವಿರುವದು. ಆಅಭಿಪ್ರಾಯವಂತೆಯೇ ಈಗ ಅಮಲು ನಡೆಯುವದೆಂದು ಕಂಡು ನಮಗೆ ಬಹಳ ಸಂತೋಷವಾಗುತ್ತದೆ. ಶಿಕ್ಷಕ ಜನರು ತಮ್ಮ ಶ್ರಮವನ್ನು ಲೆಕ್ಕಿಸದೆ ಮನಮುಟ್ಟಿ ಕೆಲಸಮಾಡಿ, ತಮ್ಮ ಪಾಲಿಗೆ ಯಶಸ್ಸು ಟ್ರೇನಿಂಗಕಾಲೇಜಕ್ಕೆ ಕೀರ್ತಿಯೂ ಬರುವಂತೆ ಮಾಡಬೇಕೆಂದು ಸಾರಿ ಹೇಳುತ್ತೇವೆ.

ಈ ಭಾಗದ ಮುಖ್ಯ ಪರೀಕ್ಷೆಯ ಪರಿಣಾಮವನ್ನು ಕೆಳಗೆ ಕಾಣಿಸಿರುತ್ತೇವೆ.

ಪರೀಕ್ಷಾ ಸ್ಥಳಗಳು.	ಪರೀಕ್ಷೆಗೆ ಕೂತವರ ಸಂಖ್ಯೆ.		ಪಾಸಾದವರ ಸಂಖ್ಯೆ.		ಶೇಕಡಾ.	
	ಎನೇ ಗ್ರೇಡ.	ಕಿನೇ ಗ್ರೇಡ.	ಎನೇ ಗ್ರೇಡ.	ಕಿನೇ ಗ್ರೇಡ.	ಎನೇ ಗ್ರೇ.	ಕಿನೇ ಗ್ರೇ.
ಧಾರವಾಡ.	೨	೯೯೪	೧	೧೯೩	೫೦	೯೪. ೪
ಬೆಳಗಾವ.	೪	೨೪೩	೧	೯೪	೧೦.೭೫	೯೪. ೧
ವಿಜಾಪೂರ.	೪	೧೩೧	೨	೫೧	೫೦	೭೯. ೪
ಕ್ಯಾನರಾ.	೯೨	೧೩೪	೪	೬೧	೯.೪	೪೫. ೨

ಹೋದಸಾರೆ ಈ ಪರೀಕ್ಷೆಯ ವಿಷಯವಾಗಿ ನಾವು ಕೆಲವು ಸೂಚನೆಗಳನ್ನು ಮಾಡಿದ್ದೆವು. ಈವರ್ಷದ ಉತ್ತರದ ಕಾಗದಗಳನ್ನು ಕುರಿತು ವಿಚಾರಮಾಡಿ ನೋಡಲಾಗಿ, ಆಸೂಚನೆಗಳಿಗೆ ಮಾಸ್ತರ ಜನರು ತಕ್ಕಷ್ಟು ಲಕ್ಷಕೊಟ್ಟಂತೆ ತೋರುವದಿಲ್ಲ. ಇದು ಪೂರ್ಣವಾಗಿ ಮಾಸ್ತರ ಜನರ ದುರ್ಲಕ್ಷದ ಫಲವೆಂದು ನಾವು ಹೇಳಲಾರೆವು. ಆದಾಗ್ಯೂ ಈದುಃಸ್ಥಿತಿಯನ್ನು ತಪ್ಪಿಸುವದಕ್ಕೆ ವಾರಕ್ಕೊಮ್ಮೆ ಎನೇ ಇಯತ್ತೆಯ ವರ್ಗಗಳ ಲೇಖೀ ಪರೀಕ್ಷೆಗಳೂ ಉತ್ತರದ ಕಾಗದಗಳಲ್ಲಿ ಕಂಡು ಬಂದದೋಷಗಳನ್ನು ಆಗ್ರಹ ಪೂರ್ವಕವಾಗಿ ತಿದ್ದುವ ಪರಿಪಾಠವೂ ಯೋಗ್ಯ ಉಪಾಯಗಳೆಂದು ನಮಗೆ ತೋರುತ್ತದೆ. ವಾರಕ್ಕೊಮ್ಮೆ ಪರೀಕ್ಷೆಯನ್ನು ತೆಗೆದುಕೊಳ್ಳಲಿಕ್ಕೆ ಅನುಕೂಲವಾಗದಿದ್ದರೆ ೧೫ ದಿವಸಕ್ಕೊಮ್ಮೆಯಾದರೂ ಪರೀಕ್ಷೆಯನ್ನು ತೆಗೆದುಕೊಳ್ಳತಕ್ಕದ್ದು.

ಇಂಗ್ಲಂಡವಲ್ಲಿರುವ "ಲಂಡನ ಸ್ಕೂಲಬೋರ್ಡ" ಎಂಬ ವಿದ್ಯಾಲಯದ ವಾರ್ಷಿಕೋತ್ಸವದ ಕಾಲಕ್ಕೆ ನಮ್ಮ ಮುಂಬಯಿ ಇಲಾಖೆಯ ಹಿಂದಿನ ಗವರ್ನರರಾದ ಸರ್ ರಿಚ

ರ್ಚತಿಂಗಳಲ್ಲಿ ಮಾಸ್ತರ ಜನರಿಗೆ ಬಡತೀ ಕೊಡುವರೆಂಬ ಆನಂದದ ಸುದ್ದಿಯನ್ನು ತಿಳುಹಲಿಕ್ಕೆ ನಾವು ಬಹಳ ಸಂತೋಷಪಡುತ್ತೇವೆ. ಮೆ. ಪಟವರ್ಧನ ಸಾಹೇಬರು ಹೆಡ್ಡ ಮಾಸ್ತರರ ಸಂಬಳವು ೧೦ ರೂಪಾಯಿಗಳಿಗಿಂತ ಕಡಿಮೆ, ಅಶಿಕ್ಷಂಟಿ ಮಾಸ್ತರರ ಸಂಬಳವು ೫ ರೂಪಾಯಿಗಳಿಗಿಂತ ಕಡಿಮೆ ಇರಬಾರದೆಂಬ ನೇಮವನ್ನು ಮಾಡಿ, ಅದರಂತೆ ಕಳೆದ ಎರಡು ವರ್ಷಗಳಿಂದ ಅಮಲು ನಡಿಸುತ್ತಲಿದ್ದಾರೆ. ಇದೇ ನಿಯಮವು ಮಧ್ಯ ಉತ್ತರಭಾಗಗಳಲ್ಲಿಯೂ ನಡಿಯಲಿಕ್ಕೆ ಬೇಕೆಂದು ಇತ್ತಿತ್ತಲಾಗಿ ಗೊತ್ತಾಗಿದೆ. "ಅದಷ್ಟು ತೀವ್ರವಾಗಿ" ಎಂಬ ಶಬ್ದಗಳ ಅರ್ಥವನ್ನು ಗೊತ್ತುಪಡಿಸಿ, ಆಆರ್ಥಾನುರೋಧದಿಂದ ಮಾಸ್ತರ ಜನರಿಗೆ ಮಾರ್ಚದ ೧ನೇ ತಾರೀಖಿನಿಂದ ಬಡತಿಯ ಬಗ್ಗೆ ಸಿಫಾರಸು ಮಾಡಬೇಕೆಂದು ಡಿಫ್ಲೊಟ ಎಜ್ಯುಕೇಶನಲ್ ಇನಸ್ಪೆಕ್ಟರರಿಗೆ ಹುಕುಮುಗಳು ಹೋಗಿರುತ್ತವೆಂದು ನಮಗೆ ಸಾಧಾರವಾಗಿ ತಿಳಿಯುತ್ತದೆ.

ಮಾಸ್ತರ ಜನರಿಗೆ ತಕ್ಕಷ್ಟು ಪಗಾರಕೊಟ್ಟು ಸಮಾಧಾನಕರವಾದ ಕೆಲಸವನ್ನು ಅವರಿಂದ ಅಪೇಕ್ಷಿಸುವದು ನ್ಯಾಯವಾದದ್ದಿಂತಲೂ ಹೊಟ್ಟೆಗೆ ಸಾಲದ ಸಂಬಳವ ಕೊಟ್ಟು ಅವರಿಗೆ ವೈತುಂಬ ಕೆಲಸ ಮಾಡಹೇಳುವದು ಸರಿಯಾದದ್ದಲ್ಲೆಂತಲೂ ಬಹು ದಿವಸದಿಂದ ನಮ್ಮ ಅಭಿಪ್ರಾಯವಿರುವದು. ಆಅಭಿಪ್ರಾಯದಂತೆಯೇ ಈಗ ಅಮಲು ನಡೆಯುವದೆಂದು ಕಂಡು ನಮಗೆ ಬಹಳ ಸಂತೋಷವಾಗುತ್ತದೆ. ಶಿಕ್ಷಕ ಜನರು ತಮ್ಮ ಶ್ರಮವನ್ನು ಲೆಕ್ಕಿಸದೆ ಮನವುಟ್ಟಿ ಕೆಲಸಮಾಡಿ, ತಮ್ಮ ಪಾಲಿಗೆ ಯಶಸ್ಸು ಟ್ರೇನಿಂಗಕಾಲೇಜಕ್ಕೆ ಕೀರ್ತಿಯೂ ಬರುವಂತೆ ಮಾಡಬೇಕೆಂದು ಸಾರಿ ಹೇಳುತ್ತೇವೆ.

ಈ ಭಾಗದ ಮುಖ್ಯ ಪರೀಕ್ಷೆಯ ಪರಿಣಾಮವನ್ನು ಕೆಳಗೆ ಕಾಣಿಸಿರುತ್ತೇವೆ.

ಪರೀಕ್ಷಾ ಸ್ಥಳಗಳು.	ಪರೀಕ್ಷೆಗೆ ಕೂತವರ ಸಂಖ್ಯೆ.		ಪಾಸಾದವರ ಸಂಖ್ಯೆ.		ಶೇಕಡಾ.	
	ಎನೇ ಗ್ರೇಡ.	ಕಿನೇ ಗ್ರೇಡ.	ಎನೇ ಗ್ರೇಡ.	ಕಿನೇ ಗ್ರೇಡ.	ಎನೇ ಗ್ರೇ.	ಕಿನೇ ಗ್ರೇ.
ಧಾರವಾಡ.	೨	೯೯೪	೧	೧೯೭	೫೦	೨೪. ೪
ಬೆಳಗಾವಿ.	೪	೭೪೩	೧	೯೪	೧೨೫	೨೪. ೧
ವಿಜಾಪೂರ.	೪	೧೩೧	೦	೫೧	೫೦	೭೯. ೪
ಕ್ಯಾನರಾ.	೨೦	೧೩೩	೩	೬೧	೯.೩	೩೫. ೦

ಹೋದಸಾರೆ ಈ ಪರೀಕ್ಷೆಯ ವಿಷಯವಾಗಿ ನಾವು ಕೆಲವು ಸೂಚನೆಗಳನ್ನು ಮಾಡಿದ್ದೆವು. ಈವರ್ಷದ ಉತ್ತರವ ಕಾಗದಗಳನ್ನು ಕುರಿತು ವಿಚಾರಮಾಡಿ ನೋಡಲಾಗಿ, ಆಸೂಚನೆಗಳಿಗೆ ಮಾಸ್ತರ ಜನರು ತಕ್ಕಷ್ಟು ಲಕ್ಷಕೊಟ್ಟಂತೆ ತೋರುವದಿಲ್ಲ. ಇದು ಪೂರ್ಣವಾಗಿ ಮಾಸ್ತರ ಜನರ ದುರ್ಲಕ್ಷದ ಫಲವೆಂದು ನಾವು ಹೇಳಲಾರೆವು. ಆದಾಗ್ಯೂ ಈದುಃಸ್ಥಿತಿಯನ್ನು ತಪ್ಪಿಸುವದಕ್ಕೆ ವಾರಕ್ಕೊಮ್ಮೆ ಎನೇ ಇಯತ್ತೆಯ ವರ್ಗಗಳ ಲೇಖೀ ಪರೀಕ್ಷೆಗಳೂ ಉತ್ತರದ ಕಾಗದಗಳಲ್ಲಿ ಕಂಡು ಬಂದದೋಷಗಳನ್ನು ಅಗ್ರಹ ಪೂರ್ವಕವಾಗಿ ತಿದ್ದುವ ಪರಿಪಾಠವೂ ಯೋಗ್ಯ ಉಪಾಯಗಳೆಂದು ನಮಗೆ ತೋರುತ್ತದೆ. ವಾರಕ್ಕೊಮ್ಮೆ ಪರೀಕ್ಷೆಯನ್ನು ತೆಗೆದುಕೊಳ್ಳಲಿಕ್ಕೆ ಅನುಕೂಲವಾಗದಿದ್ದರೆ ೧೫ ದಿವಸಕ್ಕೊಮ್ಮೆಯಾದರೂ ಪರೀಕ್ಷೆಯನ್ನು ತೆಗೆದುಕೊಳ್ಳತಕ್ಕದ್ದು.

ಇಂಗ್ಲಂಡವಲ್ಲಿರುವ "ಲಂಡನ ಸ್ಕೂಲಬೋರ್ಡ" ಎಂಬ ವಿದ್ಯಾಲಯದ ವಾರ್ಷಿಕೋತ್ಸವದ ಕಾಲಕ್ಕೆ ನಮ್ಮ ಮುಂಬಯಿ ಇಲಾಖೆಯ ಹಿಂದಿನ ಗವರ್ನರರಾದ ಸರ್ ರಿಚ

ರ್ನಟಂಪಲ ದೊರೆಗಳು ಮಾಡಿದ ಭಾಷಣದೊಳಗಿನ ಮು
ಖ್ಯ ಮುಖ್ಯ ಸಂಗತಿಗಳನ್ನು ಕೆಳಗೆ ಬರೆಯುತ್ತೇವೆ.

ಸಾಮಾನ್ಯ ವಿದ್ಯಾರ್ಥಿಗಳಿಗೆ ಮೇಲ್ತರದ ಶಿಕ್ಷಣವನ್ನು ಕೊಡುವವರಲ್ಲಿ ಬಹಳ ಹಣ ವೆಚ್ಚವಾಗುತ್ತದೆಂತಲೂ ಅವರಿಗೆ ಪ್ರಯೋಜನಕರವಾದ ಶಿಕ್ಷಣವು ಸಿಗುವದಿಲ್ಲೆಂತಲೂ ಎರಡು ಆಕ್ಷೇಪಗಳನ್ನು ಕೆಲವು ಜನರು ತೆಗೆದುಕೊಳ್ಳುವರು. ಆದರೆ ಈ ಮಾತು ದಿಟವಲ್ಲ. ವಾಡಿಕೆಯಾಗಿ ಸಾಮಾನ್ಯ ಜನರ ಮಕ್ಕಳು ೪ನೇ ಇಯತ್ತೆಗಿಂತ ಹೆಚ್ಚಿಗೆ ಕಲಿಯುವದೇ ಇಲ್ಲ. ಈ ಇಯತ್ತೆಯವರೆಗೆ ಆಗುವ ಅಭ್ಯಾಸವು ಕೇವಲ ಪ್ರಾಥಮಿಕವಾದದ್ದು ವಿದ್ಯಾರ್ಥಿಗಳ ಯೋಗ್ಯತೆಗೆ ಸರಿಯಾದದ್ದು ಇರುತ್ತದೆ. ೫ನೇ ಇಯತ್ತೆಯ ಅಭ್ಯಾಸವು ಸ್ವಲ್ಪ ಮೇಲ್ತರದ್ದಿರುತ್ತದೆ. ಅದರಲ್ಲಿ ಕೆಲವು ಉಪಯುಕ್ತ ವಿಷಯಗಳೂ ಸೇರಿಸಲ್ಪಟ್ಟಿರುತ್ತವೆ. ೬ನೇ ಇಯತ್ತೆಯ ಅಭ್ಯಾಸವು ೫ನೇ ಇಯತ್ತೆಗಿಂತ ಮೇಲ್ತರದ್ದಿರುತ್ತದೆ. ಮತ್ತು ೬ನೇ ಇಯತ್ತೆಯಿಂದ ಮುಂದೆ ಮೇಲ್ತರದ ಶಿಕ್ಷಣಕ್ಕೆ ಪ್ರಾರಂಭವಾಗುತ್ತದೆ. ೫ನೇ ೬ನೇ ಇಯತ್ತೆಗಳ ಮುಂದೆ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯು ಬಹಳ ಕಡಿಮೆ ಇರುವದರಿಂದ, ಮೊದಲನೇ ಆಕ್ಷೇಪವು ನಿರಾಧಾರವಾಗಿರುತ್ತದೆಂಬದು ಸ್ಪಷ್ಟವದೆ. ಇನ್ನು ೪ನೇ ಇಯತ್ತೆಯವರೆಗೆ ಇರುವ ಅಭ್ಯಾಸ ಕ್ರಮದಲ್ಲಿ ಎಷ್ಟೋ ಉಪಯುಕ್ತ ವಿಷಯಗಳು ಸೇರಿಸಲ್ಪಟ್ಟಿರುತ್ತವೆ. ಅವುಗಳಲ್ಲಿ ಓದಣವು ಮೊದಲದೇದು ಅದು ಎಲ್ಲ ಸುಗುಣಗಳಿಗೆ ತೌರು ಮನೆಯಾಗಿದೆ. ಇದಲ್ಲದೆ ಚಿತ್ರಕಲೆಯನ್ನು ಗಂಡು ಹುಡುಗರಿಗೆ, ಹೊಲಿಗೆಯನ್ನು ಹೆಣ್ಣು ಮಕ್ಕಳಿಗೆ, ಕಲಿಸುತ್ತಾರೆ. ಮತ್ತು ಈ ಉಪಯುಕ್ತ ಕಲೆಯಲ್ಲಿ ಎಷ್ಟೋ ಗಂಡುಹೆಣ್ಣು

ಮಕ್ಕಳು ಉತ್ತಮ ರೀತಿಯಿಂದ ತೇರ್ಗಡೆ ಹೊಂದಿ ಪ್ರಾ
ಸಂತೆಯನ್ನು ಪಡೆಯುತ್ತಾರೆ. ಈವಿಷಯಗಳು ಪ್ರಾಥಮಿಕ
ಶಿಕ್ಷಣದ ಅಂಗಗಳಾಗಿರುತ್ತವೆಂಬ ಅಭಿಪ್ರಾಯಕ್ಕೆ ಎಲ್ಲರೂ
ಒಪ್ಪಿಕೊಳ್ಳುವರು. ಇತ್ತೀಚ್ಚಲಾಗಿ ಮತ್ತೂ ಕೆಲವು ಉಪ
ಯುಕ್ತ ವಿಷಯಗಳನ್ನು ಪ್ರಾಥಮಿಕ ಶಾಲೆಗಳಲ್ಲಿ ಕಲಿಸುವ
ಏರ್ಪಾಡು ಮಾಡಲ್ಪಟ್ಟಿರುತ್ತದೆ. ಸೂಪಕಾಸ್ತ್ರಾಧ್ಯಾಪನದ
೧೨೦ ಶಾಲೆಗಳುಂಟು. ಆಶಾಲೆಗಳಲ್ಲಿ ೪೦,೦೦೦ ವಿದ್ಯಾರ್ಥಿನಿ
ಯರಿಗೆ ಶಿಕ್ಷಣವು ದೊರೆಯುತ್ತದೆ. ಈಶಾಲೆಗಳ ಸಂಬಂಧ
ದ ವಾರ್ಷಿಕವೆಚ್ಚವು ೬೦,೦೦೦ ಪೌಂಡು ಆಗುತ್ತದೆ. ಅದ
ರೆ ಅವುಗಳಲ್ಲಿ ಸಿದ್ಧವಾದ ತಿನ್ನುವ ಪದಾರ್ಥಗಳ ಬೆಲೆಯು
೬,೦೦೦ ಪೌಂಡು ಆಗುತ್ತದೆ. ಈಪಣವನ್ನು ವೆಚ್ಚದ ರಕ
ಮಿನಲ್ಲಿ ಕಳೆಯಲು ೧೪೦೦೦ ಪೌಂಡುಗಳು ಮಾತ್ರ ಈಶಿಕ್ಷ
ಣಕ್ಕೆ ವ್ಯಯವಾಗುತ್ತವೆಂದು ಸ್ಪಷ್ಟವಾಗಿ ತಿಳಿಯುವದು.
ಬಟ್ಟೆಗಳನ್ನು ಬಗೆಯುವ ಕೆಲಸವು ೬೩ ಶಾಲೆಗಳಲ್ಲಿ ಕಲಿ
ಸಲ್ಪಡುತ್ತದೆ. ಇದನ್ನು ೧೨,೦೦೦ ವಿದ್ಯಾರ್ಥಿನಿಯರು ಕಲಿ
ಯುತ್ತಾರೆ. ಅದಕ್ಕಾಗಿ ವಾರ್ಷಿಕ ವೆಚ್ಚವು ೪೫೦೦ ಪೌಂ
ಡು ಆಗುತ್ತದೆ. ಅದೇ ಮೇರೆಗೆ ಕೈಕಣ್ಣುಗಳಿಗೆ ಶಿಕ್ಷಣ
ವು ದೊರೆಯುಬೇಕೆಂಬ ಉದ್ದೇಶದಿಂದ ಕೆಲವು ಕೈಗಾರಿಕೆಯ
ಉದ್ಯೋಗಗಳು ಅಂದರೆ ಬಡಿಗತನ ಮುಂತಾದ ಹೋರೆ
ಗಳು ೪೪ ಶಾಲೆಗಳಲ್ಲಿ ೧೦,೦೦೦ ವಿದ್ಯಾರ್ಥಿಗಳಿಗೆ ಕಲಿಸಲ್ಪ
ಡುತ್ತವೆ. ಅದಕ್ಕಾಗಿ ೧೦,೦೦೦ ಪೌಂಡುಗಳು ವೆಚ್ಚವಾಗು
ತ್ತವೆ. ಈಪ್ರಕಾರವಾಗಿ ಪ್ರಾಥಮಿಕ ಶಾಲೆಗಳಲ್ಲಿ ಉಪಯು
ಕ್ತ ವಿಷಯಗಳು ಕಲಿಸಲ್ಪಡುತ್ತಲಿರುವದರಿಂದ ಎಡನೇ
ಆಕ್ಷೇಪವಾದರೂ ಸಬಲವಾಗಿರುವದಿಲ್ಲೆಂದು ಖಂಡಿತವಾಗಿ
ಹೇಳಬಹುದು.

ಮನುಷ್ಯನು ತನ್ನ ಹೆಂಡರು ಮಕ್ಕಳ ಸುಖೋಪಜೀವನಕ್ಕಾಗಿ ಚಿಂತಿಸುವದು ಸಹಜವು. ಈ ಮನೋವಿಚಾರವನ್ನನುಸರಿಸಿ, ಕೆಲವರು ದ್ರವ್ಯ ಸಂಗ್ರಹವನ್ನೂ ಕೆಲವರು ಮನೆಮಾರು ಹೊಲದೋಟಗಳನ್ನೂ ಮಾಡಿಡುವರು. ಈ ಕೆಲಸಗಳನ್ನು ಮಾಡಲಿಕ್ಕೆ ತಕ್ಕಷ್ಟು ದ್ರವ್ಯಾನುಕೂಲತೆ ಇಲ್ಲವೆಂಥವರ ಸಂಖ್ಯೆಯೇ ಹೆಚ್ಚಿರುವದು. ಇಂಥ ಜನರಿಂದ ವರ್ಷ ಬಂದಕ್ಕೆ ಕಂತದಿಂದ ಪಣತೆಗೆದುಕೊಂಡು, ಕೆಲವವಧಿಯ ತರುವಾಯ ಕೆಲವು ಪಣವನ್ನು ಕೊಟ್ಟು ಸ್ವಾರ್ಥವನ್ನೂ ಪರಾರ್ಥವನ್ನೂ ಸಾಧಿಸುವ ಉದ್ದೇಶದಿಂದ ಹಲವು ಜನರು ಒಟ್ಟಾಗಿ ಬಂದು ಕಂಪನಿಯನ್ನು ಸ್ಥಾಪಿಸುವರು. ಈ ಕಂಪನಿಯವರು ಇಂತಿಷ್ಟು ವಯಸ್ಸಿನ ಮನುಷ್ಯನು ಪ್ರತಿವರ್ಷ ಇಂತಿಷ್ಟು ಹಣವನ್ನು ಕೊಟ್ಟರೆ, ಅವನು ಸತ್ತ ಬಳಿಕ ಅವನ ವಾರಸದಾರರಿಗೆ ಇಲ್ಲವೆ ಅವನ ವಯಸ್ಸಿನ ಇಷ್ಟನೇವರ್ಷ ಮಿಾರಿದ ತರುವಾಯ ಅವನಿಗೆ, ಕರಾರವಿದ್ದಂತೆ ಇಂತಿಷ್ಟು ಹಣವನ್ನು ಮುಟ್ಟಿಸುವೆವೆಂದು ಒಡಂಬಡಿಕೆ ಮಾಡುವರು. ಈ ಪ್ರಕಾರ ಕಂಪನಿಯವರ ಕೂಡ ಒಡಂಬಡಿಕೆ ಮಾಡಿಕೊಂಡ ಮನುಷ್ಯನು ತನ್ನ ಆಯುಷ್ಯದ ವಿಮೆಯನ್ನು ಇಳಿಸಿದನೆಂದು ಹೇಳುವ ಸಂಪ್ರದಾಯವುಂಟು; ಮತ್ತು ಈ ಕಂಪನಿಗೆ "ಲಾಯಫ ಅಸ್ಯೂರನ್ಸ ಕಂಪನಿ" ಎಂತಲೂ "ವಿಮಾಕಂಪನಿ" ಎಂತಲೂ ಅನ್ನುವರು.

ಈ ಮಾದರಿಯ "ಓರಿಯಂಟಲ್ ಲೈಫ ಅಸ್ಯೂರನ್ಸ ಕಂಪನಿ" ಎಂಬ ಹೆಸರಿನ ಕಂಪನಿಯು ಮುಂಬಯಿಯಲ್ಲುಂಟು. ಮಿ. ಮು. ಸ್ಲೇಟರನೆಂಬ ಗೃಹಸ್ಥನು ಈ ಕಂಪನಿಯ ಸೆಕ್ರೆಟರಿ (ಕಾರ್ಯದರ್ಶಿ) ಯಾಗಿರುತ್ತಾನೆ. ಅವನು ಕೆಲವು ದಿವಸಗಳ ಹಿಂದೆ "ಲೈಫ ಅಸ್ಯೂರನ್ಸ ಇನ್ ಇಂಡಿ

ಯಾ" ಎಂಬದೊಂದು ಸಣ್ಣ ಪುಸ್ತಕವನ್ನು ಬರೆದಿದ್ದಾ... ಅವರಲ್ಲಿ ತಮ್ಮ ಆಯುಷ್ಯದ ವಿಮೆಯನ್ನಿಳಿಸುವದರಿಂದಾ ಗುವ ಲಾಭಗಳನ್ನೂ ವಿದ್ಯಾಪ್ರಸಾರವು ಹೆಚ್ಚಿಚ್ಚು ಆದಂತೆ ಆಯುಷ್ಯದ ವಿಮೆಯನ್ನು ಇಳಿಸುವ ಆಲೋಚನೆಯು ಹೆಚ್ಚುತ್ತಿರುವ ಕ್ರಮವನ್ನೂ ಪ್ರಸ್ತಾಪಿಸಿದ್ದಲ್ಲದೆ, ಕಂಪನಿಯುವರು ಎಂಥ ಜನರ ವಿಮೆಯನ್ನು ಇಳಿಸಿದರೆ ಅವರಿಗೆ ಲಾಭವಾಗುವದೆಂಬದನ್ನು ವಿವರಿಸಿರುತ್ತಾನೆ. ಈ ಸಂಬಂಧದಿಂದ ಅವನು ಹೇಳುವದೇನೆಂದರೆ:—ಈ ಕಂಪನಿಯು ವಿದ್ಯದಲ್ಲಿ ಮುಂದರಿಸಿದ ಜನರ ವಿಮೆಯನ್ನು ಮಾತ್ರ ಇಳಿಸುವದು; ಆದರೆ ವಿದ್ಯದಲ್ಲಿ ಹಿಂದಿರುವ ಜನರ ವಿಮೆಯನ್ನು ಸರ್ವಥಾ ಇಳಿಸುವದಿಲ್ಲ. ಯಾಕೆಂದರೆ ಅವರು ಯಾವ ಕಾಲಕ್ಕೆ ಯಾವ ರೋಗದಿಂದ ಇಲ್ಲವೆ ಯಾವ ದುರ್ಮರಣದಿಂದ ಸಾಯುವರೆಂಬ ನೇಮವಿಲ್ಲ. ಇಂಥ ಅನಿಶ್ಚಿತವಾದ ವಿಮೆಯನ್ನು ಕಂಪನಿಯುವರು ಕೈಕೊಳ್ಳಲಾರರು. ಸುಶಿಕ್ಷಿತರಾದ ಪಾತದ್ದೇಶೀಯ ಜನರಲ್ಲಿ ಪಾರ್ಸೀ ಜನರು ಬಹು ದಿವಸ ಬಾಳುವರು. ಯಾಕೆಂದರೆ ಆ ಜನರ ಜೀವನಕ್ರಮವು ಬಹುಶಃ ಯುರೋಪಿಯನ್ ಜನರಂತೇ ಇರುವರು. ಅವರು ಸ್ವಚ್ಛವಾದ ಹವೆಯಲ್ಲಿ ವ್ಯಾಯಾಮ ಮಾಡಲಿಕ್ಕೆ ಪ್ರೀತಿಸುವರು; ಪ್ರಾಢವಯಸ್ಸಿನಲ್ಲಿ ಮದುವೆಯಾಗುವರು; ಅವರಲ್ಲಿ ಪುರುಷರಂತೆ ಸ್ತ್ರೀಯರಿಗೆ ಸ್ವಾತಂತ್ರ್ಯವುಂಟು. ಈ ಮಾತನ್ನು ಹಿಂದೂ ಜನರು ಲಕ್ಷದಲ್ಲಿಡತಕ್ಕದ್ದು.

ಈ ಮಾದರಿಯು ಕಂಪನಿಗಳಿಂದ ನಮ್ಮ ಜನರಿಗೆ ಪ್ರಯೋಜನ ಉಂಟು. ವಿಮೆ ಇಳಿಸಿದ ಮನುಷ್ಯನಿಗೆ ಸಾಯುವ ಕಾಲಕ್ಕೆ ತಮ್ಮ ಪೆಂಡರು ಮಕ್ಕಳ ಚಿಂತೆ ತಕ್ಕಮಟ್ಟಿಗೆ ತಪ್ಪುವದಲ್ಲದೆ ಸಣ್ಣ ಸಣ್ಣ ರಕಮುಗಳನ್ನು ಸಂಗ್ರ

ಹಿಸುವದಕ್ಕ ಅನುಕೂಲವಾಗುವದು. ಈ ಕಂಪನಿಯುವರಿಗೆ ವರ್ಷಕ್ಕೆ ೧೦।೨೦ ರೂಪಾಯಿ ಕಂತ ಕೊಡುವ ಮನುಷ್ಯನು, ಆ ಕಂತಿನಷ್ಟು ಹಣವನ್ನು ಸ್ವತಂತ್ರ ರೀತಿಯಿಂದ ಸಂಗ್ರಹ ಮಾಡುವದು ಅಪರೂಪ. ಮೇರೆಗೆ ಈ ಈ ಕಂಪನಿಯು ಪ್ರಯೋಜನವುಳ್ಳದ್ದಿದ್ದರೂ ವರ್ಷಕ್ಕೆ ೧೦।೨೦ ರೂಪಾಯಿಗಳನ್ನು ಸಂಗ್ರಹಿಸಲಿಕ್ಕೆ ಅಸಮರ್ಥನಾದ ಮನುಷ್ಯನಿಗೆ ಇದರಿಂದ ಏನೂ ಲಾಭವಿಲ್ಲ. ಇಂಥ ಜನರ ಸಲುವಾಗಿ ಕೆಲವು ಸುಧಾರಿಸಿದ ದೇಶಗಳಲ್ಲಿ " ಮ್ಯೂಚುಅಲ್ ಪ್ರಾವ್ಹಿಡಂಟಸೊಸೈಟಿ" (ಅನ್ಯೋನ್ಯ ಸಹಾಯ ಸಂಘ) ಎಂಬ ಕಂಪನಿಗಳು ಇರುತ್ತವೆ. ಆ ಕಂಪನಿಗಳ ನಿಯಮವೇನೆಂದರೆ— ತಮ್ಮೊಳಗಿನ ಯಾವನೊಬ್ಬನು ಮೃತಪಟ್ಟರೆ, ಉಳಿದವರೆಲ್ಲರು ತಲೆಗೆ ನಾಲ್ಕು ಆಣೆಯಿಂದ ರೂಪಾಯಿ ಎರಡು ರೂಪಾಯಿಗಳವರೆಗೆ ಕಂಪನಿಯ ನಿಯಮಗಳಿಗನುಸಾರವಾಗಿ ಹಣ ಕೂಡಿಸಿ, ಮೃತಪಟ್ಟ ಮನುಷ್ಯನ ವಾರಸದಾರರಿಗೆ ಮುಟ್ಟಿಸುವರು. ಇದರಿಂದ ನಿರಾಧಾರಿಯಾದ ಬಡ ಕುಟುಂಬದವರಿಗೆ ಬಹಳೇ ಸಹಾಯವಾಗುವದೆಂದು ಇಲ್ಲಿ ಪ್ರತ್ಯೇಕವಾಗಿ ಹೇಳುವ ಕಾರಣವಿಲ್ಲ. ಇಂಥ ಕಂಪನಿಯು ಶಾಲಾಖಾತೆಯ ನೌಕರರ ಸಂಬಂಧದಿಂದ ನಮ್ಮಲ್ಲಿ ಸಹ ಇರುವದು ಯೋಗ್ಯವೆಂದು ನೆನಸಿ ನಾವು ಈ ವಿಷಯವನ್ನು ನಮ್ಮ ವಾಚಕರ ಮುಂದೆ ಇಟ್ಟಿದ್ದೇವೆ. ಇದನ್ನು ಕುರಿತು ಚನ್ನಾಗಿ ವಿಚಾರಮಾಡಿ ಈ ಮೂದರಿಯ ಕಂಪನಿಯನ್ನು ದೇಶಭಾಷೆಯ ಸಾಲಿಗಳ ಶಿಕ್ಷಕ ಜನರಿಗಾಗಿಯೇ ಮಾಡುವದು ಸಯುಕ್ತಿಕವಾಗಿ ಕಂಡರೆ, ನಮಗೆ ಬರೆದು ತಿಳಿಸಬೇಕು. ಬಹುಜನರು ಸಮ್ಮತಿಸಿದರೆ ಈಆಲೋಚನೆಯನ್ನು ನಾವು ಸಂತೋಷದಿಂದ ಯೋಗ್ಯಅಧಿಕಾರಿಗಳ ಮುಂದಿಡುವೆವು.

ADDRESS TO COLLEGE STUDENTS ON THE EVE OF THE DIVALI VACATION BY Mr. SAVADI.

ದೀಪಾವಳಿಯ ಸೂಟಿಯ ಆರಂಭದಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಗೆ ರಾ. ರಾ. ಸವದಿಯವರು ಮಾಡಿದ ಉಪದೇಶವು.

(ಗಂಸೇ ಪುಟದಿಂದ ಮುಂದೆ ಸಾಗಿದ್ದು.)

೨. ಸ್ವಂತ ಸಂಬಂಧದ ಕರ್ತವ್ಯ— ನೀವು ಈಗ ಪರೀಕ್ಷೆಯಲ್ಲಿ ಪಾಸಾಗಿರುವದರಿಂದ ನಿಮ್ಮ ವಿದ್ಯಾಸಂಪಾದನೆಯ ಕೆಲಸವು ಇಲ್ಲಿಗೆ ತೀರಿತೆಂದು ತಿಳುಕೊಳ್ಳುವದು ಬಂದು ದೊಡ್ಡ ತಪ್ಪು ಇರುತ್ತದೆ. ಕೆಲವರು ನಮಗೆ ಸರ್ಟಿಫಿಕೇಟು ದೊರೆಯಿತು; ಇನ್ನು ಮೇಲೆ ನಾವು ಕಲಿತ ಪುಸ್ತಕಗಳು ಯಾತಕ್ಕೆ ಬೇಕೆಂದೆಣಿಸಿ ಅವುಗಳನ್ನು ಮಾರಿಬಿಡುತ್ತಾರೆ! ಇಲ್ಲವೆ ಕೈಗೆ ಬಂದಂತೆ ಕೊಟ್ಟುಬಿಡುತ್ತಾರೆ! ಇವರಿಗಿಂತ ಸ್ವಲ್ಪ ಉತ್ತಮರಾದವರು ತಮ್ಮ ಪುಸ್ತಕಗಳನ್ನು ಗಂಟುಕಟ್ಟಿ ಮೂಲೆಯಲ್ಲಿಬೆಲ್ಲಿ, ಖಂಡೇಪೂಜೆಯ ದಿವಸ ಮಾತ್ರ ಸೂರ್ಯಪ್ರಕಾಶವೂ ವಾಯುವೂ ಅವುಗಳಿಗೆ ತಗಲುವಂತೆ ಮಾಡಿ, ಧೂಪದೀಪಗಳಿಂದ ಅವುಗಳನ್ನು ಪೂಜಿಸುತ್ತಾರೆ. ಅಹಹ! ಇದು ಎಂಥ ಅಜ್ಞಾನಾಂಧಕಾರವು? ವಿದ್ಯೋಪಧಿಯನ್ನು ದಾಟಿಹೋದವರ್ಯಾರು? ಅನೇಕ ಜನ್ಮಗಳನ್ನು ಪಡೆದು ವಿದ್ಯಾರ್ಜನೆಯನ್ನು ಮಾಡಹತ್ತಿದರೂ ವಿದ್ಯಾಸಮುದ್ರದ ಆಚೆಯ ದಂಡೆಯು ಸಹ ಕಾಣುವದು ಅಸಂಭವ. ಅಂದನಮೇಲೆ ೧೦।೧೫ ವರ್ಷಗಳ ಅಭ್ಯಾಸವು ಯಾವಗಿಡದ ತೊಪ್ಪಲು! ಖಸ್ತಪದಾರ್ಥಗಳ ಗುರುತ್ವಾಕರ್ಷಣವನ್ನು ಹುಡುಕಿ ತೆಗೆದ 'ಸರ್ ಐಝ್ಯಾಕ ನ್ಯೂಟನ್ನನು' ಎಷ್ಟು ವಿದ್ಯಾವಿಶಾರದನಿದ್ದನೆಂಬದು ಎಲ್ಲರಿಗೂ ಗೊತ್ತುಂಟು

ಅವನಬಗ್ಗೆ ಬಂದುಸ್ಥಳದಲ್ಲಿ ಉಲ್ಲೇಖಿಸಿರುವದೇನೆಂದರೆ:—
God said "let Newton be, and all was light"
"ದೇವರು ನ್ಯೂಟನ್ನನು ಉದ್ಭವಿಸಲಿ" ಎಂದು ಅಂದಕೂಡಲೇ ಎಲ್ಲ ಕಡೆಯಲ್ಲಿಯೂ ಪ್ರಕಾಶವು ಬಿತ್ತು. ಇಂಥ ಘನ ವಿದ್ವಾಂಸನು ಬಂದುದಿನ ಸಮುದ್ರದ ತೀರದಲ್ಲಿ ನಿಂತು ತನ್ನ ಗೆಳೆಯನೊಡನೆ ಮಾತನಾಡುತ್ತಿರುವಾಗ, ತಾನು ಸಂಪಾದನೆ ಮಾಡಿದ ವಿದ್ಯವು ಎಷ್ಟಿದೆ ಎಂಬದನ್ನು ತಿಳಿಸುವದಕ್ಕಾಗಿ ಅವನು ದಂಡಿಯುಪೀಲಿನ ಬಂದು ಉಸುಕಿನ ಕಣವನ್ನು ಕೈಯಲ್ಲಿ ತೆಗೆದುಕೊಂಡು, ಇಗೋ ಈ ಕಣಕ್ಕೂ ಸಮುದ್ರ ಒಡಲಲ್ಲಿರುವ ಕಣಗಳಿಗೂ ಎಷ್ಟು ಪ್ರಮಾಣವಿರುವದೋ ಅಷ್ಟೇ ಪ್ರಮಾಣವು ನಾನು ಸಂಪಾದಿಸಿದ ವಿದ್ಯಕ್ಕೂ ಇನ್ನು ಮುಂದೆ ಸಂಪಾದಿಸತಕ್ಕ ವಿದ್ಯಕ್ಕೂ ಉಂಟೆಂದು ನುಡಿದನು. ಅಹಹ! ಎಷ್ಟು ಲೀನತೆ ಇದು! ಹಣ್ಣಿನಿಂದ ತುಂಬಿದ ಗಿಡವೂ, ಹಾಲಿನಿಂದ ತುಂಬಿದ ಕೆಚ್ಚಲವೂ, ನೀರಿನಿಂದ ತುಂಬಿದ ಮೋಡವೂ ಹ್ಯಾಗೆ ಜೋಲುಬಿದ್ದು ತಲೆಕೆಳಗೆ ಮಾಡಿ ನಮ್ರಭಾವವನು ತೋರಿಸುವವೋ ಅದರಂತೆಯೇ ವಿದ್ಯಾಸಂಪನ್ನನು ನಮ್ರಭಾವಯುಕ್ತನಾಗಿರುವನು. ವಿನಯವೇ ವಿದ್ವತ್ತೆಯ ಮುಖ್ಯ ಕುರುಹಾಗಿದೆ. ಅದಿಲ್ಲದವರು ಎಷ್ಟು ವಿದ್ವಾಂಸರಾಗಿದ್ದರೂ ಅವರಲ್ಲಿ ಗರ್ವವೆಂಬ ಭೂತವು ಸೇರಿಕೊಂಡಿರುವದರಿಂದ, ಅವರು ಹೆಚ್ಚು ವಿದ್ಯಾರ್ಜನೆಯನ್ನು ಮಾಡಲಾರರು. ಎಲೈ ಪ್ರೀಯ ವಿದ್ಯಾರ್ಥಿಗಳೇ ನೀವು ವಿದ್ಯಾಪರ್ವತದ ಅಡಿಯಲ್ಲಿ ಮಾತ್ರ ಈಗ್ಗೆ ಬಂದು ನಿಂತಂತೆ ಆಗಿದೆ. ಪರ್ವತಾರೋಹಣವನ್ನು ನೀವು ಇನ್ನು ಮೇಲೆ ಮಾಡತಕ್ಕವರು, ನೀವು ಪಡೆದ ವಿದ್ಯವು ನಿಮ್ಮನ್ನು ವಿದ್ಯಾಪರ್ವತವನ್ನು ಏರಲಿಕ್ಕೆ ತಕ್ಕವರನ್ನು

ಮಾತ್ರ ಮಾಡಿದೆ. ಆ ಪರ್ವತವನ್ನು ಏರುತ್ತಹೋದ ಹಾಗೆ, ಅದ್ವಿತೀಯವಾದ ಸೃಷ್ಟಿಸೌಂದರ್ಯವೆಂಬ ವಿದ್ಯಾಫಲವು ನಿಮ್ಮ ಕಣ್ಣಿಗೆ ಬೀಳುವದು. ಭೂಪೃಷ್ಠವನ್ನು ಬಿಟ್ಟು ಪರ್ವತವನ್ನೇರಿ ಮೇಲಕ್ಕೆ ಹೋದಹಾಗೆ ಹೆಚ್ಚು ಹೆಚ್ಚು ಭೂಭಾಗವು ನಿಮಗೆ ಕಾಣಿಸಹತ್ತಿ ಅದರಲ್ಲಿ ಪರಿಯುವ ನದನದಿಗಳು ತಮ್ಮ ಸ್ಫಟಿಕ ಸಮ ಜಲಪ್ರವಾಹಗಳಿಂದ ನಿಮ್ಮನ್ನು ಸಂತೋಷಪಡಿಸುವವು. ಬಂದು ಕವಿ ಹೊಲ ಗದ್ದೆ ತೋಟಗಳು ಪಚ್ಚನ್ನ ಪಗಡಿಯ ಮನೆಗಳಂತೆ ತೋರಿ, ನಿಮ್ಮಲ್ಲಿ ಆನಂದವನ್ನು ಹುಟ್ಟಿಸುವವು. ದೂರಿನ ಪರ್ವತ ಶ್ರೇಣಿಗಳೂ ಬಿಡಿಯುಗುಡ್ಡಗಳೂ ರಮಣೀಯವಾಗಿ ತೋರುವವು. ಪಟ್ಟಣಗ್ರಾಮಗಳೂ ಸಣ್ಣಹುಡುಗರು ಆಟಕ್ಕಾಗಿ ಕಟ್ಟಿದ ಪುಟ್ಟಮನೆಸಾಲುಗಳುಳ್ಳದ್ದಾಗಿ ಅಚ್ಚರಿಬಡಿಸುವವು. ಇನ್ನು ವಿದ್ಯಾಪರ್ವತಾರೋಹಣ ಮಾಡಿದವನ ಕಣ್ಣಿಗೆ ಯಾವ ಯಾವ ನೋಟಗಳು ಬೀಳುತ್ತವೆ ನೋಡುವಾ. ಕವಿತಾಮಾಧುರ್ಯವೆಂಬ ಚಿಕ್ಕದೊಡ್ಡ ನದಿಗಳೂ, ಗಣಿತವೆಂಬ ನಿಬಿಡಾರಣ್ಯವೂ, ಪದಾರ್ಥವಿಜ್ಞಾನದ ನಿತ ಲೋಹಮಾರ್ಗ, ತಂತಿ ಟಪಾಲುಗಳೆಂಬ ಫಲಭರಿತದ ರಮ್ಯವಾದ ಹೊಲ ಗದ್ದೆಗಳೂ, ಆತ್ಮಾನಾತ್ಮ ವಿಚಾರವೆಂಬ ಗಗನಚುಂಬಿಪರ್ವತಶಿಖರಗಳೂ, ಇತಿಹಾಸ ಭೂಗೋಲಗಳೆಂಬ ಮಹಾಸಾಗರ ಸಮುದ್ರಗಳೂ ಸುಭಾಷಿತಾಲಂಕಾರಗಳೆಂಬ ಸುಪುಷ್ಪಿತ ಸರೋವರೋದ್ಯಾನಗಳೂ ಪ್ರೇಕ್ಷಕನ ದೃಷ್ಟಿಗೆ ಬೀಳುವದರಿಂದ ಅವರ ಜ್ಞಾನದೃಷ್ಟಿಗೆ ಆಗುವ ಆನಂದವನ್ನು ಅನುಭವದಿಂದಲೇ ತಿಳಿಯಬೇಕಲ್ಲದೆ ಬಣ್ಣಿಸಿದರೆ ತಿಳಿಯುವದು ಅಶಕ್ಯವಾದದ್ದು. ಇಂಥ ಪರ್ವತಾರೋಹಣವನ್ನು ಮಾಡುವ ಅಧಿಕಾರವನ್ನು ಹೊಂದಿದವರಾದ ನೀವು ಎಂಥ ಭಾಗ್ಯವಂತರು! ನೀವು ಸರ್ಟಿಫಿಕೇಟು

ನತೆಯ ಮೊತ್ಸದಿಂದಲೇ ವಿದ್ಯಾಪಾರಂಗತರಾಗಬೆಂದು ತಿಳು
ಕೊಳ್ಳದೆ ವಿದ್ಯಾಸಂಪಾದನೆಯ ಮಾಡಲಿಕ್ಕೆ ತಕ್ಕವರಾದೆವೆಂ
ದು ತಿಳುಕೊಳ್ಳಬೇಕೆಂಬದೇ ನಾವು ಮೇಲೆ ಹೇಳಿದ್ದರ ತಾ
ತ್ಪರ್ಯವು. Some thing of every thing and every
thing of some one thing makes a learned man
ಪ್ರತಿಯೊಂದು ವಿಷಯದ ಬಗ್ಗೆ ವ್ಯವಹಾರಕ್ಕೆ ಬೇಕಾದಷ್ಟು
ಜ್ಞಾನವುಳ್ಳವನೂ ಯಾವದಾದರೊಂದು ವಿಷಯದ ಪರಿಪೂ
ರ್ಣಜ್ಞಾನವುಳ್ಳವನೂ ವಿದ್ವಾಂಸನೆನಿಸಿಕೊಳ್ಳುವನು ಎಂಬದೇ
ಮೇಲೆ ಹೇಳಿದ ಪ್ರಸಿದ್ಧ ಹೂಣಭಾಷೆಯ ವಾಕ್ಯಾರ್ಥವು. ನೀ
ವು ಹಲವು ವಿಷಯಗಳಲ್ಲಿ ನಿಮ್ಮ ಪ್ರೀತಿಯ ವಿಷಯವು ಯಾ
ವದೆಂಬವನ್ನು ನೀವೇಬಲ್ಲಿರಿ. ಆ ವಿಷಯದಲ್ಲಿ ಪ್ರವೀಣತೆ
ಯನ್ನು ಹೊಂದಲಿಕ್ಕೆ ನೀವು ಇನ್ನು ಮೇಲೆ ಟೊಂಕಾಕಟ್ಟಿ
ಸಿದ್ಧರಾಗಲಿಕ್ಕೆಬೇಕು. ಆವಿಷಯದಮೇಲೆ ಬರೆಯಲ್ಪಟ್ಟಿ
ರುವ ಗ್ರಂಥಗಳನ್ನು ಇದ್ದಲ್ಲಿಂದ ತರಿಸಿಕೊಂಡು ಅವುಗಳನ್ನು ಅ
ಭ್ಯಾಸಿಸುವದರಿಂದಲೂ, ಆ ವಿಷಯದಲ್ಲಿ ಪಾರಂಗತರಾದವ
ರ ಬಳಿಗೆ ಹೋಗಿ ಆಗಲಿ ಪತ್ರಮುಖದಿಂದಾಗಲಿ ನಿಮ್ಮ ಸಂ
ಶಯಗಳನ್ನು ಪರಿಹರಿಸಿಕೊಂಡು, ಆ ವಿಷಯದ ಅಂಗೋ
ಪಾಂಗಗಳನ್ನೆಲ್ಲ ವಿಶದವಾಗಿ ತಿಳುಕೊಂಡಿರೆಂದರೆ ವಿದ್ಯಾರ
ಹಸ್ಯವು ಹ್ಯಾಗಿರುತ್ತದೆಂಬದು ನಿಮ್ಮ ನಿದರ್ಶನಕ್ಕೆ ಬರುವ
ದು. ಬಂದುವಿಷಯದಲ್ಲಿ ಪೂರ್ಣಜ್ಞಾನಿಗಳಾದಿರೆಂದರೆ, ನಿ
ಮಗೆ ಅನುಪಮ ಆನಂದವೂ ದೇಶಕ್ಕೆ ಹಿತವೂ ಯಾವಾಗ
ಲು ತಪ್ಪದೆ ಆಗುವವು. ಆದದ್ದರಿಂದ ನೀವು ನಿಮ್ಮ ವಿದ್ಯಾ
ರ್ಥಿದಶೆಯನ್ನು ಅಮೂಲ್ಯ ಮೂರೆಯಬೇಡರಿ.

ಖಾಲಾಗುರುಗಳೆಂದರೆ ಹುಡುಗರಿಗೆ ಹಾಕಿಕೊಟ್ಟ ಕಿತ್ತೆ
ಯೇ ನೈ ಯಥಾಗುರುಃ ತಥಾಶಿಷ್ಯಃ ಗುರುವಿನಂತೆ ಶಿಷ್ಯನಾ
ಗುವ ಕಾರಣ ನಿಮ್ಮ ನಡೆನುಡಿಗಳು ನಿರ್ದೋಷವಾಗಿರಬೇ

ಸು. ಸತ್ಯಭಾಷಣ, ನೀತಿಯನ್ನನುಸರಿಸುವ ಆಚರಣೆ, ಸ್ವ
ಕ್ಷ ಉಡತೊಡಿಗೆಗಳು, ಪ್ರಾಂಜಲಮನಸು, ವಿನಯ, ಕು
ಶ್ರುತಭಾಷಣಾಭಾವ, ಪೂರ್ಣಾರೋಗ್ಯ. ಪರರನ್ನು ಆದ
ರಿಸುವಲ್ಲಿ ತತ್ಪರತೆ, ದೈವಿಕಭೀತಿ, ಬಂಧುಪ್ರೀತಿ, ಶಾಲೆ
ಯು ಬಾಲಕರಲ್ಲಿ ಪುತ್ರವಾತ್ಸಲ್ಯ ಮುಂತಾದ ಗುಣಗಳು ನಿ
ಮ್ಮಲ್ಲಿದ್ದರೆ ನಿಮ್ಮ ಗುಣಗಳು ನಿಮ್ಮ ಶಿಷ್ಯರಲ್ಲಿ ತಾವೇ ಶೇ
ರುವವು. ಬೇರೆ ಪ್ರಯತ್ನ ಮಾಡಲವಶ್ಯವಿಲ್ಲ.

ಇನ್ನು ನಿಮ್ಮ ಮೂರನೇ ಕರ್ತವ್ಯವು ನಿಮ್ಮ ಶಾಲಾ
ಬಾಲಕರನ್ನು ಸಂಬಂಧಿಸಿರುತ್ತದೆ. ತಂದೆತಾಯಿಗಳಿಗೆ ಇ
ಹಲೋಕದಲ್ಲಿ ಮಕ್ಕಳಿಗಿಂತ ಹೆಚ್ಚಿನ ವಸ್ತು ಯಾವದೂ
ಇಲ್ಲ. ಪುನ್ನಾಮನರಕದಿಂದ ತಾರಿಸುವ ಪುತ್ರನೂ ಉಭ
ಯ ಕುಲೋದ್ಧಾರಿಣಿಯಾದ ಪುತ್ರಿಯೂ ಪ್ರಿಯರಾಗಿರುವದ
ರಿಂದರಿದೇನು? ಪೃಥ್ವಿಯ ಸಾರ್ವಭೌಮಾಧಿಪತ್ಯಕ್ಕಾಗಲಿ,
ಮೇರುಪಮಸುವರ್ಣರಾಶಿಗಾಗಲಿ ತಂದೆತಾಯಿಗಳು ತಮ್ಮ
ಮಕ್ಕಳನ್ನು ಪರರಿಗೆ ಕೊಟ್ಟಾರೋ? ಎಂದಿಗೂ ಕೊಡರು
"ಆತ್ಮಾವೈ ಪುತ್ರನಾಮಾಸಿ" ಅಂದರೆ ಗಂಡನ ಆತ್ಮವೇ
ಪುತ್ರರೂಪದಿಂದ ಪರಿಣಮಿಸುವದೆಂಬರ್ಥ ಪುತ್ರಪುತ್ರಿಯರು
ತಂದೆತಾಯಿಗಳಿಗೆ ಬಹಿರಾತ್ಮಗಳೇ ಅಂದಮೇಲೆ ಅವರಲ್ಲಿ
ಅವರ ಪ್ರೇಮಾತಿಶಯವಿರುವದು ಸ್ವಾಭಾವಿಕವೇ; ಹೀಗಿಲ್ಲ
ದಿದ್ದರೆ ನಾವು ಸಣ್ಣವರು ದೊಡ್ಡವರು ಎಂದಿಗೂ ಆಗುತ್ತಿ
ದ್ದಿಲ್ಲಿ. ಆತ್ಮಕ್ಕೆ ಸರಿಯಾದ ಪುತ್ರರನ್ನು ಶಾಲಾಗುರು ಎಂಬ
ಪರಮನುಷ್ಯನ ಕೈಯಲ್ಲಿ ಕೊಡುವಾಗ ತಂದೆತಾಯಿಗಳ ವಿ
ಶ್ವಾಸ ಗುರುವಿನಲ್ಲಿ ಎಷ್ಟಿರಬಹುದೆಂದು ಹೇಳಲಶಕ್ಯವು ಗು
ರುಗಳು ನಮ್ಮಂತೆ ಮಕ್ಕಳಿಗೆ ಪ್ರೀತಿಯನ್ನು ತೋರಿಸಿ ವಿ
ದ್ಯಾದಾನವನ್ನು ಮಾಡುವರೆಂದು ಅವರು ಗುರುಗಳಲ್ಲಿ ಪೂ
ರಾ ನಂಬಿಕೆಯನ್ನು ಇಟ್ಟಿರುತ್ತಾರೆ.

(ಮುಂದೆ ಸಾಗುವದು).

THE MORAL TRAINING OF CHILDREN.

ಮಕ್ಕಳ ನೀತಿಶಿಕ್ಷಣವು.

(೧೫ನೆಯ ಪುಟದಿಂದ ಮುಂದೆ ಸಾಗಿದ್ದು.)

೫. ಮಕ್ಕಳು ತಂದೆಯಂತೆ ತಾಯಿಗೆ ಸಹ ವಿಧೆಯರಾಗಿರತಕ್ಕದ್ದು, ಕೆಲ ಹುಡುಗರು ತಂದೆಯು ತಮ್ಮನ್ನು ಶಿಷ್ಟಿಸುವನೆಂಬ ಅಂಜಿಕೆಯಿಂದ ಅವನ ಮಾತು ಕೇಳುವರು; ಆದರೆ ತಾಯಿಯ ಮಾತನ್ನು ಕೇಳುವದಿಲ್ಲ. ತಿಳಿಗೇಡಿ ಮಕ್ಕಳು ಬವೆಮ್ಮೆಮ್ಮೆ ತಮ್ಮ ತಾಯಿಗೆ "ನೀನು ಹೆಂಗಸು, ನಿನಗೇನು ತಿಳಿಯುತ್ತದೆ? ಸುಮ್ಮನೆ ಮುಸರಿಯ ಗಡಿಗೆಯನ್ನು ತೊಳೆಯಹೋಗು, ಬಟಬಟೆ ಹಚ್ಚಬೇಡ" ಎಂದು ಹೇಳುವರು. ಇದು ತಾಯಿಯ ದುರ್ಲಕ್ಷದ ಪರಿಣಾಮವಾಗಿದ್ದರೂ ಈತರದ ನುಡಿಗಳು ಮಕ್ಕಳಿಗೆ ಶೋಭಿಸುವದಿಲ್ಲ. ಅವರು ತಾಯಿಯ ಅಜ್ಞೆಯನ್ನು ಸಹ ಪಾಲಿಸತಕ್ಕದ್ದು ತಾಯಿಯು ಅವರನ್ನು ತನ್ನ ಅಧೀನದಲ್ಲಿ ಇಟ್ಟುಕೊಳ್ಳುವದು ಸಹ ಅವಳ ಕರ್ತವ್ಯವು. ಮಕ್ಕಳು ತನ್ನ ಮಾತು ಕೇಳದಾಗ, ಗಂಡನಮುಂದೆ ಹೇಳಿ ನಿಮಗೆ ಶಿಕ್ಷೆಮಾಡಿಸುತ್ತೇನೆಂದು ಅವರಿಗೆ ಹೇಳಬಾರದು. ಇದರಿಂದ ಅವಳು ತನ್ನ ಅಧಿಕಾರವನ್ನು ತಾನೇ ಕಡಿಮೆಮಾಡಿಕೊಳ್ಳುವಳು. ಈ ಮಾತನ್ನು ತಾಯಿಗಳು ನೆನಪಿನಲ್ಲಿಡತಕ್ಕದ್ದು.

೬. ಮಕ್ಕಳು ತಮ್ಮ ತಾಯಿತಂದೆಗಳ ಸನ್ನಿಧಿಯಲ್ಲಿ ವರ್ತಿಸುವಂತೆಯೇ ಅವರು ಇಲ್ಲದಾಗ ಸಹ ವರ್ತಿಸತಕ್ಕದ್ದು. ಮಕ್ಕಳು ತಾವು ತಪ್ಪುಮಾಡುವದನ್ನು ತಾಯಿತಂದೆಗಳು ನೋಡಿದರೆ ಸಿಟ್ಟುಮಾಡುವರು, ಇಲ್ಲವೆ ಬಡಿಯುವರು ಎಂಬ ಹೆದರಿಕೆಯಿಂದ ಒಳ್ಳೇ ರೀತಿಯಿಂದ ನಡೆಯುವರು. ಅವರ ಕಣ್ಣು ತಪ್ಪಿತೆಂದರೆ ತೀರಿತು ಮನಬಂದಂತೆ ನಡೆದು ದುಷ್ಕೃತ್ಯಗಳನ್ನು ಮಾಡಹತ್ತುವರು. ಆದದ್ದರಿಂದ ಮಕ್ಕಳಿಗೆ "ನಿಮ್ಮನ್ನು ದೇವರು ಯಾವಾಗಲೂ ನೋಡುತ್ತಾ

ಳ. ದುಷ್ಕೃತ್ಯಗಳನ್ನು ಮಾಡಿದವರು ಅವನಿಗೆ ಸೇರುವ ವಲ್ಲ'' ಎಂಬ ಸಂಗತಿಗಳನ್ನು ಚಿಕ್ಕಂದಿನಲ್ಲಿಯೇ ಅವರಿಗೆ ತಿಳಿಸಿಕೊಡಬೇಕು.

ವಿಧೇಯತ್ವವನ್ನು ಮಕ್ಕಳಿಗೆ ಚಿಕ್ಕಂದಿನಲ್ಲಿಯೇ ಕಲಿಸತಕ್ಕದ್ದು—ಅವಿಧೇಯತ್ವವು ಮಕ್ಕಳಲ್ಲಿ ಸೇರಲಿಕ್ಕೆ ಕಾರಣವೇನಂದರೆ:—ತಾಯಿತಂದೆಗಳು ಚಿಕ್ಕತನದಲ್ಲಿ ಮಕ್ಕಳ ವಿಷಯವಾಗಿ ಸಾಕಷ್ಟು ಜಾಗ್ರತೆಪಡುವದಿಲ್ಲ. ಅವರನ್ನು ತಮ್ಮ ಅಂಕೆಯಲ್ಲಿ ಇಟ್ಟುಕೊಳ್ಳುವದಿಲ್ಲ. ಇದರಿಂದ ಅವರು ಮುಂದೆ ಅವಿವೇಕಿಗಳಾಗುತ್ತಾರೆ. ಈ ವಿಷಯದಲ್ಲಿ ಕೆಳಗೆ ಬಂದು ಉದಾಹರಣೆಯನ್ನು ಹೇಳುವೆವು.

ಒಬ್ಬ ದೊರೆಸಾನಿಯು ಬಳಿಯ ಒಬ್ಬ ದಾಯಿಯು ಇದ್ದಳು. ಆ ದಾಯಿಗೆ ಒಬ್ಬ ಚಿಕ್ಕ ಮಗನಿದ್ದನು. ಅವಳು ಅವನನ್ನು ಬಹಳ ಪ್ರೀತಿಯಿಂದ ಜೋಪಾನವಾಡುತ್ತಿದ್ದಳು. ಅಚ್ಚೆಯಿಂದ ಅವನಿಗೆ ಮನಬಂದಂತೆ ನಡೆಯುಗೊಡುತ್ತಿದ್ದಳು. ಇದರ ಪರಿಣಾಮವೇನಾಯಿತಂದರೆ:—ಆ ಹುಡುಗನು ಸಿಟ್ಟು ಬಂದಾಗ್ಗೆ ತಾಯಿಗೆ ಬೈಯಲಿಕ್ಕೂ ಬಡಿಯಲಿಕ್ಕೂ ಹಿಯ್ಯಾಳಿಸಲಿಕ್ಕೂ ಹತ್ತಿದನು. ದೊರೆಸಾನಿಯು ದಾಯಿಗೆ ''ನಿನ್ನ ಮಗನಿಗೆ ಹೀಗ್ಯಾಕೆ ಮಾಡಗೊಡುತ್ತೀ'' ಎಂದು ಕೇಳಿದ್ದಕ್ಕೆ ಅವಳು ''ನಾನೇನು ಮಾಡಲಿ'' ಎಂದು ಹೇಳಿದಳು ದೊರೆಸಾನಿಯು ''ನೀನು ಅವನನ್ನು ಶಿಕ್ಷಿಸಿ ನಿನ್ನ ಅಂಕೆಯಲ್ಲಿ ಯಾಕೆ ಇಟ್ಟುಕೊಳ್ಳುವದಿಲ್ಲ?'' ಎಂದು ಕೇಳಿದಳು. ಅದಕ್ಕೆ ದಾಯಿಯು ''ಅವನು ತೀರ ಸಣ್ಣವನಿದ್ದಾನೆ. ಅವನನ್ನು ಶಿಕ್ಷಿಸುವದು ನನ್ನಿಂದಾಗದು'' ಎಂದು ಹೇಳಿದಳು. ಆ ಹುಡುಗನು ತುಸು ದೊಡ್ಡವನಾದಮೇಲೆ, ನೀನು ಹೀಗೆ ಮಾಡುವದು ಸರಿಯಲ್ಲೆಂದು ತಾಯಿಯು ಹೇಳಹೋದರೆ, ಅವಳನ್ನು ಬಿಟ್ಟು ಓಡಿಹೋಗಲಿಕ್ಕೂ ಬಡಿಯಲಿಕ್ಕೂ ಆರಂಭಿಸಿದನು.

ಪುನಃ ದೊರೆಸಾನಿಯು ದಾಯಿಯನ್ನು ಕರೆದು "ನೀನು ನಿನ್ನ ಮಗನನ್ನು ಈಗಲೆ ತಿದ್ದದೆ ಬಿಟ್ಟರೆ ಮುತ್ತು ಅವನನ್ನು ನಿನ್ನ ಅಂಕೆಯಲ್ಲಿ ಇಟ್ಟುಕೊಳ್ಳದಿದ್ದರೆ, ಮುಂದೆ ಅವನು ಕೆಟ್ಟು ಹೋಗುವನು" ಎಂದು ಹೇಳಿದಳು.

ಅದಕ್ಕೆ ದಾಯಿಯು "ಅಮ್ಮಾ ನನ್ನ ಮಗನು ಇನ್ನೂ ಸಣ್ಣವನು. ಅವನಿಗೆ ಏನು ತಿಳಿಯುತ್ತದೆ? ಮುಂದೆ ತಾನೇ ತಿಳಿಯುವದು" ಎಂದು ಹೇಳಿದಳು.

ಆ ಹುಡುಗನು ೭ ವರ್ಷದವನಾದಾಗ, ದೊರೆಸಾನಿಯು ದಾಯಿಯನ್ನು ಕರೆದು ನಿನ್ನ ಅಜಾಗ್ರತೆಯಿಂದ ನಿನ್ನ ಮಗನು ಕೆಡುತ್ತಾ ನಡೆದಿದ್ದಾನೆ. ನಾಳೆಬೆಳಿಗ್ಗೆ ಅವನನ್ನು ನನ್ನಹತ್ತರ ಕರೆದುಕೊಂಡು ಬಾ ಅಂದರೆ ನಾನು ಅವನನ್ನು ಗುರುಗಳ ವಶಕ್ಕೆ ಕೊಟ್ಟು, ಅವನಿಗೆ ಓದಲಿಕ್ಕೂ ಬರೆಯಲಿಕ್ಕೂ ಕಲಿಸುವ ವ್ಯವಸ್ಥೆ ಮಾಡುವೆನು.

ಮರುದಿವಸ ಬೆಳಿಗ್ಗೆ ಅವನು ಬರಲಿಲ್ಲ. ಆಗ್ಗೆ ದೊರೆಸಾನಿಯು ದಾಯಿಗೆ "ನಿನ್ನ ಮಗನು ಎಲ್ಲಿ ಇದ್ದಾನೆ?" ಎಂದು ಕೇಳಿದಳು.

ಅದಕ್ಕೆ ದಾಯಿಯು "ತಾಯಿಯೇ, ಅವನಕಾಲಿಗೆ ಕಲ್ಲು ತಾಕಿದೆ. ಅವನು ನಡೆಯಲಾರನು" ಎಂದು ಹೇಳಿದಳು.

ಮರುದಿವಸ ಅವನಿಗೆ ತಲೆಸೂಲಿಬಂದದೆ; ಮತ್ತೊಂದು ದಿವಸ ಅವನ ಹೊಟ್ಟೆ ಕಡಿಯುತ್ತದೆ. ಈ ಮೇರೆಗೆ ಸುಳ್ಳುಗಳನ್ನು ಹೇಳುತ್ತ ೭|೮ ದಿವಸ ಕಳೆದಳು. ಕಟ್ಟಕಡೆಗೆ ದೊರೆಸಾನಿಯು ಸಿಟ್ಟಾಗಿ, ನೀನು ಸತ್ಯವನ್ನು ಹೇಳದಿದ್ದರೆ ನಿನ್ನನ್ನು ಕೆಲಸದಿಂದ ತೆಗೆದು ಬಿಡುವೆನು. ನಿನ್ನ ಮಗನನ್ನು ನನ್ನ ಬಳಿಯು ಯಾಕೆ ಕರಕೊಂಡು ಬರವಲ್ಲಿ?" ಎಂದು ಕೇಳಿದಳು.

ಆ ಮೇಲೆ ದಾಯಿಯು ಅಂಜಿಕೊಂಡು, "ಅವನು ತಮ್ಮನ್ನತ್ತರ ಬರಲಿಕ್ಕೆ ಬಲ್ಲೆನೆಂದೆನ್ನುತ್ತಾನೆ" ಎಂದು ನುಡಿದಳು

"ನೀನು ಅವನನ್ನು ಬತ್ತಾಯದಿಂದ ಯಾಕ್ಕರಕೊಂಡು ಬರುವದಿಲ್ಲ?" ಎಂದು ಕೇಳಿದ್ದಕ್ಕೆ ಅವಳು "ಅವನು ಈಗ ನನಗೆ ಅಸಕೊಳ್ಳುವದಿಲ್ಲ," ಎಂದು ಹೇಳಿದಳು. ಈ ನುಡಿಯನ್ನು ಕೇಳಿ ದೊರೆಸಾನಿಯು ಸಿಡುಮೋರೆಯಿಂದ "ನಾನು ಹಿಂದಕ್ಕೆ ಕೇಳಿದಾಗ, "ಅವನು ತೀರ ಸಣ್ಣವನು, ಮುಂದೆ ತಾನೇ ತಿಳಿಯುತ್ತದೆ" ಎಂದು ಹೇಳಿದಿ, ಈಗ ಅವನು ನನಗೆ ಅಸಕೊಳ್ಳುವದಿಲ್ಲೆಂದು ಹೇಳುತ್ತೀ ನಿನ್ನ ಮಗನು ನಿನ್ನ ಮೂರ್ಖತನದಿಂದಲೇ ಕೆಟ್ಟುಹೋದನು, ಎಂದು ಅವಳನ್ನು ಬೈದು ಕಳುಹಿಸಿ ಬಿಟ್ಟಳು.

ಈ ಉದಾಹರಣೆಯಿಂದ ತಾಯಿತಂದೆಗಳು ಕಲಿತುಕೊಳ್ಳತಕ್ಕ ಮಾತು ಏನೆಂದರೆ:—ಅವರು ತಾವೇವೊದಲು ನೀತಿಯಿಂದ ನಡೆದು ತಮ್ಮ ಮಕ್ಕಳೂ ನೀತಿಯಿಂದ ನಡೆಯುವಂತೆ ಮಾಡಬೇಕು. ತಾಯಿತಂದೆಗಳು ನೀತಿವಂತರೂ ದೇವರಲ್ಲಿ ಭಕ್ತಿಯುಳ್ಳವರೂ ಆಗಿದ್ದರೆ ಈ ಕೆಲಸವು ಸಹಜವಾಗಿಯೇ ಕೈಗೂಡುವದು. ಆದಾಗ್ಯೂ ಕೆಳಗೆ ಬರೆದ ಎರಡು ನಿಯಮಗಳನ್ನು ಅವರು ಲಕ್ಷದಲ್ಲಿಡತಕ್ಕದ್ದು.

೧. ಮಕ್ಕಳಲ್ಲಿ ವಿಧೇಯತ್ವವನ್ನುಂಟುಮಾಡಲಿಕ್ಕೆ ಅವರು ತೀರ ಚಿಕ್ಕವರಿರುವಾಗಲೇ ಪ್ರಾರಂಭ ಮಾಡಬೇಕು.

(ಮುಂದೆ ಸಾಗುವದು.)

METHODS OF TEACHING.

ಕಲಿಸುವ ಪದ್ಧತಿಗಳು.

ನಿ ಬಂ ಧ.

ಗಡಿಯೊಲಗಳು.

(೨೦ನೆಯ ಪುಟದಿಂದ ಮುಂದೆ ಸಾಗಿದ್ದು.)

೬. ಮನೆಯೊಳಗಿನ ಜನರು ಮಲಗಿ ಏಳುವದೂ, ದೇವರ ಸ್ತೋತ್ರಗಳನ್ನು ಮಾಡುವದೂ, ಜಳಕಮಾಡಿ ಊ

ಬ ಉಡಿಗೆಗಳನ್ನು ತೀರಿಸುವದೂ, ಉಡಿಗೆ ತೊಡಿಗೆಗಳನ್ನು ಮಾಡಿಕೊಳ್ಳುವದೂ, ತಮ್ಮ ತಮ್ಮ ಉದ್ಯೋಗಗಳನ್ನು ಮಾಡ ಹೋಗುವನೂ, ಮುಂತಾದವುಗಳ ಬಗ್ಗೆ ನಿಯಮಿತವಾದ ವೇಳೆಯನ್ನು ತಿಳುಕೊಳ್ಳುವದಕ್ಕೆ ಗಡಿಯಾಲಗಳು ಬಹು ಉಪಯೋಗವುಳ್ಳವುಗಳಾಗಿವೆ. ಶಾಲೆ, ಕಚೇರಿ, ಕಾರಖಾನೆಗಳೊಳಗಿನ ಕೆಲಸಗಳು ಕ್ರಮವಾಗಿ ನಡೆಯಲಿಕ್ಕೆ ಗಡಿಯಾಲಗಳಿಂದ ಬಹು ಅನುಕೂಲವಾಗುತ್ತದೆ. ಜನರು ಬಬ್ಬರಿಗೊಬ್ಬರು ಭೇಟಿಯಾಗುವದಕ್ಕಾಗಲಿ, ಕೂಡಿ ಕೆಲಸ ಮಾಡುವದಕ್ಕಾಗಲಿ, ಇಲ್ಲವೆ ಯಾವದಾದರು ಕೆಲಸದ ನಿಮಿತ್ಯ ಹೋಗುವದನ್ನು ಯೋಚಿಸಿದ್ದರೆ, ತಮ್ಮ ತಮ್ಮೊಳಗೆ ಇಷ್ಟು ಘಂಟೆಗೆ ಬರಬೇಕೆಂದು ಮುಂಚಿತವಾಗಿ ಗೊತ್ತುಮಾಡುತ್ತಾರೆ. ಗಡಿಯಾಲಗಳಿರದಿದ್ದರೆ ಹೀಗೆ ನಿಯಮ ಮಾಡಲಿಕ್ಕೆ ಅನನುಕೂಲತೆಯಾಗಿ ಅವರಿಗೆ ಬಹುವೇಳೆ ವೆಚ್ಚವಾಡಬೇಕಾಗುತ್ತಿತ್ತು. ಉದಾಹರಣಾರ್ಥವಾಗಿ—ಬಬ್ಬ ಮಿತ್ರನು ನಾಳೆ ನಮ್ಮ ಭೆಟ್ಟಿಗೆ ಬರುವವನಿದ್ದು, ಅವನು ಇಂತಿಷ್ಟು ಘಂಟೆಗೆ ಬರುವೆನೆಂದು ನಮಗೆ ಹೇಳಿದ್ದರೆ ನಾವು ಅವನಿಗೆ ಭೆಟ್ಟಿಯಾಗಿ ಅವನನ್ನು ಸಂತೋಷಪಡಿಸಬೇಕಾದರೆ ಇಡಿ ದಿವಸ ಅವನ ದಾರೀನೋಡುತ್ತ ಮನೆಯೊಳಗೆ ಕೂಡ್ರಬೇಕಾಗುವದು. ಕಾಲ ನಿಯಮಕ್ಕನುಸರಿಸಿ ನಡಿಯುವ ಕುಟುಂಬದ ಜನರು ತಮ್ಮ ಹುಡುಗರಿಗೆ ಚಿಕ್ಕತನದಿಂದಲೇ ಗಡಿಯಾಲದ ಮೇಲಿಂದ ವೇಳೆಯನ್ನು ತಿಳುಕೊಳ್ಳುವವಕ್ಕೂ ಅವರವರ ಕೆಲಸಗಳನ್ನು ನೇಮದಿಂದ ಮಾಡಲಿಕ್ಕೂ ಕಲಿಸುತ್ತಾರೆ. ಹೀಗೆ ಮಾಡುವದರಿಂದ ಚಿಕ್ಕವರ ಮನಸ್ಸಿನಲ್ಲಿ ತಕ್ಕ ಹೊತ್ತಿಗೆ ಇಂತಿಂಥ ಕೆಲಸಗಳನ್ನು ಮಾಡಬೇಕೆಂಬ ಪ್ರೀತಿಯು ಹುಟ್ಟಿ, ದೊಡ್ಡವರಾದ ಹಾಗೆ ಅವರಲ್ಲಿ ಈ ಪ್ರೀತಿಯು ಬೆಳೆದು, ಅವರು ನಿಯಮದಿಂದ ಕೆಲಸ ಮಾ

ಡಲಿಕ್ಕೆ ಉತ್ಸುಕರಾಗುತ್ತಾರೆ. ಕಾಲ ನಿಯಮಕ್ಕೆ ಮೀಚ್ಚಿದವರು ಉದ್ಯೋಗಿಗಳಿರುವವಲ್ಲದೆ ಬಂದು ಕ್ಷಣ ಸಹ ವ್ಯರ್ಥ ಕಳೆಯುವದು ಅವರಿಗೆ ಸೇರುವದಿಲ್ಲ. ಗಡಿಯಾಲಗಳಿಂದ ಮನೆಗೆ ಶೋಭೆಯೂ ಉಂಟಾಗುತ್ತದೆ. ಎಷ್ಟೋ ಗಡಿಯಾಲಗಳು ಬಹು ಚಂದವಾಗಿರುವದರಿಂದ ಮನೆಯೊಳಗೆ ಬರುವವರಿಗೆ ಸಹಜವಾಗಿ ಕಾಣುವಂಥ ಸ್ಥಳದಲ್ಲಿ ಅವುಗಳನ್ನು ಇಡುತ್ತಾರೆ. ಅವು ತಾಸುಗಳನ್ನು ಬಾರಿಸುವಾಗ ಹೊರಡುವ ನಾದವು ಕಿವಿಗೆ ಬಹು ಇಂಪಾದದ್ದು. ವಾಚುಗಳು ಕೆಲಸಕ್ಕೆ ಉಪಯೋಗ ಬೀಳುವದಲ್ಲದೆ ಗಂಡಸರ ಅಥವಾ ಹೆಂಗಸರ ಬಂದು ಮುಖ್ಯವಾದ ಆಭರಣಗಳೇ ಎಂದು ಎಣಿಸಲ್ಪಡುತ್ತವೆ. ಇವಕ್ಕೆ ಬೆಲೆಯುಳ್ಳ ಚಿನ್ನದ ಸರಪಣಿಯನ್ನು ಹಚ್ಚಿ ಕೊರಳೊಳಗೆ ಹಾಕಿಕೊಳ್ಳುತ್ತಾರೆ, ಇಲ್ಲವೆ ಗುಂಡಿಯ ತೂತಿನೊಳಗೆ ಇದರ ಕೊಂಡಿಯನ್ನು ಸೇರಿಸುತ್ತಾರೆ. ಎಷ್ಟೋ ಪ್ರಾಯಸ್ಥರು ಹೀಗೆ ಸರಪಣೀ ಹಚ್ಚಿದ ವಾಚುಗಳನ್ನು ಬೊಕ್ಕಣದಲ್ಲಿ ಇಟ್ಟುಕೊಳ್ಳುವದೆಂದರೆ ಬಂದು ಪ್ರಕಾರದ ವೈಭವವೆಂದು ತಿಳುಕೊಳ್ಳುತ್ತಾರೆ. ಕಾಣಿಕೆಯಾಗಿ ಕೊಡಲಿಕ್ಕೆ ವಾಚುಗಳು ಬಹು ಸೊಗಸಾದ ಬಡಿವೆಗಳಾಗಿವೆ.

೭. ಗಡಿಯಾಲಗಳೂ ವಾಚುಗಳೂ ವೇಳೆಯನ್ನು ಸರಿಯಾಗಿ ತೋರಿಸುವವು ಬಹು ಅವಶ್ಯಕವಾದದ್ದು. ಯಾವಾಗಲೂ ಕೆಲವು ಮಿನಿಟು ತಪ್ಪಾಗಿ ಹೊತ್ತು ತೋರಿಸುವ ಗಡಿಯಾಲಗಳಿಂದ ಬಹಳ ಸ್ವಲ್ಪ ದಿವಸಕ್ಕೊಮ್ಮೆ ನೆಟ್ಟಗೆ ಮಾಡುತ್ತಿರಬೇಕು. ಸವ್ಯಕ್ಕೆ ಹಿಂಮುಸ್ಥಾನದ ಎಲ್ಲ ಮುಖ್ಯಭಾಗಗಳಲ್ಲಿ ಮದ್ರಾಸದ ವೇಳೆಯೇ ನಡಿಯುತ್ತದೆ. ಈವೇಳೆಗೆ ಅನುಸರಿಸಿಯೇ ಹೊಗೆಬಂಡಿಗಳ ಕಾಲನೇಮಗಳು ಗೊತ್ತು ಮಾಡಲ್ಪಟ್ಟಿವೆ. ದಂಡುಗಳಿರುವಂಥ ಸ್ಥಳಗಳಲ್ಲಿ ಸರಿಯಾದ ವೇಳೆಯನ್ನು ತಿಳಿಸುವದಕ್ಕಾಗಿ ದಿನಕ್ಕೆ ಎರಡುಸಾರಿ ಫಿರಂಗೀ ಹಾರಿಸುವ ರೂಢಿಯುಂಟು. ಮತ್ತು ಎಲ್ಲ ಗಡಿಯಾಲಗಳನ್ನು ಆಕಾಲಕ್ಕೆ ಸರಿಯಾಗಿ ಹಚ್ಚಿಕೊಳ್ಳುವರು.

೮. ಯುರೋಪಖಂಡವ ಅನೇಕ ದೇಶಗಳಲ್ಲಿಯೂ, ಅಮೇರಿಕ ಖಂಡವ ಸಂಯುಕ್ತ ಸಂಸ್ಥಾನಗಳಲ್ಲಿಯೂ ಗಡಿಯಾಲಗಳನ್ನೂ ವಾಚುಗಳನ್ನೂ ಮಾಡುವಂಥ ದೊಡ್ಡ ದೊಡ್ಡ ಕಾರಖಾನೆಗಳುಂಟು. ಮತ್ತು ಅನೇಕ ಜನರು ಗಡಿಯಾಲಗಳಿಗೆ ಬೇಕಾಗುವ ಸಾಮಾನುಗಳನ್ನೂ ಯಂತ್ರಗಳನ್ನೂ ಮಾಡಿಕೊಟ್ಟು ತಮ್ಮ ಹೊಟ್ಟೇ ಹೊರಕೊಳ್ಳುತ್ತಾರೆ. ಯುರೋಪಖಂಡವ ಉಳಿದ ದೇಶಗಳಿಗಿಂತ ಸ್ವಿತ್ಸರ್ಲಂಡವು ಸಣ್ಣದೂ ಬಡಸ್ಥಿತಿಯುಳ್ಳದ್ದೂ ಇದ್ದಾಗ್ಯೂ ಅದು ವಾಚುಗಳ ವ್ಯಾಪ್ಯಾರವಲ್ಲಿ ಬಹು ಹೆಸರಾವದು. ಅಗ್ಗವಾಗಿಯೂ ಚೆಂವವಾಗಿಯೂ ಇರುವ ವಾಚುಗಳಿಗೋಸ್ಕರ ಪ್ರಖ್ಯಾತಿ ಹೊಂದಿವ ಜೆನೀವಾ ಪಟ್ಟಣವಿಂದ ವಾಚುಗಳು ಸಾವಿರಗಟ್ಲೆ ವರದೇಶಕ್ಕೆ ಹೋಗುತ್ತವೆ. ಪ್ರತಿ ಬಂಯು ಪಟ್ಟಣದಲ್ಲಿ ವಾಚುಗಳನ್ನು ನೆಟ್ಟಗೆ ಮಾಡುವವರು ಅನೇಕ ಜನರುಂಟು. ಅವರಿಗೆ ಬಹುತರವಾಗಿ ಹೊಸವಾಚುಗಳನ್ನು ಮಾಡಲಿಕ್ಕೆ ಬರುವದಿಲ್ಲ; ಆದರೆ ಅವು ಸ್ವಲ್ಪ ಕೆಟ್ಟದ್ದರೆ ಮಾತ್ರ ನೆಟ್ಟಗೆ ಮಾಡುತ್ತಾರೆ.

೯. ಹಿಂದುಸ್ಥಾನವ ಮುಖ್ಯ ಪಟ್ಟಣಗಳಲ್ಲಿ ಕೆಲವು ದೇಶೀಜನರು ಮಾತ್ರ ಗಡಿಯಾಲ ನೆಟ್ಟಗೆ ಮಾಡುವ ಕೆಲಸವನ್ನು ಮಾಡುತ್ತಾರೆ. ಆದರೆ ಈದೇಶಕ್ಕೆ ಬರುವ ವಾಚುಗಳ ಸಂಖ್ಯೆಯು ಬೆಳೆಯುತ್ತ ನಡೆದದ್ದರಿಂದ ಇನ್ನೂ ಎಷ್ಟೋ ಜನರು ಈ ಉದ್ಯೋಗವನ್ನು ಕೈಕೊಳ್ಳಬಹುದು. ಈದೇಶವ ಜನರು ಚತುರರೂ ಉದ್ಯೋಗಿಗಳೂ ಇರುವರು. ಆದರೆ ಈದೇಶವಲ್ಲಿ ಇನ್ನೂ ಸಾಕಷ್ಟು ಸುಧಾರಣೆಯಾಗದೆ ಇರುವದರಿಂವ ಗಡಿಯಾಲಗಳನ್ನೂ ವಾಚುಗಳನ್ನೂ ಮಾಡುವವಕ್ಕೆ ನುಂದೆ ಎಷ್ಟೋ ದಿವಸಗಳು ಬೇಕಾಗುವವು.

DEPARTMENTAL NOTICES.

ನೋ ಟೀ ಸು.

ಸನ್ ೧೮೯೪ ನೇ ಸಪ್ಟಂಬರ ಅಕ್ಟೋಬರದಲ್ಲಿ ಆಗತಕ್ಕ ಭಾರವಾಡ ಟ್ರೇನಿಂಗ ಕಾಲೇಜದ ೩ನೇ ಮತ್ತು ೨ನೇ ವರ್ಷಗಳ ಸರ್ಟಿಫಿಕೇಟ ಪರೀಕ್ಷೆಗಳಿಗಾಗಿ ಕೆಳಗೆ ಕಾಣಿಸಿದ ಕನ್ನಡ ಮತ್ತು ಸಂಸ್ಕೃತ ವಿಷಯಗಳು ನೇಮಿಸಲ್ಪಟ್ಟಿರುತ್ತವೆ. ಹೊರಗಿನಿಂದ ಪರೀಕ್ಷೆಗೆ ಬರುವವರು ಸಹ ಇವುಗಳನ್ನೇ ಓದಿಕೊಂಡು ಬರತಕ್ಕದ್ದು.

೩ನೇ ವರ್ಷ.

ಕನ್ನಡ. (ಅ) ಕಬ್ಬಿಗರಕಾವ, ಮೊದಲಿನ ೧೫೦ ಪದ್ಯಗಳು.

(ಬ) ಬಸವಪುರಾಣ, ೧೩ನೇ ಸಂಧಿಯ ಆರಂಭದಿಂದ ೧೫೦ ಪದ್ಯಗಳು.

(ಕ) ಶಬರಶಂಕರವಿಲಾಸ, ೪ನೇ ಆಶ್ವಾಸದ ಆರಂಭದಿಂದ ೧೫೦ ಪದ್ಯಗಳು.

(ಡ) ಮುದ್ರಾಮಂಜೂಷ.

(ಇ) ಕನ್ನಡ ವ್ಯಾಕರಣ ಪೂರಾ, ಶಬ್ದಮಣಿದರ್ಪಣ—೨ನೇ ವರ್ಷದ ಅಭ್ಯಾಸವಲ್ಲದೆ ನಾಮಪ್ರಕರಣ ಮತ್ತು ೪೮, ೬೬, ೬೮, ೧೬೪, ೧೬೫, ೧೬೮, ೨೧೩, ೨೫೪, ೨೫೯, ೨೬೦ ಮುಂತಾದ ೧೦ ಸೂತ್ರಗಳು.

(ಫ) ನಿಬಂಧ ಶಬ್ದವ್ಯುತ್ಪತ್ತಿ, ಛಂದಃಸಾರ.

ಸಂಸ್ಕೃತ. (ಅ) ೨ನೇ ಪುಸ್ತಕ, ಕಾಯದೆಯಲ್ಲಿ ಹೇಳಿದಷ್ಟು.

(ಬ) ಕಾಲಿದಾಸಕೃತ ಶಾಕುಂತಲನಾಟಕದ ಮೊದಲಿನ ೪ ಅಂಕಗಳು.

೨ನೇ ವರ್ಷ.

ಕನ್ನಡ (ಅ) ಕನ್ನಡ ೬ನೇ ಪುಸ್ತಕ.

(ಬ) ಜಯಮಿನಿಯ ೩।೪।೯ ಸಂಧಿಗಳು.

(ಕ) ಕನ್ನಡ ವ್ಯಾಕರಣ ಪೂರಾ. ಶಬ್ದಮಣಿದರ್ಪ ಣ—ಆಖ್ಯಾತ ಪ್ರಕರಣ ಮತ್ತು ೩, ೪, ೬, ೨, ೪, ೯, ೧೧, ೧೩, ೧೪, ೧೫, ೧೬, ೧೭, ೨೦, ೨೧, ೪೦, ೪೫, ೪೯, ೫೨, ೫೦, ೫೩, ೫೪, ೬೬, ೬೯, ೭೦, ೭೩, ೭೪, ೭೫, ೭೬, ೭೭, ೭೮, ೯೩, ೯೪, ೯೫, ೯೬, ೧೦೦ ೧೦೬, ೧೬೪, ೧೬೫, ೧೬೭, ೧೬೮, ೧೭೩, ೧೭೪, ೧೭೫, ೧೭೬, ೧೭೭, ೧೭೮, ೧೭೯, ೧೮೦, ೧೮೧, ೧೮೨, ೧೮೩, ೧೮೪, ೧೮೫, ೧೮೬, ೧೮೭, ೧೮೮, ೧೮೯, ೧೯೦, ೧೯೧, ೧೯೨, ೧೯೩, ೧೯೪, ೧೯೫, ೧೯೬, ೧೯೭, ೧೯೮, ೧೯೯, ೨೦೦, ೨೦೧, ೨೦೨, ೨೦೩, ೨೦೪, ೨೦೫, ೨೦೬, ೨೦೭, ೨೦೮, ೨೦೯, ೨೧೦, ೨೧೧, ೨೧೨, ೨೧೩, ೨೧೪, ೨೧೫, ೨೧೬, ೨೧೭, ೨೧೮, ೨೧೯, ೨೨೦, ೨೨೧, ೨೨೨, ೨೨೩, ೨೨೪, ೨೨೫, ೨೨೬, ೨೨೭, ೨೨೮, ೨೨೯, ೨೩೦, ೨೩೧, ೨೩೨, ೨೩೩, ೨೩೪, ೨೩೫, ೨೩೬, ೨೩೭, ೨೩೮, ೨೩೯, ೨೪೦, ೨೪೧, ೨೪೨, ೨೪೩, ೨೪೪, ೨೪೫, ೨೪೬, ೨೪೭, ೨೪೮, ೨೪೯, ೨೫೦, ೨೫೧, ೨೫೨, ೨೫೩, ೨೫೪, ೨೫೫, ೨೫೬, ೨೫೭, ೨೫೮, ೨೫೯, ೨೬೦, ೨೬೧, ೨೬೨, ೨೬೩, ೨೬೪, ೨೬೫, ೨೬೬, ೨೬೭, ೨೬೮, ೨೬೯, ೨೭೦, ೨೭೧, ೨೭೨, ೨೭೩, ೨೭೪, ೨೭೫, ೨೭೬, ೨೭೭, ೨೭೮, ೨೭೯, ೨೮೦, ೨೮೧, ೨೮೨, ೨೮೩, ೨೮೪, ೨೮೫, ೨೮೬, ೨೮೭, ೨೮೮, ೨೮೯, ೨೯೦, ೨೯೧, ೨೯೨, ೨೯೩, ೨೯೪, ೨೯೫, ೨೯೬, ೨೯೭, ೨೯೮, ೨೯೯, ೩೦೦, ೩೦೧, ೩೦೨, ೩೦೩, ೩೦೪, ೩೦೫, ೩೦೬, ೩೦೭, ೩೦೮, ೩೦೯, ೩೧೦, ೩೧೧, ೩೧೨, ೩೧೩, ೩೧೪, ೩೧೫, ೩೧೬, ೩೧೭, ೩೧೮, ೩೧೯, ೩೨೦, ೩೨೧, ೩೨೨, ೩೨೩, ೩೨೪, ೩೨೫, ೩೨೬, ೩೨೭, ೩೨೮, ೩೨೯, ೩೩೦, ೩೩೧, ೩೩೨, ೩೩೩, ೩೩೪, ೩೩೫, ೩೩೬, ೩೩೭, ೩೩೮, ೩೩೯, ೩೪೦, ೩೪೧, ೩೪೨, ೩೪೩, ೩೪೪, ೩೪೫, ೩೪೬, ೩೪೭, ೩೪೮, ೩೪೯, ೩೫೦, ೩೫೧, ೩೫೨, ೩೫೩, ೩೫೪, ೩೫೫, ೩೫೬, ೩೫೭, ೩೫೮, ೩೫೯, ೩೬೦, ೩೬೧, ೩೬೨, ೩೬೩, ೩೬೪, ೩೬೫, ೩೬೬, ೩೬೭, ೩೬೮, ೩೬೯, ೩೭೦, ೩೭೧, ೩೭೨, ೩೭೩, ೩೭೪, ೩೭೫, ೩೭೬, ೩೭೭, ೩೭೮, ೩೭೯, ೩೮೦, ೩೮೧, ೩೮೨, ೩೮೩, ೩೮೪, ೩೮೫, ೩೮೬, ೩೮೭, ೩೮೮, ೩೮೯, ೩೯೦, ೩೯೧, ೩೯೨, ೩೯೩, ೩೯೪, ೩೯೫, ೩೯೬, ೩೯೭, ೩೯೮, ೩೯೯, ೪೦೦, ೪೦೧, ೪೦೨, ೪೦೩, ೪೦೪, ೪೦೫, ೪೦೬, ೪೦೭, ೪೦೮, ೪೦೯, ೪೧೦, ೪೧೧, ೪೧೨, ೪೧೩, ೪೧೪, ೪೧೫, ೪೧೬, ೪೧೭, ೪೧೮, ೪೧೯, ೪೨೦, ೪೨೧, ೪೨೨, ೪೨೩, ೪೨೪, ೪೨೫, ೪೨೬, ೪೨೭, ೪೨೮, ೪೨೯, ೪೩೦, ೪೩೧, ೪೩೨, ೪೩೩, ೪೩೪, ೪೩೫, ೪೩೬, ೪೩೭, ೪೩೮, ೪೩೯, ೪೪೦, ೪೪೧, ೪೪೨, ೪೪೩, ೪೪೪, ೪೪೫, ೪೪೬, ೪೪೭, ೪೪೮, ೪೪೯, ೪೫೦, ೪೫೧, ೪೫೨, ೪೫೩, ೪೫೪, ೪೫೫, ೪೫೬, ೪೫೭, ೪೫೮, ೪೫೯, ೪೬೦, ೪೬೧, ೪೬೨, ೪೬೩, ೪೬೪, ೪೬೫, ೪೬೬, ೪೬೭, ೪೬೮, ೪೬೯, ೪೭೦, ೪೭೧, ೪೭೨, ೪೭೩, ೪೭೪, ೪೭೫, ೪೭೬, ೪೭೭, ೪೭೮, ೪೭೯, ೪೮೦, ೪೮೧, ೪೮೨, ೪೮೩, ೪೮೪, ೪೮೫, ೪೮೬, ೪೮೭, ೪೮೮, ೪೮೯, ೪೯೦, ೪೯೧, ೪೯೨, ೪೯೩, ೪೯೪, ೪೯೫, ೪೯೬, ೪೯೭, ೪೯೮, ೪೯೯, ೫೦೦, ೫೦೧, ೫೦೨, ೫೦೩, ೫೦೪, ೫೦೫, ೫೦೬, ೫೦೭, ೫೦೮, ೫೦೯, ೫೧೦, ೫೧೧, ೫೧೨, ೫೧೩, ೫೧೪, ೫೧೫, ೫೧೬, ೫೧೭, ೫೧೮, ೫೧೯, ೫೨೦, ೫೨೧, ೫೨೨, ೫೨೩, ೫೨೪, ೫೨೫, ೫೨೬, ೫೨೭, ೫೨೮, ೫೨೯, ೫೩೦, ೫೩೧, ೫೩೨, ೫೩೩, ೫೩೪, ೫೩೫, ೫೩೬, ೫೩೭, ೫೩೮, ೫೩೯, ೫೪೦, ೫೪೧, ೫೪೨, ೫೪೩, ೫೪೪, ೫೪೫, ೫೪೬, ೫೪೭, ೫೪೮, ೫೪೯, ೫೫೦, ೫೫೧, ೫೫೨, ೫೫೩, ೫೫೪, ೫೫೫, ೫೫೬, ೫೫೭, ೫೫೮, ೫೫೯, ೫೬೦, ೫೬೧, ೫೬೨, ೫೬೩, ೫೬೪, ೫೬೫, ೫೬೬, ೫೬೭, ೫೬೮, ೫೬೯, ೫೭೦, ೫೭೧, ೫೭೨, ೫೭೩, ೫೭೪, ೫೭೫, ೫೭೬, ೫೭೭, ೫೭೮, ೫೭೯, ೫೮೦, ೫೮೧, ೫೮೨, ೫೮೩, ೫೮೪, ೫೮೫, ೫೮೬, ೫೮೭, ೫೮೮, ೫೮೯, ೫೯೦, ೫೯೧, ೫೯೨, ೫೯೩, ೫೯೪, ೫೯೫, ೫೯೬, ೫೯೭, ೫೯೮, ೫೯೯, ೬೦೦, ೬೦೧, ೬೦೨, ೬೦೩, ೬೦೪, ೬೦೫, ೬೦೬, ೬೦೭, ೬೦೮, ೬೦೯, ೬೧೦, ೬೧೧, ೬೧೨, ೬೧೩, ೬೧೪, ೬೧೫, ೬೧೬, ೬೧೭, ೬೧೮, ೬೧೯, ೬೨೦, ೬೨೧, ೬೨೨, ೬೨೩, ೬೨೪, ೬೨೫, ೬೨೬, ೬೨೭, ೬೨೮, ೬೨೯, ೬೩೦, ೬೩೧, ೬೩೨, ೬೩೩, ೬೩೪, ೬೩೫, ೬೩೬, ೬೩೭, ೬೩೮, ೬೩೯, ೬೪೦, ೬೪೧, ೬೪೨, ೬೪೩, ೬೪೪, ೬೪೫, ೬೪೬, ೬೪೭, ೬೪೮, ೬೪೯, ೬೫೦, ೬೫೧, ೬೫೨, ೬೫೩, ೬೫೪, ೬೫೫, ೬೫೬, ೬೫೭, ೬೫೮, ೬೫೯, ೬೬೦, ೬೬೧, ೬೬೨, ೬೬೩, ೬೬೪, ೬೬೫, ೬೬೬, ೬೬೭, ೬೬೮, ೬೬೯, ೬೭೦, ೬೭೧, ೬೭೨, ೬೭೩, ೬೭೪, ೬೭೫, ೬೭೬, ೬೭೭, ೬೭೮, ೬೭೯, ೬೮೦, ೬೮೧, ೬೮೨, ೬೮೩, ೬೮೪, ೬೮೫, ೬೮೬, ೬೮೭, ೬೮೮, ೬೮೯, ೬೯೦, ೬೯೧, ೬೯೨, ೬೯೩, ೬೯೪, ೬೯೫, ೬೯೬, ೬೯೭, ೬೯೮, ೬೯೯, ೭೦೦, ೭೦೧, ೭೦೨, ೭೦೩, ೭೦೪, ೭೦೫, ೭೦೬, ೭೦೭, ೭೦೮, ೭೦೯, ೭೧೦, ೭೧೧, ೭೧೨, ೭೧೩, ೭೧೪, ೭೧೫, ೭೧೬, ೭೧೭, ೭೧೮, ೭೧೯, ೭೨೦, ೭೨೧, ೭೨೨, ೭೨೩, ೭೨೪, ೭೨೫, ೭೨೬, ೭೨೭, ೭೨೮, ೭೨೯, ೭೩೦, ೭೩೧, ೭೩೨, ೭೩೩, ೭೩೪, ೭೩೫, ೭೩೬, ೭೩೭, ೭೩೮, ೭೩೯, ೭೪೦, ೭೪೧, ೭೪೨, ೭೪೩, ೭೪೪, ೭೪೫, ೭೪೬, ೭೪೭, ೭೪೮, ೭೪೯, ೭೫೦, ೭೫೧, ೭೫೨, ೭೫೩, ೭೫೪, ೭೫೫, ೭೫೬, ೭೫೭, ೭೫೮, ೭೫೯, ೭೬೦, ೭೬೧, ೭೬೨, ೭೬೩, ೭೬೪, ೭೬೫, ೭೬೬, ೭೬೭, ೭೬೮, ೭೬೯, ೭೭೦, ೭೭೧, ೭೭೨, ೭೭೩, ೭೭೪, ೭೭೫, ೭೭೬, ೭೭೭, ೭೭೮, ೭೭೯, ೭೮೦, ೭೮೧, ೭೮೨, ೭೮೩, ೭೮೪, ೭೮೫, ೭೮೬, ೭೮೭, ೭೮೮, ೭೮೯, ೭೯೦, ೭೯೧, ೭೯೨, ೭೯೩, ೭೯೪, ೭೯೫, ೭೯೬, ೭೯೭, ೭೯೮, ೭೯೯, ೮೦೦, ೮೦೧, ೮೦೨, ೮೦೩, ೮೦೪, ೮೦೫, ೮೦೬, ೮೦೭, ೮೦೮, ೮೦೯, ೮೧೦, ೮೧೧, ೮೧೨, ೮೧೩, ೮೧೪, ೮೧೫, ೮೧೬, ೮೧೭, ೮೧೮, ೮೧೯, ೮೨೦, ೮೨೧, ೮೨೨, ೮೨೩, ೮೨೪, ೮೨೫, ೮೨೬, ೮೨೭, ೮೨೮, ೮೨೯, ೮೩೦, ೮೩೧, ೮೩೨, ೮೩೩, ೮೩೪, ೮೩೫, ೮೩೬, ೮೩೭, ೮೩೮, ೮೩೯, ೮೪೦, ೮೪೧, ೮೪೨, ೮೪೩, ೮೪೪, ೮೪೫, ೮೪೬, ೮೪೭, ೮೪೮, ೮೪೯, ೮೫೦, ೮೫೧, ೮೫೨, ೮೫೩, ೮೫೪, ೮೫೫, ೮೫೬, ೮೫೭, ೮೫೮, ೮೫೯, ೮೬೦, ೮೬೧, ೮೬೨, ೮೬೩, ೮೬೪, ೮೬೫, ೮೬೬, ೮೬೭, ೮೬೮, ೮೬೯, ೮೭೦, ೮೭೧, ೮೭೨, ೮೭೩, ೮೭೪, ೮೭೫, ೮೭೬, ೮೭೭, ೮೭೮, ೮೭೯, ೮೮೦, ೮೮೧, ೮೮೨, ೮೮೩, ೮೮೪, ೮೮೫, ೮೮೬, ೮೮೭, ೮೮೮, ೮೮೯, ೮೯೦, ೮೯೧, ೮೯೨, ೮೯೩, ೮೯೪, ೮೯೫, ೮೯೬, ೮೯೭, ೮೯೮, ೮೯೯, ೯೦೦, ೯೦೧, ೯೦೨, ೯೦೩, ೯೦೪, ೯೦೫, ೯೦೬, ೯೦೭, ೯೦೮, ೯೦೯, ೯೧೦, ೯೧೧, ೯೧೨, ೯೧೩, ೯೧೪, ೯೧೫, ೯೧೬, ೯೧೭, ೯೧೮, ೯೧೯, ೯೨೦, ೯೨೧, ೯೨೨, ೯೨೩, ೯೨೪, ೯೨೫, ೯೨೬, ೯೨೭, ೯೨೮, ೯೨೯, ೯೩೦, ೯೩೧, ೯೩೨, ೯೩೩, ೯೩೪, ೯೩೫, ೯೩೬, ೯೩೭, ೯೩೮, ೯೩೯, ೯೪೦, ೯೪೧, ೯೪೨, ೯೪೩, ೯೪೪, ೯೪೫, ೯೪೬, ೯೪೭, ೯೪೮, ೯೪೯, ೯೫೦, ೯೫೧, ೯೫೨, ೯೫೩, ೯೫೪, ೯೫೫, ೯೫೬, ೯೫೭, ೯೫೮, ೯೫೯, ೯೬೦, ೯೬೧, ೯೬೨, ೯೬೩, ೯೬೪, ೯೬೫, ೯೬೬, ೯೬೭, ೯೬೮, ೯೬೯, ೯೭೦, ೯೭೧, ೯೭೨, ೯೭೩, ೯೭೪, ೯೭೫, ೯೭೬, ೯೭೭, ೯೭೮, ೯೭೯, ೯೮೦, ೯೮೧, ೯೮೨, ೯೮೩, ೯೮೪, ೯೮೫, ೯೮೬, ೯೮೭, ೯೮೮, ೯೮೯, ೯೯೦, ೯೯೧, ೯೯೨, ೯೯೩, ೯೯೪, ೯೯೫, ೯೯೬, ೯೯೭, ೯೯೮, ೯೯೯, ೧೦೦೦ ಮುಂತಾದ ೪೦ ಸೂತ್ರಗಳು. ಶಬ್ದವ್ಯುತ್ಪತ್ತಿ, ಛಂದಸ್ಸಾರ.

(ಡ) ನಿಬಂಧ, ಕಿತ್ತೆ ಹಾಕುವದು.

ಸಂಸ್ಕೃತ (ಅ) ಎನೇ ಪುಸ್ತಕ, ಕಾಯದೆಯಲ್ಲಿ ಹೇಳಿದಷ್ಟು.

(ಬ) ಹಿತೋಪದೇಶ—ಮಿತ್ರಭೇದ, ವಿಗ್ರಹ ಇ ವೆರಡು ಸಂಧಿಗಳು.

ಧಾರವಾಡ ಟ್ರೇ. ಕಾಲೇಜ, ತಾ॥ ೧೫ ಜಾನೆವಾರಿ ೧೮೯೪. } Raoji B. Karandikar. ಪ್ರಿನ್ಸಿಪಾಲ.

DHARWAR TRAINING COLLEGE CERTIFICATE EXAMINATION—1893.

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯಪ್ರಶ್ನೆಗಳು.

ಎನೆಯ ವರ್ಷ.

ಕನ್ನಡ.

(ಬಲಕ್ಕೆ ಬರೆವ ಅಂಕಿಗಳು ಪ್ರಶ್ನೆಗಳ ಪೂರ್ಣಗುಣಗಳು.)

೧. ಎಲ್ಲಾ ಗೃಹಗಳ ಮೇಲೂ ಪೃಥ್ವಿಯಂತೆ ಜೀವಜಂತುಗಳೂ ವನಸ್ಪತಿಗಳೂ ಅವಿಯೋ ಹ್ಯಾಗೆ? ಇದರ ಬಗ್ಗೆ ಸಾಧಕ ಬಾಧಕ ಪ್ರಮಾಣಗಳನ್ನೂ ಕೊಟ್ಟು ನಿರ್ಣಯ ಮಾಡು.

೨. ಅಧಿಕವಾಸಗಳೂ ಕ್ಷಯವಾಸಗಳೂ ಬರುವ ಕಾರಣವೇನು? ವಿವರಿಸು. ೫

೩. ಕೆಳಗೆ ಬರೆದ ಪಾರಿಭಾಷಿಕ ಶಬ್ದಗಳ ಅರ್ಥವನ್ನು ಪೂರ್ಣವಾಗಿ ಬರೆ. ೧೬

(a) ಜಲಶಿಲೆ; (b) ನ್ಯಸ್ತಾವಶೇಷ; (c) ವಿಶಿಷ್ಟಗುರುತ್ವ; (d) ಸಂಯೋಜಕಪ್ರಮಾಣ; (e) ನಿರ್ಗಂಧವಾಯು; (f) ವಿಶಿಷ್ಟಾದ್ವೈತ; (g) ಆರೋಹಣಾವರೋಹಿಯಾರಿಸ (ಉತ್ತರತೇಜ; (h) ಪ್ರತಿನಿಧಿಸಭೆ.

೪. ಭೂಗರ್ಭದಲ್ಲಿರುವ ತಪ್ತವಾದರಸವು ಕ್ಷೋಭಿಸಿತೆಂದರೆ ಅದು ಭೂಕವಚವನ್ನು ಒಡೆದು ಹೊರಗೆ ಬರಲಿಕ್ಕೆ ಅಪೇಕ್ಷಿಸುತ್ತದೆ. ಇದೇ ಜ್ವಾಲಾಮುಖಿಗಳಿಗೂ ಭೂಕಂಪಕ್ಕೂ ಕಾರಣವೆಂದು ಹೇಳುತ್ತಾರೆ. ಆದರೆ ಅರಸವು ಏಕೆ ಕ್ಷೋಭಿಸಲಿಕ್ಕೆ ಕಾರಣವೇನು. ೫

೫. ಸಮಾಸನಾತ್ರದಲ್ಲಿ ಪ್ರಯೋಗಿಸುವ ವಿಶೇಷವಾದ ದೇಶೀ ಸಂಧಿ ನಿಯಮಗಳು ಯಾವವು? ಅರಿಸಮಾಸಕ್ಕೆ ಯಾವ ಯಾವ ಸ್ಥಳದಲ್ಲಿ ದೋಷವಿಲ್ಲ. ೮

೬. ಮಹಾ ಮಹಾ ಪರಾಕ್ರಮಿಗಳು; ತಲೆತಲೆ ಬಡಕೊಂಡನು; ಕಡಿಕಡಿದು ಚೆಲ್ಲಿದನು; ಇವು ಎಂಥಾ ಪ್ರಯೋಗಗಳು? ಇಂಥಾ ಪ್ರಯೋಗಗಳ ಬೇರೆ ಬೇರೆ ಪ್ರಕಾರಗಳನ್ನು ವಿವರಿಸು. ೬

೭. ನ್', ಣ್', ಯ್', ಲ್', ಳ್' ಕಾರಗಳು ಸಂಧಿಯಲ್ಲಿ ಯಾವಾಗ್ಗೆ ದ್ವಿತ್ವ ಹೊಂದುತ್ತವೆ ಯಾವಾಗ್ಗೆ ಹೊಂದುವದಿಲ್ಲ ಎಂಬ ಬಗ್ಗೆ ನಿಯಮ ಹೇಳಿ ಉದಾಹರಣೆ ಕೊಡು. ೬

೮. ಅ, ಆ, ಇ, ಈಕಾರಾಂತ ತತ್ಸಮ ಶಬ್ದಗಳು ಕನ್ನಡ ಪ್ರಯೋಗದಲ್ಲಿ ಯಾವ ಅಂತವನ್ನು ಹೊಂದುತ್ತವೆ? ಪೂರ್ಣವಾಗಿ ನಿಯಮ ಬರೆದು ಉದಾಹರಣೆ ಕೊಡು. ೬

೯. ಧರ್ಮ, ಒಡೆತನ, ವಿಕಾರ, ಜನಿತ ಈ ಅರ್ಥಗಳಲ್ಲಿ ಸಂಸ್ಕೃತ ಧಾತುಗಳಿಗೆ ಯಾವ ಯಾವ ಪ್ರತ್ಯಯಗಳು ಹ

ತ್ತುತ್ತವೆ? ಒಂದೊಂದಕ್ಕೆ ಎರಡೆರಡು ಉದಾಹರಣೆಗಳನ್ನು ಕೊಡು.

೧೦. ಮತ್ತೇಭವಿಕ್ರೀಡಿತ, ಚಂಪಕಮಾಲಾ, ತರಳವೃತ್ತ ಇವುಗಳ ಅಡಿಗಳನ್ನು ಬರೆದು ಉದಾಹರಣೆ ಕೊಡು.

೧೧. ಕೆಳಗೆ ಬರೆದ ಪದ್ಯಗಳ ಅನ್ವಯಾರ್ಥ ಭಾವಾರ್ಥಗಳನ್ನು ಬರೆ.

(a) ಕಂದುಕುಂದಿಲ್ಲದಸುವೃತ್ತದಿಂದೆಸೆವತನ । ಗೊಂದುಭಾರಿಯುವಿನ್ನು ಪಗಪೀಡೆಲೇಸಲ್ಲ। ವೆಂದುನಿಜವೈರಮುಂಬಿಟ್ಟ ಕಮಲಂಗಳಂ ಸಂತೈಸೆಗಗನದಿಂದಾ ॥ ಬಂದಪನೊಸಂಪೂರ್ಣಕಲೆಗಳಿಂದಾರಾಜಿ । ಪಿಂದುವೆನಿಕೃಷ್ಣನಪದಾಂಭೋಜಯುಗಳಕ್ಕೆ ತಂದು ಬಿದ್ದುದು ಸುಧನ್ವನಶಿರಂಹರಿಯನಾಮಾವಳಿಯನುಚ್ಚರಿಸುತ ॥

(b) ವಿಸುಪಮುಕುಟದನೊಸಲತಿಲಕದಿಂದಲಕದಿಂ । ದೆಸಲುಗಂಗಳತೊಳಪಕದಪಿನಿಂಪದಪಿನಿಂ । ಪಸರಿಸುವನಸುನಗೆಯ ವದನದಿಂ ರದನಿದಿಂ ಪೊಳೆವಚುಬುಕಾಗ್ರದಿಂದ । ತ್ರಿಸರಕೌಸ್ತುಭಸುಕೆಯೂರದಿಂ ಹಾರದಿಂ । ದೊಸದುಟ್ಟಪೊಂಬೊಟ್ಟಿಯುಡಿಗೆಯಿಂತೊಡಗೆಯಿಂ । ದೆಸವನೀಲೋತ್ಪಲಶ್ಯಾಮಲಂ ಕೋಮಲಂಬರುತಿದ್ದನಿನನಿದಿರೊಳು ॥

೧೨. ಕೆಳಗೆ ಬರೆದವುಗಳ ಅರ್ಥವನ್ನು ಸ್ಪಷ್ಟವಾಗಿ ಬರೆ. ೫

(a) ಚೀರಾಂಬರಜ್ಞೀಯು; (b) ಅಕ್ಷೀಣವಿಕ್ರಮಶಿಖಿಯು ಜೂಣಿಯಮಹಾಜ್ವಾಲೆ; (c) ಮಂಜಿರನಳವಡಿಸಿ; (d) ಸವ್ಯಸಾಚಿತ್ವ; (e) ಕುಲಾಲಚಕ್ರದವೊಲ್.

೧೩. ಅರ್ಜುನನನ್ನು ರಥದಿಂದ ಕೆಡುವೆನೆನು ಎಂದು ೫
ಸುರಥನು ಮಾಡಿದ ಪ್ರತಿಜ್ಞಾವಚನವುಳ್ಳ ಪದ್ಯವನ್ನು ಬರೆ.

ವರ್ಗಣೀ ವಸೂಲು.

ಧಾರವಾಡ ಜಿಲ್ಲೆ.

	ರೂ.	ಆ.	ಪೈ.
ರಾ. ಸಾ. ಡೆ. ಎ. ಇ. ಧಾರವಾಡ ಇವರಿಂದ ಲೋ. ಬೋ. ಸಾಲಿಗಳ ಬಾಬತು ೧೪೯೩ನೇ ಸಾಲಿನ ನವಂಬರ ತಿಂಗಳಬಗ್ಗೆ.	೬೬	೦	೩
ಹುಬ್ಬಳ್ಳಿ ಮಾಸ್ತರರಿಂದ ಮ್ಯು. ೧೪ ಸ್ಕೂಲುಗಳ ಬಾಬತು ೧೪೯೩ನೆಯ ಅಕ್ಟೋಬರ, ನವಂಬರ, ಡಿಸೆಂಬರ ತಿಂಗಳುಗಳಬಗ್ಗೆ.	೫	೪	೬
ಹಾವೇರಿ ಮಾಸ್ತರರಿಂದ ೫ ಸಾಲಿಗಳಬಗ್ಗೆ ೧೪೯೩ ಜುಲಾಯಿಯಿಂದ ದಿಶಂಬರ ೧೪೯೩ ಇಸವಿವರೆಗೆ	೧	೬	೦
ನರಗುಂದ ಮಾಸ್ತರರಿಂದ ೪ ಸಾಲಿಗಳ ಬಾ. ೧೪೯೩ ಜುಲೈಯಿಂದ ಡಿಸೆಂಬರ ೧೪೯೩ ವರೆಗೆ ೬ ತಿಂಗಳ ಬಗ್ಗೆ.	೧	೧೪	೦

ಬೆಳಗಾವಿ ಜಿಲ್ಲೆ.

ರಾ. ಸಾ. ಡೆ. ಎ. ಇ. ಇವರಿಂದ ಮೆ ೧೪೯೩ರಿಂದ ನವಂಬರ ೧೪೯೩ ವರೆಗೆ ಲೋ. ಬೋ. ಶಾಲೆಗಳ ಬಾಬತು.	೧೧೩	೯	೪

ವಿಜಾಪೂರ ಜಿಲ್ಲೆ.

ರಾ. ಸಾ. ಡೆ. ಎ. ಇ. ವಿಜಾಪೂರ ಇವರಿಂದ ಲೋ. ಬೋ. ಮ್ಯು. ಸಾಲಿಗಳ ಬಾಬತು ನವಂಬರ ತಿಂಗಳಬಗ್ಗೆ.	೧೯	೧೨	೪
ಸದರ ಸದರ ಡಿಸೆಂಬರ ತಿಂಗಳಬಗ್ಗೆ.	೧೯	೧೨	೪

ಕಿರುಕುಳ.

ಕೃಷ್ಣಾಜಿ ಕೇಶವ ಹುಯಿಲಗೋಳಿ ಅ. ಮ್ಯು. ಸ್ಕೂಲಗೋಕಾಕ ಇವರಿಂದ ೧೪ರ ಇಸ್ವಿಬಗ್ಗೆ	೦	೧೫	೦
ಮೆ. ಕ್ಯುರೇಟರ ಸಾ. ಬಾ. ಮುಂಬಯಿ ಇವರಿಂದ ಸೋಟಿಸಿನಬಗ್ಗೆ.	೩	೬	೬
ಸವಣೂರ ಮಾಸ್ತರರಿಂದ ೬ ಸಾಲಿಗಳ ಬಗ್ಗೆ ೧೪ರನೇ ಸಾಲಿನ ಬಾ॥	೬	೯	೦
ರಾ. ಸಾ. ಡಿ. ಸುಬ್ಬಯ್ಯಾ ಡೆ. ಎ. ಇ. ಕೋಲಾರ, ಇವರಿಂದ ೧೪ರನೇ ಸಾಲಿನಬಗ್ಗೆ.	೦	೧೫	೦

ಗುಡಗೇರಿ ಸ್ಕೂಲ ಮಾಸ್ತರರಿಂದ ೯ ಸಾಲಿಗಳ ಬಾ॥ ೯ರನೇ ಸಾಲಿನಬಗ್ಗೆ.	೪	೫	೦
ರಾ. ಸಾ. ಡೆ. ಎ. ಇ. ಸಂಸ್ಥಾನ ಮಿರಜ ಇವರಿಂದ ೯ರನೇ ಸಾಲಿನಬಗ್ಗೆ.	೦	೧೫	೬
ಹುನ್ನೂರ ಸ್ಕೂಲಮಾಸ್ತರರಿಂದ ೯ರನೇ ಸಾಲಿನ ಬಗ್ಗೆ.	೦	೧೫	೦
ರಾ. ಸಾ. ಚೇಅರಮನ್ ಸ್ಕೂಲಬೋರ್ಡ ಧಾರವಾಡ ಇವರಿಂದ ೯ರ ನೇ ಸಾಲಿನಬಗ್ಗೆ.	೦	೧೫	೦

* ಇದರೊಳಗೇನಾದರೂ ತಪ್ಪು ಇದ್ದರೆ ಅದನ್ನು ದಯಮಾಡಿ ತಿಳುಹಿಸಬೇಕು.

ಕನ್ನಡ ಶಾಲಾಪತ್ರಕದ ವರ್ಗಣಿ ವರ್ಷಕ್ಕೆ ಮುಂಗಡ ... ೧೫ ಆಣೆ.
ಒಂದು ಸಂಚಿಕೆಗೆ ... ... ೨ ಆಣೆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ.	೪	ಪಂಕ್ತಿಗಳವರೆಗೆ	೧ ರೂ
ಮೂರುಸಾರೆ ಇಟ್ಟರೆ	೧೦	,,	,,
ಆರುಸಾರೆ ಇಟ್ಟರೆ.	೧೬	,,	,,

ಸೂಚನೆಗಳು.

೧. ಶಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಹಾಸಲು ಬೀಳುವದು.

೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇಮ್ಮಡಿ ಫೀ ಬೀಳುವದು.

೪. ಪ್ರಕಟನೆಯ ಕೂಡ ಹಣ ಕಳುಹಲಿಕ್ಕೆ ಬೇಕು.

೫. ಟಿಕೀಟು ಇಟ್ಟ ಹೊರತು ಉತ್ತರ ಶಿಗಲಾರದು.

RAOJI B. KARANDIKAR.
ವ್ಯವಸ್ಥಾಪಕ, ಕನ್ನಡ ಶಾಲಾಪತ್ರ.

ಕನ್ನಡಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೭೯.] ಮಾರ್ಚ ೧೮೯೪. [ಸಂಚಿಕೆ ೩.

ಅನುಕ್ರಮಣಿಕೆ.

	ಪುಟ.
೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ...	೪೯
೨. ದೀಪಾವಳಿಯ ಸೂಟಿಯ ಆರಂಭದಲ್ಲಿ ಕಾಲೇಜದ ವಿದ್ಯಾರ್ಥಿಗಳಿಗೆ ರಾ. ರಾ. ಸವದಿಯವರು ಮಾಡಿದ ಉಪದೇಶ	೫೫
೩. ಕಲಿಸುವ ಪದ್ಧತಿಗಳು	೬೧
೪. ನೋಟೀಸುಗಳು	೬೪
೫. ಪತ್ರವ್ಯವಹಾರ	೬೫
೬. ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು ೧೮೯೩.	೭೧

CONTENTS.

1. Educational Intelligence and Useful Notes ...	49
2. Address to College Students on the Eve of the Divali Vacation by Mr. Savadi... ...	55
3. Methods of Teaching	61
4. Departmental Notices	64
5. Correspondence	65
6. Dharwar Training College Certificate Examination—1893.	71

DHARWAR:
PRINTED AT THE KARNATIC BOOK DEPOT PRESS,
1894.

ಪ್ರಕಟನೆ.

ಕನ್ನಡ ಕಯ್ಪಿಡಿಯ ಪೂರ್ವಾರ್ಧ ಎನೇ ಆವೃತ್ತಿ.
(ಹಳಿಗನ್ನಡ ಹೊಸಗನ್ನಡ ವ್ಯಾಕರಣ.)

ಈ ವ್ಯಾಕರಣದ ಮೊದಲನೆಯಾವೃತ್ತಿ ಮುದ್ರಿಸಿದ ಪ್ರತಿಗಳೆಲ್ಲ ತೀರಿದುದರಿಂದಲೂ ಬಹು ಜನರು ಕಯ್ಪಿಡಿಯನ್ನು ಮತ್ತೆ ಅಚ್ಚು ಮಾಡಿಸಿರಿ ಎಂದೂ ಹೇಳಿದುದರಿಂದಲೂ ಬಹು ಜನರು ಬೇಡುತ್ತಿರುವದರಿಂದಲೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ತಿದ್ದಿ ಕಾಠಿಣ್ಯವನ್ನೆಲ್ಲ ತೆಗೆದು ಹಾಕಿ, ಅನುಕೂಲವಾಗುವ ಹೊಸ ನಿಯಮಗಳನ್ನು ಸೇರಿಸಿ ಚೆಲೋ ಮೊಳೆಗಳಿಂದ ಉತ್ತಮ ಕಾಗದಗಳ ಮೇಲೆ ಎನೇ ಆವೃತ್ತಿ ಅಚ್ಚು ಹಾಕಿಸಿ ಪುಸ್ತಕಗಳನ್ನು ಮಾರಾಟಕ್ಕೆ ಸಿದ್ಧ ಮಾಡಿಸಿದ್ದೇವೆ. ಬೇಕಾದವರು ವ್ಯಾಲ್ಯುಪೇಬಲಿನಿಂದ ತರಿಸಿಕೊಳ್ಳಬೇಕು. ನುಡಿಗಟ್ಟು ವ್ಯಾಕರಣದ ಪ್ರತಿಗಳು ತೀರಿವೆ, ಎನೇ ಆವೃತ್ತಿ ಮುದ್ರಾಪಿಸುವ ಕೆಲಸ ನಡೆದದೆ, ಕಾರಣ ನುಡಿಗಟ್ಟನ್ನು ಬೇಡುವವರು ಇನ್ನೂ ನಾಲ್ಕು ತಿಂಗಳ ವರೆಗೆ ಸಮಾಧಾನ ಮಾಡಿರಿ.

ಕಯ್ಪಿಡಿ ಪೂರ್ವಾರ್ಧದ ಬೆಲೆ.

ಸಾದಾ ಬೈಂಡು ಪ್ರತಿಯೊಂದಕ್ಕೆ ೧೦ ಆಣೆ.
ಬಂಗಾರದಕ್ಷರಗಳ ಬೈಂಡು ೧ ರೂ.

ಪತ್ರ ಬರೆಯುವವರು ಸುವಾಚ್ಯ ಅಕ್ಷರಗಳನ್ನು ಬರೆಯಬೇಕು. ತಾ|| ೨೫–೧೦–೯೪

ಧೋಂಡೋ ನರಸಿಂಹ ಮುಳಬಾಗಲು,
ಕನ್ನಡ ಅಧ್ಯಾಪಕ ಟ್ರೇನಿಂಗ ಕಾಲೇಜ ಧಾರವಾಡ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮು
ಚಯಸುತ್ತಂ ಪ್ರತಿವಾಸದಾವಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆಪ್ರೋದುವರ್ಗಸಗುಣಂ ತೋರಲ್ಕೆ ಕೈಕೊಂಬುದೈ !
ದಯೆಯಿಂದೋಷವತಿದ್ದನೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೯.] ಮೇ ೧೮೬೯ ನೆಯ ಇಸವಿ. [ಸಂಚಿಕೆ ೫.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮುಂಬಯಿ ಇಲಾಖೆಯ ಹೋದವರ್ಷದ (೧೮೬೮-೬೯) ವಿದ್ಯಾಖಾತೆಯ ರಿಪೋರ್ಟು ಹೊನ್ನೆ ಹೊನ್ನೆ ಪ್ರಸಿದ್ಧವಾಗಿದೆ. ಅದರಿಂದ ತಿಳಿಯುವ ಮುಖ್ಯ ಮುಖ್ಯ ಸಂಗತಿಗಳು ಯಾವವೆಂದರೆ,—ನೆಮ್ಮ ಇಲಾಖೆಯೊಳಗಿನ ಶಾಲೆಗಳಲ್ಲಿ, ಅಭ್ಯಾಸ ಮಾಡುವ ಗಂಡು ಹುಡುಗರ ಸಂಖ್ಯೆಯು ಹೋದ ವರ್ಷ ೪೯೯,೧೩೪ ಇತ್ತು; ಈ ವರ್ಷ ೫೫,೦೭,೧೨೪ ಆಗಿರುತ್ತದೆ; ಮತ್ತು ಹೆಣ್ಣು ಮಕ್ಕಳ ಸಂಖ್ಯೆಯು ಹಿಂದಿನ ವರ್ಷ ೬೭೪೩ ಇತ್ತು; ಈ ವರ್ಷ ೬೪೩೧ ಆಗಿರುತ್ತದೆ. ಈ ಇಲಾಖೆಯಲ್ಲಿ ಯಾವತ್ತು ಪ್ರಕಾರದ ಸರಕಾರೀ ಖಾಸಗೀ ಶಾಲೆಗಳು ಕೂಡಿ ಹಿಂದಿನ ವರ್ಷ ೧೮೦೦೩ ಇದ್ದವು. ಈ ವರ್ಷ ೧೮೬೮೩ ಆಗಿರುತ್ತವೆ. ಸರಕಾರೀ ಶಾಲೆಗಳು ಹಿಂದಿನ ವರ್ಷ ೯೫೦೧, ಖಾಸಗೀ ಶಾಲೆಗಳು ೮೭೭೧ ಇದ್ದವು. ಈ ವರ್ಷ ಸರ

ಸಾರೀ ಶಾಲೆಗಳು ೯೭೯ಳ, ಖಾಸಗೀ ಶಾಲೆಗಳು ೭೪೧
ಆಗಿರುತ್ತವೆ. ಹಿಂದಿನ ವರ್ಷ ಕನಿಷ್ಠ ಪ್ರತಿಯು ಪ್ರದೇಶ
ಷೆಯು ಸರಕಾರೀ ಶಾಲೆಗಳು ೯೦೩, ವಿದ್ಯಾರ್ಥಿಗಳ
೫೧೪೦೪ಳ ಇದ್ದರು. ಈ ವರ್ಷ ಅನುಕ್ರಮವಾ
೯,೩೦೩ ಮತ್ತು ೫೦೫೪೧೩ ಇದ್ದಾರೆ.

ಈ ಇಲಾಖೆಯು ದಕ್ಷಿಣ ಭಾಗದಲ್ಲಿ ಜನಸಂಖ್ಯೆಯು
೬೯೦೦೫೩ ಇರುತ್ತದೆ; ಮತ್ತು ಯಾವತ್ತು ಪ್ರಕಾರ
ಶಾಲೆಗಳು ೦೫೧೩, ವಿದ್ಯಾರ್ಥಿಗಳು ೧೪೬೦೦೦ ಇರು
ರು. ಕನಿಷ್ಠ ಪ್ರತಿಯು ಗಂಡು ಪುಡುಗರ ಶಾಲೆಗಳ
೦೦೬೪ ಮತ್ತು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರು
ಕೂಡಿ ೧,೩೧೧,೪೯೩ ಇದ್ದಾರೆ. ಹೆಣ್ಣು ಮಕ್ಕಳ ಶಾಲೆ
ಳು ೧೩೫ ವಿದ್ಯಾರ್ಥಿನಿಯರು ೭೬೩೦ ಇರುವರು. ಗಂಡ
ಪುಡುಗರ ಶಾಲೆಗಳಿಗೆ ಹೋಗುವ ಹೆಣ್ಣು ಮಕ್ಕಳ ಸಂಖ್ಯೆ
ಯು ೭೭೪೪ ಇರುವೆದು. ಈ ವರ್ಷ ನಮ್ಮ ದಕ್ಷಿಣ
ಭಾಗವಲ್ಲಿ ಒಟ್ಟಿಗೆ ೩೫೫ ಶಾಲೆಗಳೂ ೦೦೦೦ ವಿದ್ಯಾರ್ಥಿ
ಳೂ ಹೆಚ್ಚಾಗಿದ್ದಾರೆ.

ಮುಂಬಯಿ ಇಲಾಖೆಯೊಳಗಿನ ವಿದ್ಯಾಖಾತೆಯ ಒಟ್ಟು
ಖರ್ಚು ೭೭,೩೫,೧೪೬ ರುಪಾಯಿ ಆಗಿರುತ್ತದೆ. ಈ ರೂ
ಪಿನೊಳಗಿಂದ ಫೀ ಹಣ ೧೩,೪೪ ೩೪ ರೂಪಾಯಿ, ಪ

---

* ಸರಕಾರದ ಖರ್ಚಿನಿಂದಲೇ ನಡೆಯುವ ಶಾಲೆಗಳ ಬಗ್ಗೆ
೪೯೩೦೯ ರೂ. ಲೋಕಲ್‌ಬೋರ್ಡ ಶಾಲೆಗಳ ಬಗ್ಗೆ ೧೫೦೯೦೦ ರೂ.
ಮ್ಯುನಿಸಿಪಲ್‌ಬೋರ್ಡ ಶಾಲೆಗಳ ಬಗ್ಗೆ ೭೧೧೧೦೦ ರೂ. ಸಂಸ್ಥಾ
ನದೊಳಗಿನ ಶಾಲೆಗಳಬಗ್ಗೆ ೧೦೦೪೭೭ ರೂ. ಗ್ರಾಂಟಿನಾಪತೆ ಶಾಲೆ
ಗಳ ಬಗ್ಗೆ ೧೩೩೭೪೩ ರೂ. ಅನಾಪಿಡೆ ಶಾಲೆಗಳ ಬಗ್ಗೆ ೯೦೩೩೭
ರೂ. ಮತ್ತು ಇತರ ಖರ್ಚುಗಳಿಗೆ ರೂ. ಇಂತೂ ಒಟ್ಟು ಖರ್ಚು
೭೭,೩೫,೧೪೬ ರೂ.

ತ್ತು ವರ್ಗಣಿ ಮುಂತಾದ ಬಾಬುಗಳಿಂದ ಆದ ಉತ್ಪನ್ನ ೧೯೦೫-೦೬ ರೂಪಾಯಿ ವಜಾ ಹೋಗಲಾಗಿ, ಉಳಿದ ಖರ್ಚಿನಲ್ಲಿ ಸರಕಾರಕ್ಕೆ ೧೯೬೫೫೦ ರೂಪಾಯಿ, ಲೋಕಲ್‌ಫಂಡಿಗೆ ೨೫೪೮೦೧ ರೂಪಾಯಿ, ಮ್ಯುನಿಸಿಪಾಲಿಟಿಗಳಿಗೆ ೪೧೦೦೦೪ ರೂಪಾಯಿ ಬಿತ್ತು. ಕನಿಷ್ಠ ಪ್ರತಿಯ ಶಿಕ್ಷಣಕ್ಕೆ ೦೪೪೪೪೦೬ ರೂಪಾಯಿ ಖರ್ಚು ಆಯಿತು. ಇವರೊಳಗೆ ಫೀ ಉತ್ಪನ್ನ ೩೬೫೬೩೩ ರೂಪಾಯಿ, ಮತ್ತು ಇತರ ಬಾಬುಗಳಿಂದ ಆಗುವ ಉತ್ಪನ್ನ ೪೧೦೫೪೧ ರೂಪಾಯಿ ವಜಾ ಹೋಗಲಾಗಿ, ಉಳಿದದ್ದರಲ್ಲಿ ಸರಕಾರಕ್ಕೆ ೬೯೦೪೩ ರೂಪಾಯಿ, ಲೋಕಲ್‌ಫಂಡಿಗೆ ೭೦೧೪೯ ರೂಪಾಯಿ, ಮ್ಯುನಿಸೀಪಾಲಿಟಿಗಳಿಗೆ ೨೯೦೫೩೯ ರೂಪಾಯಿ ಖರ್ಚು ಬಿತ್ತು.

ಹಿಂದುಸ್ತಾನ ಸರಕಾರದ ಪೋಸ್ಟಖಾತೆಯ ಹೋದ ವರ್ಷದ ರಿಪೋರ್ಟನಿಂದ ತಿಳಿಯುವ ಮುಖ್ಯ ಮುಖ್ಯ ಸಂಗತಿಗಳು ಯಾವವೆಂದರೆ :—

ಹೋದ ವರ್ಷದ ಅಂತ್ಯಕ್ಕೆ ಹಿಂದುಸ್ತಾನದಲ್ಲಿ ಒಟ್ಟು ೧೦,೧೩೯ ಅಂಚೆಕಟ್ಟೆಗಳೂ ಸುಮಾರು ೧೬೦೦೦ ಆಂಚೆಪೆಟ್ಟಿಗೆಗಳೂ ೪೦೦೦ ಜನ ಪಳ್ಳಿಗಳಲ್ಲಿ ಟಪಾಲ ಮುಟ್ಟಿಸುವವರೂ ಇದ್ದರು. ಹಳ್ಳಿಗಳಲ್ಲಿ ಟಪಾಲ ಮುಟ್ಟಿಸುವವರು ಪತ್ರಗಳನ್ನು ಹಂಚುವ, ಅವುಗಳನ್ನು ಸ್ವೀಕರಿಸುವ, ಮನಿ ಆರ್ಡರುಗಳನ್ನು ಮುಟ್ಟಿಸುವ, ಪೋಸ್ಟ ಟಿಕೀಟುಗಳನ್ನು ಮಾರುವ ಮುಂತಾದ ಎಷ್ಟೋ ಕೆಲಸಗಳನ್ನು ಮಾಡುವರು, ಅಂದರೆ ಅವರು ವಾಡಿಕೆಯಾಗಿ ಪೋಸ್ಟಮಾಸ್ತರರ ಕೆಲಸಗಳನ್ನೇ ಮಾಡುತ್ತಾರೆಂದು ಹೇಳಬಹುದು. ಹೋದ ವರ್ಷ ಒಟ್ಟು ೫೫ ಕೋಟಿ ೦೦ ಲಕ್ಷ ಪತ್ರಗಳು ಪೋಸ್ಟ

ಖಾತೆಯು ಮುಖಾಂತರವಾಗಿ ವಂಚಿಸಲ್ಪಟ್ಟವು. ಅಂದರೆ ಆಜೀ
ಯ ವರ್ಷಕ್ಕಿಂತ ಹೋದ ವರ್ಷ ಒಂದೂಕಾಲು ಕೋಟಿ
ಪತ್ರಗಳು ಹೆಚ್ಚಾಗಿದವು. ಪೋಸ್ಟ್‌ಕಾರ್ಡುಗಳ ವಹಾಟವು
ಹೆಚ್ಚುತ್ತಲೇ ಅದೆ. ಹೋದ ವರ್ಷ ಒಟ್ಟು ೧೨ ಕೋ
ಟಿ ಕಾರ್ಡುಗಳು ವೆಚರಲ್ಪಟ್ಟಿವು. ಅವುಗಳಲ್ಲಿ ಬರೇ ಮುಂ
ಬಯಿ ಇಲಾಖೆಯಲ್ಲಿ ೨೨ ಕೋಟಿ ಖರ್ಚಾದವು. ಸರ
ಕಾರ್ಡಿನಲ್ಲಿ ಆದ ಜನಗಣತಿಯ ಸಂಖ್ಯೆಗೂ ಕಾರ್ಡುಗಳ
ಸಂಖ್ಯೆಗೂ ಪ್ರಮಾಣ ತೆಗಿದರೆ ಮುಂಬಯಿ ಇಲಾಖೆಯಲ್ಲಿ
ಪ್ರತಿಬ್ಬಬ್ಬನಿಗೆ ೭ರಂತೆ, ಬಂಗಾಲ, ಪಂಜಾಬ, ಬ್ರಹ್ಮ
ದೇಶಗಳಲ್ಲಿ ಪ್ರತಿ ಬ್ಬಬ್ಬನಿಗೆ ೧ರಂತೆ ಬೀಳುತ್ತದೆ. ನಾಟಿ
ಪೇಡ ಪತ್ರಗಳ ಸಂಖ್ಯೆಯು ಬಾಬರುತ್ತ ಕಡಿಮೆಯಾಗುತ್ತ
ನಡೆದದೆ. ಇದರಿಂದ ನಾರಿಪೆತ ಪತ್ರಗಳೇ ಜನರಿಗೆ
ಪೋಗನೆ ಮುಟ್ಟುತ್ತವೆಂಬ ಸಾಧಾರಣ ಜನರ ಪಕ್ಷಪಾತವು
ವಳಿಕೆಯು ಹೋಗಿ ಪೋಸ್ಟ್‌ಖಾತೆಯ ನಂಬಿಕೆಯು ಅವರಲ್ಲಿ
ಹೆಚ್ಚುತ್ತಲಿದೆಂದು ವ್ಯಕ್ತವಾಗುತ್ತದೆ.

ಹೋದ ವರ್ಷ ೪೦ ಲಕ್ಷ ಸಾಧಾರಣ ಮನಿಆರ್ಡರು
ಗಳು ಕಳಿಸಲ್ಪಟ್ಟವು. ಮನಿಆರ್ಡರುಗಳ ಕಮಿಶನದ
ಉತ್ಪನ್ನವು ೨ ಕೋಟಿ ೧೫ ಲಕ್ಷ ರೂ. ಆಗಿರುತ್ತದೆ.
ಪೋಸ್ಟ ಸೇವಿಂಗ ಬ್ಯಾಂಕುಗಳ ಕೆಲಸವಾವರೂ ಪಕ
ವಿಂವ ಸಾಗಿವೆ. ಕಳಿವ ವರ್ಷದ ಅಂತ್ಯಕ್ಕೆ ಒಟ್ಟು ೫೫
ಲಕ್ಷ ಖಾತೆಗಳಿದ್ದವು. ಸುಮಾರು ೪ ಕೋಟಿ ರೂಪಾಯಿ
ಗಳು ಜಮೆಯಾದವು. ಅವುಗಳಲ್ಲಿ ಸಣ್ಣ ಜನರ ಖಾತೆ
ಗಳೇ ಹೆಚ್ಚಾಗಿರುತ್ತವೆ. ಅಂದರೆ ಅವುಗಳ ಪ್ರಮಾಣವು
೧೦೦ಕ್ಕೆ ೯೦ರಂತೆ ಬೀಳುತ್ತವೆ, ಮತ್ತು ಅವರಲ್ಲಿ ಮುಂಬ
ಯಿ ಇಲಾಖೆಯೊಳಗೇ ಖಾತೆಗಳು ವಿಶೇಷ.

ಪೋಸ್ಟ್‌ಖಾತೆಯಲ್ಲಿ ಪಣ ಇಡುವ ಜನರ ಸಂಖ್ಯೆಯನ್ನು ವಿಚಾರಿಸಿ ನೋಡಿದರೆ, ಅದು ಮುಂಬಯಿ ಇಲಾಖೆಯಲ್ಲಿ ಹೆಚ್ಚಾಗಿರುತ್ತದೆಂದು ತೋರುತ್ತದೆ. ಇದರಿಂದ ಜನರ ಹತ್ತರ ಭಾಂಡವಲ ಇಲ್ಲೆನ್ನುವದರ ಬದಲು, ಜನರಲ್ಲಿ ವಿಶ್ವಾಸವನ್ನು ಹುಟ್ಟಿಸಿ ತಮ್ಮ ಹಾಗು ಜನರ ಕಲ್ಯಾಣವನ್ನು ಸಾಧಿಸಿಕೊಳ್ಳುವಂಥ ಸಂಘಗಳಾಗಲಿ, ಎದೆಗಾರರಾಗಲಿ ಕಡಿಮೆ ಇರುತ್ತಾರೆಂದು ಹೇಳುವದೇ ಸಯುಕ್ತಿಕವಾಗಿ ತೋರುತ್ತದೆ.

ಹಿಂದುಸ್ತಾನ ಮತ್ತು ಬ್ರಹ್ಮ ದೇಶಗಳಲ್ಲಿ ಕೂಡಿ ೧೧೦೦ ತಾರ ಆಫೀಸುಗಳಿರುತ್ತವೆ. ಅವುಗಳಲ್ಲಿ ಅಂಚೆ ಆಫೀಸುಗಳ ಕೆಲಸವನ್ನು ಪೋಸ್ಟ್‌ಖಾತೆಯವರೇ ಮಾಡುತ್ತಾರೆ. ಸಾಧಾರಣವಾಗಿ ಬಂದು ನೂಡ್ಡ ಊರಲ್ಲಿರುವ ಪೋಸ್ಟ್‌ಮಾಸ್ತರನಿಗೆ ತಾರಾಯಂತ್ರದ ಕೆಲಸವು ಬೇಕ್ಕಬೇಕೆಂದು ಸರಕಾರವವರು ಕಟ್ಟಳೆಯನ್ನು ಮಾಡಿದ್ದಾರೆ. ಮತ್ತು ಈ ಕೆಲಸವನ್ನು ಅರಿಯದ ಮಾಸ್ತರರು ಅದನ್ನು ಕಲಿಯುವ ವ್ಯವಸ್ಥೆಯನ್ನು ಮಾಡಿದ್ದಾರೆ. ಈ ಮೇರಿಗೆ ಪೋಸ್ಟ್‌ಖಾತೆ, ತಾರಾಯಂತ್ರಖಾತೆ ಇವುಗಳನ್ನು ಕೂಡಿಸಿದರಿಂದ ಹೋದ ವರ್ಷ ಸರಕಾರಕ್ಕೆ ೯ ಲಕ್ಷ ರೂಪಾಯಿಗಳ ಆದಾಯವಾಯಿತು.

ಹೊಡಿಕೆಯೀಮಾಗತಕ್ಕ ಕೆಲಸಗಳು—ರೋಜನೆಂಟ ವೈದ್ಯನು ಹೇಳುವದೇನಂದರೆ:—ಗಾಳಿಯು ಶರೀರಕ್ಕೆ ಹೊಂದಿರುವ ಹಾಪೆಯ ಫರಿಗಳನ್ನು ಮಾಡಿ, ಅವುಗಳ ಸ್ಥಳದಲ್ಲಿ ಹೆಚ್ಚು ತಂಪು ಹವೆಯನ್ನು ಬರಮಾಡಿ, ಬಾಷ್ಪಭವನಕ್ರಿಯೆಯನ್ನು ಬತ್ತನದಿಂದ ಸಾಗಿಸುತ್ತದೆ. ಇದರಿಂದ ಹವೆಯೊಳಗಿನ ಉಷ್ಣತೆಯು ತೀರ ಕಡಿಮೆಯಾಗಿ ಹೋಗುತ್ತದೆ

ಈ ಮಾತಿನ ಅನುಭವವು, ಬದ್ದಿಯು ಅರಿವೆಯನ್ನು ಧರಿಸಿ ಕೊಂಡಂಥ ಇಲ್ಲವೆ ಬರೀಮೈಯಿಂದ ಗಾಳಿಗೆ ಎದುರಾಗಿ ನಿಂತಂಥ ಪ್ರತಿಯೊಬ್ಬನಿಗೆ ಆಗುವದು. ಇಂಥ ಮನುಷ್ಯನ ಶರೀರಕ್ಕೆ ಅತಿಶಯ ಥಂಡಿ ಹತ್ತಿ ಮೈಯೆಲ್ಲ ಗುಗ್ಗರಿಗಟ್ಟಿದ್ದಾವದು. ಶೀತನಿವಾರಣ ಮಾಡಬೇಕಾದರೆ ಶರೀರಕ್ಕೆ ಗಾಳಿಯು ಬಡಿಯುವಂತೆ ವ್ಯವಸ್ಥೆ ಮಾಡತಕ್ಕದ್ದು. ಈ ಕೆಲಸಕ್ಕೆ ತೊಗಲು, ಉಣ್ಣೆಗಳು ಬಹು ಪ್ರಯೋಜನಕರವಾದವುಗಳು. ಅವುಗಳಿಂದ ಮಾಡಿದ ವಸ್ತ್ರಗಳು ಬಹಳ ಬೆಚ್ಚಗಿನ ಹೊದಿಕೆಗಳಾಗಿರುತ್ತವೆ. ಪೃಥ್ವಿಯ ಕೆಲವು ಭಾಗಗಳಲ್ಲಿ ಈ ಹೊದಿಕೆಗಳ ಹೊರತು ನಡಿಯುವದೇ ಇಲ್ಲ. ಈ ವಸ್ತ್ರಗಳಲ್ಲಿಯೇ ಉಷ್ಣತೆ ಇರುತ್ತದೆಂದು ಮಾತ್ರ ಗ್ರಹಿಸಕೂಡದು. ಇವು ಶರೀರದ ಸ್ವಾಭಾವಿಕವಾದ ಉಷ್ಣತೆಯನ್ನು ಹೊರಗೆ ಬಿಡುವದಿಲ್ಲ; ಮತ್ತು ಹೊರಗಿನ ಶೀತಪ್ರಹವೆಯನ್ನು ಒಳಗೆ ಸೇರಗೊಡುವದಿಲ್ಲ, ಅಂದರೆ ಮೈಗೆ ಹತ್ತಗೊಡುವದಿಲ್ಲ. ಈ ಹೊದಿಕೆಗಳು ಮೇಲಾದವುಗಳು. ದಪ್ಪ ಮತ್ತು ಉರಟು ಉಣ್ಣೆಯ ವಸ್ತ್ರಗಳು ಎರಡನೆಯ ಪ್ರತಿಯ ಹೊದಿಕೆಗಳೆಂದೆನಿಸಿಕೊಳ್ಳುತ್ತವೆ. ಅವು ಹವೆಯ ದೊಡ್ಡ ಭಾಗವನ್ನು ತಮ್ಮುಳ್ಳಿ ಸಂಗ್ರಹಿಸಿಟ್ಟುಕೊಳ್ಳುತ್ತವೆ. ಹವೆಯೊಳಗಿನ ಉಷ್ಣತೆಯು ಕ್ಷಣಕ್ಷ ಬದಲಾಗುತ್ತಿರುವಂಥ ಪ್ರದೇಶಗಳಲ್ಲಿ ಈವಸ್ತ್ರಗಳು ಬಹಳ ಪ್ರಯೋಜನಕರವಾದವುಗಳಿರುತ್ತವೆ. ಮೇಲೆ ಹೇಳಿದ ಗುಣಗಳ ಹೊರತು ಇನ್ನೊಂದು ಮಹತ್ವದ ಗುಣವು ಉಣ್ಣೆಯಲ್ಲಿರುತ್ತದೆ, ಅದು ಯಾವದೆಂದರೆ— ನೀರನ್ನು ಹೀರಿಕೊಳ್ಳುವ ಗುಣವು. ಇದು ಆರೋಗ್ಯಕ್ಕೆ ಬಹಳವಾಗಿ ಸಹಾಯ ಮಾಡುತ್ತದೆ. ಹಲವು ತಾಸುಗಳಲ್ಲಿ ಮನುಷ್ಯನ ಶರೀರದಿಂದ ಸುಮಾರು ೫೦ ತೊಲಿಯಷ್ಟು ನೀ

METHODS OF TEACHING.

ಕಲಿಸುವ ಪದ್ಧತಿಗಳು.

ಬಿನ್ನ ಇಯತ್ತೆಯ ವಿದ್ಯಾರ್ಥಿಗಳಿಗೆ ತಕ್ಕವುಗಳಾದ ಕೆಲ ವುಕವಿತೆಗಳನ್ನು ಮೂದರಿಗಾಗಿ ಕೆಳಗೆ ಕೊಟ್ಟಿರುತ್ತೇವೆ. ಅವುಗಳನ್ನು ಮಾಸ್ತರರು ನೋಡಿಕೊಂಡು, ಅದೇ ಅಭಿಪ್ರಾಯವುಳ್ಳ ಸುಲಭ ಕವಿತೆಗಳನ್ನು ಮಾಡಿ ನಮ್ಮ ಕಡೆಗೆ ಕಳಿಸಿದರೆ, ಅವುಗಳಿಗೆ ಬಹು ಸಂತೋಷದಿಂದ ನಮ್ಮ ಪತ್ರಿಕೆಯಲ್ಲಿ ಸ್ಥಳಕೊಡುವೆವು.

॥ ಕಾಮೋದಾವೃತ್ತ ॥

ಜನನಿಜನಕರು । ಜನುಮವಂಗುರು ॥
ಘನಮತಿಯುಧನಿ । ಧನವನೀವರು ॥ ೧ ॥

॥ ಸುಲಭವೃತ್ತ ॥

ಎಳೆಯತನದೊಳೇ । ಬಲಿದುವಿದ್ಯೆಯ ॥
ಕಲಿವುದುಬರಮು । ಬಲಿತಬಳಿಕದು ॥ ೧ ॥

॥ ಕಾಮೋದಾವೃತ್ತ ॥

ದುಷ್ಟಕೃತ್ಯದಿಂ । ಕೆಟ್ಟಫಲವಮ ॥
ಸುತ್ತಿಬಹುವದಂ । ಬಿಟ್ಟುಬಿಡುವದು ॥ ೧ ॥

॥ ದ್ವಿಪದೆ ॥

ಬಾಲಕರೆ ನೀವೆಲ್ಲರೊಟ್ಟಾಗಿ ಕೂಡಿ ॥
ಪೇಳಿದಭ್ಯಾಸವಂ ಮನಗೊಟ್ಟುಮಾಡಿ ॥ ೧ ॥
ಬಯ್ದಾಡಿ ಮಾರ್ಗದೊಳು ಜಗಳಾಡಬೇಡಿ ।
ಹೊಯ್ದಾಡಿ ಸೇಡು ತೀರಿಸುವೆವೆನಬೇಡಿ ॥ ೨ ॥
ನಿಂದೆವಾತುಗಳನೊಬ್ಬರಿಗಾಡಬೇಡಿ ।
ಹೊಂದಿಕೀರ್ತಿಯಜನ್ಮ ಸಾರ್ಥಕವಮಾಡಿ ॥ ೩ ॥

॥ ದಿಂಡಿ ॥

ಮಾತೆಯುತಂಪಿತನಾತನಿಷ್ಟಬಂಧು ।
ಅತನಾಪ್ತಂ ಸಕಲಗೆ ದಯಾಸಿಂಧು ।
ದಾತನಾತಂ ಸರ್ವಜ್ಞನಾತನೆಂದು ।
ಭೀತಿಯಿಂಪರನಂ ಭಜಿಸುಮನೆಂದಂದು ॥ ೧ ॥

॥ ಕಾಮುದ್ದಾ ॥

ಹೀನವಿದ್ಯನಂ ಜ್ಞಾನಶೂನ್ಯನಂ ।
ಸಾನುರಾಗದಿಂ ಮಾನಿಸದುಜನಂ ॥ ೧ ॥
ಘನಸುನೀತಿಯಂ ಸದ್ವಿಚಾರವಂ ।
ಮನುಜನರಿಯುದಂ ದ್ವಿಪದಪಶುವವಂ ॥ ೨ ॥

ದಾಟಿ—"ಕಣ್ಣಾರೆಕಂಡು ಧನ್ಯನಾದೆ" ಎಂಬ ಪದದಂತೆ

ಮನಸುಕೊಟ್ಟು ಕೇಳಿಕೊಳ್ಳಿಲ್ಲಿ । ಎನ್ನಯ ನುಡಿಯ ॥ಪಲ್ಲ॥
ಸುಳ್ಳವಾತನಾಡದಿರು । ಕಳ್ಳತನವವಾಡದಿರು ॥ ಎಲ್ಲಜನ
ಗಳೊಳಗೆ ನೀನು । ಒಳ್ಳಿದನೆಂದೆನಿಸು ಕಂಡ್ಯಾ ॥ ೧ ॥
ಪರರಧನವ ಪಿಡಿಯದಿರು । ಪರರ ಪೀಡೆ ಮಾಡದಿರು ।
ಗುರುಹಿರಿಯರಾಜ್ಞೆಯನ್ನು । ಮರೆಯದಲೇ ಪಾಲಿಸಯ್ಯಾ
॥ ೨ ॥
ಹೆರರನಿಂದೆ ಮಾಡದಿರು । ದುರುಳರನ್ನು ಕೂಡದಿರು ॥
ಬಿರುಸು ನುಡಿಯನಾಡದಿರು । ಮುರಿಯುಬೇಡಕೊಟ್ಟಮಾತು
॥ ೩ ॥

ದಾಟಿ—"ಎಚ್ಚತ್ತು ಇರುಕಂಡ್ಯಾ ಮನವೆ" ಎಂಬ ಪದದಂತೆ.

ಚಿಕ್ಕಮುಕ್ಕಳೆ ಕೇಳಿರಯ್ಯಾ । ನಾನು ।
ಅಕ್ಕರದಿಂದಲಿ ಪೇಳುವನುಡಿಯಾ ॥ ಪಲ್ಲ ॥
ಉದಯಕಾಲದೆ ಬೇಗನೇಳಿ । ಎದ್ದು ।
ಭಜಿಸಿರಿ ವರಗಳ ಕೊಡುವದೇವನು ॥

ಪಡೆವ ತಾಯಿತಂದೆಗಳನು । ನೀವು ।
ಎಂದೆಂದು ಮರೆಯದೆ ನಂದಿಸಿರಯ್ಯಾ ॥ ೧ ॥
ಹೊಲಸಿಲ್ಲದಂಥ ಬಟ್ಟೆಯನು ॥ ಬೇಗ ॥
ಧರಿಸಿಕೊಳ್ಳುತ ಸಾಲಿಮನೆಯ ಹಾದಿಯನು ॥
ಹಿಡಿಯಿರಿ ಹಾದಿಯೊಳೆಂದು । ಕೆಟ್ಟ ।
ಹುಡುಗೆರ ಆಟಕ್ಕೆ ಮನಸೋಲದಿರಿ ॥ ೨ ॥
ಓದುವ ಮಠದೊಳು ಪೋಗಿ । ನಿಮ್ಮ ।
ಗುರುಗಳ ಉಪದೇಶಗಳನು ಕೇಳುತಲಿ ॥
ಓರಿಗೆಯವರೊಳು ನೀವು । ಹಿಂದು ।
ಬೀಳದೆ ಕಲಿಯಿರಿ ಜಾಣರೆಂದೆನಿಸಿ ॥ ೩ ॥

ಚೌಪದಿ.

ನಾವು ಬಾಲಕರಯ್ಯ । ನಾವು ದುರ್ಬಲರು ॥
ದೇವ ನೀನಲ್ಲದಿನ್ನಾರು ಕಾಯುವರು ॥
ನಿರುತದಲಿ ನಿನ್ನ ಧ್ಯಾನವನುಮಾಡುವೆವು ।
ವರಗಳನು ಕೊಡುವನಿವನೆಂದು ಕೋರುವೆವು ॥ ೧ ॥

ತಾಯಿಯ ಉಪಕಾರವು ಹೆಚ್ಚಿನದು.

ದ್ವಿಪದಿ.

ತಾಯೆ ನಿನ್ನುಪಕಾರ ಮರೆಯೆನೆಂದೆಂದು ।
ನೀನಲ್ಲದಿನ್ನುಂಟೆ ಪ್ರೀತಿಯಾಬಂಧು ॥ ೧ ॥
ಚಿಕ್ಕಂದಿನಲ್ಲಿ ನಾನಳಲು ಪಾಲನ್ನು ।
ಅಕ್ಕರಿಂದುಣಿಸಿನೀ ಕಾಯ್ದೆಯೆನ್ನನ್ನು ॥ ೨ ॥
ಬೇನೆ ಬಂದಾಗೆನ್ನ ನಾರು ನೋಡಿದರು? ।
ನಿನ್ನಂತೆ ಯುಪಚಾರವಾರು ಮಾಡಿದರು? ॥ ೩ ॥
ಹೊತ್ತು ಹೊತ್ತಿಗೆ ಹಾಲನಿಟ್ಟ ಕಾಯ್ದವರು ।
ಎತ್ತಿ ಮುದ್ದಿಸಿಪಾಡಿ ಲಾಲಿಸಿದವರಾರು? ॥ ೪ ॥

ತಾಯಿಗಿಂತಲು ದೊಡ್ಡ ಹಿತವಂತರಿಲ್ಲ ।
ಶೀಯೊಳು ಸಕ್ಕರೆಗಿಂತ ಸವಿಯಿಲ್ಲ ॥ ೫ ॥

ದೀನರನ್ನು ಕಂಡು ನಗಬಾರದು.

ಕಂದ.

ಕುರುಡರ ಕುಂಟರ ಮೂಳರ ।
ಕರವಿಲ್ಲವರನ್ನು ಕಂಡು ನಗಬೇಡರಿನೀ ।
ವರಿಗೆ ಸಹಾಯನೂಡಿರಿ ।
ಅವರಿಂವಲೆನಿನುಗೆ ಪುಣ್ಯಬಪ್ಪದು ನಿಜದಿಂ ॥ ೧ ॥

॥ ಕಾವುದಾವೃತ್ತ ॥

ಮುತ್ತಿಗಿಂತಲೂ। ಹೊತ್ತು ಉತ್ತಮ ॥
ಮುತ್ತು ಹೋದರೆ । ಮತ್ತೆ ಬಪ್ಪುದು ॥
ಹೊತ್ತು ಹೋದರೆ । ಮತ್ತೆ ಬಾರದು ।
ಹೊತ್ತು ಗಳೆಯದೆ । ವಿದ್ಯೆ ಕಲಿಯಿರಿ ॥ ೧ ॥
ವಿದ್ಯೆದಿಂವಲೇ ಮಾನದೊರೆವುದು ।
ವಿದ್ಯೆದಿಂದಲೇ ದುಡ್ಡು ಸಿಗುವದು ।
ವಿದ್ಯೆದಿಂದಲೇ ಕೀರ್ತಿ ಬರುವದು ।
ವಿದ್ಯೆನೆಲ್ಲವೂ ಸುಖವನೀವುದು ॥ ೨ ॥

DEPARTMENTAL NOTICESS.

ನೋಟೀಸು.

ಪುಣಬರ್ಗಾನೆ ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬ ಬಿಜಾಪೂರ ದಕ್ಷಿಣಭಾಗ ಇವರ ಹುಕುಮಿನಮೇಲಿಂದ ವಿಜಾಪೂರ ಜಿಲ್ಲೆಯೊಳಗಿನ ಯಾವತ್ತು ಶಾಲೆಗಳ ಮಾಸ್ತರರಿಗೂ ವಿದ್ಯಾರ್ಥಿಗಳಿಗೂ ತಿಳಿಯಪಡಿಸುವದೇನಂದರೆ:—

ಮಿಡಲ್‌ಸ್ಕೂಲ ಸ್ಕಾಲರಶಿಪ್ಪು ಪಡೆದ ವಿದ್ಯಾರ್ಥಿಯು ಆಂ

ಗ್ಲೋಬ್ಸ್ವರನ್ಯಾಕ್ಯುಲರ ಶಾಲೆಯಲ್ಲಿಯೇ ಕಲಿಯತಕ್ಕದ್ದು ಹೀಗೇನೂ ಅವಶ್ಯಕತೆಯಿಲ್ಲ. ಇಂಥಾ ವಿದ್ಯಾರ್ಥಿಯು ಇಂಗ್ಲೀಷ ಕಲಿಯಲಿಕ್ಕೆ ಅಪೇಕ್ಷಿಸಿದ್ದರೆ ಅವನು ದೇಶ ಭಾಷೆಯ ಯೋಗ್ಯ ಶಾಲೆಯಲ್ಲಿಯೇ ನಿಂತು ಮೇಲಿನ ಮರ್ಯಾದೆಗಳನ್ನು ಕಲಿತರೂ ಚಿಂತೆಯಿಲ್ಲ. ಅವನಿಗೆ ಸ್ಕಾಲರಶಿಪ್ಪು ಸಲ್ಲುವದು. ತಾ॥ ೨೬ ಜಾನೆವಾರಿ ೧೮೯೪.

Babacharya Y. Kerur,
ಡಿ. ಇ. ಇನಸ್ಪೇಕ್ಟರ ವಿಜಾಪೂರ.

ನೋಟೀಸು.

ನಂಬರು ೪೯೧.

ಮೆಹಬ್ಬಾನ ಕ್ಯೂರೇಟರ ಗವರ್ನಮೆಂಟ ಸೆಂಟ್ರಲ್ ಬುಕ್‌ಡಿಪೋ ಮುಂಬಯಿ ಇವರಿಂದ ತಿಳಿಸಲ್ಪಡುವದೇನಂದರೆ:—

ತಾ॥ ೩೧ನೇ ಜ್ಯಾನುವರಿ ೧೮೯೪ನೇ ಇಸವಿಯ ವರೆಗೆ ಮುದ್ರಿಸಲ್ಪಟ್ಟ ಸೆಂಟ್ರಲ್‌ಬುಕ್ ಡಿಪೋದಲ್ಲಿ ಮಾರಾಟಕ್ಕಾಗಿ ಸಿದ್ಧವಾಗಿರುವ ಪುಸ್ತಕಗಳು ಯಾವವಂದರೆ:—

ಪುಸ್ತಕ.		ಬೆಲೆ.
ಕನ್ನಡ ಗ್ಯಾರಿಖುಟಿಯರ	...	ರೂ. ೪೯೯೦
ಮರಾಠಿ ಮುಂಬಯಿ ಇಲಾಖೆಯ ನಕಾಶ		ರೂ. ೩೯೪೦

ಮುಂಬಯಿ,
ತಾ॥ ೩೧ನೇ ಜಾನೆವರಿ ೧೮೯೪.

G. B. Nene,
ಕ್ಯೂರೇಟರ ಗವರ್ನಮೆಂಟ ಸೆಂಟ್ರಲ್ ಬುಕಡಿಪೋ ಮುಂಬಯಿ.

CORRESPONDENCE.

ಪತ್ರವ್ಯವಹಾರ.

ಇತ್ತಿತ್ತಲಾಗಿ ಮಾಸ್ತರ ಜನರ ಕಡೆಯಿಂದ ಉಪಯೋಗ

ವುಳ್ಳಂಥ ಪತ್ರವ್ಯವಹಾರಗಳು ಬರುವದಿಲ್ಲ. ಇವನ್ನು ನೋಡಿ ಮೂತ್ತರ ಜನರಿಗೆ ಉತ್ತೇಜನ ಬರಬೇಕೆಂಬ ಉದ್ದೇಶದಿಂದ ಮಿ. ಕದಡಿ ಇವರಿಂದ ಬಂದ ವಿಷಯವನ್ನು ಕೆಳಗೆ ಪ್ರಸಿದ್ಧಿಸಿರುತ್ತೇವೆ. ಇನ್ನುಮೇಲೆ ಶಿಕ್ಷಣಕ್ಕೂ ವಿದ್ಯಾರ್ಥಿಗಳ ಬುದ್ಧಿವಿಕಾಸಕ್ಕೂ ತಕ್ಕವುಗಳಾದ ವಿಷಯಗಳನ್ನು ಕುರಿತು ಲಕ್ಷ್ಯಪೂರ್ವಕವಾಗಿ ಬರದಂಥ ಲೇಖಗಳನ್ನು ಮೂಸ್ತರಜನರು ಕಳಿಸಿದರೆ ಕೈಲಾದಮಟ್ಟಿಗೆ ಅವುಗಳಿಗೆ ಸ್ಥಳ ಕೊಡುವೆವು.

ರಾವಸಾಹೇಬ ಶಾಲಾಪತ್ರಕರ್ತರ ಸನ್ನಿಧಿಗೆ.

ಸಾಷ್ಟಾಂಗನಮಸ್ಕಾರ ವಿನಂತಿ, ನಾನು ಮನೆಗೆಲಸಕ್ಕಾಗಿ ಹೋದಾಗ ಬಾದಾಮಿ, ಶಿವಯೋಗಕೂಟ, ಶ್ರೀ ಬನಶಂಕರೀ ಶ್ರೀಕಾಲ ಕಾಲೇಶ್ವರ (ಕಳಕಪ್ಪ) ಮುಂತಾದ ಮಹಾಸ್ಥಾನಂಗಳನ್ನು ನೋಡಿ, ಗದಗ ತಾಲೂಕ ಡಂಬಳಕ್ಕೆ ಅಪ್ಪರ ಭೆಟ್ಟಿಗಾಗಿ ಹೋಗಿದ್ದೆನು. ಅಲ್ಲಿಯು ಬಬ್ಬ ನನ್ನ ಸೆನ್ನಿತ್ರನ ಸಹಾಯದಿಂದ ಕೆಲವು ಶಿಲಾಲಿಪಿಗಳನ್ನು ನೋಡಿದೆನು. ಹೊತ್ತು ದೊರೆಯದ್ದರಿಂದ ಇದೊಂದನ್ನೇ ಸಂಗ್ರಹಿಸಿ ಪ್ರಸಿದ್ಧಿಸುವದಕ್ಕಾಗಿ ತಮ್ಮೆಡೆಗೆ ಕಳುಹಿದ್ದೇನೆ. ಇತಿಹಾಸಾಂಶವು ತೋರಿ ಬರುವ ಭಾಗವನ್ನಷ್ಟೇ ತಕ್ಕೊಂಡು ಲೇಖದ ಕಡೆಯಲ್ಲಿರುವ "ಗುರುಗಳ ಗುಣವರ್ಣನೆಯು" ೨ ಕಂದಗಳನ್ನೂ, ೧ ವಚನವನ್ನೂ ಬಿಟ್ಟಿದ್ದೇನೆ. ಯೋಗ್ಯ ಕಂಡಂತೆ ಮಾಡಬೇಕು.

ಶಿಲೆಯು—ಶ್ರೀವೀರಭದ್ರದೇವರ ಮೂರ್ತಿಯಿರುವ ಶಿಲೆಯ ಹಿಂಬದಿಗೇ ಲೇಖವದೇ ಅಂದರೆ, ಬಂದು ೭ ಗೇಣು ಉದ್ದ ೩॥ ಗೇಣು ಅಗಲು ಇರುವ ಕರೇಕಲ್ಲಿನ ಮುಂಬದಿಯಲ್ಲಿ ಮೂರ್ತಿಯನ್ನೂ ಹಿಂಬದಿಯಲ್ಲಿ ಲೇಖವನ್ನೂ ಕೊರೆ

ರು ಬೆವರಿನ ರೂಪದಿಂದ ಉಗೆಯಾಗಿ ಹೋಗುತ್ತದೆ. ಈ ಬೆವರು ಉಗೆಯಾಗುವ ಕಾಲಕ್ಕೆ ಉಷ್ಣತೆಯು ಬೆಚ್ಚಾಗುವದರಿಂದ ಶರೀರದ ಉಷ್ಣತೆಯು ಕಡಿಮೆಯಾಗುತ್ತದೆ. ಶ್ರಮದ ಕೆಲಸ ಮಾಡಿದಕೂಡಲೆ ತುಸು ಹೊತ್ತು ಉಣ್ಣೆಯ ಬಟ್ಟೆಗಳನ್ನು ಧರಿಸಿಕೊಂಡು ಲಕ್ಷ್ಯಕೊಟ್ಟು ನೋಡಿದರೆ ಈ ಮಾತಿನ ಅನುಭವವು ಸ್ಪಷ್ಟವಾಗಿ ಆಗುವದು. ಹ್ಯಾಗೆಂದರೆ, ಶರೀರದಿಂದ ಹೊರಡುವ ಉಗೆಯು ಅಲ್ಲಿಯೇ ಘಟ್ಟ್ಯಯಾಗಿ ನೀರಿನ ರೂಪವನ್ನು ಧರಿಸಿ ಉಣ್ಣೆಯ ವಸ್ತ್ರಕ್ಕೆ ಅಂಟಿಕೊಳ್ಳುವದು; ಮತ್ತು ಬೆವರಿನಬಾಷ್ಪಭವನವು ನಡೆದಾಗ ಬೆಚ್ಚಾಗುವ ಉಷ್ಣತೆಯು ಈ ವಸ್ತ್ರಗಳ ಮೂಲಕವಾಗಿ ಬಾಷ್ಪದ ಘನೀಭವನವಾಗುವದರಿಂದ ತಿರುಗಿ ದೊರೆಯುವದು. ಆದದ್ದರಿಂದ ಬೆವರುವಕ್ರಿಯೆ ನಡೆದಾಗ ಉಣ್ಣೆಯಾ ಬಟ್ಟೆಗಳನ್ನು ಹಾಕಿಕೊಂಡರೆ ಶಕೆಯಾಗುತ್ತದೆ. ಬಂದು ವೇಳೆ ನೂಲಿನ ಬಟ್ಟೆಗಳನ್ನು ಹಾಕಿಕೊಂಡರೆ, ಅವುಗಳೊಳಗಿಂದ ಉಗೆಯು ಹೊರಟುಹೋಗಿ ಥಂಡಿಯಾಗುವದು. ಫ್ಯೂರನೆಂಬ ವೈದ್ಯನು ಪಿಂಜಾಳಿಯಾದ ನೂಲಿನ ಬಟ್ಟೆಗಳಲ್ಲಿ ಸಹ ಉಣ್ಣೆಯ ಗುಣಗಳು ಇರುತ್ತವೆಂದು ಹೇಳುತ್ತಾನೆ.

(ಮುಂದೆ ಸಾಗುವದು)

ADDRESS TO COLLEGE STUDENTS ON THE EVE OF THE DIVALI VACATION BY Mr. SAVADI.

ದೀಪಾವಳಿಯ ಸೂಟಿಯ ಆರಂಭದಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಗೆ ರಾ. ರಾ. ಸವದಿಯವರು ಮಾಡಿದ ಉಪದೇಶವು.

(ಕಿಸೇ ಪ್ರಕಟನೆಯಿಂದ ಮುಂದೆ ಸಾಗಿದ್ದು.)

ಒಬ್ಬ ತಂದೆಗೆ ತನ್ನ ಒಬ್ಬ ಅಥವಾ ಇಬ್ಬರು ಮೂರು ಮಂದಿ ಮಕ್ಕಳ ಚಿಂತೆ ಇರುತ್ತದೆ. ಅವರೆ ಮಾಸ್ತರನ

ಶಾಲಾಕುಟುಂಬವು ಬಹು ದೊಡ್ಡದಾಗಿರುತ್ತದೆ. ಬಂದೊಂ
ದು ಶಾಲೆಯಲ್ಲಿರುವ ಹುಡುಗರೆಲ್ಲ ಆ ಶಾಲಾಗುರುವಿನ ಪುತ್ರ
ರೇ. ಸ್ವಲ್ಪ ಶಿಟ್ಟಿನ ಸ್ವಭಾವವುಳ್ಳ ತಂದೆ ಇದ್ದರೆ, ಮನೆ
ಯಲ್ಲಿರತಕ್ಕ ಶಾಂತತೆಯು ಹೊರಟುಹೋಗುತ್ತದೆ. ಆದ
ರೆ ಅಸಂಖ್ಯ ಮಕ್ಕಳ ತಂಟೆಯಾದ ಶಾಲಾಗುರುವಿನಲ್ಲಿ ಶಿಟ್ಟು
ಎಳ್ಳಷ್ಟು ಸಹ ಕೆಲಸದ್ದಲ್ಲ. ಆದರೆ "ಸ್ಪೇರ ದಿ ರಾಡ್ ಅಂಡ
ಸ್ಪಾಯಿಲ್ ದಿ ಚಾಯಿಲ್ಡ್" (ಅಂದರೆ ಚಿತ್ತವನ್ನು ಪರೀ
ಗಿಸದಿದ್ದರೆ ಹುಡುಗನು ಕೆಡುವನು.) ಎಂಬ ಗಾದೆಗನುಸರಿಸಿ
ಹುಡುಗರನ್ನು ಹಾದಿಗೆ ತರಲಿಕ್ಕೆ ಅವರನ್ನು ಶಿಕ್ಷಿಸದೆ
ಹೋದರೆ ಶಾಲೆಯಲ್ಲಿ ಸುವ್ಯವಸ್ಥೆಯು ಹ್ಯಾಗೆ ಉಂಟಾದೀ
ತು? ಗುರುವು ವಿದ್ಯಾರ್ಥಿಗಳನ್ನು ಎಷ್ಟು ಶಿಕ್ಷಿಸಿದರೂ ಎ
ಷ್ಟು ಹಳಿದರೂ ಅವನ ಮನಸ್ಸು ದ್ವೇಷರಹಿತವಾಗಿಯೂ
ಮಾತೃವಾತ್ಸಲ್ಯಕ್ಕೆ ಪದೃಸವಾಗಿಯೂ ಇರಬೇಕು. ಒಳ್ಳೇ
ತಾಯಿಯ ಲಕ್ಷ್ಯವು ದಡ್ಡ ಹುಡುಗನ ಕಡೆಗೆ ವಿಶೇಷವಾಗಿರು
ವಂತೆ ಗುರುವಿನ ಲಕ್ಷ್ಯವಾದರೂ ಮಂದಬುದ್ಧಿಯ ಹುಡುಗ
ನ ಕಡೆಗೆ ವಿಶೇಷವಾಗಿರಬೇಕು. ದಡ್ಡ ಹುಡುಗನು ತನಗೆ
ತಿಳಿಯದ್ದಕ್ಕಾಗಿ ಬಂದೇ ಲೆಕ್ಕವನ್ನಾಗಲಿ, ವಿಷಯವನ್ನಾಗ
ಲಿ, ಅನೇಕಾವರ್ತಿ ಗುರುವಿಗೆ ಕೇಳಿದರೂ, ಅವನಿಗೆ ಶಿಟ್ಟು
ಮಾಡಬಾರದಿಷ್ಟೇ ಅಲ್ಲ, ಆದರೆ ಅವನು ಅನ್ನತಕ್ಕದ್ದೇ
ನೆಂದರೆ:—"ಅಯ್ಯೋ ನಾನು ಎಷ್ಟಾವರ್ತಿ ಇವನಿಗೆ ತಿಳಿ
ಯಹೇಳಿದರೂ ಈ ವಿಷಯವು ಇವನಿಗೆ ತಿಳಿಯಲೊಲ್ಲದಲ್ಲ? ಇ
ನ್ನು ಏನು ಮಾಡಲಿ? ಯಾವ ಹೊಸ ಮಾರ್ಗದಿಂದ ಇ
ವನಿಗೆ ತಿಳಿಸಲಿ ಎಂದು ಮನಸ್ಸಿನಲ್ಲಿ ಮರುಗಬೇಕಲ್ಲದೆ,
ಹುಡುಗನು ಮೇಜಿನ ಸಮೀಪಕ್ಕೆ ಬಂದಕೂಡಲೆ, ದವಡೆ
ಯನ್ನು ಕಚ್ಚಿ, ಕಣ್ಣುಗಳನ್ನು ಕೆಂಪಗೆ ಮಾಡಿ, ಮೂಗಿ

ನ ಹೊಳ್ಳಿಗಳನ್ನು ಉಬ್ಬಿಸಿ, ನಿಟ್ಟುಸುರನ್ನು ಬಿಡುತ್ತ ಶ್ರೀ ನರಸಿಂಹನು ಹಿರಣ್ಯಕಶ್ಯಪನ ಹೊಟ್ಟೆ ಬಗೆಯುವಾಗ ಆ ಭರ್ಟಿಸಿದಂತೆ ಘಟ್ಟಯಾಗಿ ಜೀರಿ "ಏನು ಮೂರ್ಖಾ, ನೀ ನೊಂದು ಕಲ್ಲಾಗಿ ಹುಟ್ಟಬಾರದಿತ್ತೋ? ನೀನು ಶುದ್ಧ ಪಶು, ನಿನಗೆ ಎಷ್ಟು ಹೇಳಿದರೂ ತಿಳಿಯುವದಿಲ್ಲ. ನಾನೇನು ಮಾಡಲಿ, ನಿನ್ನ ದೈವ" ಎಂದು ಹುಡುಗನನ್ನು ಪೆದರಿಸಿ ಹಿಂದಕ್ಕಟ್ಟಿನರೆ, ಆ ರಾಕ್ಷಸನಂಥ ಗುರುವಿನ ಎದುರಿಗೆ ಯಾರೂ ಹೋಗುವದಿಲ್ಲ. ಹೀಗಾಯಿತೆಂದರೆ ಶಿಕ್ಷಣದ ಹೆಸರೀಲಿ ದೊಡ್ಡ ಪೂಜೆ. ವಿದ್ಯಾರ್ಥಿಯರ ಸಾಮರ್ಥ್ಯವನ್ನರಿತು ವಿದ್ಯಾದಾನ ಮಾಡಬಲ್ಲವರೇ ಸದ್ಗುರುಗಳು. ಯಾಕೆಂದರೆ—

"ನಕ್ತಂ ರೇವಹಿತಜಾಡ್ಯಂ ಕೋ ನೀತಾಯುತ್ಪನಬುದ್ಧ್ಯತೆ"

ಕೇಳುವನನಿಗೆ ತಿಳಿಯದೇಹೋದರೆ ಹೇಳುವವನಲ್ಲಿಯೇ ದೋಷವಿರುತ್ತದೆ" ಎಂದು ಈ ಸಂಸ್ಕೃತ ವಾಕ್ಯದ ಅರ್ಥವು. ಎಮ್. ಏ. ಎಂಬ ದೊಡ್ಡ ಪವಿಧರನಾದವನೊಬ್ಬನು ಬಿನ್ನಇಯತ್ತಿಯ ವರ್ಗಕ್ಕೆ ಕಲಿಸತಕ್ಕದ್ದಾದರೆ ಅವನು ಆ ಹುಡುಗರಲ್ಲಿ ತಾನೊಬ್ಬನೆಂತಲೂ, ಅವರಿಗುಂಟಾಗುವ ತೊಡರು ಅಜ್ಞಾನಗಳು ತನ್ನಲ್ಲಿ ಉಂಟೆಂತಲೂ ತಿಳಿದು ತಕ್ಕ ಉಪಾಯಗಳೊಂದಿಗೆ ಅವರಿಗೆ ಕಲಿಸಬೇಕಲ್ಲದೆ, ಮೂರು ವರ್ಷದ ಬಾಲಕನಿಗೆ ಮೂವತ್ತು ವರ್ಷದವನ ಕೂಡ ಓದ ಲಿಕ್ಕೆ ಹೇಳಿದಂತೆ ಮಾಡಿದರೆ ಯಾವ ಕೆಲಸವೂ ಸರಿಯಾಗಿ ಆಗುವದಿಲ್ಲ. ನಾವು ಅಟ್ಟದಮೇಲೆ ಏರಬೇಕಾದರೆ ಒಂದೊಂದೇ ಪಾವಟಿಗೆಯನ್ನು ಏರುತ್ತಹೋದರೆ ಮಾತ್ರ ಮೇಲಂತಸ್ತಕ್ಕೆ ಹೋಗಿ ಮುಟ್ಟುವೆವು. ಅದರೆ ಹಾಗೆ ಮಾಡದೆ ಗರುಡನಂತೆ ಬಂದೇ ಹಾರಿಕೆಗೆ ಅಟ್ಟವನ್ನು ಕಾಣಬೇಕಾದರೆ ಕಾಲು ಮುರಿದುಕೊಳ್ಳುವೆವಲ್ಲದೆ ಜೀರೆ ಏನೂ ಪ್ರಾಪ್ತಿಯಾ

ಗುವದಿಲ್ಲ. ಇದರಂತೆಯೇ ಬಾಲಕರ ಬುದ್ಧಿಯು ಆಳತೆಯನ್ನನುಸರಿಸಿ ಅವರಿಗೆ ವಿದ್ಯಾದಾನವನ್ನು ಮಾಡತಕ್ಕದ್ದು. "ದಿ ಆಯ್ ಈಜ ದಿ ಬೆಸ್ಟ ಎಜ್ಯುಕೇಟರ," The eye is the best educator ಎಂದು ಹೂಣಭಾಷೆಯಲ್ಲಿ ಒಂದು ನಾಡಿಕೆಯಾದ ವಾಕ್ಯವುಂಟು. ಅದರ ಅರ್ಥವೇನೆಂದರೆ,—ವಿದ್ಯಾರ್ಜನೆಯ ಕೆಲಸದಲ್ಲಿ ಕಣ್ಣು ಮಹತ್ತ್ವಸಾಧನವಾಗಿರುವದು. "ಸರ್ವೇಷುಗಾತ್ರೇಷುಶಿರಃಪ್ರಧಾನಂ, ಸರ್ವೇಂದ್ರಿಯಾಣಾಂನಯನಂಪ್ರಧಾನಂ" ಎಂಬ ಸಂಸ್ಕೃತಭಾಷೆಯ ವಾಕ್ಯವಾದರೂ ಕಣ್ಣಿಗೆ ಪ್ರಾಧಾನ್ಯವನ್ನು ಕೊಡುತ್ತದೆ. ಕಣ್ಣಿನಿಂದ ಆಗುವ ಜ್ಞಾನಕ್ಕೆ ಮಿಗಿಲಾದ ಜ್ಞಾನವೇ ಇಲ್ಲೆಂದರೂ ಸಲ್ಲುವದು. ಕಾರಣ ವಿದ್ಯಾಗುರುವು ತನ್ನ ವಿದ್ಯಾರ್ಥಿಗಳ ಕಣ್ಣೆದುರಿಗೆ ಅದಪ್ಪ ಪದಾರ್ಥಗಳನ್ನಿಡಬೇಕು; ಪ್ರಯೋಗಗಳನ್ನು ಮಾಡಿ ತೋರಿಸಬೇಕು; ಕರಿಯು ಹಲಿಗೆಯು ಉಪಯೋಗವನ್ನು ತಿರುತಿರುಗಿ ಮಾಡಬೇಕು. ಕಣ್ಣಿನ ಮಾರ್ಗವಾಗಿ ಮನಸ್ಸಿನಲ್ಲಿ ಶೇರಿದ ಜ್ಞಾನವು ಮರತೇನೆಂದರೂ ಮರೆಯುವಂಥಾದ್ದಲ್ಲ. ಆದಕಾರಣ ಯಾವದೊಂದು ವಿಷಯಕ್ಕೆ ಆರಂಭ ಮಾಡುವ ಮೊದಲು, ಗುರುವು ಅದಕ್ಕೆ ಬೇಕಾಗುವ ಉಪಕರಣಗಳನ್ನು ಸಿದ್ಧಮಾಡಿಕೊಂಡು ಗೊತ್ತಿದ್ದದ್ದನ್ನು ಬಾಲಕರಿಗೆ ಕೇಳುತ್ತಾ ಗೊತ್ತಿಲ್ಲದ್ದನ್ನೂ ತಿಳಿಯದ್ದನ್ನೂ ಹೇಳುತ್ತಾ ಸಾಗಬೇಕು. ಪ್ರತ್ಯಕ್ಷಪದಾರ್ಥಗಳನ್ನು ತೆಗೆದುಕೊಂಡೇ ಆಯಾ ಪಾಠಗಳನ್ನು ಕಲಿಸಬೇಕು. ಪ್ರಾಣಿಗಳ ಸಂಬಂಧದ ಪಾಠವನ್ನು ಹೇಳತಕ್ಕದ್ದಿದ್ದರೆ, ಆ ಪ್ರಾಣಿಗಳು ಊರಲ್ಲಿ ಇದ್ದರೆ, ಅವುಗಳನ್ನು ತೋರಿಸಬೇಕು, ಇಲ್ಲದಿದ್ದರೆ ಅವುಗಳ ಉತ್ತಮ ಚಿತ್ರಗಳನ್ನು ತೋರಿಸಬೇಕು; ಇಲ್ಲವೆ ಗುರುವು ಚಿತ್ರಕಲಾ

ನಿಪುಣನಿದ್ದರೆ, ಆ ಪ್ರಾಣಿಗಳ ಚಿತ್ರಗಳನ್ನು ಕರಿಯ ಹಲಿಗೆಯಮೇಲೆ ತಾನೇ ತೆಗೆಯಬೇಕು. ಇತಿಹಾಸದ ಕಣ್ಣು ನಕಾಶೆ, ಭಾಷೆಯ ಕಣ್ಣು ವ್ಯಾಕರಣ, ಎಂದು ವಿದ್ವಾಂಸರು ಹೇಳುತ್ತಾರೆ. ನಕಾಶವಿಲ್ಲದೆ ಇತಿಹಾಸವನ್ನು ಕಲಿಸುವ ಗುರುವು ಜಾಣನೆಲ್ಲೆಂದು ಹೇಳಬಹುದು. ಹತ್ತು ಆವರ್ತಿ ಕಿವಿಯಿಂದ ಕೇಳಿದ್ದು ಸಹ ಬಂದಾವರ್ತಿ ನಕಾಶೆಯಲ್ಲಿ ನೋಡಿದ್ದಕ್ಕೆ ಸರಿಯಾಗಿರುವದಿಲ್ಲ. ಭೂಮಿಯ ಆಕಾರವನ್ನು ಕಲಿಸುವಾಗ ಕಿತ್ತಳೆಯ ಹಣ್ಣನ್ನಾಗಲಿ ಕೃತ್ರಿಮ ಕಿತ್ತಳೆಯ ಹಣ್ಣನ್ನಾಗಲಿ, ನಿಂಬೆಯ ಹಣ್ಣನ್ನಾಗಲಿ ತೆಗೆದುಕೊಂಡು, ಅದರ ಮಧ್ಯದಲ್ಲಿ ಡಬ್ಬಣವನ್ನು ಚುಚ್ಚಿ ರಾತ್ರಿಯಕಾಲಕ್ಕೆ ಅದನ್ನು ದೀಪದ ಎದುರಿನಲ್ಲಿ ಹಿಡಿದು ಕಲಿಸುವ ಮಾಸ್ತರನ ಕೆಲಸವು ಎಷ್ಟು ಜಯಪ್ರದವಾಗುವದೋ ಅದರ ಸಹಸ್ರಾಂಶ ಕೆಲಸವು ಬರಿಗೈ ಗುರುವಿನಿಂದ ಆಗದು. ಪದಾರ್ಥವಿಜ್ಞಾನಕ್ಕಂತು ಪದಾರ್ಥಗಳು ಬೇಕೆಂದು ಹೇಳಲವಶ್ಯವಿಲ್ಲ. ಪದಾರ್ಥಗಳ ಸಂಯೋಗ ವಿಯೋಗಗಳಿಂದ ಆಗುವ ಅದ್ಭುತ ಚಮತ್ಕಾರಗಳನ್ನು ಪ್ರಯೋಗ ಮಾಡಿ ತಿಳಿಸಿದರೆ ಆ ವಿಷಯಜ್ಞಾನವು ಆಮರಣ ಸ್ಥಿರವಾಗಿ ನಿಲ್ಲುವದು. ಜಾಣನಾದ ಮಾಸ್ತರನಿಗೆ ವಿಲಾಯತಿಯಿಂದ ತರಿಸಿದ ಉಪಕರಣಗಳೇ ಬೇಕಾಗುವದಿಲ್ಲ. ಕೇವಲ ಪಳ್ಳಿಗಾಡಿನಲ್ಲಿ ದೊರೆಯುವ ಸಾಧನಗಳಿಂದ ವಿದ್ಯುಲ್ಲತೆಯಂಥ ವಿಷಯದ ಜ್ಞಾನವನ್ನು ಅವನು ತನ್ನ ವಿದ್ಯಾರ್ಥಿಗಳಿಗೆ ಮಾಡಿಕೊಡುವನು. ಸಾರಾಂಶ, ವಿದ್ಯಾರ್ಥಿಗಳ ಕಣ್ಣಿನ ಉಪಯೋಗವನ್ನು ಮಾಡಿಕೊಂಬುವ ಗುರುವಿನಿಂದ ವಿದ್ಯಾರ್ಥಿಗಳಲ್ಲಿ ಬೇಸರ ಹುಟ್ಟದೆ ವಿದ್ಯಾದಾನದ ಕೆಲಸವು ಸೀರುಕ್ಕುಡಿವಂತೆ ಅನಾಯಾಸವಾಗಿಯೂ ಜಯಪ್ರದವಾಗಿಯೂ

ಸಾಗುವದು. ವಿದ್ಯಾರ್ಥಿಗಳಲ್ಲಿರುವ ಸ್ಮರಣಶಕ್ತಿಯ ಉಪಯೋಗವನ್ನು ಮಾಡಿಕೊಳ್ಳುವದರಲ್ಲಿ ಗುರುವು ಜಾಗ್ರತನಾಗಿರಬೇಕು. ಆದರೆ ವಿಚಾರಶಕ್ತಿಯನ್ನು ಮುಂದಿಟ್ಟು ಬರೆ ಸ್ಮರಣಶಕ್ತಿಯನ್ನು ಮಾತ್ರಬೆಳೆಸಬಾರದು. ಯಾಕೆಂದರೆ ತಿಳಿಯದೆ ಇರುವ ವಿಷಯವು ಪಾಠ ಬಂದರೂ ಅದರಿಂದೇನೂ ಲಾಭವಾಗುವದಿಲ್ಲ. "ಗಿಳಿ ಪಿದು" ಎಂಬದರ ಅರ್ಥವಾದರೂ ಇದೇ ಇರುತ್ತದೆ. ವಿಠ್ಠಲ ವಿಠ್ಠಲ ಎನ್ನುವ ಗಿಳಿಗೆ ದೇವರ ನಾಮಸ್ಮರಣೆಯ ಮಹಾತ್ಮ್ಯವು ಗೊತ್ತಿರುವ ಪಕ್ಷೀ ಬೆಕ್ಕು ಬಂತು, ಬೆಕ್ಕು ಬಂತು, ಎನ್ನುವದರಿಂದ ಅಷ್ಟೇ ಅಂಜಿಕೆಯಾದರೂ ಅದಕ್ಕೆ ಉಂಟಾಗುವದು. ಆದದರಿಂದ ಪಾಠ ಮಾಡಿಸುವ ವಿಷಯಗಳ ಜ್ಞಾನವನ್ನು ಮೊದಲು ಮಾಡಿಕೊಟ್ಟು, ಆ ಜ್ಞಾನವು ಅವರಲ್ಲಿ ನೆಲೆಗೊಂಡ ಮೇಲೆಯೇ ಅದನ್ನು ಪಾಠ ಮಾಡಲಿಕ್ಕೆ ಕೊಡಬೇಕು. ವಯಸ್ಸಿಗೂ ಸ್ಮರಣಶಕ್ತಿಗೂ ಯಾವಾಗಲೂ ವ್ಯಸ್ತಪ್ರಮಾಣವಿರುವದರಿಂದ ಚಿಕ್ಕ ವಯಸ್ಸಿನಲ್ಲಿಯೇ ಅದರ ಉಪಯೋಗವನ್ನು ಮಾಡಿಕೊಳ್ಳಬೇಕು. ಕಂಡದ್ದನ್ನು ಪಾಠ ಮಾಡಿಸದೆ, ಹುಡುಗರ ನೀತಿ, ವಿಚಾರ, ಕಲ್ಪನೆಗಳನ್ನು ಸುಮಾರ್ಗಕ್ಕೆಳಸುವ ಗದ್ಯಪದ್ಯಗಳನ್ನೇ ಪಾಠ ಮಾಡಿಸಬೇಕು. ಪ್ರತಿಯೊಂದು ವಿಷಯದ ವ್ಯಾಖ್ಯೆಗಳನ್ನು ಪಾಠ ಮಾಡಲಿಕ್ಕೆ ಕೊಡುವ ಮೊದಲು, ಅವುಗಳನ್ನು ಚನ್ನಾಗಿ ತಿಳಿಸಿಹೇಳಬೇಕು. ಈ ಪ್ರಕಾರ ಮಾಡಿದರೆ ಹುಡುಗರ ವಿದ್ಯೆಯು 'ಗಿಳಿ ಪಿದು' ಆಗದೆ ಅದು ನಿಜವಾದದ್ದೂ ಉಪಯುಕ್ತವಾದದ್ದೂ ಆಗುವದು.

(ಮುಂದೆ ಸಾಗುವದು)

ದಿದ್ದಾರೆ. ಪ್ರತಿಯೊಂದು ಸಾಲಿನಲ್ಲಿ ೫೬ ಅಕ್ಷರಗಳುಳ್ಳ ೫೬ ಸಾಲುಗಳಿವೆ. ಲೇಖದ ಶಿರೋಭಾಗದಲ್ಲಿ ನಂದಿ, ಈಶ್ವರ ಆ ಕಳ, ಕರ, ಗೊಂಬೆ ಇತ್ಯಾದಿ ಚಿತ್ರಗಳಿವೆ. ಕೆಲವೆಡೆಯಲ್ಲಿ ಸೃಷ್ಟಿಕಾರ್ಯಗಳಿಂದಲೂ ಮನುಷ್ಯಕೃತಿಗಳಿಂದಲೂ, ಅಕ್ಷರಗಳಿಗೆ ಭಂಗ ಬಂದಿವೆ. ಮತ್ತು ಮೂರ್ತಿಯನ್ನು ನೆಲದಲ್ಲಿ ಹೂಳಿದ್ದರಿಂದ ಕೆಳಗಿನ ನಾಲ್ಕು ಸಾಲುಗಳು ಅವ್ಯವ್ಯವಾಗಿವೆ.

ಲೇಖನವು.

॥ ಶ್ರೀನಮೆಸ್ತುಂಗ ಶಿರಶ್ಚುಂಬಿ ಚಂದ್ರ ಜಾಮರ ಜಾರಪೀ ।
॥ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಕಂಭವೇ।
ಶ್ರೀಸ್ವಸ್ತಿ ಸಮಸ್ತಭುವನಾಶ್ರಯಂ, ಶ್ರೀಪೃಥ್ವೀವಲ್ಲಭಂ, ಮಹಾರಾಜಾಧಿರಾಜಂ, ಪರಮೇಶ್ವರಂ, ಪರಮಭಟ್ಟಾರಕಂ ಸತ್ಯಾಶ್ರಯಕುಲತಿಲಕಂ, ಚಾಲುಕ್ಯಾಭರಣಂ, ಶ್ರೀಮತ್ರಿಭುವನ ಮಲ್ಲದೇವರವಿಜಯಂ, ಉತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಂ, ಆಚಂದ್ರಾರ್ಕತಾರಾಂಬರಂ, ಸಲುತ್ತಮಿರೆ ॥ ವೃತ್ತ ॥ ಶ್ರೀಮತ್ಕುಂತಲ ಭೂಮಿಕಾಮಿನಿಯ ವಕ್ತ್ರಾಬ್ಜ ರ್ಕಮಂಪೋಲ್ತುಸೆ । ಧ್ವಾಮಂ ಪೋಳ್ತೆಸೆ ಮೂಸವಾಡಿ ಯೆಸೆ ಗುಂ ನಾಡಂತದಂಕಾಮಿನೀ ॥ ಕಾಮಂಭೂಪಲಲಾಮನುಗ್ರರಿಪ್ರಭೋಮಂ ಶಿಷ್ಟಕೋಷ್ಟಿಕೃತ । ಶ್ರೀಮಂಪಾಲಿಸು ತಿರ್ಪನಲ್ತಿನೆಯದಿಂ ಶ್ರೀಪೇರ್ಮಭೂಪಾಲಕಂ ಆತನಪಾಕ್ಯಮದೆಂತೆನೆ. ॥ ವೃತ್ತ ॥ ಬಳವದರಾಯರಂ ಪಿಡಿಪ್ರದೇನವಭೋದ್ಯನೆ ಪೇರ್ಮೆಭೂಭುಜಂ । ಮುಳಿದೊಡದೇನನೆಲೇಬೆನೆಕಾಹಸಮುಂ ಕುಲಪರ್ವತಂಗಳಂ ॥ ಕಳಕಾಳಮಾಗಿ ಪೊಯ್ಯನೆವಿಘಾಗಜಮಂ ಪಿಡಿದೊತ್ತಿದಂತಮಂ । ಕೆಳನಸವುದ್ರಮಂ ಕವಡಿ ಕರ್ವಮಮಂ ನರೆಮಾಡಿತೋರನೆ ॥ ೧ ॥ ವೃತ್ತ ॥ ಕೆಡೆವ ಹಯಂಗಳಂ ಮುಸಲ ಘಾತದಿನಗ್ಗಿದ ಸಿ

ನ್ನಿತಂಗಳಂ । ದೊಡಿದ ರಥಗಳಿಂ ಮೆಡಿದಕಾಲದಿಂನ ++
++++ ॥ ದಡಗಿನರಾಶಿಯುಂ ಪರಿವನೆತ್ತರ ಪಳ್ಳದಿ ನೋಡೆ
ನೋರ್ಪಡಂ । ಕಡುಮರಿದಾಯ್ತು ಪೇರ್ಮನೃಪನಾಂತಿರಿ
ದುಗ್ಗಮಹಾ ಹವಾಂಗಣಂ ॥ ೨ ॥ ಕಂದ ॥ ಇದುಮೂಳವ
ನಟ್ಟಿದರೇ । ಸಿದು ಚೋಳಕನಪ್ಪಿದಶ್ವಮಿಂತಿದು ಪಾ
ಟಾ ॥ ಳದನೃಪನಟ್ಟಿದ ಗಜವೆಂ । ಬುದು ಪೋಷಣ ಪೇ
ರ್ಮನೃಪನರಾಜಾಲಯದೊಳ್ ॥ ೧ ॥

॥ ವಚನ ॥ ಆತನ ಪರೀಕ್ಷೆಮಾಗಿರ್ದ ಮೆಸವಾಡಿ ನಾಡಿಗೆ
ಪಟ್ಟಮೋ ಇಟ್ಟ ಬೊಟ್ಟು ವೊಳಪಟ್ಟ ಕಳಸವೋಮಿ
ರ್ದಂತೆ ಧರ್ಮಪ್ಪೊಳಲೆಂಬಂತಿಪ ಪಟ್ಟಣಂ ವಿರಾಜಿಸುತಿ
ಪ್ಪುದವರ ಮಹಿಮೆಯುಂ ಪೇಳ್ದುದೆ.

॥ ವೃತ್ತ ॥ ಸರಸಿಜಷಂಡದಿಂ ಬಳೆದ ನಂದನದಿಂ ನವಗೇ
ಧಶಾಲಿಯಿಂ । ಪರಿತರುತಿರ್ಪನೀರ್ಗುರದಿನಾಡುವ ಹಂಸ
ಗಳಿಂ ವಿಲಾಸದಿಂ ॥ ಸುರಜಿರಮಾರ್ಗಕಡರ್ವನವಿಳ್ಸಿನೋ
ಹುವ ರಾಜಕೀರದಿಂ । ಕರಮರೆ ಮನೋಪರಂ ಪೊರವೊ
ಳಲು ಪರಿಭಾವಿಸೆ ತತ್ಪದವ್ಯವ ॥ ೧ ॥ ಕಂದ ॥ ಮನುವಂ
ತುರೆಯಿಸುವುತ್ತಂ । ಮುನಿನಾಥದಿನಾಭಿಜಾತ್ಯದಿಂ ಕವಿಳ
ವನಂ ॥ ನೆನೆಯಿಸುವಧರಾಮರದಿಂ । ದನವರತಂ ಧರ್ಮ
ಪ್ಪೊಳಲವೇಂ ವಿರಾಜಿಸಿತೋ ॥ ೧ ॥ ವಚನಂ ॥ ಇಂತು
ಸೊಗಯಿಸುವ ಧರ್ಮಪ್ಪೊಳಲ ಮಹಾಪ್ರಭುಗಳಪ್ಪ ಪದಿ
ನರುವರ ಮಹಿಮೆಯುಂ ಪೇಳ್ದುಡೆ ॥ ಕಂದ ॥ ಪರಚಕ್ರಣ ಕ
ನಲಸೇವನ । ಧರೆವನವನ ಪಾವಳಕಾರ್ಕರಂ ಭಾವಿತರೀ ॥
ಧರೆಯೊಳಿವರೆಂದು ಪದಿನರು । ವರನಂತಿ ಮುಖದಿಂದೆ ಬುಧಜ
ನಂ ಬಣ್ಣಿಸುಗುಂ ॥ ೧ ॥ ವಚನ—ಅವರೀಪರೀಕ್ಷೆಮಾ
ಗಿ ಸಳಿಶೋಭಿಗಂ ತಾನೆ ಜನ್ಮವನಪುಸಿ ಕರ್ನಾಟ

ಭೂಮಿ ಭಾಮಿನಿ ಮಧ್ಯದೇಶಕ್ಕೆ ವಿಶದ ಮೌಕ್ತಿಕಮೆನಿಸೆ
ಹರಿಹರದಂತಿರ್ದ ಧರ್ಮಪ್ರೊಳಲ್ಗೋಳ್ ॥ ಕಂದ ॥ ವಿನ
ಯವಿಕಣಿಯೋಗಿನಿಕೇ। ತನವಿಷ್ಟವಿಶಿಷ್ಟಕೋಟಿ ಕಲ್ಪಮು
ಹೀದಂ ॥ ಮನುಚಾರಿತ್ರಂ ಸಜ್ಜನ। ವಿನುತಂಬರಸೆ ನೆನೆದ
ನಪಗತಮರಿತಂ ॥ ೧ ॥ ಅತನ ಕುಳವಧು ಭುವನ।
ಖ್ಯಾತೆಸಮುನೇಪ್ಯೆ ಪೊಸ್ತವ ಜನದನಸಂ ॥ ಭೂತೆನಿಜ
ಗೋತ್ರಪೂತೆವು। ಹೀತಳದೊಳ್ ಬಾಜಿಕರ್ಬಿಯಂಬಳ್
ಪೆಸರಿಂ ॥ ವಚನ— ಅವರೀರ್ವರೀಗ ನಂದನನ ವಿತಥಯಿ
ಕನಮೆಳವಿಬುಧ ಜನಸುರತರು ಬಾಂಧವ ಕಾಮುದ ××
ಜನಿಬಾಂಧವನಜ್ಜಯನಾಯಕಂ ಸಮುದಯಿಸಿದಂ ॥ ಆ
ತನಮಹಿಮೆಯಂಪೇಳ್ದಪೆಂ ॥ ಪರಗರ್ವಪಕಾರಂಗೈದುದೇ
ವರಸೀಳಸತ್ಯವಚನವ. ನಿಲಪುದನಿಭರದಿಂ ಬಗೆಗಡಿದಂಸು
ರುಚಿರಪ್ರೊಜ್ಜಯನಾಯಕಂ ಮಹಾತ್ಮನೋಜಗದೊಳ್॥
ತ್ರಿನಯನಪದಪಂಕಜಂ ಕನಸಿನೊಳಂಕಣ್ದೆರನವನಿಷ್ಟಭ
ರದಿಂದಿನಮಃಶಿವಾಯ ಮಂತ್ರಮನೆಲಾದೊರೆಯಜ್ಜನೈ
ಯ್ಯನೋಳ್ ಶಿವಭಕ್ತರ್ ॥ ಆಂತುಪೊಗಳ್ದಂಗನಗರ್ಕಗಂ
ತಾನೆಜನ್ಮಭೂಮಿಯಾಗಿರ್ಮ ತನ್ನಪಾವರ್ತಿಯನನ್ವರ್ಥ
ಮುಂಮಾಡಲುಂ ನಿಜಭುಜಪ್ರಭದಿಂ ನ್ಯಾಯೋಪಾರ್ಜಿತ
ವಿತ್ತಮುಂಪವಿತ್ರಮುಂಮಾಡಲಂದು ಧರ್ಮಪ್ರೊಳಲ್ಗಿಣ್ಯ
ದಿಕ್ಕಾಭಾಗದೊಳ್ ಶಿವಭವನಮುಂಮಾಡಿದನು ಅಂದೆಂತಪ್ಪು
ದೆಂದಡೆ ॥ ಕಂದ ॥ ಕುಳಪರ್ವತಮಂತಂದವೆ। ನಳಿಗೆವ
ರೆಕಡಿನುಪಡಿಪರೆನಿಸಯುಮಂತಾ ॥ ಪೊಳಲಂಚೆಕಳಚಂತಿ
ರೆ। ವಿಳಸಪುಮಂತಾಳ್ದತಜ್ಜಪೋಶ್ವರಭವನಂ ॥ ೧ ॥ ಆದೇ
ವದೇವೊತ್ತಮುಂಗೆ ॥ ಸ್ವಸ್ತಿಶ್ರೀಮಚ್ಚಾಲುಕ್ಯವಿಕ್ರಮವ
ರುಷನ ಕೀರ್ತಿಯು ಕೊಂಧಿಸಂವತ್ಸರದ ಮಾಘದ ಪೌರ್ಣ

ಮಿ ಸೋಮವಾರ ಉತ್ತರಾಯಣ ಸಂಕ್ರಾಂತಿವ್ಯತೀಪಾತ ಮುದುಶ್ರೀಮದ್ಧರ್ಮವೊಳಲ ಪದಿನಾರುವರ್ಪಟ್ಟಣಗ್ರ ಮಹಾನಗರಂಗಳಗಂಪಾವ ಪ್ರಾಜಾ ಬಿಂಕೂಟ್ಟುಕೊಂಡಮೂಡ ಪೊನ್ನೆಕುರುವವಲ್ಲುಂತೋರಂಮೋತಿರೆಂದು ಮುದಾಮಂಡಳೇಶ್ವರಪರ್ಮಾಡಿಯರಸ ಮೂಡಲಹಾಳ ಹೋದಲ್ಲಿಬೆಟ್ಟ ಇರ್ಪತ್ತುನುತಕೆರೆಯುಮಂ ॥

ಮುಂದೆ ಅಲ್ಲಿರುವ ಪಂಡಿತ ದೇವಸಂಬ ಗುರುವಿನ ಮತ್ತು ಅವರ ಶಿಷ್ಯರ ಗುಣವರ್ಣನೆಯುಂಟು.

ವಿಚಾರಂ.

ಈ ದೇಶಕ್ಕೆ ಕುಂತಳವೆಂದು ಹೆಬ್ಬಳ್ಳಪ್ರಾಂತಕ್ಕೆ ಮಾನವಾಡಿ ನಾಡೆಂದೂ ಹೆಸರಿದ್ದವೆಂದು ತಿಳಿಯುತ್ತದೆ. ಧರ್ಮಪೊಳಲ್=ಧರ್ಮವೊಳಲ್ = ದನ್ಮೊಳಲ್ = ಡೊಂಬೊಳಲ್ = ಡೊಂಬಳ್=ತಂಬಳೆ. ಈವೋರೆಗೆ ಅಪಭ್ರಂಶವಾಗಿರಬಹುದು. ಅಲ್ಲಿ ಈ ಲೇಖದಂತೆ ನೋಡಲು ಅಚ್ಚಕರೇಕಲ್ಲಿಂದ ಕಟ್ಟಿವ ಹಳೆ ಶಿವಭವನವಾದರೂ ಅದೆ. ಅಲ್ಲದೆ ಆ ವೂರ ಕೆರೆಯು ಇತಿಹಾಸದಿಂದ ನೋಡಿದರೂ, ಈ ಗ್ರಾಮವು ಪ್ರಾಚೀನಕಾಲದಲ್ಲಿ ಹೆಸರುಹೊಂದಿದ್ದಿರಬಹುದೆಂದು ತೋರುವದು. ಆ ವೂರ ಚಾವಡಿಯ ಮುಂದೆಯೂ ಬಂದು ಲಿಪಿ ಇದ್ದು ಅದು ಜೈನಧರ್ಮದವರದೆಂದು ಅದರಲ್ಲಿರುವ "ಜಿನೇಶ್ವರ" ಎಂಬ ಶಬ್ದದಿಂದ ತಿಳಿಯುವದು. ಉಳಿದ ಸ್ಥಳ ವರ್ಣನೆಗಳನ್ನಾದರೂ ಕೂಡಿದಂತೆ ಬರಿಮೆ ತಿಳಿಸಬೇಕೆಂದಿವೆ. ಲೋಭವಿರಲಿ. ಇಂತೀವಿನೇತಿ.

ಹೆಬ್ಬಸೂರ ಕನ್ನಡಶಾಲೆ.
ತಾ|೧೦-೨-೧೪ ಇಸವಿ. } ಬಾ. ರಂ. ಕಡಿ.

DHARWAR TRAINING COLLEGE CERTIFICATE EXAMINATION—1893.

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯಪ್ರಶ್ನೆಗಳು.

೩ನೇ ವರ್ಷದ ವರ್ಗ.

ಕನ್ನಡ ವ್ಯಾಕರಣ ವ್ಯುತ್ಪತ್ತಿ.

(ಬಲಕ್ಕೆ ಬರೆವ ಅಂಕಿಗಳು ಪ್ರಶ್ನೆಗಳ ಪೂರ್ಣಗುಣಗಳು.)

೧. ಕೆಳಗೆ ಬರೆದ ಶಬ್ದಗಳ ಅರ್ಥವನ್ನೂ ಉತ್ಪತ್ತಿ ಗಳನ್ನೂ ಬರೆ.

ನಿಸ್ಸಾಣ, ದಂಡಯಾತ್ರಾ, ಜಘನ್ಯ, ಚಿತ್ರಾಜ್ಞಾ ಅಪರ್ಯಾಪ್ತ, ಬಂಗಾರದವಳು, ವೇತಂಡಂಗಳು, ಸ್ವಕ್ಸುವಗಳು, ಚುಂಗಡಿ, ಉಂಡಿಗೆ.

೨. ಕೆಳಗೆ ಬರೆದ ಶಬ್ದಗಳ ಅರ್ಥವನ್ನೂ ಅವುಗಳ ತತ್ಸಮಗಳನ್ನೂ ಬರೆ.

ಕರುಬರು, ಬಿಜ್ಜಣ, ಪರಪುಟ್ಟ, ಬನದಿಸು, ಮಿದ್ದಿಗೆ ಸಂಕೋಲೆ, ಹಂತಿ, ಸಬ, ತುರಿಹಂ ನಿಗ್ಗುಳೆ.
ಮೊದಲಿನ ಮೂರು ಶಬ್ದಗಳ ವಿಷಯವಾಗಿ ನಿಯಮಗಳನ್ನು ಬರೆ.

೩. ಅರ್ಥಾಲಂಕಾರವೆಂದರೇನು? ರೂಪಕ ಅನನ್ವಯ ಉಪಮಾ ಇವುಗಳ ಲಕ್ಷಣಗಳನ್ನು ಕೊಟ್ಟು ನೀವು ಓದಿದ ಪದ್ಯಗ್ರಂಥಗಳಿಂದಿಗಿನ ಉದಾಹರಣೆ ಕೊಡಿರಿ.

೪. ಲಕ್ಷಣಾ ಅಂದರೇನು? ಜಹಲಕ್ಷಣಾ ಸಾರೋಪ ಲಕ್ಷಣಾ ಇವುಗಳ ಲಕ್ಷಣಗಳನ್ನು ಬರೆದು ಉದಾಹರಣೆ ಕೊಡಿರಿ.

೫. ಶಿಥಿಲತ್ವವೆಂದರೇನು? ರಾಂತ ಳಾಂತ ಶಬ್ದಗಳು ಸಮಾಸದ ಪೂರ್ವಪದವಾಗಿದ್ದಲ್ಲಿ ಶಿಥಿಲತ್ವದ ಬಗ್ಗೆ ಏನು ನಿಯಮವದೆ?

೬. ಕನ್ನಡದಲ್ಲಿ ದ್ವಿವಚನ ಪ್ರಯೋಗಗಳು ಯಾವ ರೀತಿಯಾಗಿ ಬರುತ್ತವೆ. ಅವಕ್ಕೆ ಎಂಥಾ ದ್ವಿವಚನವೆನ್ನು ವರು ಉದಾಹರಣೆಗಳನ್ನು ಕೊಡಿರಿ.

೭. ಊನ ಕ್ರಿಯಾಪದಗಳಿಗೂ ವಿಕೃತ ಕ್ರಿಯಾಪದಗ ಳಿಗೂ ಭೇದವೇನು ? ಒಂದೊಂದರ ಎರಡೆರಡು ಉದಾಹ ರಣೆಗಳನ್ನು ಕೊಡಿರಿ.

೮. ವಾಕ್ಯದಲ್ಲಿ "ಆದ" ಎಂಬ ಕೃದ್ವಾಚಿಯು ವಿಶೇ ಷಣದ ನುಂದೆ ಯಾವಾಗ ಬರುತ್ತದೆ? ಯಾವಾಗ ಬರು ವದಿಲ್ಲ? ಯಾವಾಗ ವಿಕಲ್ಪದಿಂದ ಬರುತ್ತದೆ?

೯. ಕೆಳಗಿನ ಸೂತ್ರದ ಅರ್ಥ ಬರೆದು ಉದಾಹರಣೆ ಕೊಡಿರಿ.

ಸವವಾಗಿ ಭೂತದೊಳ'ಲಿಂ
ಗವಚನದೊಳ್ತಳ್ತು ನರ್ತವಾನ ವಿವಿಧ್ಯ
ದ್ವ್ಯನಹೃತಿಗಳಗುಂಕುಂಸ
ಳ್ಲುವು ತಾವನ್ಯೈಕದೊಳ್ನಿಲಸಿರ್ದುಂ

೧೦. ಎಲ್ಲಾ ವಿಧದ ಷಟ್ಪದಿಗಳ ಹೆಸರು ಬರಿಯಿರಿ. ಕಗಳ ದಂಡಕಗಳ ಲಕ್ಷಣ ಹೇಳಿ ತರಂಗಶಾರ್ದೂಲ ವಿಕ್ರೀ ಡಿತ ಇವುಗಳ ಉದಾಹರಣೆಗಳನ್ನು ಕೊಡಿರಿ.

೧೧. ಸಂಗ್ರಹಣ ಸೂಚಿತ ಉಪವಾಕ್ಯ, ಅಯೋಗ ವಾಹ ಇವುಗಳ ಲಕ್ಷಣ ಬರೆದು ಉದಾಹರಣೆ ಕೊಡಿರಿ.

ವರ್ಗಣೀ ವಸೂಲು*

ಧಾರವಾಡ ಜಿಲ್ಲೆ.

	ರೂ.	ಆ	ಪೈ.
ರಾ. ಸಾ. ಡೆ. ಎ. ಇ. ಧಾರವಾಡ ಇವರಿಂದ ಲೋ. ಬೋ. ಸಾಲಿಗಳ ಬಾಬತು ೧೪೯೬ನೇ ಸಾಲಿನ ದಿಸಂಬರ ತಿಂಗಳಬಗ್ಗೆ.	೨೬	೧	೬

ವಿಜಾಪೂರ ಜಿಲ್ಲೆ.

ರಾ. ಸಾ. ಡೆ. ಎ. ಇ. ವಿಜಾಪೂರ ಇವರಿಂದ ಲೋ. ಬೋ. ಮ್ಯು. ಸಾಲಿಗಳ ಬಾಬತು ೧೪೯೬ನೇ ಸಾಲಿನ ಜನವರಿ ತಿಂಗಳಬಗ್ಗೆ.	೧೯	೧೨	೬

ಕಿರುಕುಳ.

ಮೆ. ಎ. ಇ. ದಕ್ಷಿಣಭಾಗ ಇವರಿಂದ ೧೪೯೬ನೇ ಸಾಲಿನಬಗ್ಗೆ.	೦	೧೫	೦
ರಾ. ಸಾ ಪ್ರಿನ್ಸಿಪಾಲ ಟ್ರೇ. ಕಾ. ಧಾರವಾಡ ಇವರಿಂದ ೧೪೯೬ನೇ ಸಾಲಿನಬಗ್ಗೆ.	೦	೧೫	೦
ವಾಚನಮಂದಿರ (ಧಾರವಾಡ ಟ್ರೇ. ಕಾಲೇಜ) ದಿಂದ ೧೪೯೬ನೇ ಸಾಲಿನಬಗ್ಗೆ.	೦	೧೫	೦
ರಾಮದುರ್ಗ ಸಂಸ್ಥಾನದೊಳಗಿನ ೧೪ ಸಾಲಿಗಳ ಬಾಬತು ೧೪೯೬ನೇ ಸಾಲಿನಬಗ್ಗೆ.	೧೪	೮	೦
ಕೇವಣಸಿದ್ದಯ್ಯಾ ಗಾ. ಶಾ. ನಬಿಸ್ತರ ಇಂಗಳಗಿ ತಾಲೂಕ ಹುನಗುಂದ ಇವರಿಂದ ೧೪೯೬ನೇ ಸಾಲಿನಬಗ್ಗೆ.	೦	೧೫	೦
ರಾ. ರಾ. ಅರಬಟ್ಟಿ ಇವರಿಂದ ಸೋಟೀಸಿನಬಗ್ಗೆ.	೨	೦	೦

---

* ಇದರೊಳಗೇನಾದರೂ ತಪ್ಪು ಇದ್ದರೆ ಅದನ್ನು ದಯಮಾಡಿ ತಿಳಿಸಬೇಕು.

ಕನ್ನಡ ಶಾಲಾಪತ್ರಕದ ವರ್ಗಣಿ ವರ್ಷಕ್ಕೆ ಮುಂಗಡ ... ೧೫ ಆಣೆ.
ಒಂದು ಸಂಚಿಕೆಗೆ ... ... ೩ ಆಣೆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ.	೪	ಪಂಕ್ತಿಗಳವರೆಗೆ	೧ ರೂ.
ಮೂರುಸಾರೆ ಇಟ್ಟರೆ	೧೦	,,	,,
ಆರುಸಾರೆ ಇಟ್ಟರೆ.	೧೬	,,	,,

ಸೂಚನೆಗಳು.

೧. ಶಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಹಾಸಲು ಬೀಳುವದು.

೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇಮ್ಮಡಿ ಫೀ ಬೀಳುವದು.

೪. ಪ್ರಕಟನೆಯ ಕೂಡ ಹಣ ಕಳುಹಲಿಕ್ಕೆ ಬೇಕು.

೫. ಟಿಕೀಟು ಇಟ್ಟ ಹೊರತು ಉತ್ತರ ಶಿಗಲಾರದು.

RAOJI B. KARANDIKAR.
ವ್ಯವಸ್ಥಾಪಕ, ಕನ್ನಡ ಶಾಲಾಪತ್ರಕ.

ಕನ್ನಡಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೭೯.] ಎಪ್ರಿಲ ೧೮೯೪ಳ. [ಸಂಚಿಕೆ ೪.

ಅನುಕ್ರಮಣಿಕೆ.

	ಪುಟ.
೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ...	೭೩
೨. ದೀಪಾವಳಿಯ ಸೂಟಿಯ ಆರಂಭದಲ್ಲಿ ಕಾಲೇಜದ ವಿದ್ಯಾರ್ಥಿಗಳಿಗೆ ರಾ. ರಾ. ಸವದಿಯವರು ಮಾಡಿದ ಉಪದೇಶ	೭೮
೩. ಮುಂಬಯಿ ಕರ್ನಾಟಕದ ವೃತ್ತಾಂತದಿಂದ ತೆಗೆದುಕೊಂಡ ಆವತರಣಿಗಳು	೮೩
೪. ಕಲಿಸುವ ಪದ್ಧತಿಗಳು	೮೮
೫. ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು ೧೮೯೩ಳ.	೯೪

CONTENTS.

1. Educational Intelligence and Useful Notes ...	73
2. Address to College Students on the Eve of the Divali Vacation by Mr. Savadi... ...	78
3. Selections from the Bombay Karnatik Gazetteer	83
4. Methods of Teaching	88
5. Dharwar Training College Certificate Examination—1893.	94

DHARWAR:
PRINTED AT THE KARNATIC BOOK DEPOT PRESS,
1894.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಲಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆಸುಗುಣಂ ತೋರಲ್ಕೆಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೭೯.] ಏಪ್ರಿಲ ೧೮೯೯ಳ. [ಸಂಚಿಕೆ ೪.

EDUCATIONAL INTELLIGENCE AND NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ನಮ್ಮ ಭಾಗದ ಎಜ್ಯುಕೇಶನಲ್ ಇನಸ್ಪೇಕ್ಟರರಾದ ರಾ ವಬಾಹದೂರ ಸೀ. ವಿ. ಪಟವರ್ಧನ ದೊರೆಗಳು ಸರ ಎ. ಗ್ರಾಂಟ, ಮಿ. ಹ್ಯೂಲಿಂಗ್ಸ ಮುಂತಾದ ಲೋಕವಾನ್ಯರಾದ ಗುರುಗಳ ಬಳಿಯಲ್ಲಿ ಕಲಿತವರಿಷ್ಟೇ ಅಲ್ಲ. ಅದಕ್ಕೆ ಆನು ಗುಣವಾಗಿ ಬಿ. ಎ. ಪರೀಕ್ಷೆಯಲ್ಲಿ ಬಹುಮಾನವನ್ನು ಪಡೆದಿರುವರು. ಇವರಲ್ಲಿರುವ ಕಾರ್ಯಪ್ರೀತಿ, ತತ್ಪರತೆ, ದಕ್ಷತೆ, ವ್ಯವಸ್ಥಾಚಾತುರ್ಯ, ದಿಘೋದ್ಯೋಗಿತ್ವ, ನಿರಾಲಸ್ಯವೃತ್ತಿ, ಮುಂತಾದ ಕೆಲವು ಅಪೂರ್ವ ಗುಣಗಳಿಗೆ ಸರಕಾರದವರು ಮೆಚ್ಚಿ, ನೇಟಿವ್ ಜನರಿಗೆ ಸಿಗತಕ್ಕ ಹೆಚ್ಚಿನ ಸ್ಥಳಗಳಲ್ಲಿ ಹೆಚ್ಚಿನದಾದ ವರ್ಣಾಡದ ಡಾಯರೆಕ್ಟರಿಯ ಕೆಲಸವನ್ನು ಇವರಿಗೆ ಕೊಟ್ಟರು. ಆಮೇರೆಗೆ ಪಟವರ್ಧನ ಸಾಹೇಬರು ತಮ್ಮ ಕೆಲಸವ ಚಾರ್ಜವನ್ನು ಇಲ್ಲಿಯ ಹಾಯ್‌ಸ್ಕೂಲ ಹೆಡ್ಡ ಮಾಸ್ತರರಕಡೆಗೆ ಒಪ್ಪಿಸಿ ಹೋದ ತಿಂಗಳ ತಾರೀಖು ೧೪ನೇ ರವಿವಾರ ದಿವಸ ಬೆಳಗ್ಗೆ ಹೊರಟು ಹೋದರು. ಇವರು ಈಭಾಗದ ಕಾಯವು ಇನಸ್ಪೆಕ್ಟರರಾಗಿ ಏಪ್ರಿಲ ೮ಳ್ಗೆ ಬಂದರು. ಇವರ ಕಾಲವಲ್ಲಿ ಜ್ಯಾಡ್ಯ, ಮೈಗಳ್ಳತನ, ಮುಂತಾದವುಗಳಿಗೆ ಅಸ್ಪದವೇ ಇದ್ದಿಲ್ಲ; ಇನ್ನೂ ಮೂರು ನಾಲ್ಕು ವರುಷಗಳಾದರೂ ಈ ಸಾಹೇಬರು ಇರುತ್ತಿದ್ದರೆ, ನಮ್ಮ ಭಾಗವು ಮತ್ತಿಷ್ಟು ಬೆಳಿಕಿಗೆ ಬರುತ್ತಿತ್ತು. ಇವರ ಐದಾರು ವರುಷದ ಆಡಳಿತದಲ್ಲಿ ಅನೇಕಸುಧಾರಣೆಗಳು ಆಗಿರುತ್ತವೆ. ಅವುಗಳನ್ನು ಮುಂದಿನ ಸಂಚಿಕೆಯಲ್ಲಿ ತಿಳಿಸುವೆವು.

ಕೆಳಗೆ ಕೊಟ್ಟಿರುತ್ತೇವೆ. ಇದರಿಂದ ಆಯಾ ಭಾಗದೊಳಗೆ ವಿದ್ಯಾಪ್ರಸಾರವು ಹ್ಯಾಗೆ ಆಗುತ್ತದೆಂಬದು ಸ್ಪಷ್ಟವಾಗಿ ತಿಳಿಯುವದು.

ಭಾಗ.	ಕ್ಷೇತ್ರ ಫಲ ಮೈಲು.	†ಜನಸಂಖ್ಯೆ	ಸರಕಾರೀ ಮತ್ತು ಏಡೇಡ್ ಶಾಲೆಗಳು.	ವಿದ್ಯಾರ್ಥಿಗಳು.	ಅನ್ಯರೇಕ ಗ್ನೆಲಜ್ಜಾ ಶಾಲೆಗಳು.	ವಿದ್ಯಾರ್ಥಿಗಳು.	ಶಾಲೆಗೆ ಹೋಗಲಿಕ್ಕೆ ತಕ್ಕವರಾದ ಹು. ಜನಸಂ. ಶೇ. ಗಿಳಿರಂತೆ.	ಸಾ. ಹೋಗತಕ್ಕ ಹಾಗು ಹೋಗುತ್ತಿರುವ ಹು.ಪ್ರ.
ಮಧ್ಯಭಾಗ.								
ಮುಂಬಯಿ.	೩೦	೪೦೧,೭೬೪	೬೩೧	೪೦,೫೦೯	೧೬೧	೧೦,೫೪೨	೧೨೫೦೬೪.೬	೬೩.೩೫
ಇತರಜಿಲ್ಲೆಗಳು (೬)	೫೪,೪೯೦	೬,೨೫೭,೬೬೬	೨,೨೪೬	೧೨೭೬.೦೪	೪೪೦	೧೦,೪೪೦	೯೫೫೪೪೯.೯	೧೪.೭೪
ಸಂಸ್ಥಾನಗಳು (೫)	೫,೪೫೫	೪೦೪,೯೯೦	೧೧೯	೪,೭೪೨	೧೨	೯೯೨	೬೧೨೪೪.೫	೪.೯೪
ಉತ್ತರಭಾಗ.								
ಜಿಲ್ಲೆಗಳು* (೬)	೧೫,೪೦೪	೫,೯೪೪,೦೫೯	೧೨೬೧೭	೧೧೪೫೬೦೧	೭೯೫	೧೨,೯೨೬	೫೯೧೨೬೦೪.೪೫	೭೧.೫೦
ಸಂಸ್ಥಾನಗಳು (೯)	೫೧೧,೦೪೯	೫೫,೫೯೫,೧೪೦	೧,೫೧೪	೯೧,೧೫೬	೪೪೨	೧೬,೪೭೭	೪೪೯೨೭.೦	೧೨.೪
ದಕ್ಷಿಣಭಾಗ.								
ಜಿಲ್ಲೆಗಳು (೬)	೭೫,೦೬೧	೪,೯೯೬,೬೨೬	೧,೪೪೧	೧೦೪೪೭೨೦	೬೪೦	೧೦,೭೪೯	೭೪೯೯೯೭.೯	೧೫೯.೯
ಸಂಸ್ಥಾನಗಳು (೬)	೪,೦೪೪	೧,೯೭೫,೪೯೧	೬೭೫	೪೪೪,೬೯೨	೨೪೪	೪,೧೭೫	೭೪೪೫೪೨.೬೫	೧೪.೪೫
ಸಿಂಧಪರ್ಯಂತ.								
ಜಿಲ್ಲೆಗಳು (೫)	೪೭,೭೪೯	೭,೪೭೧,೭೭೪	೧,೫೭೪	೫೪,೯೦೦	೪೪೯	೫,೦೭೫	೪೨೦೭೬೬೧	೧೪.೫೭
ಒಟ್ಟು.	೧೪೪೦೬	೨೬೭೯೯೦೫	೯೭೫೬	೫೭೭೭೧೪	೭೪೧೩	೭೧೦೧೩	೪೦೧೯೪೪೭.೫	೧೬.೦೪

* ಡೀಸಾ, ಅಬೂ, ಬಜೋದಾಕ್ಯಾಂಪ ಸಹಿತ. † ಜನಸಂಖ್ಯೆಯು ಶೇಕಡಾ ಗಿಳಿರಂತೆ ಶಾಲೆಗೆ ಹೋಗುವ ವಯಸ್ಸಿನ ಹುಡುಗರಿರುತ್ತಾರೆಂದು ಬಲ್ಲವರ ಅಭಿಪ್ರಾಯವುಂಟು.

ಮುಂಬಯಿ ಜಿಲ್ಲಾವಿಭಾಗದಲ್ಲಿ ಪ್ರಾಥಮಿಕ ಶಾಲೆಗಳ ಸ್ಥಿತಿಯು ಹ್ಯಾಗಿರುತ್ತದೆಂಬದನ್ನು ತಿಳಿಸುವಬಗ್ಗೆ
ಕೆಳಗಿನ ಪಟ್ಟಿಯನ್ನು ಕೊಟ್ಟಿರುತ್ತೇವೆ.

ಭಾಗ.	ಶಾಲೆಗಳಸಂಖ್ಯೆ.	ವಿದ್ಯಾರ್ಥಿಗಳ ಸಂಖ್ಯೆ.	೫ನೇ ೬ನೇ ಇಯತ್ತೆ ಕಲಿಯುವ.			೩ನೇ ೪ನೇ ಇಯತ್ತೆ ಕಲಿಯುವ.			೨ನೇ ಇಯತ್ತೆಯವರೆಗೆ ಕಲಿಯುವ.			ಅಂತೂ.		
			ಗಂಡು	ಹೆಣ್ಣು	ಅಂತೂ	ಗಂಡು	ಹೆಣ್ಣು	ಅಂತೂ	ಗಂಡು	ಹೆಣ್ಣು	ಅಂತೂ	ಗಂಡು	ಹೆಣ್ಣು	ಅಂತೂ
ಮು. ಭಾಗ	೬೩೯	೧೩೬೯೭	೩೬೬೫	೬೫೪೪	೪೦೧೯	೪೭೦೬	೩೩೯೬	೭೦೦೨	೫೪೦೪	೪೦೬೩	೯೪೭೭	೧೭೬೪೦	೧೫೫೫	೩೩೩೫
ಉ. ಭಾಗ.	೪೯೬	೧೯೬೩೬	೫೪೯೫	೩೬೧೫	೯೦೪೦	೬೬೪೯	೪೭೧೩	೧೦೯೬	೪೪೦೩	೨೫೫೦	೬೯೫೩	೧೩೬೫	೧೦೩೫	೨೩೯೦
ದ. ಭಾಗ.	೬೪೦೩	೧೩೬೧೬	೪೦೦೦೪	೧೫೪೪೩	೪೧೫೫೧	೫೧೪೪೦	೪೬೪೩೬	೯೭೭೬	೩೬೦೪	೨೧೧೪	೫೭೭೪	೧೩೬೫೫	೧೫೫೭೪	೨೯೬೧೩
ಸಂಘ.	೧೪೭೪	೫೪೪೪೫	೬೦೩೩	೩೪೪೦	೬೫೩೯	೬೪೬೩೬	೫೬೬೩	೧೨೦೦೩	೧೭೩೯	೪೦೬೪	೫೭೪೩	೪೪೪೫೫	೩೦೦೬೩	೭೪೪೫೫

ನಾವು ಊಟ ಮಾಡುವ ಉಪ್ಪಿನಲ್ಲಿ ಎಷ್ಟೋ ಪ್ರಯೋಜನಕರವಾದ ಗುಣಗಳಿರುತ್ತವೆಂದು ಒಬ್ಬ ಯುರೋಪಿಯನ್ ವೈದ್ಯನು ತಿಳಿಸುತ್ತಾನೆ. ಅವು ಯಾವವೆಂದರೆ:—

ಅದರಿಂದ ಹಲ್ಲುಗಳನ್ನು ತಿಕ್ಕಿದರೆ ಅವು ಬೆಳ್ಳಗೂ ಮಿನುಕುಳ್ಳವೂ ಆಗುವವಲ್ಲದೆ ಒಸಡಿಗಳು ದೃಢವಾಗಿ ಹಲ್ಲು ಗಟ್ಟಿಯಾಗುತ್ತವೆ, ಮತ್ತು ಶ್ವಾಸದ ದುರ್ಗಂಧಿಯು ದೂರಾಗುತ್ತದೆ. ಕಣ್ಣಿಗೆ ಅದರಷ್ಟು ಗುಣಕಾರಿಯಾದ ವಸ್ತುವು ಇನ್ನೊಂದಿಲ್ಲ. ಕಣ್ಣುಗಳು ವಿಶ್ರಾಂತಿ ಇಲ್ಲದೆ ಭಾರವಾಗಿದ್ದರೆ ಅಥವಾ ಕಣ್ಣುಗಳಲ್ಲಿ ಸಾಕಷ್ಟು ಬಲವಿಲ್ಲದಿದ್ದರೆ, ಉಪ್ಪಿನ ನೀರನ್ನು ಮೂಡಿ, ಕಾಸಿ, ತಾಳುವಷ್ಟು ಬಿಸಿಬಿಸಿ ಇರುವಾಗಲೇ ಅದರಿಂದ ಕಣ್ಣುಗಳನ್ನು ತೊಳೆಯಬೇಕು ಆಂದರೆ ಅವು ಬಲಪಡುವವು.

ಹಿತ್ತಾಳೆಯ ಮತ್ತು ತಾಮ್ರದ ಪಾತ್ರೆಗಳನ್ನು ಉಪ್ಪಿನಿಂದ ತಿಕ್ಕಿದರೆ, ಅವು ನಿರ್ಮಲವಾಗುವವು. ಮೇಜಿನ ಮೇಲೆ ಹಾಸಿದ ಬಟ್ಟೆಯ ಮೇಲೆ ಸರಾಯಿಯು ಹನಿಗಳು ಬಿದ್ದರೆ, ಅವಕ್ಕೆ ಉಪ್ಪು ಹಚ್ಚಿ ತೊಳೆಯಬೇಕು, ಅಂದರೆ ಆ ಅರಿವೆಯು ನಿರ್ಮಲವಾಗುವದು. ದಿವಾಣಖಾನೆಗಳಲ್ಲಿ ಹಾಸಿದಂಥ ಬಹುಮೂಲ್ಯದ ಜಮಖಾನೆಗಳ ಮೇಲೆ ಮಸಿ ಬಿದ್ದರೆ; ಹಸಿ ಇರುವಾಗಲೇ ಅದರ ಮೇಲೆ ಉಪ್ಪನ್ನು ದಪ್ಪಾಗಿ ಹರವಬೇಕು. ತುಸು ಹೊತ್ತಿನಲ್ಲಿ ಆ ಉಪ್ಪು ಮಸಿಯನ್ನು ಹೀರಿಕೊಂಡು ಕಪ್ಪಾಗುವದು. ಕೂಡಲೆ ಆ ಉಪ್ಪನ್ನು ತೆಗೆದು ಹೊಸ ಉಪ್ಪನ್ನು ಪುನಃ ಹರವಬೇಕು. ಈ ಮೇರೆಗೆ ಕೆಲವು ಸಾರೆ ಮಾಡಿದರೆ ಮಸಿಯ ಕಲೆಯು ಇಲ್ಲದಂತೆ ಆಗುವದು.

ಆದು ಎಷ್ಟೋ ರೋಗಗಳಿಗೆ ಸಹ ಉಪಯೋಗವುಳ್ಳ

ದ್ದಾಗಿರುತ್ತದೆ. ನೆಗಡಿಯಾದರೆ, ತುಸು ಉಪ್ಪಿನ ನೀರನ್ನು ಮೂಗಿನಿಂದ ಸೇದಿ ಉಗುಳಬೇಕು; ಅಂದರೆ ನೆಗಡಿಯು ಮಾಯವಾಗುವದು. ತಲೆಸೂಲಿ ಎದ್ದರೆ ಒಂದು ಚಿಮುಟಿಗೆಯಷ್ಟು ಉಪ್ಪನ್ನು ನಾಲಿಗೆಯ ಮೇಲಿಟ್ಟು ಅದು ಕರಿಗಿ ಹೊಟ್ಟೆಯೊಳಗೆ ಹೋದ ತರುವಾಯ ಒಂದು ಗುಟಿಕು ನೀರನ್ನು ಕುಡಿಯಬೇಕು ಅಂದರೆ ತಲೆಸೂಲಿಯು ನಿಂತುಹೋಗುವದು. ಉಗುರುಸುತ್ತು ಆದರೆ ಉಪ್ಪನ್ನು ಬಲೆಯಮೇಲೆ ತುಸು ಬೆಚ್ಚಗೆ ಮಾಡಿ, ಸಣ್ಣಗಿ ಅರಿದು ಅದರ ಸಮತೂಕ ಟರಪೆಂಟಾಯಿನವಲ್ಲಿ ಕೂಡಿಸಬೇಕು. ಆ ಮೇಲೆ ಅದರಲ್ಲಿ ಅರಿವೆಯನ್ನು ತೊಯಿಸಿ ಆ ಉಗುರುಸುತ್ತಿನ ಮೇಲೆ ಸುತ್ತಬೇಕು ಅಂದರೆ೨೪ ತಾಸುಗಳಲ್ಲಿಯೇ ಗುಣವಾಗುವದು.

ವೃಕ್ಷಗಳ ಆಯುರ್ಮರ್ಯಾದೆಗಳು— ಎಲ್ಮ ವೃಕ್ಷವು ೩೦೦, ಆಯವ್ಹಿ ೩೫೦, ಲಾಚರ್ಚ ೪೭೬, ತುರಾಯಿವೃಕ್ಷವು ೯೦೦, ಅಕೊಕ್ಕೋಡವು ೯೦೦, ಲಾಯಿವ್ಸು ೧೧೦೦, ಸ್ಪ್ರೂಸ ೧೨೦೦, ಓಕ ೧೪೦೦, ದೇವದಾರು ೨೦೦೦, ಯ್ಯು ೩೨೦೦ ವರ್ಷ ಬಾಳುತ್ತವೆ. ವೃಕ್ಷಗಳ ಆಯುರ್ಮರ್ಯಾದೆಗಳನ್ನು ತಿಳುಕೊಳ್ಳುವ ಪಲವು ಮಾರ್ಗಗಳುಂಟು. ದಂತಕಥೆಗಳಿಂದ ಕೆಲವುಗಳ ಆಯುರ್ಮರ್ಯಾದೆಗಳು ತಿಳಿಯುತ್ತನೆ. ಕೆಲವುಗಳ ಮೇಲೆ ಕೊರೆದ ಇಸವಿಗಳಿಂದಲೂ ಐತಿಹಾಸಿಕ ಲೇಖಗಳಿಂದಲೂ ಅವುಗಳ ವಯಸ್ಸು ಗೊತ್ತಾಗುತ್ತದೆ. ಈ ಮೂರು ಮಾರ್ಗಗಳಿಗಿಂತ ಮತ್ತೊಂದು ಹೆಚ್ಚು ಗೌರವವುಳ್ಳ ವಿಶ್ವಸನೀಯವಾದ ಮಾರ್ಗವುಂಟು. ಅದು ಯಾವದೆಂದರೆ:—ಗಿಡಗಳ ಕೆಚ್ಚಿನ ಸುತ್ತಲು ಕೂತಂಥ ಥರಗಳು. ಉದ್ಭಿಜ್ಜ ಶಾಸ್ತ್ರಜ್ಞರು ಈ ಥರಗಳನ್ನು ಪರೀಕ್ಷಿ

ನಿ ಕೆಲವು ನಿಯಮಗಳನ್ನು ಗೊತ್ತು ಪಡಿಸಿದ್ದಾರೆ. ಅನಿಯು ಮಗಳ ಸಹಾಯದಿಂದ ಮೋಲಿನ ಗಿಡಗಳ ಆಯುರ್ಮಾ ಯಾದಿಗಳು ಗೊತ್ತು ಮಾಡಲ್ಪಟ್ಟಿರುತ್ತವೆ.

ಸ್ವಿಟ್ಸರ್ಲಾಂಡದೊಳಗಿನ ಐದು ವಿಶ್ವವಿದ್ಯಾಲಯಗಳಿಂದ ೨೬೫ ವಿದ್ಯಾರ್ಥಿನಿಯರು ಮ್ಯಾಟ್ರಿಕುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಇವರು ಮತ್ತು ಬೇರೆ ಪರೀಕ್ಷೆ ಗಳಲ್ಲಿ ತೇರ್ಗಡೆ ಹೊಂದಿದಂಥ ೧೬೦ ವಿದ್ಯಾರ್ಥಿನಿಯರು ಅಂದರೆ ಒಟ್ಟು ೪೩೭ ತರುಣ ಸ್ತ್ರೀಯರು ಕಾಲೇಜಿನ ಅ ಭ್ಯಾಸ ಮಾಡಲಿಕ್ಕೂ ಆ ಅಭ್ಯಾಸವನ್ನು ಕುರಿತು ನಡೆಯು ವಂಥ ವ್ಯಾಖ್ಯಾನಗಳನ್ನು ಕೇಳಲಿಕ್ಕೂ ಹೋಗುತ್ತಿರುವ ರು. ತೇರ್ಗಡೆ ಹೊಂದಿದ ೨೬೫ ಸ್ತ್ರೀಯರಲ್ಲಿ ೫೫ ಜನರು ಕಾಯುದೆಯ ಅಭ್ಯಾಸವನ್ನು ೨೬೦ ಸ್ತ್ರೀಯರು ವೈದ್ಯಕಿ ಮತ್ತು ತತ್ವಶಾಸ್ತ್ರಗಳನ್ನು ಕಲಿಯುತ್ತಾರೆ. ಇವರಲ್ಲಿ ೧೩೪ ಜನ ರಶಿಯನ್ನರೂ ೧೯ ಜನ ಅಮೇರಿಕದವರೂ ಇರುತ್ತಾರೆ.

ADDRESS TO COLLEGE STUDENTS ON THE EVE OF THE DIVALI VACATION BY Mr. SAVADI.

ದೀಪಾವಳಿಯ ಸುಟಿಯ ಆರಂಭದಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಗೆ ರಾ. ರಾ. ಸವದಿಯವರು ಮಾಡಿದ ಉಪದೇಶವು.

(ಕಂನೇ ಪುಟದಿಂದ ಮುಂದೆ ಸಾಗಿದ್ದು.)

ಇನ್ನು ಹುಡುಗರ ಆರೋಗ್ಯದ ವಿಷಯವಾಗಿ ಗುರುವಿ ನ ಕರ್ತವ್ಯವನ್ನು ಹೇಳುತ್ತೇವೆ. ಗುರುವಿನ ಕೆಲಸವು

ಮುಕ್ಕಳ ಮನಸ್ಸನ್ನು ತಿದ್ದಿ ಅವರ ವಿಚಾರಶಕ್ತಿಯನ್ನು ಬೈಲಿಗೆಳೆಯುತಕ್ಕದ್ದಿದ್ದರೂ ಅವನು ಅವರ ಆರೋಗ್ಯತೆಯ ವಿಷಯವಾಗಿ ಅಂಧನಾಗಿದ್ದರೆ ಸಲ್ಲದು. ಶರೀರವು ಮನಸ್ಸಿನ ಮನೆಯು. ಬಲವುಳ್ಳ ಶರೀರದಲ್ಲಿ ಸಶಕ್ತವಾದ ಮನಸ್ಸಿರುವದೆಂದು ಫ್ರೆಂಚ ಭಾಷೆಯೊಳಗಿನ ಬಂದು ವಾಕ್ಯವು ಹೇಳುತ್ತದೆ. ಆ ವಾಕ್ಯವು ಯಾವದಂದರೆ:— "Sana mensa in sano corpore "Sound mind in a sound body" ಅಂದರೆ ಮನೆಯು ಮೇಲಿಂದ ಮನೆಯ ಯಜಮಾನನು ಬಡವನೋ ಶ್ರೀಮಂತನೋ ಎಂಬದು ಹ್ಯಾಗೆ ತಿಳಿಯುತ್ತದೋ ಅದೇಮೇರೆಗೆ ಮನಸ್ಸಿಗೂ ಶರೀರಕ್ಕೂ ಸಂಬಂಧವುಂಟು. ತನ್ನ ವಿದ್ಯಾರ್ಥಿಗಳು ಸ್ವಚ್ಛವಾಗಿ ಸ್ನಾನ ಮಾಡುವರೋ, ಝಳಝಳವಾದ ಒಟ್ಟೆಗಳನ್ನು ಧರಿಸುವರೋ, ಅವರ ಹಲ್ಲು-ಉಗುರು-ಕೈಗಳು ಯಾವಾಗಲು ಹಸನಾಗಿರುವವೋ, ಶರೀರಕ್ಕೆ ಹಿತವಾಡದಂಥ ಕಾಡುಕಿಚ್ಚು ತಿನಸನ್ನು ತಿನ್ನುವರೋ ಎಂಬ ವಿಷಯಗಳನ್ನು ಕುರಿತು ಗುರುವು ಆಗಾಗ್ಗೆ ವಿಚಾರಿಸುತ್ತಿರಬೇಕು. ಪುಡುಗರು ಆಟಕ್ಕೆ ಮೆಚ್ಚಿದವರಾಗಿರುವರು ಹಾಗು ಆಟವೇ ಸಣ್ಣವರನ್ನು ದೊಡ್ಡವರಾಗಮಾಡುತ್ತದೆ; ಕಾರಣ ಪ್ರತಿಯೊಂದು ದಿವಸ ತಾಸು ಎರಡು ತಾಸು ಪುಡುಗರನ್ನು ಊರ ಪಶ್ಚಿಮಕ್ಕಿರುವ ಬಯಲಿಗೆ ಕರದೊಯ್ದು, ಅಲ್ಲಿ ನಮ್ಮ ದೇಶದ ಆಟಗಳನ್ನು ಅವರಿಂದ ಆಡಿಸಬೇಕು. ಹುಡುಗರು ಆಡುವಾಗ್ಗೆ ದೆವ್ವು ಬಡಿದವನಂತೆ ಮಾಸ್ತರನು ಬತ್ತಲ್ಟ್ಟಗೆ ಸುಮ್ಮನೆ ಕೂಡ್ರದೆ, ತಾನೂ ಅವರಲ್ಲಿ ಕೇರಿ ಆಟವು ಆರೋಗ್ಯತೆಯ ದೊಡ್ಡ ಸಾಧನವೆಂದು ಸ್ವಂತ ಆಚರಣೆಯಿಂದ ಪುಡುಗರ ಮನಸ್ಸಿನಲ್ಲಿ ಬಿಂಬಿಸಬೇಕು. ಇನ್ನು ಆಟದ

ಸ್ಥಳವಿಲ್ಲ ಹುಡುಗನು ಹೆಚ್ಚು ಸ್ವತಂತ್ರವಾಗಿರುವದರಿಂದ ಅವರ ಸ್ವಾಭಾವಿಕ ಸುಗುಣಗಳೂ ದುರ್ಗುಣಗಳೂ ಬಯಲಿಗೆ ಬೀಳುವವು. ಆ ಗುಣಗಳನ್ನು ನೋಡಿ, ನೆನಪಿನಲ್ಲಿಟ್ಟು, ಆಯಾ ಹುಡುಗರ ಸಂಬಂಧವು ಬಂದಾಗ ಅವರ ಗುಣಕ್ಕೆ ತಕ್ಕ ಉಪಾಯಗಳನ್ನು ಮಾಡಿ, ಅವರಲ್ಲಿ ದುರ್ಗುಣಗಳಿದ್ದರೆ ಅವುಗಳನ್ನು ಹೋಗಲಾಡಿಸುವದಕ್ಕೂ, ಸುಗುಣಗಳಿದ್ದರೆ ಅವುಗಳನ್ನು ಹೆಚ್ಚಿಸುವದಕ್ಕೂ, ಯತ್ನಿಸಬೇಕು. ಮಾನಸಿಕಶ್ರಮದಿಂದ ಶರೀರಕ್ಕೆ ಏನೂ ನಷ್ಟವಾಗುವದಿಲ್ಲವೆಂದು ಅನೇಕರು ತಿಳಿಯುತ್ತಾರೆ. ಇದು ಅಪದ್ಧವು ಮಾನಸಿಕಶ್ರಮದಿಂದ ಆಗುವ ಶರೀರವ್ಯಯವು ಶಾರೀರಕಷ್ಟದಿಂದ ಆಗುವ ವ್ಯಯಕ್ಕಿಂತ ಎಷ್ಟೋ ಪಾಲು ಹೆಚ್ಚಾಗಿರುತ್ತದೆ. "ಚಿಂತಾತುರಾಣಾಂ ನ ಸುಖಂ ನ ನಿದ್ರಾ" ಚಿಂತೆಯುಳ್ಳವನಿಗೆ ಸುಖವೂ ನಿದ್ರೆಯೂ ಇಲ್ಲವೆಂಬದರರ್ಥವೇನು? ಚಿಂತೆಯೆಂದರೆ ಅತ್ಯಂತ ಹಾಗು ಉತ್ಕಟವಾದ ಮಾನಸಿಕ ವ್ಯಾಪಾರವು. ಇಂಥವನಿಗೆ ತಿಂದ ಅನ್ನವು ಮೈಗೆ ಹತ್ತುವದಿಲ್ಲ. ಗುರುವಿನ ಹಾಗು ವಿದ್ಯಾರ್ಥಿಗಳ ಕೆಲಸವಂತೂ ತೀರ ಮಾನಸಿಕ ವ್ಯಾಪಾರವು. ಅಂದಮೇಲೆ ಮಾನಸಿಕ ವ್ಯಾಪಾರದಿಂದ ಮಿದುಳಿಗೂ ಶರೀರಕ್ಕೂ ಬದಗುವ ದೌರ್ಬಲ್ಯವನ್ನು ಹೋಗಲಾಡಿಸುವದಕ್ಕೆ ವ್ಯಾಯಾಮ ಸುಗ್ರಾಸಗಳೇ ಮದ್ದುಗಳಾಗಿರುತ್ತವೆ. ಆಟವೆಂಬದು ಆನಂದಯುಕ್ತವಾದ ವ್ಯಾಯಾಮವು; ಇದರಿಂದ ಕಿಡಿಕಿಡಿ ಹಸಿವೆಯಾಗುವದು. ಇಂಥ ಹಸಿವಿಗೆ ತಕ್ಕ ಸುಭೋಜನವಿದ್ದರೆ, ಶಾರೀರನಾಶವು ತಿದ್ದಲ್ಪಟ್ಟು ಮನುಷ್ಯನು ಅಯಾಚಿತ ಆರೋಗ್ಯಸಂಪನ್ನನಾಗುವನು. ಅದರಿಂದ ಶಿಕ್ಷಣವ್ಯಾಯಾಮಗಳು ಜೀವದ ಗೆಳೆಯರಂತೆ ಕೈಯಲ್ಲಿ ಕೈಹಾ

ಕೊಂಡು ತಿರುಗಾಡುವಂತೆ ನೀವು ಮಾಡಿದರೆ ನಿಮ್ಮ ಕೆಲ
ವು ಕೈಗೂಡುವದು. " ವ್ಯಾಯಾಮವೃಥಗಾತ್ರಸ್ಯ ವ್ಯಾ
ಸನಾರ್ಜಿಸ್ತಿಕದಾಚನ " ವ್ಯಾಯಾಮದಿಂದ ಸವೃಥವಾದ ಶ
ರೀರವುಳ್ಳವನಿಗೆ ರೋಗಗಳು ಸೊಂಕುವದಿಲ್ಲ, ಎಂಬ ತತ್ವ
ವನ್ನು ನಿಮ್ಮ ವಿದ್ಯಾರ್ಥಿಗಳು ಮನಸ್ಸಿನಲ್ಲಿಡುವಂತೆ ಮಾ
ಡಿರಿ. ದೊಡ್ಡ ವಿದ್ವಾಂಸನಾಗಿಯೂ, ತೀರ ಸಿರಿವಂತನಾಗಿ
ಯೂ ಇದ್ದವನು ವ್ಯಾಯಾಮಾಭಾವದಿಂದ ರೋಗಕ್ಕೆ ಗು
ರಿಯಾಗಿ ಯಮನೂರಿಗೆ ಅಕಾಲಿಕ ಮರಣದಿಂದ ತಟ್ಟನೇ ತೆ
ರಳಿದರೆ, ಅವನು ತನ್ನ ತಾಯಿತಂದೆಗಳಿಗೂ ಹೆಂಡರುಮಕ್ಕ
ಳಿಗೂ ವಿಷ ಕೊಟ್ಟಂತೆ ಆಗುವದಿಲ್ಲವೇ !! ಆದಕಾರಣ ವಿ
ದ್ಯಾಸಂಪತ್ತಿಗೂ ಶರೀರಸಂಪತ್ತಿಗೂ ಇರುವ ನಿಕಟಸಂಬಂ
ಧವನ್ನು ನೀವು ಮರೆಯದೆ ಹುಡುಗರ ಮಾನಸಿಕ ಶ್ರಮ
ಕ್ಕೂ ಶಾರೀರ-ವ್ಯಾಯಾಮಕ್ಕೂ ಎಂದೂ ಬಿಚ್ಚಿದಂಥ ತಳ
ಕು ಹಾಕಿಬಿಡುವಿರೆಂದು ನಾವು ತುಂಬಾ ಕೋರುತ್ತೇವೆ.

ಶಾಲೆ ಎಂದರೆ ಅದರಲ್ಲಿ ಎಲ್ಲ ಪ್ರಕಾರದ ತೊಂದರೆಗಳೂ
ತುಂಟತನಗಳೂ ವ್ಯಾಜ್ಯಗಳೂ ಹುಟ್ಟುತ್ತವೆ. ಗುರುವು
ಶಾಲಾರಾಜ್ಯಕ್ಕೆ ಅರಸನೋಪಾದಿಯಲ್ಲಿ ಇರುವನು. ಕಾರಣ
ಅವನು ಅಸೂಯಾ, ದ್ವೇಷ, ಅನ್ಯಾಯ ಮೊದಲಾದ ದು
ರ್ಗುಣಗಳಿಲ್ಲದವನಾಗಿದ್ದರೆ ಮಾತ್ರ ಅವನಿಂದ ಕೆಲಸ ಯಥಾ
ನ್ಯಾಯವಾಗುವದು. ಇಲ್ಲವಿದ್ದರೆ ಅವನಿಂದ ಅನ್ಯಾಯಘಟಿಸಿ,
ಹುಡುಗರ ಮನಸ್ಸಿನಲ್ಲಿ ಅವನ ವಿಷಯಕ್ಕೆ ಪೂಜ್ಯಬುದ್ಧಿ
ಮುಟ್ಟುವ ಬದಲು ದ್ವೇಷ ಹುಟ್ಟುವದು. ನೀನು ಯಾರು?
ಮಾಮಲೆದಾರ ಮಾಧವರಾಯರ ಮಗನು. ಹಾಗಾದರೆ,
ಹೋಗು, ಒನೇ ನಂಬರ ಸ್ಥಳಕ್ಕೆ. ನೀನು ಯಾರು? ಭೀ
ಕ್ಕೇ ಬೀಡುವ ಭೀಮಭಟ್ಟನ ಮಗನು. ಹಾಗಾದರೆ ಕೂ

ತುಕೊ ವರ್ಗದ ಕೊನೆಯಲ್ಲಿ. ಈ ಪ್ರಕಾರವಾಗಿ ಗುರುವು ಮಾಡಿದರೆ, ಅದನ್ನು ಕಂಡು ವಿದ್ಯಾರ್ಥಿಗಳು ಆಪಹಾಸ್ಯ ಮಾಡರೋ? ಶಾಲೆಗೆ ಬರುವ ಹುಡುಗರು ಈಗ್ಗೆ ಹುಡುಗರಾಗಿ ಕಂಡುಬಂದರೂ ನಿಜವಾಗಿ ನೋಡಿದರೆ ಅವರು ನಮ್ಮ ಹಿಂದುಸ್ಥಾನದ ಭಾವೀ ಪ್ರಜೆಗಳೇ. ಮುಂದೆ ಅವರಲ್ಲಿ ಕೆಲವರು ದೊಡ್ಡ ದೊಡ್ಡ ಕೆಲಸಗಳನ್ನು ಮಾಡಬಹುದು, ಕೆಲವರು ಮುತ್ಸದ್ದಿಗಳೂ, ವಕೀಲರೂ, ವ್ಯಾಪಾರಿಗರೂ ಆಗಬಹುದು. ಆದರೆ ಅವರಲ್ಲಿ ಚಿಕ್ಕಂದಿನಲ್ಲಿಯೇ ಅನ್ಯಾಯ ಬೀಜಾರೋಪಣವಾಗಿದ್ದರೆ ದೇಶಕ್ಕೆ ಅವರಿಂದೆಷ್ಟು ಕೇಡಾದೀತೆಂಬದು ಹೇಳಲಳವಲ್ಲ. ಮೂರು ವರ್ಷದ ಒದ್ದಿಯು ನೂರು ವರ್ಷದವರೆಗೆ ಎಂಬ ಗಾದೆಯನ್ನು ಗುರುವು ಚನ್ನಾಗಿ ಲಕ್ಷದಲ್ಲಿಡತಕ್ಕದ್ದು. ಒಬ್ಬ ಜರ್ಮನ್ ಗೃಹಸ್ಥನು ಮತ್ತೊಬ್ಬನಿಗೆ "ಎಲ್ಯೆ ಮಿತ್ರನೇ, ನಿನ್ನ ಮಗನ ಮೂರನಿನ ಏಳು ವರ್ಷಗಳನ್ನು ನನಗೆ ಕೊಡು (ನಿನ್ನ ಮಗನನ್ನು ಏಳು ವರ್ಷದ ತನಕ ನನ್ನ ಬಳಿಯಲ್ಲಿಟ್ಟರೆ) ಆದರೆ ನಾನು ಅವನನ್ನು ಘನ ವಿದ್ವಾಂಸನಾಗಿ ಮಾಡಿ ನಿನಗೆ ತಿರುಗಿ ಕೊಡುತ್ತೇನೆ" ಎಂದು ಅಂದನಂತೆ. ಇದರ ಅರ್ಥವಾದರೂ ಚಿಕ್ಕ ತನವಲ್ಲಿಯೇ ಸುಗುಣದುರ್ಗುಣಗಳು ನೆಲೆಗೊಡು ಅವು ಅಮರಣ ಇರುವವೆಂದು ತಿಳುಕೊಳ್ಳತಕ್ಕದ್ದು ಅದಕಾರಣ ಚಿಕ್ಕ ಹುಡುಗರಿಗೆ ತಕ್ಕ ಗುರು ದೊರೆದಾ ಎಷ್ಟ ಚೊಕ್ಕ ಕೆಲಸವಾಗುವದು ನೀವೇ ನೋಡಿರಿ.

SELECTIONS FROM THE BOMBAY KARNATIK GAZETTEER.

ಮುಂಬಯಿ ಕರ್ನಾಟಕದ ವೃತ್ತಾಂತದಿಂದ ತೆಗೆದುಕೊಂಡ ಅವತರಣಿಗಳು.

ಸನ್ ೧೮೮೦ನೇ ವರ್ಷದಲ್ಲಿ ಖಾನೆಸುಮಾರಿಯಾದದ್ದು ಎಲ್ಲರಿಗೂ ಗೊತ್ತಿರುತ್ತದಷ್ಟೇ. ಅದರ ತರುವಾಯ ಇಂಡಿಯಾ ಸರಕಾರದವರು ಗ್ಯಾಝೆಟಿಯರ ಖಾತೆ ಎಂಬದೊಂದು ಸ್ವತಂತ್ರ ಖಾತೆಯನ್ನು ಇಟ್ಟು ಪ್ರತಿಯೊಂದು ಇಲಾಖೆಯ ಭೂಮಿಯ ವರ್ಣನೆ, ಹುಟ್ಟುವಳಿ, ನಿವಾಸಿಗಳು, ಬಕ್ಕಲತನ, ಭಾಂಡವಲು, ವ್ಯಾಪಾರ, ಕೈಗಾರಿಕೆಗಳು, ಇತಿಹಾಸ, ಭೂಮಿ, ನ್ಯಾಯ, ಕಂದಾಯ, ಶಿಕ್ಷಣ, ಆರೋಗ್ಯ ಮುಂತಾದವುಗಳ ಸಾದ್ಯಂತ ವರ್ಣನೆಗಳನ್ನು ಬರಿಸಿದರು. ಆ ಮೇಲೆ ಈ ಮೇರೆಗೆ ಬರೆಯಲ್ಪಟ್ಟ ಬೇರೆ ಬೇರೆ ಇಲಾಖೆಗಳ ವರ್ಣನೆಯನ್ನು ಒಟ್ಟುಗೂಡಿಸಿ ಇಡಿ ಹೀದುಸ್ತಾನದ ಒಂದು ವರ್ಣನೆಯನ್ನು ಸಿದ್ಧಮಾಡಿ ಅದಕ್ಕೆ "ಇಂಪೀರಿಯಲ್ ಗ್ಯಾಝೆಟಿಯರ" ಎಂಬ ಹೆಸರಿಟ್ಟರು. ಅದರೆ ಈ ಎಲ್ಲ ಗ್ರಂಥಗಳು ಇಂಗ್ಲಿಷಭಾಷೆಯಲ್ಲಿರುತ್ತವೆ. ಇವುಗಳ ಉಪಯೋಗವು ಕನ್ನಡಿಗ ಜನರಿಗೆ ಆಗಬೇಕೆಂಬ ಉದ್ದೇಶದಿಂದ ಮುಂಬಯಿ ಕರ್ನಾಟಕ ಗ್ಯಾಝೆಟಿಯರಗಳ ಕನ್ನಡ ಭಾಷಾಂತರವನ್ನು ರಾವಸಾಹೇಬ ವೆಂಕಟರಂಗೊ ಕಟ್ಟಿ ಇವರಿಂದ ಮಾಡಿಸಿ, ಪುಸ್ತಕಗಳನ್ನು ಸರಕಾರೀ ಡಿಪೋಗಳಲ್ಲಿ ಮಾರಾಟಕ್ಕೆ ಇಟ್ಟಿದ್ದಾರೆ. ಪುಸ್ತಕಕ್ಕೆ ನಾಲ್ಕು ರೂಪಾಯಿ ಬೆಲೆ ಬೀಳುವದು. ಅವಶ್ಯವಿದ್ದವರು ಈ ಪುಸ್ತಕವನ್ನು ತರಿಸಿಕೊಳ್ಳಬೇಕೆಂದು ಸೂಚಿಸುತ್ತೇನೆ. ಆದರೆ ಇಷ್ಟು ಕ್ರಯ ಕೊಟ್ಟು ತರಿಸಿಕೊಳ್ಳುವದು ಬಹುಜನ

ಮಾಸ್ತರರಿಗೆ ಸಾಧ್ಯವಲ್ಲೆಂದು ತಿಳಿದು, ನಾವು ಮೆ. ಎಜ್ಯು ಕೇಶನಲ್ ಇನಸ್ಪೆಕ್ಟರ ಸಾಹೇಬ ಬಹಾದ್ದೂರ ದಕ್ಷಿಣಭಾಗ ಇವರ ಅಪ್ಪಣೆಯನ್ನು ಪಡೆದು, ಆದರೊಳಗಿನ ಮುಖ್ಯ ಮುಖ್ಯ ಸಂಗತಿಗಳನ್ನು ನಮ್ಮ ಪತ್ರಿಕದಲ್ಲಿ ಪ್ರಕಟಿಸುವ ಆಲೋಚನೆಯನ್ನು ಮಾಡಿದ್ದೇವೆ. ಒನೇ ಇಯತ್ತೆಯ ವಿದ್ಯಾರ್ಥಿಗಳು ಆಯಾ ಜಿಲ್ಲೆಯ ಭೂಗೋಲವನ್ನು ಕಲಿಯಬೇಕಾಗುತ್ತದೆ. ಆದರೆ ಆ ವಿಷಯದ ಮೇಲೆ ತಕ್ಕ ಪುಸ್ತಕವು ಇಲ್ಲದ್ದರಿಂದ ಮಾಸ್ತರರಿಗೆ ಏನು ಕಲಿಸಬೇಕು ಎಂಬದು ತಿಳಿಯದೆ ಹೋಗುವದರಿಂದ ತೊಂದರೆಯಾಗುತ್ತದೆ. ಆ ತೊಂದರೆಯನ್ನು ಪರಿಹರಿಸುವ ಉದ್ದೇಶದಿಂದ ಭೂಗೋಲಶಿಕ್ಷಣಕ್ಕೆ ಅನುಕೂಲಿಸುವ ಸಂಗತಿಗಳನ್ನು ಮೊದಲು ತಿಳಿಸುವೆವು.

ಧಾರವಾಡ ಜಿಲ್ಲೆಯ ವರ್ಣನೆ.

ತಾಲೂಕುಗಳು.

ಧಾರವಾಡ ತಾಲೂಕು.

ಕ್ಷೇತ್ರ—ಇದು ಜಿಲ್ಲೆಯ ವಾಯವ್ಯ ಮೂಲೆಯಲ್ಲಿ ಬೆಳಗಾವಿಯ ಜಿಲ್ಲೆಯ ದಕ್ಷಿಣಕ್ಕಿರುತ್ತದೆ. ಇದರಲ್ಲಿ ಸರಕಾರೀ ಗ್ರಾಮಗಳು ೧೫೯, ದುಮಾಲೀ ಗ್ರಾಮಗಳು ೩೪ ಇರುತ್ತವೆ. ಕ್ಷೇತ್ರಫಲ ೭೦೪ ಚ. ಮೈಲುಗಳು. ಜನಸಂಖ್ಯೆ ೧,೧೧,೧೩೭ ಭೂಮಿಯ ಕಂದಾಯವು ೨,೩೭,೦೪೦ ರೂ ಪಾಯಿ.

ಸ್ವರೂಪ—ಪಶ್ಚಿಮ ದಕ್ಷಿಣಗಳಲ್ಲಿ ಗುಡ್ಡಗಾಡು ನೆಲ; ಅದರಲ್ಲಿ ಅಡವಿ ಹಬ್ಬಿರುವದು; ಉತ್ತರ ಪೂರ್ವಗಳಲ್ಲಿ ತಕ್ಕಮಟ್ಟಿಗೆ ಸವನಾವ ಎರೆಭೂಮಿ, ಅದರಲ್ಲಿ ಮಾವು, ಜಾಲಿಗಳ ಹೊರತು ವೃಕ್ಷಗಳಿಲ್ಲ.

ಭೂಮಿ—ಕೆಲವು ಕಣಿವೆಗಳಲ್ಲಿಯೂ ಕೊಳ್ಳಗಳಲ್ಲಿಯೂ ಮಾತ್ರ ಕೆಂಪು ಭೂಮಿಯನ್ನು ಕಾಣಬಹುದು, ಉಳಿದಲ್ಲೆಲ್ಲ ಎರೆ ಭೂಮಿಯು.

ಹವೆ, ಮಳೆ, ನೀರು—ಪಶ್ಚಿಮ ಭಾಗದಲ್ಲಿ ಹವೆ ತಂಪು, ಜ್ವರಕಾರಕ; ಪೂರ್ವ ಭಾಗದಲ್ಲಿ ಆರೋಗ್ಯಕರವಾದದ್ದು. ಧಾರವಾಡದಲ್ಲಿ ಮಳೆ ಸರಾಸರಿ ೩೨ ಇಂಚು ಬೀಳುವದು. ಆದರೆ ಪಶ್ಚಿಮ ಭಾಗದಲ್ಲಿ ಬೀಳುವಷ್ಟು ಮಳೆ ಪೂರ್ವ ಭಾಗದಲ್ಲಿ ಬೀಳುವದಿಲ್ಲ. ತುಪ್ಪೀ ಹಳ್ಳದ ಹೊರತು ಸರು ವುಗಳಿಲ್ಲ. ಎಲ್ಲ ಕಡೆಯಲ್ಲಿಯೂ ಕೆರೆಗಳ ನೀರೇ ಮುಖ್ಯ ಆಸರ. ಕೆಲವು ಕಡೆಯಲ್ಲಿ ಸೇದುವ ಬಾವಿಗಳುಂಟು. ಆದರೆ ಬಹಳ ಕಡೆಯಲ್ಲಿ ಕೆರೆಗಳಲ್ಲಿಯೂ ಬಾವಿಗಳಲ್ಲಿಯೂ ನೀರು ಸ್ವಲ್ಪ ಸಾಳು ಇರುತ್ತದೆ. ಒಟ್ಟಿಗೆ ಈ ತಾಲೂಕಿನಲ್ಲಿ ನೀರಿನ ಕೊರತೆಯುಂಟು.

ಗ್ರಾಮಗಳು.

ಧಾರವಾಡ—ಇದು ಬೆಳಗಾವಿಯ ದಕ್ಷಿಣಕ್ಕೆ ೪೮ ಮೈಲಿನಮೇಲೆ ಅದೆ. ಊರಿನ ಕ್ಷೇತ್ರ ೩೫೫ ಎಕರು; ಜನ ಸಂಖ್ಯೆ ೩೦೦೦೦ ಈ ಊರು ಸಮುದ್ರದ ಪೃಷ್ಠಭಾಗದ ಮೇಲೆ ೨೫೪೮ ಫೂಟು ಎತ್ತರವಿರುತ್ತದೆ.

ಧಾರವಾಡದ ಗ್ರಾಮದಲ್ಲಿ ಕೋಟೆ, ಕಸಬೆ, ನೆರೆ ಹಳ್ಳಿಗಳು, ಯುರೋಪಿಯನ್ ವಸ್ತಿ, ಲಷ್ಕರು ಎಂಬ ಐದು ಭಾಗಗಳನ್ನು ಮಾಡಬಹುದು.

ಕೋಟೆಯು—ಬಹುತರ ವರ್ತುಲಾಕಾರವಾಗಿರುತ್ತದೆ. ಇದರ ವ್ಯಾಸವು ಸುಮಾರು ೪೦೦ ಯಾರ್ಡು, ಕ್ಷೇತ್ರ ೩೬ ಎಕರು; ಎತ್ತರವಾದ ಗೋಡೆಗಳೂ ಭದ್ರವಾದ ಕೊತ್ತಲಗಳೂ, ಆಳವಾದ ಅಗಳುತಗಳೂ ಒಟ್ಟುಗೂಡಿ ಈ ಕೋ

ಟಿಯಾಗಿದೆ. ಬತ್ತಿಟ್ಟಿಗೆ ಮಾತ್ರ ಗೋಡೆಯು ಕೆಡವಿ, ಕಂದಕಕ್ಕೆ ಭರಿಹಾಕಿ, ಬಳಿಗೆ ಹೋಗಲಿಕ್ಕೆ ಮಾರ್ಗ ಮಾಡಿದ್ದಾರೆ. ಬೇರೆ ಕಡೆಯಲ್ಲೆಲ್ಲ ಗೋಡೆಯೂ ಕಂದಕವೂ ಈಗ್ಯೂ ಉಂಟು. ಪೂರ್ವ ದಿಕ್ಕಿನಲ್ಲಿ ಈ ಕೋಟೆಗೆ ಬಂದವರೊಳಗೊಂದು ನಾಲ್ಕು ಅಗಸೇ ಬಾಗಿಲುಗಳಿದ್ದವು. ಅವುಗಳಲ್ಲಿ ಎರಡು ಮಾತ್ರ ಸದ್ಯಕ್ಕಿರುತ್ತವೆ. ಹೊಸಲಿನ ಬಾಗಿಲು ದಾಟಿ ಹೋದಬಳಿಕ ರಣಸ್ತಂಭವೆಂಬುದೊಂದು ಎತ್ತರವಾಗಿ ನಿಲ್ಲಿಸಿದ ಕಲ್ಲು ಕಾಣಿಸುತ್ತದೆ. ಅದನ್ನು ಯಾರು ಯಾವ ಕಾಲಕ್ಕೆ ನಿಲ್ಲಿಸಿದರೆಂಬದು ತಿಳಿದಿಲ್ಲ. ಪೂರ್ವದಲ್ಲಿ ಕೊಲ್ಲತಕ್ಕಂಥ ಶರೆಯವರನ್ನು ಈ ರಣಸ್ತಂಭದ ಮುಂದೆ ಕೊಲ್ಲುತ್ತಿದ್ದರೆಂದು ಜೇಳುತ್ತಾರೆ. ಇಂಗ್ಲಿಷ ಸರಕಾರದ ಅಮಲು ಆದಬಳಿಕ ಬಹಳಕಾಲದ ವರೆಗೆ ಈ ಕಲ್ಲಿನ ಮುಂದೆ ಕುರಿಗಳನ್ನು ಕೊಯ್ಯುತ್ತಿದ್ದರು. ಈ ಕೋಟೆಯೊಳಗೆ ಪೂರ್ವದಲ್ಲಿ ದಂಡಾಳುಗಳಿರುತ್ತಿದ್ದರು. ಅವರೆ ಈಗ ಯುರೋಪಿಯನ್ ಅಧಿಕಾರಸ್ಥರಿರುತ್ತಾರೆ. ತಾಲೂಕ ಕಚೇರಿಯೂ ಆಸಪತ್ರಿಯೂ ಅಲ್ಲಿಯೇ ಇರುತ್ತವೆ.

ಕಸಬೆ—ಈಗಿನ ಮಂಗಳವಾರ ಪೇಟೆಯು ದಕ್ಷಿಣಭಾಗ, ಶುಕ್ರವಾರಪೇಟೆ, ಇವೆಲ್ಲ ಬಿನಾದಿಯ ವಸ್ತಿಯು ಪ್ರದೇಶವು. ಇವಕ್ಕೆ ಕಸಬೆ ಅಥವಾ ಪೇಟೆಯೆನ್ನುವರು.

ನೆರೆ ಹಳ್ಳಿಗಳು—ಮದೀಹಾಳ, ಹಾವೇರೀಪೇಟೆ, ಗುಲಗಂಜೀಕೊಪ್ಪ, ಮಾಳಾಪುರ, ಕಾಮಲಾಪುರ, ನಾರಾಯಣಪುರ, ಹೊಸಮಾಳಾಪುರ, ಸೈದಾಪುರ ಎಂಬ ಎಂಟು ಸಣ್ಣ ಸಣ್ಣ ಹಳ್ಳಿಗಳು ಕಸಬೆಯ ಉತ್ತರಕ್ಕೆ ಅರ್ಧ ಮೈಲಿನೊಳಗೆ ಬಾವಕಟ್ಟಾಗಿ ಹೊಂದಿ ಇರುತ್ತವೆ. ಮದೀಹಾಳವು ಎಲ್ಲಕ್ಕೂ ಪೂರ್ವಕ್ಕೆ ಇರುತ್ತದೆ. ಇಲ್ಲಿ ಇಪ್ಪತ್ತು ಮೂವತ್ತು ಪೂಟು ಅಗಿದರೆ ತೀನೀರು ಹತ್ತುತ್ತದೆ.

ಯುರೋಪಿಯನ್ ವಸ್ತಿಯು—ಊರು ಕೋಟೆಗಳ ಪಶ್ಚಿಮಕ್ಕೆ ಸುಮಾರು ೪೦ ಬಂಗಲೆಗಳಲ್ಲಿ ಯುರೋಪಿಯನ್ ಕಾವುದಾರರು ವಾಸಿಸುತ್ತಾರೆ. ಈ ಬಂಗಲೆಗಳ ಸುತ್ತುಮುತ್ತಲಿನ ಆವಾರಗಳು ವಿಸ್ತಾರವಾಗಿಯೂ ಬಂಗಲೆಗಳ ಕಟ್ಟಡವು ಭವ್ಯವಾಗಿಯೂ ಉಂಟು. ಬಹುತರ ಎಲ್ಲ ಬಂಗಲೆಗಳ ಮುಂಬೆ ಪೂಗಿಡಗಳ ತೋಟಗಳಿರುತ್ತವೆ. ಈ ವಸ್ತಿಯು ಪ್ರದೇಶವು ನಿರ್ಮಲವಾಗಿಯೂ ಆರೋಗ್ಯವುಳ್ಳದ್ದಾಗಿಯೂ ಇರುತ್ತದೆ.

ಲಷ್ಕರ—ಊರಿನ ವಾಯವ್ಯಕ್ಕೆ ಸುಮಾರು ಎರಡು ಮೈಲಿನಮೇಲೆ ಲಷ್ಕರದ ಛಾವಣಿ ಉಂಟು. ಇಲ್ಲಿಯು ಹವೆಯು ಬಳಿತಾಗಿ ಆರೋಗ್ಯದ್ದಿರುತ್ತದೆ; ನೀರಾದರೂ ತಕ್ಕ ಮಟ್ಟಿಗೆ ಸಮೃದ್ಧಿಯಾಗಿರುವದು. ಸನ ೧೮೮೬ರಲ್ಲಿ ಈ ಛಾವಣಿಯಲ್ಲಿ ೩೧೦ ಜನ ದಂಡಾಳುಗಳು ೧೯೬ ಜನ ಅವರ ಪರಿವಾರದವರು ಇದ್ದರು.

ವಿದ್ಯಾದಾನಕ್ಕೆ—ಧಾರವಾಡದಲ್ಲಿ ಒಂದು ಸರಕಾರೀ ಹಾಯಸ್ಕೂಲು, ಒಂದು ಮಿಶನರೀ ಹಾಯಸ್ಕೂಲ, ಒಂದು ಟ್ರೇನಿಂಗಕಾಲೇಜ, ಒಂದು ಮರಾಠೀ ಶಾಲೆ, ೧೧ ಕನ್ನಡ ಗಂತು ಹುಡುಗರ ಶಾಲೆಗಳು, ೪ ಹೆಣ್ಣುಮಕ್ಕಳ ಶಾಲೆಗಳು ಇರುತ್ತವೆ. ಈ ಯಾವತ್ತು ಶಾಲೆಗಳಲ್ಲಿ ಕೂಡಿ ೬೦೦೦ಕ್ಕಿಂತ ಹೆಚ್ಚು ಜನ ವಿದ್ಯಾರ್ಥಿಗಳು ಕಲಿಯುತ್ತಾರೆ. ಊರೊಳಗೆ ಒಂದು ಪುಸ್ತಕಾಲಯವೂ ನಾಲ್ಕು ಮುದ್ರಣಾಲಯಗಳೂ ಎರಡು ಔಷಧಾನೆಗಳೂ ಎರಡು ಔಷಧಾಲಯಗಳು, ನಾಲ್ಕು ಕನ್ನಡ ಒಂದು ಮರಾಠಿ ಈ ಮೇರೆಗೆ ಐದು ವರ್ತಮಾನಪತ್ರಗಳು ಹೊರಡುತ್ತವೆ.

ಕೈಗಾರಿಕೆಗಳು—ಸರಕಾರೀ ತುರಂಗದಲ್ಲಿ ಮೇಲಾದ

ಜವುಳಾನೆಗಳೂ ನಾನಾಪ್ರಕಾರದ ಸೂಸಿಗಳೂ, ಖುರ್ಚಿ, ಮೇಜು, ಪೆಟ್ಟಿಗೆ ಮುಂತಾದ ಕಟ್ಟಿಗೆಯ ಸಾಮಾನಗಳು ಹುಟ್ಟುತ್ತವೆ. ಕೀರೆ, ಧೋತ್ರ, ಬಲ್ಲಿ ಮುಂತಾದ ಉರುಟು ಬಟ್ಟೆಗಳನ್ನು ನೇಕಾರರು ನೆಯುತ್ತಾರೆ. ತಾಮ್ರ ಹಿತ್ತಾಳೆಗಳ ಭಾಂಡೆಗಳು ಸಹ ತಕ್ಕಮಟ್ಟಿಗೆ ಆಗುತ್ತವೆ. ಮಣ್ಣಿನ ಪಾತ್ರೆಗಳು, ಒಣ್ಣನ ತೊಟ್ಟಲು, ಪಗಡಿ, ಕಿಟ್ಟದ ಗೊಂಬೆಗಳು, ಕುದುರೆಯ ಜೀನುಗಳು ಹುಟ್ಟುತ್ತವೆ.

ವ್ಯಾಪಾರ–ಊರ ಪಶ್ಚಿಮಕ್ಕೆ ಊರಿಗೂ ಕೋಟೆಗೂ ನಡುವೆ ಹೊಸ ಮಾರ್ಕೆಟ್ಟು ಕಟ್ಟಿಸಿದ್ದಾರೆ. ಅಲ್ಲಿ ಮಂಗಳವಾರ ಸಂತೆ ನೆರೆಯುತ್ತದೆ ಈ ಸಂತೆಯಲ್ಲಿ ಅಕ್ಕಿ, ಜೋಳ, ಗೋಧಿ ಮುಂತಾದ ಕಾಳಿನ ವ್ಯಾಪಾರವೂ ದನಗಳ ವ್ಯಾಪಾರವೂ ಬಹಳ ಆಗುತ್ತದೆ. ಅವುಗಳ ತರುವಾಯ ವಸ್ತ್ರಗಳು, ಕಿರಾಣಿ ಪಾತ್ರೆಗಳು, ತೊಲೆಗಳು ಮುಂತಾದ ಸರಕುಗಳ ವ್ಯಾಪಾರವಾದರೂ ತಕ್ಕಮಟ್ಟಿಗೆ ನಡೆಯುತ್ತದೆ.

(ಮುಂದೆ ಸಾಗುವದು)

METHODS OF TEACHING.

ಕಲಿಸುವ ಪದ್ಧತಿಗಳು.

ನಿಬಂಧ.

ಸರಕಾರವು.

೧. ಸರಕಾರವೆಂದರೇನು?

೨. ಸರಕಾರದ ಅವಶ್ಯಕತೆ.

(ಅ) ದೇಶದಲ್ಲಿ ಶಾಂತತೆಯನ್ನೂ ವ್ಯವಸ್ಥೆಯನ್ನೂ ಇಡುವ ಬಗ್ಗೆ.

---

೧. ದೇಶ ಸಂಬಂಧದ ಕಾಯಿದೆಗಳನ್ನು ಮಾಡಿ ಅವುಗಳಿಗನುಸರಿಸಿ ನಡೆಯುವ ಜನ ಸಮುದಾಯವು ಸರಕಾರವೆಂದೆನಿಸುತ್ತದೆ.

(ಬ) ಶತ್ರುಗಳಿಂದ ದೇಶವನ್ನು ಕಾಪಾಡುವ ಸಲುವಾಗಿ.

(ಕ) ಸಂಪತ್ತಿಯನ್ನು ಹೆಚ್ಚಿಸುವದಕ್ಕಾಗಿ.

(ಡ) ಉದ್ಯೋಗಗಳಿಗೆ ಪ್ರೋತ್ಸಾಹವನ್ನುಂಟುಮಾಡುವ ಬಗ್ಗೆ.

(ಇ) ಜನರ ಹೆಚ್ಚು ವಿಕೆಯನ್ನೂ ಸುಖವನ್ನೂ ಬೆಳಸುವದಕ್ಕಾಗಿ.

೩. ಉತ್ತರೋತ್ತರ ಅಭಿವೃದ್ಧಿಯು.

(ಅ) ಕುಟುಂಬದ ಯಜಮಾನನು ತಂದೆ.

(ಬ) ಜಾತಿಯ ಮುಖ್ಯನು ನಾಯಕ.

(ಕ) ರಾಜ್ಯದ ಒಡೆಯ ಅರಸು.

೪. ತರಗಳು.

(ಅ) ರಾಜಸತ್ತಾತ್ಮಕ.

(೧) ಅಂಕೆ ಇಲ್ಲದ.

(೨) ಪರಿಮಿತವಾದ.

(ಬ) ಮಹಾಜನ ಸತ್ತಾತ್ಮಕ.

(೧) 'ಅಲಿಗಾರ್ಕಿ' ಎಂಬ ಸ್ವಲ್ಪಜನ ಪ್ರಭುತ್ವವು.

(ಕ) ಲೋಕ ಸತ್ತಾತ್ಮಕ.

(೧) ಅನಾಯಕ ರಾಜ್ಯ.

೫. ರಾಷ್ಟ್ರಗಳು.

(ಅ) ನಾಲ್ಕು ದೊಡ್ಡ ಬಾದಶಾಹಿಗಳು.

(೧) ಅಸೀರಿಯದ್ದು.

(೨) ಇರಾಣದ್ದು,

(೩) ಗ್ರೀಸದ್ದು.

(೪) ರೋಮದ್ದು.

(ಬ) ಕಲೀಫರ ಬಾದಶಾಹಿಗಳು.

(ಕ) ಮೊಗಲ ಬಾದಶಾಹಿಗಳು.

(ಡ) ರಶಿಯಾ.

(ಇ) ಜರ್ಮನಿ.

ಪ್ರಜಾನುಮತಿಯಿಂದ ಪರಮಿತವಾದ ಏಕಾಧಿಪತ್ಯವು.

(ಅ) ರಾಜ್ಯಭಾರದ ಉತ್ತಮ ತರವು.

(ಬ) ಇಂಗ್ಲಂಡ.

(೧) ಅರಸು ಅಥವಾ ಅರಸಿ.

(೨) ಪಾರ್ಲಮೆಂತ ಸಭೆ.

(೩) 'ಕನ್ಸರ್ವೆತಿವ' 'ಲಿಬರಲ್' ಎಂಬ ಎರಡು ಪಕ್ಷಗಳು.

(ಕ) ಪ್ರಾಚೀನ ಹಿಂದೂ ರಾಷ್ಟ್ರಗಳು.

(೧) ಅರಸು.

(೨) ಪ್ರಧಾನಿ.

(ಡ) ಮೈಸೂರ.

(೧) ಸುಶಿಕ್ಷಿತನಾದ ಮಹಾರಾಜನು.

(೨) ಹೊಸ ರಾಜ್ಯ ಪದ್ಧತಿ.

೩. ಪ್ರಜಾಧಿಪತ್ಯಗಳ ಅಸ್ಥಿರತ್ವ.

(ಅ) ಆರಂಭದಲ್ಲಿ ಬಲಪಡಿಯೋಣ.

(ಬ) ರೋಮನ್ ಪ್ರಜಾ ಸತ್ತಾತ್ಮಕ ರಾಜ್ಯ.

(ಕ) ಫ್ರಾನ್ಸ.

(ಡ) ಅಮೇರಿಕಾ.

೪. ಹಿಂದೂ ದೇಶದ ರಾಜ್ಯಭಾರವು. [ವು.

(ಅ) ಹಿಂದೂ ದೇಶದ ಅತಿ ಬಲಾಢ್ಯವಾದ ರಾಜ್ಯಭಾರ

(ಬ) ವೈಸರಾಯು ಮತ್ತು 'ಕಾವುನ್ಸಿಲ್' ಎಂಬ ಮಂತ್ರೀ ಸಭೆ.

(ಕ) 'ಸೆಕ್ರೆತರಿ ಆಫ಼್ ಸ್ಟೇತ' ಎಂಬ ಹಿಂದುಸ್ಥಾನದ ಕಾರ್ಯದರ್ಶಿ.

(ಡ) ಅಪೀಲು ಮಾಡುವ ಅಧಿಕಾರ.

೯. ಪ್ಲೈಸರಾಯನ ಸಭೆಯ ಮೆಂಬರರು (ಜನರಿಂದ ಆರಿಸಲ್ಪಟ್ಟವರು.)

೨. ಪ್ರತಿ ಬಂದು ಸುಧಾರಿಸಿದ ದೇಶದಲ್ಲಿ ಅದೇ ದೇಶದ ಸ್ವಂತ ಸರಕಾರವು ಇರುವದು. ಅದರಿಂದ ದೇಶದಲ್ಲಿ ಶಾಂತತೆಯೂ ವ್ಯವಸ್ಥೆಯೂ ಉಂಟಾಗುವವು. ಇವು ದೇಶದಲ್ಲಿ ಇರದಿದ್ದರೆ ಜನರು ಬಡುಕಲಾರರು. ಅನಾಯಕ ದೇಶದ ಸ್ಥಿತಿಯು ಬಹು ಭಯಂಕರವಾಗಿರುವದು. ಅವರೆ ಬಳ್ಳೀ ಸರಕಾರವಿರುವ ದೇಶದಲ್ಲಿ ಅಂತಸ್ಥ ಕಲಹಗಳು ಹುಗ್ಗುವದಲ್ಲದೆ ಅವರ ಮೇಲೆ ಆಗುವ ಪರದೇಶದ ದಾಳುಗಳು ಸಹ ಕಟ್ಟಾಗುತ್ತವೆ. ಇಂಥ ಸರಕಾರವು ನೆರೆ ಸರಕಾರಗಳಿಂದ ಸನ್ಮಾನವನ್ನು ಪಡೆದು, ಅವುಗಳ ಕೂಡ ಬಹುಂಬಡಿಕೆಗಳನ್ನು ಮಾಡಿಕೊಂಡು, ಸ್ವದೇಶದಲ್ಲಿ ಎಲ್ಲ ತರವ ಸುಧಾರಣೆಗಳನ್ನಿಂಟು ಮಾಡುವದಕ್ಕೆ ಮುಂದರಿಸುವದು. ಕಾಡು ದೇಶಗಳಲ್ಲಿ ಭೂಮಿಯು ಹುಟ್ಟುವಳಿಗಳ ವೃದ್ಧಿಯಾಗುವದಿಲ್ಲ; ಬೇಸಾಯದ ಕೆಲಸವು ಸಾಗುವದಿಲ್ಲ; ಅಡವಿಗಳು ಕಾಯಲ್ಪಡುವದಿಲ್ಲ; ಖನಿಜ ದ್ರವ್ಯಗಳು ಅಜ್ಞಾತವಾಗಿರುತ್ತವೆ. ಅವರೆ ವಿದ್ವಾಂಸರ ಕೈಯಲ್ಲಿ ರಾಜ್ಯಭಾರವಿದ್ದರೆ ಬೇಸಾಯ, ವ್ಯವಸಾಯ ಮುಂತಾದವುಗಳ ವೃದ್ಧಿಯಿಂದ ಸಂಪತ್ತಿಯು ತಲೆದೋರಿ, ಅದು ದಿನ ದಿನಕ್ಕೂ ಬೆಳೆಯುತ್ತ ನಡೆಯುತ್ತದೆ. ಬಳ್ಳೀ ಸರಕಾರದವರು ಸ್ವದೇಶದ ಕಚ್ಚಾ ಹುಟ್ಟುವಳಿಯನ್ನು ಪರದೇಶಕ್ಕೆ ಕಳಿಸುವದಿಲ್ಲ; ಮತ್ತು ದೇಶೀ ಕಾರಖಾನೆಗಳಿಗೂ ಕೈಗಾರಿಕೆಯ ಜ

ನುಗೂ ಆಶ್ರಯವನ್ನೂ ಉತ್ತೇಜನವನ್ನೂ ಕೊಟ್ಟು, ಅವರ ಕೈಯಿಂದ ಆ ಹುಟ್ಟುವಳಿಯ ಉತ್ತಮ ಬಡಿವೆಗಳನ್ನು ಮಾಡಿಸಿ, ಸ್ವಹಿತಕ್ಕಾಗಲಿ ಪರಹಿತಕ್ಕಾಗಲಿ ಅವುಗಳನ್ನು ಉಪಯೋಗಿಸುವರು. ಜನರ ಉರ್ಜಿತ ಸ್ಥಿತಿಯನ್ನೂ ಸೌಖ್ಯವನ್ನೂ ಹೆಚ್ಚಿಸುವಂಥ ಬಳ್ಳೀ ಕಾಯಿದೆಗಳನ್ನು ಮಾಡಿ, ಸರ್ವದಾ ಅವರ ಹಿತವನ್ನೇ ಮಾಡುವವರಲ್ಲಿ ಆ ಸರಕಾರವವರು ನಿಮಗ್ನರಾಗಿರುವರು.

೩. ಬಳ್ಳೀ ಸರಕಾರದ ಸುಧಾರಣೆಯು ಬಹುಮೇಲೆ ಉಂಟಾವವಲ್ಲ. ಕುಟುಂಬದ ತಂದೆಯಾದ ಯಜಮಾನನ ಹಿರೆತನದ ಉತ್ತರೋತ್ತರ ಅಭಿವೃದ್ಧಿಯೇ ಈ ಸುಧಾರಣೆಗೆ ಕಾರಣವು. ಪ್ರಾಚೀನ ಕಾಲದಲ್ಲಿ ಬಂದು ಕುಟುಂಬವು ಕಾಡು ದೇಶದಲ್ಲಿ ವಾಸ ಮಾಡುತ್ತಿರುವಾಗ, ತಂದೆಯೇ ಶ್ರೇಷ್ಠಾಧಿಕಾರಿಯಾಗಿರುತ್ತಿದ್ದನು. ಅವನು ಮೃತವಾದ ತರುವಾಯ ಅವನ ಹಿರೇ ಮಗನು ಉತ್ತರಾಧಿಕಾರಿಯಾಗುತ್ತಿದ್ದನು. ಕ್ರಮ ಕ್ರಮವಾಗಿ ಆ ಕುಟುಂಬವು ಬೆಳೆಯುತ್ತ ಬಂದು ಜಾತಿಯಾಯಿತು; ಮುಂದೆ ಆ ಜಾತಿಯು ಮುಖ್ಯಸ್ಥನ ಹಿರೇ ಮಕ್ಕಳೇ ಜನರ ಮೇಲೆ ಅಧಿಕಾರ ನಡಿಸುತ್ತ ಬಂದರು; ಬರಬರುತ್ತ ಜನರಲ್ಲಿ ಶೌರ್ಯವು ಹೆಚ್ಚಾಗಿ, ಕಡೆಗೆ ಬಳ್ಳೀ ಕೂರನೂ ಸಮ್ಮಣಿಯೂ ಆದವನೇ ಈ ಜನರ ಮೇಲೆ ಅಮಲು ನಡಿಸಹತ್ತಿದನು; ಹೀಗೆ ಆ ಜಾತಿಯಲ್ಲಿ ಶಾಂತ್ರತೆಯೂ ಸಾಗುವಳಿಯ ಉದ್ಯೋಗಗಳೂ ಬೆಳೆಯುತ್ತ ನಡೆದು, ಜನ ಸಮುದಾಯವು ಹೆಚ್ಚಿ, ಅದೇ ಬಂದು ಜನಾಂಗವಾಯಿತು; ಮತ್ತು ಅದರ ಅಧಿಪತಿಯೇ ಅರಸನಾದನು.

೪. ಸರಕಾರಗಳಲ್ಲಿ ಮೂರು ಮುಖ್ಯ ಭೇದಗಳಿರುವವು. ಇವುಗಳಲ್ಲಿ ಏಕರಾಜ್ಯಾಧಿಪತ್ಯವು ಅತಿ ಪುರಾತನವೂ ಸ್ವಾಭಾವಿಕವಾದದ್ದೂ, ಇರುವದು. ಒಬ್ಬನೇ ನಡಿಸುವ ಅಧಿ

ಕಾರಕ್ಕೆ ಏಕ ರಾಜ್ಯಾಧಿಪತ್ಯವೆಂಬ ಹೆಸರು. ಅವನಿಗೆ ಬೇರೆ ಬೇರೆ ದೇಶದ ಭಾಷೆಗಳಲ್ಲಿ ಬೇರೆ ಬೇರೆ ಹೆಸರುಗಳುಂಟು. ಅರಸನು ಯಾರ ಅಂಕೆಯಲ್ಲಿಯೂ ಇರದೆ ಸ್ವೇಚ್ಛನಾಗಿಯೂ ಸ್ವತಂತ್ರನಾಗಿಯೂ ಆಳುತ್ತಿದ್ದರೆ, ಅವನಿಗೆ ನಾಡಿಕೆಯಾಗಿ ಬಾದಶಹನೆಂದೆನ್ನುವರು. ಆದರೆ ಆವನು ತನ್ನ ಪ್ರಜೆಗಳ ಪ್ರತಿನಿಧಿಗಳ ಆಲೋಚನೆಯ ಸಭೆಗೆ ಬಳಗಾಗಿದ್ದರೆ ಅವನಿಗೆ ಅರಸನೆಂತಲೂ, ಅವನ ರಾಜ್ಯಕ್ಕೆ ಪರಿಮಿತವಾದ ಏಕಾಧಿಪತ್ಯದ ರಾಜ್ಯವೆಂತಲೂ ಅನ್ನುವರು. ಜನ ಸಮುದಾಯದಲ್ಲಿ ನಿಯಮಿತ ಜನರೇ ಒಟ್ಟಾಗಿ ರಾಜ್ಯಾಧಿಕಾರದ ಕೆಲಸವನ್ನು ನಡಿಸುತ್ತಿದ್ದು, ಅವರಿಂದಲೇ ಮಾತ್ರ ಆರಿಸಲ್ಪಟ್ಟ ಪ್ರತಿನಿಧಿಗಳ ಕೈಯಲ್ಲಿ ಶ್ರೇಷ್ಠಾಧಿಕಾರವು ಇದ್ದರೆ, ಆ ಸರಕಾರಕ್ಕೆ ಮಹಾಜನ ಸತ್ತಾತ್ಮಕವೆಂಬ ಹೆಸರು. ಆದರೆ ಈ ತರದ ಆಧಿಪತ್ಯವು ಈಗಿನ ಕಾಲದಲ್ಲಿ ಬಹು ಅಪರೂಪ. ಮಹಾಜನ ಪ್ರಭುತ್ವದ ಸಭಿಕರು ನಿರಂಕುಶವಾಗಿ ಆಳಿ, ತಮ್ಮ ಅಧಿಕಾರವನ್ನು ಕಂಡ ಕಂಡ ಹಾಗೆ ನಡಿಸಹತ್ತಿದರೆ ಅವರ ಆಳ್ಕೆಗೆ 'ಆಲಿಗಾರ್ಕಿ' ಎಂದೆನ್ನುತ್ತಾರೆ. ಪ್ರಾಚೀನ ಕಾಲದಲ್ಲಿ ಗ್ರೀಸ ದೇಶದಲ್ಲಿ 'ಆಲಿಗಾರ್ಕಿ' ಗಳೆಂಬ ರಾಜ್ಯಪದ್ಧತಿಗಳು ಅಲ್ಲಲ್ಲಿಗೆ ನಡೆಯುತ್ತಿದ್ದವು. ಆದರೆ ಇವು ಸ್ವಲ್ಪ ದಿವಸಗಳ ವರೆಗೆ ಮಾತ್ರ ನಡೆದು, 'ಟಾಯರಂಟ್ಸ್' ಎಂಬ ರಾಜ್ಯಾಪಹಾರಿಗಳು ಇವುಗಳನ್ನು ಇಲ್ಲದಂತೆ ಮಾಡಿದರು. ಬಹ್ಮೈಮ್ಮೆ ಪ್ರಜೆಗಳು ಏಕಾಧಿಪತ್ಯದಿಂದ ಆಳುವ ಅರಸನನ್ನು ಮೆಚ್ಚದೆ ಅವನನ್ನು ಸಿಂಹಾಸನದಿಂದ ತಳ್ಳಿ ರಾಜ್ಯಾಧಿಕಾರವನ್ನು ತಾವೇ ನಡಿಸುತ್ತಾರೆ. ಇವಕ್ಕೆ ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯೆಂಬ ಹೆಸರು. ಪ್ರಜಾ ಸತ್ತಾತ್ಮಕವೆಂದರೆ ರಾಜ್ಯದೊಳಗಿನ ಎಲ್ಲ ಜನರಿಂದ ಏರ್ಪಡಿಸಿದಂಥ ಸಭಿಕರಿಂದ ನಡಿಸಲ್ಪಡು-

ರಾಜ್ಯ ಕಾರಭಾರವು. ಆ ಸಭಿಕರು ತಮ್ಮೊಳಗಿನವನೊಬ್ಬನನ್ನು ನಿಯಮಿತ ಕಾಲವವರೆಗೆ ಅಧ್ಯಕ್ಷನನ್ನು ಮಾಡಿಕೊಳ್ಳುವರು. ಈಗಿನ ಪ್ರಜಾಧಿಪತ್ಯಗಳಲ್ಲಿ 'ಯುನೈಟೆಡ್ ಸ್ಟೇತ್ಸ' ಎಂಬ ಸಂಯುಕ್ತ ಸಂಸ್ಥಾನಗಳ ರಾಜ್ಯವೇ ಅತಿ ದೊಡ್ಡದು. ಅದರೊಳಗೆ ಸಹ 'ಡೆಮೊಕ್ರ್ಯಾಟ್ಸ' 'ರಿಪಬ್ಲಿಕನ್ಸ' ಗಳೆಂಬ ಎರಡು ಪಕ್ಷಗಳು ಇರುವವು.

(ಮುಂದೆ ಸಾಗುವದು)

DHARWAR TRAINING COLLEGE CERTIFICATE EXAMINATION—1893.

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

೧ನೇ ವರ್ಷದ ವರ್ಗ.

ಅಂಕಗಣಿತ ಮತ್ತು ಜಮೀನಿರ್ವಹ.

(ರೀತಿ ಹೊತ್ತು ಉತ್ತರ ನೋಡಲಾಗದು.)

(ಬಲಕ್ಕೆ ಬರೆದ ಅಂಕಿಗಳು ಪ್ರಶ್ನೆಗಳ ಗುಣಗಳು.)

೧. ಸನು, ನ್ಯಸ್ತ, ಮತ್ತು ಪ್ರಮಾಣ ಅಂದರೇನು ? ೪
ಪ್ರಮಾಣದಲ್ಲಿ ಎರಡೂ ಪದಗಳೂ ಒಂದೇ ಜಾತಿಯವು ಇರುವದು ಅವಶ್ಯಕವಾದದ್ದೇ ಹ್ಯಾಗೆ ಇದನ್ನು ಕಾರಣ ಸಹಿತ ತೋರಿಸರಿ.

೨. (ಅ) ಭಾಗಾಕಾರದಲ್ಲಿ ೯ರಿಂದ ತಾಳೆ ನೋಡುವ ೪
ರೀತಿಯನ್ನು ಬರೆದು ಅದನ್ನು ಸಿದ್ಧ ಮಾಡಿ ತೋರಿಸರಿ.

(ಬ) ಬೇರೀಜ ಮತ್ತು ವಜಾಬಾಕಿಯ ತಾಳೆ ೪
ನೋಡುವ ರೀತಿಗಳೆಷ್ಟು, ಮತ್ತು ಅವು ಯಾವವು ?

೩. ೬೪೫೫ ಸಂಖ್ಯೆಕ್ಕೆ ೯೯ರಿಂದ ಗುಣಿಸಬೇಕಾದಲ್ಲಿ ೪
ಎಷ್ಟು ರೀತಿಯಿಂದ ಗುಣಿಸಬಹುದು ?

೪. $\frac{೨-೫}{೫೬+೧೫೬೯೮೭}$ ದ $\frac{೧ ಪೌ. ೧೧ ಶಿ. ೪ ಪೆ.}{೨ ಪೌ. ೧೩ ಶಿ.}$ ದ ೧೪ ದಿ. ೪

೫ ತಾಸುಗಳ $\frac{೧೪೨ ಯಾರ್ಡ ೦.೪ ಫೂಟ}{೨ ಯಾರ್ಡ ೧.೩ ಫೂಟ}$ ಇದರ ಕಿಮ್ಮತ್ತು ತೆಗಿಯುವಿ.

೫. ಒಬ್ಬ ಮನುಷ್ಯನು ೧೦೦ಕ್ಕೆ ೪ ರೂ. ಬಡ್ಡಿಯಿಂ ೧೫
ದ ಕೆಲವು ಹಣವನ್ನು ಮತ್ತು ೫ ರೂಪಾಯಿ ಬಡ್ಡಿಯಿಂ
ದ ಅಷ್ಟೇ ಹಣವನ್ನು ಒಂದೇ ದಿವಸಾ ಸಾಲಾ, ತಂದು;
ಮೊದಲನೇ ರಕಮು ಬಡ್ಡೀಸಹಿತ ತಿರಗಿ ಕೊಟ್ಟ ನಂತರಾ
೬ ತಿಂಗಳಮೇಲೆ ಎರಡನೇ ರಕಮು ಬಡ್ಡಿ ಸಹಿತ ತಿರಗಿಕೊ
ಟ್ಟನು. ಎರಡೂ ರಕಮುಗಳು ಬಡ್ಡಿ ಕೂಡಿ ೧೧೦೦ ರೂ
ಪಾಯಿ ಆದರೆ ಅವನು ಎಷ್ಟು ಹಣಾ ಸಾಲಾ ತಂದಿರಬೇಕು?

೬. ನನ್ನ ಹತ್ತರ ಕೆಲವು ಹಣಾ ಇದ್ದು ಅದರಿಂದ ೧೬
ಕೆಲವು ಹಣ್ಣುಗಳನ್ನು ಕೊಳ್ಳಬೇಕಾಗಿರುತ್ತದೆ ಆದರೆ ೧
ಪೈಸ್ಸಿಗೆ ೪ರಂತೆ ಕೊಂಡರೆ ೫ ಪೈ. ಕಡಿಮೆ ಬೀಳುತ್ತವೆ;
ಮತ್ತು ಒಂದು ಪೈಸ್ಸಿಗೆ ೫ರಂತೆ ಕೊಂಡರೆ ೧೦ ಪೈ. ಉಳಿ
ಯುತ್ತವೆ. ಆದರೆ ನನ್ನ ಹತ್ತರ ಎಷ್ಟು ಹಣವಿತ್ತು? ಮತ್ತು ನನಗೆ ಎಷ್ಟು ಹಣ್ಣುಗಳು ಕೊಳ್ಳಬೇಕಾಗಿತ್ತು?

೭. ಒಬ್ಬ ಮನುಷ್ಯನು ಒಂದು ಮನೆಯನ್ನು ಕೆಲವು ೧೪
ಹಣಕ್ಕೆ ಕೊಂಡನು. ಅದನ್ನು ನೆಟ್ಟಗೆ ಮಾಡಿಸಲಿಕ್ಕೆ
ಮೂಲಕ್ರಯದ ಮೇಲೆ ೧೦೦ಕ್ಕೆ ೪ರಂತೆ ಖರ್ಚು ಮಾಡಿ
ದನು. ಆ ಮನೆ ಒಂದು ವರ್ಷದ ವರಿಗೆ ತೆರವು ಉಳಿಯಿತು.
ಅದರಿಂದ ಒಟ್ಟು ಖರ್ಚಿನ ಮೇಲೆ ೧೦೦ಕ್ಕೆ ೫ರಂತೆ ಲುಕ
ಸಾನ ಬಂದಿಸಿದನು. ಮತ್ತು ಆ ಮನೆಯನ್ನು ೧೧೯೦
ಪೌಂಡಿಗೆ ಮಾರಿದನು. ಅದರಿಂದ ಅವನಿಗೆ ಮೂಲ
ಕಿಮ್ಮತಿನ ಮೇಲೆ ೧೦೦ಕ್ಕೆ ೧೦ರಂತೆ ಲಾಭವಾಯಿತು.
ಆದರೆ ಆ ಮನೆಯ ಮೂಲ ಕ್ರಯವೆಷ್ಟು?

೮. ಒಬ್ಬ ವ್ಯಾಪಾರಿಯು ೧೦೦ ಹೇರು ಗೋದಿಯ ೧೦
ನ್ನು ಕೊಂಡು ಅದರಲ್ಲಿ ಕೆಲವು ೧೦೦ ಕ್ಕೆ ೮ರಂತೆ ಲಾಭ
ಕಟ್ಟಿ ಮಾರಿದನು. ಮತ್ತು ಕೆಲವು ೧೦೦ಕ್ಕೆ ೬ರಂತೆ ಲುಕ
ಸಾನ ಮಾಡಿಕೊಂಡು ಮಾರಿದನು. ಒಟ್ಟು ವ್ಯಾಪಾರ
ದಲ್ಲಿ ಅವನಿಗೆ ೧೦೦ಕ್ಕೆ ೫ರಂತೆ ಲಾಭವಾಯಿತು. ಆದರೆ
ಎಲ್ಲ ಗೋದಿಯನ್ನು ೭೧೦ ರೂಪಾಯಿಗೆ ಮಾರಿದ್ದರೆ ಲುಕ
ಸಾನಿಯಿಂದ ಎಷ್ಟು ಹೇರು ಮಾರಿರಬಹುದು?

೯. ಕೊಡತಕ್ಕ ಹಣಾ ಅಖೇರ ಅಢಾವಿನಲ್ಲಿ ತೆಗಿದು
ಕೆರ್ದಿಗೆ ಬರಿಯದೆ ಬಿಡುತ್ತಾರೆ. ಆದರೆ ಹೀಗೆ ಮಾಡುವ
ಕಾರಣವೇನು? ಹಾಗೆ ಮಾಡಿದಲ್ಲಿ ಕೊಡತಕ್ಕ ಹಣದ ಬಗ್ಗೆ
ಲೆಕ್ಕದಲ್ಲಿ ಹ್ಯಾಗೆ ವ್ಯವಸ್ಥೆ ಮಾಡಬೇಕು?

೧೬. ಅ. ಎಂಬುವನು ಬ. ನಿಗೆ ೫೦೦ ರೂ. ಕೊಡ ತಕ್ಕದ್ದಿದ್ದು ೨೦೦ ರೂ. ರೋಖ ಕೊಡುತ್ತಾನೆ ೧೦೦ ರೂ. ಕ. ನಿಗೆ ಹವಾಲೆ ಕೊಡುತ್ತಾನೆ. ಮತ್ತು ೨೦೦ ರೂ. ಕತಬಿ ಬರದು ಕೊಡುತ್ತಾನೆ. ಆದರೆ ಬ, ನ ಲೆಖ್ಖದಲ್ಲಿ ಜನೂ ಖರ್ಚು ಹ್ಯಾಗೆ ಮಾಡಬೇಕು?

೧೧. ಸಂಜಾಯಿತ ಅಂದರೇನು? ಸಂಜಾಯಿತ ಮಾಲಿನ ಕ್ರಯ ಕೆಲವು ರೋಖ ನುತ್ತು ಕೆಲವು ಉದ್ದರಿ ಇದ್ದಲ್ಲಿ ಆದರ ಜಮಾಖರ್ಚು ಹ್ಯಾಗೆ ಮಾಡಬೇಕು?

೧೭. ಕೆಳಗಿನ ರಕಮುಗಳನ್ನು ತೋರಿಸಿ ವರ್ಷದ ಪ್ರಾರಂಭದ ದಿವಸದ ಮತ್ತು ಎರಡನೇ ದಿವಸದ ಕೀರ್ದಿಯನ್ನು ಬರೆದು ತೋರಿಸಿರಿ.

ಕಾರ್ತಿಕ ಶುದ್ಧ ೧.

೧೦೦೦ ಹೋದ ವರ್ಷದ ಅಬೇರ ರೋಖ ಶಿಲಕು.
೨೦೦ ಶಿಲ್ಕು ಮಾಲು.
೧೫೦ ಮಾಂಜರಪಾಟ ಅರಿವೆ.
೭೦೦ ಬಂಗಾರ ೧೫ ತೊಲೆ ದರ ೨೦ ರೂ. ಪ್ರ.
೧೫೦ ಜೋಳ ೪೦ ಹೇರು.
೧೦೦ ಭತ್ತ ೧ ಖಂಡಗಾ.

೨೫ ರಾಮಕೃಷ್ಣಪಂತ ಇವರ ಕಡಿಯಿಂದ ಬಂದದ್ದು.
೫ ಮನಿ ಖರ್ಚು.

ಕಾರ್ತೀಕ ಶುದ್ಧ ೨.

೫ ಧರ್ಮಾದಾವ ಮಾಡಿದ್ದು.
೧೦೦ ಮಾಂಜರಪಾಟ ೧೦ ತಾನಿಗೆ ದರ ೧೦ ರೂ. ಪ್ರಕಾರ ಮಾರಿದ್ದರ ಪೈಕಿ ೫೦ ರೂ. ರೋಖ ಬಂದು ೫೦ ರೂ. ಗಣೇಶ ಶಿವರಾನು ಇವರ ಕಡಿಗೆ ಬಾಕಿ ಉಳಿಯತು.
೧೫೦ ಬಂಗಾರ ಮಾರಿದ್ದು ತೊಲಿಗೆ ೨೫ ರೂ. ಪ್ರಕಾರ ೬ ತೋಲಿ.
೧೨೦ ಬತ್ತ ಮಾರಿದ್ದು.
೬೦ ರೋಖ.
೬೦ ಜನಾರ್ದನಪಂತ ಇವರಿಗೆ ಉದ್ದರಿ ಅರಿವೆ ಖರೇದಿ ಮಾಡಿದ್ದು ತಂದ ಬಾಡಿಗೆ.
೧೦೦ ಬಾಗಲಕೋಟಿಗೆ ಜೋಳ ಖರೇದಿಬಗ್ಗೆ ಬಸಪ್ಪ ಈತನಗೂಡೆ ಕಳಿಸಿದ್ದು.

ವರ್ಗಣೀ ವಸೂಲು.

ಧಾರವಾಡ ಜಿಲ್ಲೆ.

	ರೂ.	ಆ.	ಪೈ
ರಾ. ಸಾ. ಡಿ. ಎ. ಇನಸ್ಪೆಕ್ಟರ ಇವರಿಂದ ಲೋ. ಬೋ. ಮ್ಯು. ಸ್ಕೂಲಗಳ ಬಾಬತು ಜನವರಿ ೯೪ ಇಸವಿಯ ಬಗ್ಗೆ.	೦೬	೧	
ಧಾರವಾಡ ೧ನೆಯ ನಂಬರ ಶಾಲೆಯ ಮಾಸ್ತರರಿಂದ ೧೨ ಮ್ಯು. ಸ್ಕೂಲಗಳ ಬಗ್ಗೆ ೯೪ನೇ ಇಸವಿಯ ಜನವರಿ, ಫೆಬ್ರುವರಿ, ಮಾರ್ಚ ತಿಂಗಳುಗಳ ಬಾಬತು.	೨	೧೫	೬
ಗದಗ ಮ್ಯು. ೩ ಸ್ಕೂಲಗಳಿಂದ ೯೪ನೇ ಸಾಲಿನ ಬಗ್ಗೆ.	೩	೯	೭

ಬೆಳಗಾವೆ ಜಿಲ್ಲೆ.

ರಾ. ಸಾ. ಡಿ. ಎ. ಇನಸ್ಪೆಕ್ಟರ ಇವರಿಂದ ಲೋ. ಬೋ. ಸ್ಕೂಲಗಳ ಬಗ್ಗೆ ದಿಸಂಬರ ೯೩ರಿಂದ ಫೇಬ್ರುವರಿ ೯೪ರ ಅಖೇರ ವರೆಗೆ	೫೦	೧೦	೬
ಗೋಕಾಕ ೧ ಶಾಲೆಯಿಂದ ಜುಲೈ ೯೩ರಿಂದ ದಿಸಂಬರ ೯೪ರ ವರೆಗೆ	೧	೬	೬
ಪರಸಗಡ ೨ ಶಾಲೆಗಳಿಂದ ಜುಲೈ ೯೩ರಿಂದ ದಿಸಂಬರ ೯೪ರ ವರೆಗೆ	೨	೧೫	
ಯಮಕನಮರಡಿ ೧ ಶಾಲೆಯಿಂದ ಜುಲೈ ೯೩ರಿಂದ ದಿಸಂಬರ ೯೪ರ ವರೆಗೆ	೧	೬	
ನಿಪ್ಪಾಣಿ ೪ ಶಾಲೆಗಳಿಂದ ಅಗಸ್ಟ ೯೩ರಿಂದ ದಿಸಂಬರ ೯೪ರ ವರೆಗೆ	೫	೫	೦
ಅಥಣಿ ೫ ಶಾಲೆಗಳಿಂದ ಜುಲೈ ೯೪ರಿಂದ ದಿಸಂಬರ ೯೪ರ ವರೆಗೆ	೨	೫	೬

ವಿಜಾಪೂರ ಜಿಲ್ಲೆ.

ರಾ. ಸಾ. ಡಿ. ಎ. ಇನಸ್ಪೆಕ್ಟರ ಇವರಿಂದ ಲೋ. ಬೋ. ಮತ್ತು ಮ್ಯು. ಸ್ಕೂಲಗಳ ಬಗ್ಗೆ ಫೇಬ್ರುವರಿ ೯೪ ಬಾಬತು	೧೯	೧೨	೩

ಕಿರುಕುಳ.

ರಾ. ಸಾ. ಡಿ. ಎ. ಇನಸ್ಪೆಕ್ಟರ ಜಿಲ್ಲಾ ಬೆಳಗಾವ ಇವರಿಂದ ಆಫೀಸಿನ ಬಗ್ಗೆ ೯ರನೇ ಸಾಲಿನ ಬಾಬತು	೦	೧೫	೦
ರಾ. ಸಾ. ೧ನೇ ಅ. ಡಿ. ಎ. ಇನಸ್ಪೆಕ್ಟರ ಬೆಳಗಾವ ಇವರಿಂದ ಅಗಸ್ಟ ೯ರಿಂದ ೯ರನೇ ಇಸವಿಯ ಡಿಸೆಂಬರ ವರೆಗೆ	೧	೫	೯
ಮೆ. ಹೂಕರ ಸಾಹೇಬ ಲ. ಮಿ. ಸ್ಕೂಲ ಬೆಳಗಾವ ಇವರಿಂದ ೯ರನೇ ಸಾಲಿನ ಬಗ್ಗೆ.	೦	೧೫	೦
ಮಿ. ನಾರ್ಬುರೆ ಇವರಿಂದ ೯ರನೇ ಸಾಲಿನ ಬಗ್ಗೆ	೦	೧೫	೦
ರಾನುದುರ್ಗ ಮಾಸ್ತರರಿಂದ ಜನವರಿ ಸಪಟಂಬರ ೯ನೇ ಸಂಚಿಕೆಗಳ ಬಾಬತು	೦	೪	೬

* ಇಯರೊಳಗೇನಾದರೂ ತಪ್ಪು ಇದ್ದರೆ ಅದನ್ನು ದಯಮಾಡಿ ತಿಳಿಸಿಬೇಕು.

ಕನ್ನಡ ಶಾಲಾಪತ್ರಕದ ವರ್ಗಣಿ ವರ್ಷಕ್ಕೆ ಮುಂಗಡ ... ೧೫ ಆಣೆ.
ಒಂದು ಸಂಚಿಕೆಗೆ ... ... ೩ ಆಣೆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ.	೪	ಪಂಕ್ತಿಗಳವರೆಗೆ	೧ ರೂ.
ಮೂರುಸಾರೆ ಇಟ್ಟರೆ	೧೦	,,	,,
ಆರುಸಾರೆ ಇಟ್ಟರೆ.	೧೫	,,	,,

ಸೂಚನೆಗಳು.

೧. ಶಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಹಾಸಲ ಬೀಳುವದು.

೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇಮ್ಮಡಿ ಹಣ ಬೀಳುವದು.

೪. ಪ್ರಕಟನೆಯು ಕೂಡ ಹಣ ಕಳುಹಲಿಕ್ಕೆ ಬೇಕು.

೫. ಟಿಕೀಟು ಇಟ್ಟ ಹೊರ್ತು ಉತ್ತರ ಶಿಗಲಾರದು.

RAOJI B. KARANDIKAR,
ವ್ಯವಸ್ಥಾಪಕ, ಕನ್ನಡ ಶಾಲಾಪತ್ರಕ.

ಕನ್ನಡಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೭೯.] ಮೇ ೧೮೯೪. [ಸಂಚಿಕೆ ೫.

ಅನುಕ್ರಮಣಿಕೆ.

ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ... ೯೭
೨. ಕನ್ನಡ ಗಝೆಟಿಯರದಿಂದ ಉದ್ಧರಣಗಳು ... ೧೦೪
೩. ಕಲಿಸುವ ಪದ್ಧತಿಗಳು ೧೦೮
೪. ರಾವ ಬಹಾದ್ದುರ ಸಿ. ವಿ. ಪಟವರ್ಧನ ಸಾಹೇಬರ ಆಡಳಿತವು. ೧೧೫
೫. ಪತ್ರ ಬರೆಯುವವರಿಗೆ ಸೂಚನೆ ೧೨೦

CONTENTS.

1. Educational Intelligence and Useful Notes ... 97
2. Selections from the Karnatik Gazetteer ... 104
3. Methods of Teaching 108
4. Rao Bahadur S. V. Patwardhan's Administration 115
5. Notice to Correspondents 120

DHARWAR:
PRINTED AT THE KARNATIC BOOK DEPOT PRESS,
1894.

Mr. WINGATE'S REMARKS ON THE COLLEGE 11—4—94.

" The Dharwar Training College for vernacular teachers is one that the Educational Department may well be proud of. It owes much to Mr. Patwardhan, late Educational Inspector and to its present excellent principal, Mr. Karandikar. The buldings and grounds are in good order and the dormitories and persons of the students kept scrupulously clean. A healthy cheerful tone pervades the teaching. The drill and gymnastic exercises are excellent. I have met the trained men in the district schools, and in many instances have noticed with satisfaction the results of the training. It is a pity the minimum time in the college could not be raised to two years. The practising school is interesting and the intelligence of the younger boys is striking compared with ordinary schools. The element of play has begun to brighten life. The workshops are another feature full of interest and future possibilities and I trust they will develop."

ಶಾಲಾಪತ್ರಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಭಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨ನೆ.] ಮೇ ೧೮೯೯. [ಸಂಚಿಕೆ ೫.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮುಂಬಯಿ ವಿದ್ಯಾಪೀಠದ ಸಭೆಯು ಕಳೆದ ಫೆಬ್ರುವರಿ ತಿಂಗಳಲ್ಲಿ ಕೂಡಿತ್ತು. ಆ ಕಾಲಕ್ಕೆ ನಮ್ಮ ಲೋಕಪ್ರಿಯರೂ ವಿದ್ವನ್ಮಾನ್ಯರೂ ಆದ ಡಾಕ್ಟರ ರಾಮಕೃಷ್ಣ ಗೋಪಾಳ ಭಾಂಡಾರಕರ ಇವರು ಸಮಯೋಚಿತ ಭಾಷಣ ಮಾಡಿದರು. ಅವರು ಉಪನ್ಯಾಸ ಮಾಡಿದ ಎಷ್ಟೋ ಸಂಗತಿಗಳಲ್ಲಿ ಎರಡು ಸಂಗತಿಗಳನ್ನು ಕುರಿತು ಎಲ್ಲರೂ ವಿಚಾರ ಮಾಡುವದು ಅವಶ್ಯವಾಗಿರುವದರಿಂದ ಅವನ್ನು ಇಲ್ಲಿ ಉಲ್ಲೇಖಿಸುತ್ತೇವೆ.

(೧) ಇಂಗ್ಲಿಷವನ್ನು ಕಲಿತು ಹೆಚ್ಚಿನ ಪರೀಕ್ಷೆಗಳನ್ನು ಕೊಟ್ಟು ವಿದ್ಯಾಪೀಠದ ಪದವಿಗಳನ್ನು ಪಡೆದವರು ಲೋಕೋಪಯುಕ್ತವಾದ ಯಾವ ಕೆಲಸವನ್ನಾದರೂ ಮಾಡುವದಿಲ್ಲ. ವಿಶೇಷತಃ ಹಿಂದೂ ಜನರಲ್ಲಿ ಪದವಿಯನ್ನು ಹೊಂದಿದವರು ಅಲ್ಪಾಯುಷಿಗಳಾಗುವರು. ಇದಕ್ಕೆ ಬಾಲವಿವಾಹ, ಕವನ್ನಭೋಜನ, ವ್ಯಾಯಮವುಪರಾಜಿಮುಕತೆ ಇವು ಕಾರ

ಣಗಳಾಗಿರುತ್ತವೆಂದು ಡಾಕ್ಟರ ಭಾಂಡಾರಕರರು ಸೂಚಿಸಿದರು. ಅವರು ಹೇಳಿದ್ದೇನಂದರೆ:—ಈ ಹಿಂದೂ ವಿದ್ಯಾರ್ಥಿಗಳೊಂದಿಗೆ ಪಾಸಾದ ಪಾರ್ಸೀ ಜಾತಿಯ ವಿದ್ಯಾರ್ಥಿಗಳಲ್ಲಿ ಅಲ್ಪಾಯುಷಿಗಳ ಸಂಖ್ಯೆಯು ತೀರ ಕಡಿಮೆ ಇರುತ್ತದೆಂಬ ಸಂಗತಿಯು ಹಿಂದು ಜನರಿಗೂ ಪಾರ್ಸೀ ಜನರಿಗೂ ಸರಿಮಾಡಿ ನೋಡಿದರೆ ಸ್ಪಷ್ಟವಾಗಿ ತಿಳಿಯುವದು. ಆ ಕಾರಣ ನಮ್ಮ ಜನರು ಈ ಸಂಬಂಧದಿಂದ ವಿಚಾರ ಮಾಡಿ ಈ ಅನಿಷ್ಟ ಪರಿಣಾಮವನ್ನು ತಪ್ಪಿಸುವದಕ್ಕೆ ಕೈಲಾದ ಮಟ್ಟಿಗೆ ಯತ್ನಿಸುವದು ವಿಹಿತವು.

ಡಾ. ಭಾಂಡಾರಕರರು ಸೂಚಿಸುವ ಕಾರಣಗಳು ಅಂಶತಃ ನಿಜವಾಗಿರುತ್ತವೆ; ಅವುಗಳನ್ನು ಕುರಿತು ನಮ್ಮ ಜನರು ಎಚ್ಚರ ಪಡುವದು ಅವಶ್ಯವು. ಆದರೆ ಇಂಗ್ಲಿಷ ಕಲಿಯುವವರ ವಿಷಯವಾಗಿಯೇ ಎಚ್ಚರ ಪಡುವದು ಅವಶ್ಯವಾದದ್ದೆಂದು ನಮ್ಮ ಅಭಿಪ್ರಾಯವಲ್ಲ; ಕನ್ನಡ ಕಲಿಯುವವರ ವಿಷಯವಾಗಿಯೂ ಎಚ್ಚರ ಪಡುವದು ಅವಶ್ಯ ಉಂಟು. ಸದ್ಯಕ್ಕಿರುವ ಕನ್ನಡ ಶಾಲೆಗಳ ಬಗ್ಗೆ ವಿಚಾರ ಮಾಡಿದರೆ, ಶಾಲಾಗೃಹ, ವಿದ್ಯಾರ್ಥಿಗಳ ಉಡತೊಡಿಗೆ, ಆಸನ, ವಯಸ್ಸಿನ ಇಯತ್ತೆ, ಊಟ, ಮುಂತಾದವುಗಳ ವಿಷಯವಾಗಿ ಸುಧಾರಣೆಯಾಗುವದು ಅವಶ್ಯವಾದದ್ದು.

ಶಾಲಾಗೃಹಗಳು, ವಿಸ್ತಾರವಾದ ಬೈಲು ಸ್ಥಳದಲ್ಲಿಯೂ ಸುತ್ತಲು ಜನರ ಕೂಗಾಟ ಗೊಂದಲಗಳು ಇಲ್ಲದಂಥ ಸ್ಥಳದಲ್ಲಿಯೂ, ತಕ್ಕಷ್ಟು ಬೆಳಕು ಬರಲಿಕ್ಕೂ ಸ್ವಚ್ಛವಾದ ಹವೆಯು ನಿರಾತಂಕವಾಗಿ ಆಡಲಿಕ್ಕೂ ಆಸ್ಪದವುಳ್ಳವುಗಳಾಗಿರಬೇಕು. ಶಾಲೆಯ ಎಡಬಲದ ಸ್ಥಳವು ನಿರ್ಮಲವಾಗಿರಬೇಕು. ಸುತ್ತಲು ಪೊವಿನ ಗಿಡಬಳ್ಳಿಗಳಿದ್ದರೆ ಮತ್ತಿಷ್ಟು ಒಳಿತು. ನೆಲವು ತ್ಯಾವುಳ್ಳದ್ದಿರಬಾರದು.

ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕೂಡ್ಸಲಿಕ್ಕೆ ಆಸನಗಳು (ಬಾಕುಗಳು ಕನಿಷ್ಠ ಬಾಪಿಗಳು) ಇರತಕ್ಕದ್ದು. ಈಗಿನ ಶಾಲೆಗಳಲ್ಲಿ ಅವು ಇಲ್ಲವ್ದರಿಂದ ಚಿಕ್ಕ ಚಿಕ್ಕ ವಯುಸ್ಸಿನ ಹುಡುಗರು ಬೆಳಗಿನ ೭ ಘಂಟೆಯಿಂದ ೧೦ ಘಂಟೆಯವರೆಗೂ ಸಾಯಂಕಾಲದ ೦ ಘಂಟೆಯಿಂದ ೫ ಘಂಟೆಯವರೆಗೂ ನೆಲದಮೇಲೆಯೇ ಕೂಡ್ಸ ಬೇಕಾಗುತ್ತದೆ. ವಿದ್ಯಾರ್ಥಿಗಳು ತನ್ನ ಪಾಟಗಳನ್ನು ಮುಂಡಿಯು ಮೇಲಿಟ್ಟುಕೊಂಡು ಇಲ್ಲವೆ ನೆಲವಮೇಲಿಟ್ಟು ಬರೆಯುವರು. ಬರೆಯುವಾಗ ಎಷ್ಟೋ ವಿದ್ಯಾರ್ಥಿಗಳ ತಲೆಗಳು ಪಾಟಗೆ ಹತ್ತುವಷ್ಟು ಮುಂದಕ್ಕೆ ಬಾಗಿಕೊಂಡಿರುವವನ್ನು ಕಾಣುವದು ಅಪರೂಪವಲ್ಲ. ಆತು ಕೊಳ್ಳುವವಕ್ಕೆ ಅವರಿಗೆ ಏನೂ ಆಧಾರವಿರುವದಿಲ್ಲ. ಇದರಿಂದ ಅವರ ಕೋಮಲವಾದ ಬೆನ್ನೆಲವಿಗೆ ವಿಶೇಷ ಶ್ರಮವಾಗಿ ಅದು ಮುಂದಕ್ಕೆ ಬಾಗುವದು, ಬೊಗ್ಗಿಕೊಂಡು ಬರೆಯುವದರಿಂದ ಅವರ ಶ್ವಾಸಕೋಶವು ಮುದುಡಿ ಅಲ್ಲಿ ನಡೆಯುವ ರಕ್ತಶುದ್ಧಿಯ ವ್ಯಾಪಾರಕ್ಕೆ ಅತಂಕ ಉಂಟಾಗುತ್ತದೆ. ಎಷ್ಟೋ ಶಾಲೆಗಳಲ್ಲಿ ಇನ್ನು ಧೋತ್ರವನ್ನುಟ್ಟುಕೊಳ್ಳುವದಕ್ಕೆ ಬಾರದ ಸಣ್ಣ ಸಣ್ಣ ಮಕ್ಕಳು ನೆಲದ ಮೇಲೆಯೇ ಕೂಡ್ಸುವರು. ಇದರಿಂದ ಹುಡುಗರಿಗೆ ಶೈತ್ಯ ವಿಕಾರವಾಗುವ ಭಯ ಉಂಟು. ಆದದ್ದರಿಂದ ಕನಿಷ್ಠಪಕ್ಷಕ್ಕೆ ಅವರು ಕಂಬಳಿಯ ತುಂಡುಗಳನ್ನು ಹಾಸಿಕೊಂಡು ಕೂಡ್ಸುವ ವ್ಯವಸ್ಥೆ ಇರತಕ್ಕದ್ದು.

ಹುಡುಗರ ಉಡಿಗೆ ತೊಡಿಗೆಗಳು ಸ್ವಚ್ಛವಾಗಿರಬೇಕು. ಎಷ್ಟೋ ಹುಡುಗರ ಅಂಗಿ ಟೊಪ್ಪಿಗೆ ಮುಂತಾದವುಗಳು ಋತುಬಕ್ಕೆ ಹೋಗಿರುತ್ತವೆ. ಹಲ್ಲುಗಳನ್ನು ತಿಕ್ಕಿಕೊಳ್ಳುವದೇ ಇಲ್ಲ. ತಿಂಗತಿಂಗಳಾದರೂ ಅವರ ಉಗುರುಗಳನ್ನು ಬಗೆಯು ಕೊಡುವವಿಲ್ಲ. ಇದರಿಂದ ಆರೋಗ್ಯಕ್ಕೆ ಕೇಡು ಸಂಭವಿಸುತ್ತದೆಂದು ಇಲ್ಲಿ ಹೇಳುವ ಕಾರಣವಿಲ್ಲ.

ಈಗ ಎಲ್ಲ ಜನರಲ್ಲಿಯೂ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಬೇಕೆಂಬ ಲವಲವಿಕೆಯು ಹುಟ್ಟಿರುತ್ತದೆ. ಆದರಿಂದ ತಾಯಿತಂದೆಗಳು ನಾಲ್ಕು ವರ್ಷ ಮಕ್ಕಳಿಗೆ ತುಂಬಿದವೋ ಇಲ್ಲವೋ ಇಷ್ಟರಲ್ಲಿಯೇ ಅವರ ಕೈಯಲ್ಲಿ ಪಾಟಿ ಪೆನ್ಸಿಲುಗಳನ್ನು ಕೊಟ್ಟು ಶಾಲೆಗೆ ಅಟ್ಟುವರು. ಆ ಬಾಲಕರಿಗೆ ಇನ್ನೂ ಚೆನ್ನಾಗಿ ಮಾತಾಡಲಿಕ್ಕೆ ಸಹ ಬರುತ್ತಿರುವದಿಲ್ಲ. ಇಂಥ ಹುಡುಗರನ್ನು ಶಾಲೆಗೆ ಕಳಿಸುವದರಿಂದ ಪ್ರಯೋಜನವಾಗುವದಿಲ್ಲ. ಯುರೋಪ ಖಂಡದಲ್ಲಿ ಚಿಕ್ಕ ಚಿಕ್ಕ ಬಾಲಕರ ಸಲುವಾಗಿ ಮಾಡಿರುವಂಥ ಸುವ್ಯವಸ್ಥೆಯು ನಮ್ಮ ಶಾಲೆಗಳಲ್ಲಿ ಇಲ್ಲದ್ದರಿಂದ, ಹುಡುಗರು ಬಹಳ ಆಕ್ತರಾಗುತ್ತಾರೆ. ಬೆಳಗಿನ ೭ ಘಂಟೆಯಿಂದ ೧೦ ಘಂಟೆಯವರೆಗೆ ಅಂದರೆ ಶಾಲೆ ಬಿಡುವವರೆಗೆ ಈ ಹಸುಗೂಸುಗಳಿಗೆ ಬಹುತರ ಒಂದೇ ಸ್ಥಲದಲ್ಲಿ ಕೂಡ್ರಬೇಕಾಗುತ್ತದೆ. ಇದೇ ಹಾಡು ಮಧ್ಯಾನ್ಹದ ತರುವಾಯ ಸಹ ಇರುತ್ತದೆ. ಇದರಿಂದ ಹುಡುಗರ ಆರೋಗ್ಯಕ್ಕೆ ಎಷ್ಟು ಅಪಾಯವಾಗುತ್ತಿದ್ದೀತೆಂಬದನ್ನು ಇಲ್ಲಿ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಚಿಕ್ಕಂದಿನಲ್ಲಿ ಹುಡುಗರ ಅವಯವಗಳು ಬಹಳ ಬೇಗನೆ ಬೆಳೆಯುತ್ತಿರುತ್ತವೆ. ಇಂಥ ಹೊತ್ತಿನಲ್ಲಿ ಶರೀರಕ್ಕೆ ವ್ಯಾಯಾಮವಾದಷ್ಟು ಒಳ್ಳೇದು. ಆದದ್ದರಿಂದ ಇಂಥ ಶಾಲೆಗಳಿಗೆ ಮಕ್ಕಳನ್ನು ೭ ವರ್ಷದವರಾಗುವದಕ್ಕಿಂತ ಮೊದಲೇ ಕಳಿಸುವದು ತಕ್ಕದ್ದಲ್ಲ. ೭ ವರ್ಷಕ್ಕಿಂತ ಚಿಕ್ಕ ಹುಡುಗರನ್ನು "ಕಿಂಡರ ಗಾರ್ಟನ ಪದ್ಧತಿ" ಯಂತೆ ಕಲಿಸುತ್ತಿರುವ ಶಾಲೆಗಳಿಗೆ ಕಳಿಸಿದರೆ ಅಡ್ಡಿ ಇಲ್ಲ. ಅವರೆ ಈ ಪದ್ಧತಿಯಿಂದ ಕಲಿಸುವ ಶಾಲೆಗಳು ಸದ್ಯಕ್ಕೆ ನಮ್ಮ ಭಾಗದಲ್ಲಿ ಇರುವದಿಲ್ಲ.

ಹುಡುಗರ ಊಟದ ಸಂಬಂಧವಾಗಿಯೂ ತಾಯಿತಂದೆಗಳು ಎಚ್ಚರ ಪಡುವದಿಲ್ಲ. ರಾತ್ರಿ ಊಟಮಾಡಿ ಮಲಗಿದ ಮಕ್ಕಳನ್ನು ಬೆಳಿಗ್ಗೆ ಎದ್ದಕೂಡಲೆ ಹಾಗೆಯೇ ಶಾಲೆಗೆ ಕಳಿಸುತ್ತಾರೆ. ಅವರು ಹತ್ತು ಘಂಟೆಯವರೆಗೆ ಹಾಳುಗಳ್ಳಿಲ್ಲೇ ಇರಬೇಕಾಗುತ್ತದೆ, ಇದು ಸರಿಯಲ್ಲ. ಬೆಳಿಗ್ಗೆ ಅವರಿಗೆ ಬಿಸಿ ಅನ್ನವನ್ನು ಉಣಿಸಿ ಶಾಲೆಗೆ ಕಳಿಸಬೇಕು. ಬಂದು ವೇಳೆ ತಂಗೂಳವನ್ನಾದರೂ ಉಣಿಸಿ ಕಳುಹಬಹುದು. ಎಷ್ಟೋ ತಿಳಿಗೇಡಿ ತಾಯಿತಂದೆಗಳು ಮಕ್ಕಳು ಊಟ ಮಾಡಿ ಶಾಲೆಗೆ ಹೋದರೆ ಅವರಿಗೆ ವಿದ್ಯವು ಬರುವದಿಲ್ಲವೆಂದು ಗ್ರಹಿಸುತ್ತಾರೆ. ಇದು ತೀರ ತಪ್ಪು ತಿಳುವಳಿಕೆ ಇರುತ್ತದೆ.

ಮೇಲೆ ವಿವರಿಸಿದ ಮೇರೆಗೆ ಈಗಿನ ವಿದ್ಯಾರ್ಥಿಗಳು ಕನ್ನಡ ಶಾಲೆಗಳಲ್ಲಿ ಅನೇಕ ಕಷ್ಟಗಳನ್ನು ಸಹಿಸಿ ದೇಶ ಭಾಷೆಯನ್ನು ಕಲಿತು, ಮುಂದೆ ಇಂಗ್ಲಿಷ ಅಭ್ಯಾಸ ಮಾಡಿ ಹೆಚ್ಚಿನ ಪರೀಕ್ಷೆಗಳನ್ನು ಕೊಟ್ಟು ವಿದ್ಯಾಪೀಠದ ಪದವಿಗಳನ್ನು ಪಡೆಯುವತನಕ ಬದುಕುವದೇ ನಮಗೆ ಒಂದಳ ಆಶ್ಚರ್ಯ ಕಾಣಿಸುತ್ತದೆ!!

ಬುಕ್ಯಾನನ್ ಎಂಬ ವಿದ್ವಾಂಸನು ಶಿಕ್ಷಣದ ಮೂರು ಪ್ರಯೋಜನಗಳನ್ನು ತಿಳಿಸುತ್ತಾನೆ. ಆ ಮೂರು ಪ್ರಯೋಜನಗಳು ಯಾವವಂದರೆ:—೧ ಅನಾಚಾರ ಅಧರ್ಮ ಪ್ರವೃತ್ತಿಗಳನ್ನು ಕಟ್ಟುಮಾಡುವದೂ ೨ ದುರ್ಗಿಕ್ಷದಾರಿದ್ರ್ಯಗಳನ್ನು ನಿರ್ನಾಮ ಮಾಡುವದೂ ೩ ಅಕಾಲಮರಣ ರೋಗಾದಿಗಳನ್ನು ಬೇರೊರಿಸಿಲಿ ಕಿತ್ತುಹಾಕುವದೂ. ಈ ಪ್ರಯೋಜನಗಳಿಗೆ ಸರಿಯಾಗಿ ಶಿಕ್ಷಣವಲ್ಲಿ ೧ ನೀತಿಶಿಕ್ಷಣ, ೨ ಔದ್ಯೋಗಿಕಶಿಕ್ಷಣ, ೩ ಆರೋಗ್ಯಪ್ರವರ್ತಕಶಿಕ್ಷಣ ಎಂಬ ಮೂರು

ಭಾಗಗಳನ್ನು ಮಾಡಿ ಪ್ರತಿಯೊಂದು ಭಾಗಕ್ಕೆ ಜನರು ಸರಿಯಾಗಿ ಲಕ್ಷ ಕೊಡುವದು ಉಚಿತವಾದದ್ದೆಂದು ತಿಳಿಸುತ್ತಾನೆ. ಸದ್ಯಕ್ಕೆ ಶಿಕ್ಷಣವಲ್ಲಿ ನೀತಿ ಶಿಕ್ಷಣ ಬುದ್ಧಿಶಿಕ್ಷಣ ಶಾರೀರ ಶಿಕ್ಷಣ ಎಂದು ಮೂರು ಭಾಗಗಳು ಮಾಡಲ್ಪಟ್ಟಿರುತ್ತವೆ. ಆ ಭಾಗಗಳಿಗೂ ಬುಕ್ಕ್ಯಾನನ್ನು ತಿಳಿಸುವ ಭಾಗಗಳಿಗೂ ವಿಚಾರದಿಂದ ನೋಡಿದರೆ ಏನು ಹೆಚ್ಚು ಕಡಿಮೆ ತೋರುವದಿಲ್ಲ. ಬುದ್ಧಿಶಿಕ್ಷಣದೊಳಗಿನ ಬುದ್ಧಿ ಎಂಬ ಶಬ್ದವು ಲಾಕ್ಷಣಿಕವಾಗಿದ್ದು ಕರ್ಮೇಂದ್ರಿಯ ಜ್ಞಾನೇಂದ್ರಿಯಗಳ ವಾಚಕವಾಗಿರುತ್ತದೆ.

ಮೆ. ಕಲೆಕ್ಟರ ಸಾಹೇಬ ಬಹಾದ್ದೂರವರು ಡಿ. ಲೋ. ಬೋ. ಮೆಂಬರರನ್ನೊಡಗೊಂಡು ತಾ॥ ೧೧ನೇ ಎಪ್ರಿಲ ದಿನದ ಧಾರವಾಡ ಟ್ರೇನಿಂಗ ಕಾಲೇಜವನ್ನು ನೋಡಲಿಕ್ಕೆ ಬಂದಿದ್ದರು. ಆಹೊತ್ತಿಗೆ ಅವರು ಕಾಲೇಜದಸಂಬಂಧದಿಂದ "ವಿಜಿಟರ್ಸ ಬುಕ್ಕಿನಲ್ಲಿ" ಬರೆದಿಟ್ಟ ಅಭಿಪ್ರಾಯವನ್ನು ಭಾಷಾಂತರಿಸಿ ಇದರಡಿಯಲ್ಲಿ ಕೊಡುತ್ತೇವೆ.

" ಕನ್ನಡ ಮಾಸ್ತರರ ಸಲುವಾಗಿ ಸ್ಥಾಪಿಸಲ್ಪಟ್ಟ ಈ ಟ್ರೇನಿಂಗ ಕಾಲೇಜವು ವಿದ್ಯಾಖಾತೆಗೆ ಭೂಷಣವಾದದ್ದೆ. ಈ ಸುಸ್ಥಿತಿಗೆ ಹಿಂದಿನ ಎಜ್ಯುಕೇಶನಲ ಇನಸ್ಪೆಕ್ಟರರಾದ ಮಿ. ಪಟವರ್ಧನ ಸಾಹೇಬರೂ, ಈಗಿನ ಪ್ರಿನ್ಸಿಪಾಲರಾದ ಮಿ. ಕರಂದೀಕರರೂ ಕಾರಣವಾಗಿರುತ್ತಾರೆ. ಕಾಲೇಜದ ಇಮಾರತಿಯೂ ಸುತ್ತಲಿನ ಸ್ಥಳವೂ ಒಳ್ಳೇ ಸ್ಥಿತಿಯಲ್ಲಿರುತ್ತವೆ. ವಿದ್ಯಾರ್ಥಿಗಳು ಇರತಕ್ಕ ಕೋಣೆಗಳಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ಮೇಲಾದ ಸ್ವಚ್ಛತನವು ಕಂಡು ಬಂತು. ವಿದ್ಯಾರ್ಥಿಗಳ ಕಲಿಸೋಣವೂ ಉಲ್ಲಾಸಕರವೂ ಸಮಾಧಾನಕರವೂ ಇರುತ್ತದೆ. ವಿದ್ಯಾರ್ಥಿಗಳು ಕವಾಯತಿನಲ್ಲಿಯೂ ತಾಲೀಮಿನಲ್ಲಿಯೂ ಉತ್ತಮರಾಗಿದ್ದಾರೆ. ಧಾರವಾಡ ಜೆಲ್ಲೆ

ಯೊಳಗಿನ ಕೆಲವು ಶಾಲೆಗಳನ್ನು ನಾವು ಸ್ವತಃ ನೋಡಿದ್ದೇವೆ. ಅವುಗಳಲ್ಲಿರುವ ಟ್ರೇನ್ಡ್ ಮಾಸ್ತರರು ತಾವು ಕಲಿತ ಈ ಕಾಲೇಜಕ್ಕೆ ಭೂಷಣ ತರುವಂತೆ ಕೆಲಸ ಮಾಡುತ್ತಿದ್ದಾರೆ. ಅದನ್ನು ನೋಡಿ ನಮಗೆ ಸಮಾಧಾನವಾಯಿತು. ಈಗ ಬಂದು ವರ್ಷದ ಅಂತ್ಯಕ್ಕೆ ಕೆಲವು ವಿದ್ಯಾರ್ಥಿಗಳನ್ನು ಕೆಲಸದಮೇಲೆ ಕಳುಹುವ ನಿಯಮ ಉಂಟು. ಈ ಮುದ್ದತು ಎರಡು ವರ್ಷವಿದ್ದರೆ ಬಳ್ಳೇದಾಗುತ್ತಿತ್ತು. ಇಲ್ಲಿಯ ಪ್ರ್ಯಾಕ್ಟಿಸಿಂಗ ಸ್ಕೂಲು ನೋಡಿ ಆನಂದಬಟ್ಟೆವು. ಅದರೊಳಗಿನ ಚಿಕ್ಕ ಚಿಕ್ಕ ಮಕ್ಕಳು ತೋರಿಸಿದ ಚುರುಕುತನವೂ ಜಾಣತನವೂ ಬೇರೆ ಶಾಲೆಗಳಲ್ಲಿ ಕಂಡುಬರುವದಕ್ಕಿಂತ ಹೆಚ್ಚಿನವವೆ ವಿದ್ಯಾರ್ಥಿಗಳು ಆಡುವ ಆಟಗಳ ಸುಖಕರ ಪರಿಣಾಮವು ಅವರ ಮೋರೆಯ ಮೇಲಿನ ತೇಜದಿಂದ ಕಂಡುಬರುತ್ತಲಿದೆ. ಬಡಿಗತನ ಕಮ್ಮಾರಿಕೆಯ ವರ್ಗಗಳು ಬಹು ಸಮಾಧಾನಕರವಾಗಿವೆ. ಇವುಗಳಿಂದ ಮುಂದೆ ಬಹಳ ಹಿತವಾಗುವದೆಂದು ತೋರುತ್ತದೆ."

ಕೆಲಸವನ್ನು ವಹಿಸಿದ ಕಾಲೇಜದ ವಿದ್ಯಾರ್ಥಿಗಳಿಗಾಗಿ ಈ ಅವತರಣವನ್ನು ಕೊಟ್ಟಿರುತ್ತೇವೆ. ಅವರು ಮಾಡುವ ಕೆಲಸದಿಂದಲೇ ಕಾಲೇಜಕ್ಕೆ ಹೆಸರು ಬರುವದು. ಆದದ್ದರಿಂದ ಅವರು ತಮ್ಮ ಕಾಲೇಜವನ್ನು ಯಾವಾಗಲೂ ಲಕ್ಷದಲ್ಲಿಟ್ಟು ಅದಕ್ಕೆ ಕೀರ್ತಿ ಬರುವಂತೆ ಯತ್ನಿಸತಕ್ಕದ್ದು. ಕಾಲೇಜದಿಂದ ಹೋಗುವಾಗ ಅವರಿಗೆ ಅನುಭವಪ್ರ ಕಡಿಮೆ ಇರುತ್ತದೆ. ಕೆಲಸದಲ್ಲಿ ತೊಡಗಿದ ನಂತರ ತಾವು ಕಲಿತದ್ದಕ್ಕೂ ಅನುಭವಕ್ಕೂ ತಳಕು ಹಾಕುತ್ತಾ, ಉತ್ಸಾಹದಿಂದ ಕೆಲಸವನ್ನು ಜರಗಿಸುತ್ತಾ, ಊರವರ ಕೂಡ ಸಮಾಧಾನದಿಂದಲೂ ಪ್ರೀತಿಯಿಂದಲೂ ವಿನಯದಿಂದಲೂ ನಡೆಯುತ್ತಾ, ವರಿಷ್ಠ ಅಧಿಕಾರಿಗಳ ಅಪ್ಪಣೆಗಳನ್ನು ತತ್ಪರತೆಯಿಂದ ಪಾಲಿಸುತ್ತಾ, ಕೆಲಸವನ್ನು ಸಾಗಿಸಿ, ತಾವು ಯಶಸ್ಸನ್ನು ಪಡೆದು ತಾವು ಕಲಿತ ವಿದ್ಯಾಲಯಕ್ಕೆ ಭೂಷಣವನ್ನು ಕೊಡುವದು ಅವರ ಕರ್ತವ್ಯವಾಗಿರುತ್ತದೆ.

SELECTIONS FROM THE KARNATIK GAZETTEER.

ಕನ್ನಡ ಗರೆಹುಟಿಯರದಿಂದ ಅವತರಣಿಗಳು.

(೧೪೯ ಪುಟದಿಂದ ಸಾಗಿದ್ದು.)

ವಿಶೇಷಸ್ಥಳಗಳು-ಊರೊಳಗೆ ತಿರುಮಲರಾಯರ ಬಾವಿಯೂ ಛತ್ರವೂ ಪ್ರವಾಸ ಮಾಡುವ ಜನರಿಗೆ ಅತ್ಯುಪಯುಕ್ತವಾಗಿರುತ್ತವೆ. ಊರ ಪಶ್ಚಿಮಕ್ಕೆ ಸುಮಾರು ಒಂದೂವರೆ ಮೈಲಿನ ಮೇಲೆ ಹಾಯಸ್ಕೂಲು, ಟ್ರೇನಿಂಗ ಕಾಲೇಜವು ಉಂಟು. ಇವೆರಡು ದೊಡ್ಡ ಇಮಾರತುಗಳ ನೈರುತ್ಯಕ್ಕೆ ನೂರಿನ್ನೂರು ಹೆಜ್ಜೆಯ ಮೇಲೆ ರೇಲ್ವೆಯ ಕಚೇರಿಯು ಬಹು ಭವ್ಯವಾಗಿಯೂ ಸುಂದರವಾಗಿಯೂ ಕಟ್ಟಿಸಿದ ಮುಂಬಯಿ ಪದ್ಧತಿಯ ದೊಡ್ಡ ಇಮಾರತು ನೋಡತಕ್ಕಂಥಾದಿರುತ್ತದೆ. ಊರ ವಾಯವ್ಯಕ್ಕೆ ಸುಮಾರು ಎರಡು ಮೈಲಿನ ಮೇಲೆ ಹೊಗೆ ಬಂಡಿಯ ಸ್ಟೇಶನ್ನಿನ ಆಚೆಯಲ್ಲಿ ಸುಮಾರು ಅರ್ಧ ಮೈಲಿನ ಮೇಲೆ ಅಂದರೆ ಊರಿಂದ ಸುಮಾರು ಎರಡುವರೆ ಮೈಲಿನ ಮೇಲೆ ಅಚ್ಚಕಲ್ಲಿನಿಂದ ಕಟ್ಟದ ಸೋಮೇಶ್ವರನ ಪುರಾತನದ ದೇವಾಲಯವಿರುತ್ತದೆ. ಅಗುಡಿಯ ಮುಂದಿನ ಹೊಂಡದೊಳಗಿನ ನೀರು ಎಂದೆಂದೂ ಇಂಗುವದಿಲ್ಲ. ಗುಡಿಯಮುಂದೆ ದೊಡ್ಡ ದೊಡ್ಡ ಮರಗಳ ನಿಬಿಡವಾದ ಛಾಯೆಯು, ಸುತ್ತುಮುತ್ತು ಎತ್ತರವಾದ ಗುಡ್ಡಗಳ ಆವರಣವು, ಗುಡಿಯ ಬಳಿಯಲ್ಲಿಯೇ ಪನ್ನೆರಡು ಕಾಲವೂ ಸಣ್ಣಗಿ ಪರಿಯುವ ಕಾಲ್ಮಲಾ ನದಿಯ ಉಗಮ, ಇವೆಲ್ಲವುಗಳಿಂದ ಈ ದೇವಸ್ಥಾನಕ್ಕೆ ಅತಿ ರಮಣೀಯವಾದ ಶೋಭೆಯುಂಟಾಗಿದೆ. ಏಕಾಂತವಾಸ ಮಾಡಲಿಚ್ಛಿಸುವಂಥ ಯೋಗಿಗಳಿಗೆ ಇದು ತಕ್ಕ ಸ್ಥಾನವೆಂದು ಹೇಳಬಹುದು. ಊರಿನ ದಕ್ಷಿಣಕ್ಕೆ ಸಣ್ಣದೊಂದು ಗುಡ್ಡದ ಮೇಲೆ ಮೈಲಾರಲಿಂಗನ ಗುಡಿ

ಇರುತ್ತದೆ. ಅದು ತೀರ ಸಾಧಾರಣ ತರದ್ದು, ಆ ಗುಡಿಯ ಎರಡು ಕಂಬಗಳ ಮೇಲೆ ಫಾರ್ಸೀ ಲಿಪಿಯುಂಟು. ಅದರಿಂದ ಮಹಮ್ಮದ ಖಾನನೆಂಬ ಪಾಳಾಲದಾರನು ಸ್ವ ೧೬೭೦ ರಲ್ಲಿ ಮೊದಲಿನ ಮೂರ್ತಿಯನ್ನು ತೆಗೆದು ಅದನ್ನು ಮಸೀದಿಯನ್ನು ಮಾಡಿದ್ದನೆಂದು ತಿಳಿಯುತ್ತದೆ. ಪೇಶವೆಯವರ ಅಮಲು ಆದಬಳಿಕ ಅದು ಮತ್ತೆ ಗುಡಿಯಾಯಿತು.

ಪೈರು—ಧಾರವಾಡದ ಭೂಮಿಗೆ ಕರಿಸಾಲೆಂಬದು ಗೊತ್ತೇ ಇಲ್ಲ. ಮಳೆ ಹೆಚ್ಚಾದರೆ ಎರೆಭೂಮಿ, ಭತ್ತದ ಗದ್ದೆಗಳು ಬೆಳೆಯುತ್ತವೆ; ಕಡಿಮೆಯಾದರೆ ಕಲ್ಲುಭೂಮಿಯು ಬಳಿತಾಗಿ ಬೆಳೆಯುತ್ತದೆ. ಮಳೆಯು ತೀರ ಕಡಿಮೆಯಾದರೂ ೨೦ ಇಂಚಿಗಿಂತ ಕಡಿಮೆ ಬಹುತರವಿಂದೂ ಆಗುವದಿಲ್ಲ. ಕೆಂಪುಭೂಮಿಯಲ್ಲಿ ಮೇಲಾದ ಭತ್ತವು ಹೇರಳವಾಗಿ ಬೆಳೆಯುತ್ತದೆ. ಎರೆಭೂಮಿಯಲ್ಲಿ ಪತ್ತಿ, ಜೋಳ, ಗೋಧಿ, ಕಡ್ಲೆ ಮುಂತಾದ ಧಾನ್ಯಗಳು ಬರುತ್ತವೆ. ಅವೆಲ್ಲದೆ ಹೀರಿ, ಬೆಂಡಿ, ಚವಳಿ, ಅವರೆ, ಸವತಿ, ಕೋತಂಬರಿ, ಸಾಸಿವೆ ಮುಂತಾದವು ತೋಟಗಳಲ್ಲಿ ಬೆಳೆಯುವ ಪಲ್ಲೆ ಕಾಯಿಗಳು ಈ ಊರ ಹೊಲಗಳಲ್ಲಿ ಸಮೃದ್ಧಿಯಾಗಿ ಬೆಳೆಯುತ್ತವೆ. ಧಾರವಾಡದ ಮಾವಿನ ಪಣ್ಣು, ಪೇರೂ ಪಣ್ಣು ಹೆಸರಾಗಿವೆ; ಅದರೆ ಬೇರೆ ಫಲವೃಕ್ಷಗಳು ಬಹುತರ ಇಲ್ಲ.

ನೆಲೆ—ಬೇಸಿಗೆಯಲ್ಲಿ ನೆರಮೂವಧಿ ೧೦೦ ಅಂಶದವರೆಗೆ ನಕೆ ಇರುತ್ತದೆ; ಚಳಿಗಾಲದಲ್ಲಿ ಬಹು ಕಡಿಮೆಯಾದರೆ ೬೪ ಅಂಶವಿರುತ್ತದೆ. ಆದ್ದರಿಂದ ಬೇಸಿಗೆಯೂ ಚಳಿಗಾಲವೂ ಬಹಳ ದುಃಸಹವಾಗುವದಿಲ್ಲ. ನೆಲೆಯಲ್ಲಿ ತೈತ್ಯವು ಸ್ವಲ್ಪ ಹೆಚ್ಚು ಇರುತ್ತದೆ. ಆದರೂ ಇಲ್ಲಿಯ ನೆಲೆಯು ಒಟ್ಟಿಗೆ ಆರೋಗ್ಯದ್ದೆಂದು ಎಣಿಸಲ್ಪಡುತ್ತದೆ. ಆದರೆ ಮಳೆಗಾಲದ

ಆರಂಭದಲ್ಲಿ ಜ್ವರೋಪದ್ರವವು ಬಳಿತಾಗಿ ಆಗುತ್ತದೆ. ಆದರೂ ಇಲ್ಲಿಯ ಮರಣದ ಪ್ರಮಾಣವು ಬೆಳಗಾವಿ, ವಿಜಾಪುರ, ಕಾರವಾರಗಳಿಗಿಂತ ಕಡಿಮೆ ಇರುತ್ತದೆ.

ಇತಿಹಾಸವು—ಧಾರವಾಡದ ಕೋಟೆಯನ್ನು ವಿಜಯನಗರದವರ ಮಹಾರಾಷ್ಟ್ರ ಸರದಾರನಾದ ಧಾರರಾವನೆಂಬವನು ಸ್ ೧೪೦೩ನೇ ವರ್ಷ ಕಟ್ಟಿಸಿದನೆಂದು ತಿಳಿದದೆ. ಮುಂದೆ ೧೫೭೩ರಲ್ಲಿ ವಿಜಾಪುರದ ಅಲ್ಲೀ ಆದಿಲ್‌ಶಹನು ಯುದ್ಧಮಾಡಿ ಈಕೋಟೆಯನ್ನು ವಿಜಯನಗರದವನೊಬ್ಬ ಸ್ವತಂತ್ರನಾದ ಸರದಾರನ ಕೈಯಿಂದ ಕಸುಕೊಂಡನು. ಸ್ ೧೬೭೦ರಲ್ಲಿ ಸವಣೂರಿನ ನಬಾಬನ ಮೂಲ ಪುರುಷನಾದ ಅಬದುಲ ಕರೀಮಖಾನನು ಬಂಕಾಪುರ ಸರಕಾರದ ಸುಭೇದಾರನಾಗಿ ಧಾರವಾಡದ ಕೋಟೆಗೆ ಬಡೆಯನಾದನು. ಸ್ ೧೬೬೪ರಲ್ಲಿ ಶಿವಾಜಿಯು ಈ ಕೋಟೆಯನ್ನು ತಕ್ಕೊಂಡನು. ೧೬೮೫ರಲ್ಲಿ ಔರಂಗಜೇಬನ ಮಗನಾದ ಸುಲ್ತಾನ ಮುಇಝ್ಝೀಮನು ಪುಬ್ಬಳ್ಳಿ ಧಾರವಾಡ ಇವೆರಡೂ ಪಟ್ಟಣಗಳನ್ನು ಆಕ್ರಮಿಸಿದನು. ಮುಂದೆ ೬೮ ವರ್ಷಗಳವರೆಗೆ ಧಾರವಾಡವು ಮೊಗಲರ ವಶದಲ್ಲಿಯೇ ಉಳಿಯಿತು. ೧೭೫೩ರಲ್ಲಿ ಪುಣೆಯ ಬಾಳಾಜಿರಾವ ಪೇಶವನು ಮೊಗಲರ ಕೈಯಿಂದ ಅದನ್ನು ಕಸುಕೊಂಡನು. ಮುಂದೆ ೧೮೧೭ರಲ್ಲಿ ಪೇಶವೆ ಬಾಜೀರಾಯನು ಧಾರವಾಡವನ್ನು ದಂಡಿನ ವೆಚ್ಚಕ್ಕಾಗಿ ಇಂಗ್ಲಿಷರಿಗೆ ಕೊಟ್ಟನು. ಸ್ ೧೮೫೭ರ ಬಂಡಾಯದ ಕಾಲದಲ್ಲಿ ನರಗುಂದದ ಬಾಬಾಸಾಹೇಬನೂ ಮುಂಡರಿಗಿಯ ರಂಗರಾಯನೂ ದಾಳಿಯನ್ನೆಬ್ಬಿಸಲಾಗಿ ಧಾರವಾಡದ ಕೋಟೆಯು ಪಗೆಗಳ ಕೈಸೇರೀತೆಂಬ ಹೆದರಿಕೆಯಿಂದ ಇಂಗ್ಲಿಷ ಸರಕಾದವರು ಬಂದು ಕಡೆಯಲ್ಲಿ ಕೋಟೆಯ ಗೋಡೆಯ

ನ್ನು ಕಿಡವಿ ಕಂದಕಕ್ಕೆ ಭರಿಹಾಕಿ ಬಳಗೆ ಹೋಗಲಿಕೆ ಮೊ ರ್ಚಮಾಡಿದರು.

ಧಾರವಾಡ ತಾಲೂಕಿನೊಳಗಿನ ಪ್ರಸಿದ್ಧ ಗ್ರಾಮಗಳು.

ದೇವರ ಹುಬ್ಬಳ್ಳಿ—ಧಾರವಾಡದ ನೈರುತ್ಯಕ್ಕೆ ೬ ಮೈಲಿ ನಮೇಲೆ ಇರುತ್ತದೆ. ಇಲ್ಲಿ ಎಲ್ಲಮ್ಮನ ಗುಡಿಯು ಪುರಾತ ನವಿರುತ್ತದೆ.

ಹೆಬ್ಬಳ್ಳಿ—ಧಾರವಾಡದ ಪೂರ್ವಕ್ಕೆ ೪ ಮೈಲಿನಮೇಲೆ ಇರುತ್ತದೆ. ಈ ಗ್ರಾಮವನ್ನು ಪೇಶವೆಯು ನಾನಾಸಾಹೇಬ ನು ಮೊದಲು ನೆರಗುಂದದ ಬಡೆಯನಾಗಿದ್ದ ಸರದಾರನಿಗೆ ಸ್ವ ೧೭೪೪ರಲ್ಲಿ ಜಹಾಗೀರು ಹಾಕಿಕೊಟ್ಟನು. ಅದು ಆವ ನ ವಂಶದವರಿಗೆ ಈಗ್ಯೂ ನಡೆಯುತ್ತದೆ. ಈ ಊರಿಗೆ ಬಂ ದು ಹಾಳು ಕೋಟೆಯುಂಟು. ಬುಧವಾರ ದಿವಸ ಸಂತೆ ಯಾಗುತ್ತದೆ.

ಗರಗ—ಧಾರವಾಡದ ವಾಯವ್ಯಕ್ಕೆ ೧೦ ಮೈಲಿನಮೇಲೆ ಇರುವದು. ಉರುಟು ಬಟ್ಟಿಗಳ ವ್ಯಾಪಾರವು ಬಳಿತಾಗಿ ಆ ಗುತ್ತದೆ.

ಮುಗದ—ಧಾರವಾಡದ ಪಶ್ಚಿಮಕ್ಕೆ ೭ ಮೈಲಿನ ಮೇಲೆ. ಊರ ಹೊರಗೆ ದೊಡ್ಡ ಕೆರೆಯುಂಟು. ಇಲ್ಲಿ ಮಹಾಲಕರಿ ಯು ಇರುತ್ತಾನೆ.

ಅಮಿನಭಾವಿ—ಧಾರವಾಡದ ಈಶಾನ್ಯಕ್ಕೆ ೩ ಮೈಲಿನ ಮೇಲೆ ದೊಡ್ಡ ಪಳ್ಳಿ; ಅಲ್ಲಿ ನೇಮಿನಾಥ, ಕಲಮೇಶ್ವರ, ಮಲ್ಲಿಕಾರ್ಜುನ ಎಂಬ ಮೂರು ಪುನಾದಿಯ ಗುಡಿಗಳು. ನೇಮಿನಾಥನೆಂದರೆ ಜೈನರ ೨೨ನೇ ತೀರ್ಥಂಕರನು. ಆ ರು ಶಿಲಾಲಿಪಿಗಳು ಇರುತ್ತವೆ.

ನರೇಂದ್ರ—ಧಾರವಾಡದ ಈಶಾನ್ಯಕ್ಕೆ ೫ ಮೈಲಿನಮೇಲೆ. ಶಂಕರಲಿಂಗನ ಗುಡಿಯೂ ಅದರ ಪತ್ತರ ಬಂದು ಲಿಪಿಯೂ

ಉಂಟು. ಇದು ಮೊದಲು ಪರಗಣೆಯ ಮುಖ್ಯ ಗ್ರಾಮ ಇರುವದು.

ಭೀಮಪಿಹಾಳ—ಧಾರವಾಡದ ವಾಯವ್ಯಕ್ಕೆ ೧೦ ಮೈಲಿನ ಮೇಲೆ. ಸಿದ್ಧೇಶ್ವರನ ದೊಡ್ಡ ಗುಡಿಯಲ್ಲಿ ಬಂದು ಲಿಪಿಯುಂಟು. ಈ ಗುಡಿಗೆ ಸರಕಾರದಿಂದ ಇನಾಮಿನ ಭೂಮಿ ನಡಿವಿತ್ತು.

METHODS OF TEACHING.

ಕಲಿಸುವ ಪದ್ಧತಿಗಳು.

ನಿ ಬ ಂ ಧ.

(೯೪ನೆಯ ಪುಟದಿಂದ ಮುಂದೆ ಸಾಗಿದ್ದು)

೫. ಕೆಲ ಕಾಲದಲ್ಲಿ ಕೆಲ ರಾಜ್ಯಗಳ ಅಧಿಪತಿಗಳು ಬಹು ಬಲಾಢ್ಯರಾಗಿ ಎಡಬಿಲವ ರಾಜ್ಯಗಳನ್ನೆಲ್ಲ ಗೆದ್ದು, ಅವುಗಳನ್ನು ತಮ್ಮ ಸ್ವಾಧೀನ ಮಾಡಿಕೊಂಡ ಸಂಗತಿಗಳು ಜಗತ್ತಿನ ಇತಿಹಾಸವಲ್ಲಿ ವಿವರಿಸಿರುತ್ತವೆ. ಜಗತ್ತಿಗೆ ಕೊಡ್ಡವೆಂದಿನಿಸುವ ಪ್ರಸಿದ್ಧವಾದ ಇಂಥ ರಾಜ್ಯಗಳು ಪೂರ್ವಕಾಲದಲ್ಲಿ ನಾಲ್ಕು ಇದ್ದವು. ಅವುಗಳಲ್ಲಿ ಮೊದಲನೇದು ಅಸೀರಿಯದ ರಾಜ್ಯನೇ. ಎಲ್ಲ ಕಡೆಯಲ್ಲಿಯೂ ಅತಿ ವೈಭವವುಳ್ಳ ಇಮಾರತುಗಳಿಂದಲೂ ಶಿಲ್ಪ ಕಲೆಗಳಿಂದಲೂ ಯುಕ್ತವಾದ ನಿನೀವಾ ಎಂಬ ಬಹು ದೊಡ್ಡ ಪಟ್ಟಣವೇ ಇವರ ರಾಜಧಾನಿಯಾಗಿತ್ತು. ಎರಡನೇ ದೊಡ್ಡ ರಾಜ್ಯವೆಂದರೆ ಇರಾಣವು. ಇಲ್ಲಿಯ ರಾಜರಲ್ಲಿ ಬಬ್ಬನಾದ ಪರಾಯಸನೆಂಬವನು ದೌಡು ಮಾಡಿ ಹಿಂದುಸ್ಥಾನದ ಪಲವು ಭಾಗಗಳನ್ನು ಕೈವಶ ಮಾಡಿಕೊಂಡಿದ್ದನು. ಮೂರನೇದಾದ ಗ್ರೀಸದ ರಾಜ್ಯವು. ಮುಖ್ಯವಾಗಿ 'ಅಲೆಗ್ಝಾಂಡರ ದಿ ಗ್ರೇತ' ಎಂಬವನಿಂದಲೇ ಬೆಳೆಯಿತು. ಆವರೆ ಗ್ರೀಸ ದೇಶದ ವೈಭವದ ನಂತರ ಅದನ್ನು

ವಶಮಾಡಿಕೊಂಡ ರೋಮನ ಜನರ ರಾಜ್ಯವು ಎಲ್ಲ ರಾಷ್ಟ್ರಗಳಲ್ಲಿ ಅತಿದೊಡ್ಡದೂ ಬಹುಬಲವುಳ್ಳದ್ದೂ ಆಗಿತ್ತು. ಇದೇ ಆ ಕಾಲದ ನಾಲ್ಕನೇ ದೊಡ್ಡ ರಾಜ್ಯವು. ಮಹಮ್ಮದನ ತರುವಾಯ ಆಳಿದ ಖಾದಶಹಗಳು ಬಗದಾದ ಪಟ್ಟಣದಲ್ಲಿ ರಾಜ್ಯ ಹೊಡದು, ಕ್ರಮ ಕ್ರಮವಾಗಿ ತಮ್ಮ ರಾಷ್ಟ್ರಕ್ಕೆ ಅನೇಕ ದೇಶಗಳನ್ನು ಸೇರಿಸಿದರು. ಚಂಗೀಜ ಖಾನ, ತೈಮುರ್ಲಂಗ, ಎಂಬವರು ಏಶಿಯಾ ಖಂಡದೊಳಗಿನ ಎಷ್ಟೋ ರಾಜ್ಯಗಳಲ್ಲಿ ಆಳಿದರು. ಈಗಿನ ಕಾಲದ ಅತಿದೊಡ್ಡ ರಾಜ್ಯವು ರಶಿಯಾ. ಈ ದೇಶದ ಅರಸನಿಗೆ 'ಝಾರ'ನೆನ್ನುವರು. ಅವನು ತೋರಿಕೆಯಲ್ಲಿ ಮಾತ್ರ ಸ್ವಾರಾ ಸ್ವತಂತ್ರತೆಯುಳ್ಳವನಾದಾಗ್ಯೂ ಆದೇಶದ ಕಾಯಿದೆಗಳಿಗೆ ಬಳಗಾಗಿದ್ದಾನೆ. ಇತ್ತಕಡೆ ಪ್ರಶಿಯ ದೇಶದ ಅರಸನ ರಾಜ್ಯಕ್ಕೆ ಮುಖ್ಯವು ರೋಪದ ಎಷ್ಟೋ ರಾಜ್ಯಗಳು ಸೇರಿರುತ್ತವೆ; ಇವುಗಳಿಗೆಲ್ಲ ಕೂಡಿ ಜರ್ಮನೀ ರಾಜ್ಯವೆಂಬ ಹೆಸರು.

೬. ಪ್ರಜಾನುಮತಿ ಪರಿಮಿತವಾದ ಫಿಕಾಧಿಪತ್ಯದಲ್ಲಿ ಅರಸನ ಅಥವಾ ಅರಸಿಯು ಅಧಿಕಾರವು ಬಪುತರವಾಗಿ ಹೆಸರಿಗೆ ಮಾತ್ರ ಇರುವದು, 'ಸ್ಯಾಲಿಕ' ಎಂಬ ಕಟ್ಟಳೆಯು ಇರುವಂಥ ಕೆಲವು ದೇಶಗಳಲ್ಲಿ ಹೆಂಗಸರಿಗೆ ಆಳಲಿಕ್ಕೆ ಅಧಿಕಾರವಿಲ್ಲ. ಮಧ್ಯಮ ತರದ ರಾಜ್ಯಗಳಲ್ಲಿ ಅರಸನು ಸ್ಥಾನಿಕ ಕಾಯಿದೆಗಳಿಗನುಸಾರವಾಗಿ ತನ್ನ ಪ್ರಜಾಪ್ರತಿನಿಧಿಗಳ ಬೋಧನೆಗಳನ್ನು ಕೇಳಿಕೊಂಡು ಆಳುವ ಪದ್ಧತಿಯು ಉತ್ತಮ ತರದ ರಾಜ್ಯಭಾರದ ರೀತಿ ಎಂದು ಎಷ್ಟೋ ಘನವಿಚಾರಿಗಳ ಗ್ರಹಿಕೆಯುಂಟು. ಇಂಗ್ಲಂಡ ದೇಶದ ಪರಿಮಿತ ರಾಜಶಾಸನಾನುಸಾರವಾದ ರಾಜ್ಯಭಾರವು ಜಗತ್ತಿನಲ್ಲಿ ಮೇಲಾದದ್ದು. ಆ ದೇಶದ ಪ್ರಜೆಗಳು ಅರಸನಲ್ಲಿ ಘನವಾದ ರಾಜನಿಷ್ಠೆ

ಯುಳ್ಳವರಾದಾಗ್ಯೂ ತಮ್ಮ ಹಕ್ಕುಗಳನ್ನು ಬಿಡದಲೆ ಕ
ಯ್ದುಕೊಳ್ಳುವರು. 'ಪಾರ್ಲಮೆಂಟ' ಎಂಬ ರಾಜಸಭೆಯಲ್ಲಿ
ಎರಡು ಪಕ್ಷಗಳಿವೆ. 'ಹೌಸ ಆಫ್ ಲಾರ್ಡ್ಸ್' (ಪ್ರಭು
ಳ ಸಭೆ) ಎಂಬ ಮೊದಲನೇ ಪಕ್ಷದ ಸಭೆಯಲ್ಲಿ ರಾಷ್ಟ್ರದೊ
ಳಗಿನ ಕುಲೀನರು ರಾಜ್ಯಾಧಿಪತ್ಯದ ಪ್ರತಿನಿಧಿಗಳು ಇರುತ್ತಾ
ರೆ. ಇವಕ್ಕೂ ಹೆಚ್ಚು ದೊಡ್ಡದಾಗಿಯೂ ಬಲಿಷ್ಠವಾಗಿಯೂ
ಇರುವ 'ಹೌಸ ಆಫ್ ಕಾಮನ್ಸ್' (ಪ್ರತಿನಿಧಿಗಳ ಸಭೆ)
ಎಂಬ ಎರಡನೇ ಪಕ್ಷದ ಸಭೆಯೊಳಗೆ ಪ್ರಜೆಗಳಿಂದ ಏರ್ಪ
ಡಿಸಿದ ಪ್ರತಿನಿಧಿಗಳಿರುತ್ತಾರೆ. ಸರಕಾರದವರು ದೇಶ ಸಂ
ಬಂಧವಾದ ಕಾಯಿದೆಗಳನ್ನು ಮಾಡಿ ಉಭಯ ಪಕ್ಷದ ಸಭಿ
ಕರ ಸಮ್ಮತಿಯನ್ನು ಪಡೆದ ತರುವಾಯ ಅವುಗಳನ್ನು ರಾ
ಜಾನುಮೋದನಕ್ಕಾಗಿ ಕಳಿಸುವರು. ಕಾಯಿದೆಗಳನ್ನು ಅ
ಮಲಿನಲ್ಲಿ ತರುವ ಅಧಿಕಾರವು ಅರಸನಲ್ಲಿ ಇರುವದು. ಮ
ತ್ತು ಅವನು ಅದರ ಸಂಬಂಧವಾದ ಎಲ್ಲ ಕೆಲಸಗಳಲ್ಲಿ
ಕ್ಯಾಬಿನೆಟ' ಎಂಬ ಸಭೆಯಮಂತ್ರಿಗಳ ಅನುಮತಿಯನ್ನು
ಪಡಕೊಳ್ಳ ಬೇಕಾಗುತ್ತದೆ.ಪ್ರಭುಗಳ ಹಾಗೂ ಪ್ರತಿನಿಧಿ
ಗಳ ಸಭೆಯಲ್ಲಿ 'ಕಾನ್ಸರ್ವೆಟಿವ್ಹಜ' (ಪೂರ್ವ ಸಂಪ್ರದಾ
ಯಾಭಿಮಾನಿಗಳು) 'ಲಿಬರಲ್ಸ್' (ಸತ್ಸುಧಾರಣಾವಾದಿಗಳು)
ಎಂಬ ಎರಡು ದೊಡ್ಡ ರಾಜಕಾರ್ಯದ ಬಣಗಳಿರುತ್ತವೆ.
ಇವರಲ್ಲಿ ಮೊದಲನೇ ಬಣದವರು ರಾಜಕಾರ್ಯಗಳನ್ನು
ಪೂರ್ವಕಾಲದಿಂದ ನಡೆದು ಬಂದಂತೆಯೇ ಮುಂದೂ ಸಾಗಿ
ಕೊಂಡು ಹೋಗಬೇಕೆಂದು ಹೇಳುತ್ತಾರೆ. ಎರಡನೇ
ಬಣದವರು ಎಲ್ಲ ರಾಜಕಾರ್ಯಗಳಲ್ಲಿ ಅದಷ್ಟು ಹೊಸ ಸುಧಾ
ರಣೆಯನ್ನು ಮಾಡಲಿಕ್ಕೆ ಯತ್ನಿಸುತ್ತಾರೆ. ಪ್ರಾಚೀನಕಾ
ಲದಲ್ಲಿ ಹಿಂದೂ ದೇಶದೊಳಗೆ ಸಣ್ಣಸಣ್ಣ ರಾಜ್ಯಗಳಿದ್ದವು.

ಆಗ ಪ್ರತ್ಯೇಕ ರಾಜ್ಯದ ಅರಸು ಬಹುಶಃ ನಿರಂಕುಶನಾಗಿ ಆಳುತ್ತಿದ್ದನು; ಅಂದರೆ ಅವನ ಮನಸಿಗೆ ಬಂದದ್ದೇ ಕಾಯದೆಯಾಗಿತ್ತು. ಆದರೆ ಅವನು ವಾಡಿಕೆಯಾಗಿ ತನ್ನ ಪ್ರತಿನಿಧಿಯಾದ ಬ್ರಾಹ್ಮಣನ ಉಪದೇಶದಂತೆಯೇ ನಡೆಯುತ್ತಿದ್ದನು. ಹಿಂದುಸ್ಥಾನದೊಳಗಿನ ಎಷ್ಟೋ ಸಂಸ್ಥಾನಗಳು ಇನ್ನೂ ವರೆಗೆ ಇದೇಮೇರೆಗೆ ಆಳಲ್ಪಡುತ್ತವೆ. ಮೇಲಾಗಿ ಇಂಗ್ಲಿಷರು ಹಿಂದೂದೇಶವನ್ನು ಗೆದ್ದಂದಿನಿಂದ 'ಪ್ರೋಲಿಟಿಕಲ್ ಎಜಂಟ್' ನೆಂಬ ಒಬ್ಬ ಹೊಸದೊಡ್ಡ ಉದ್ಯೋಗಸ್ಥನ ಅಧಿಕಾರವು ಸಹ ನೆಡೆಯುತ್ತಿದೆ. ದಕ್ಷಿಣ ಹಿಂದುಸ್ಥಾನದೊಳಗಿನ ಮೈಸೂರೆಂಬ ಮುಖ್ಯಸಂಸ್ಥಾನದ ಒಳ್ಳೇ ಸುಧಾರಿಸಿದ ವಿದ್ಯಾಸಂಪನ್ನರಾದ ಮಹಾರಾಜರವರು ಪಾರ್ಲಮೆಂಟು ಸಭೆಯಂತೆ ಒಂದು ಸಭೆಯನ್ನು ಸ್ಥಾಪಿಸಿರುವದಲ್ಲದೆ, ದೊಡ್ಡ ದೊಡ್ಡ ನೌಕರಿಗಳನ್ನು ಪಡೆಯಲಿಕ್ಕೆ ಸಾಧನವಾದ 'ಸಿವ್ಹಿಲ ಸರ್ವಿಸ' ಎಂಬದೊಂದುಸಂಸ್ಥೆಯನ್ನೂ ಏರ್ಪಡಿಸಿದ್ದಾರೆ. ಇಂಥ ಮೇಲಾದ ವ್ಯವಸ್ಥೆಯು ಹಿಂದೂದೇಶದ ಉಳಿದ ಯಾವ ಸಂಸ್ಥಾನಗಳಲ್ಲಿಯೂ ಅದಮ್ಮಿ ಕಂಡು ಬರುವದಿಲ್ಲ.

೭. ದೇಶದೊಳಗಿನ ಜನರ ನಾಗರೀಕತನವು ಪರಮಾವಧಿಗೆ ಮುಟ್ಟಿದಾಗ ಮಾತ್ರ ಅರಸಿಲ್ಲದೆ ರಾಜ್ಯಭಾರವು ಸಾಗಬಹುದು. ಆದರೆ ಇಂಥ ರಾಜ್ಯಭಾರವು ಅಸ್ಥಿರವಾದದ್ದೆಂದು ಇತಿಹಾಸದಿಂದ ತಿಳಿಯಬರುತ್ತದೆ. ಇದು ಸ್ಥಾಪನೆಯಾಗಿ ಕೆಲ ಕಾಲದವರೆಗೆ ಅತಿ ವೈಭವದಿಂದ ಸುಸೂತ್ರವಾಗಿ ನಡೆಯುತ್ತದೆ. ಯಾಕೆಂದರೆ ಜನರು ತಮ್ಮ ಸ್ವತಂತ್ರತೆಯ ಬಗ್ಗೆ ಅಭಿಮಾನವುಳ್ಳವರಾಗಿಯೂ, ತಮಗೆ ಚೆನ್ನಾಗಿ ಆಳಲಿಕ್ಕೆ ಬರುತ್ತದೆಂಬದನ್ನು ತೋರಿಸುವ ಲವಲವಿಕೆ

ಯುಳ್ಳವರಾಗಿಯೂ ಇರುವರು. ಆದರೆ ಈಸ್ಥಿತಿಯು ಜ
ರಲ್ಲಿ ಬಹುಕಾಲ ನಿಲ್ಲಲಾರದು. ಕಾರಣವೇನಂದರೆ, ಜನರ
ಗರ್ವ ಹೆಚ್ಚುವದರಿಂದ ಪಕ್ಷಗಳುಂಟಾಗಿ, ತೀವ್ರವೆ
ಹೋರಾಟಗಳು ಎಸಗುತ್ತವೆ. ಅಂತಃಕಲಹಗಳು ಆರ
ಭವಾಗಿ, ಕೊನೆಗೆ ಲೋಕಪ್ರಿಯರಾದ ಮುಖ್ಯ ಮನುಷ್ಯ
ಲ್ಲಿ ಅತಿ ಬಲಿಷ್ಠನಾದವನೊಬ್ಬನು ರಾಜ್ಯಭಾರವನ್ನು ಅಕ
ಮಿಸಿ ತಾನೇ ಚಕ್ರವರ್ತಿಯಾಗುವನು. ಪ್ರಾಚೀನ
ಕಾಲದಲ್ಲಿ ರೋಮವು ಬಂದು ಸಣ್ಣ ರಾಜ್ಯವಿತ್ತು. ಆದರ
ಅಲ್ಲಿಯ ಜನರು ತಮ್ಮ ಅರಸನಾದ ಟಾರ್ಕ್ವಿನನ ಆಳಿಕೆಗ
ಮೆಚ್ಚದೆ, ಅವನನ್ನು ಸಿಂಹಾಸನದಿಂದ ತಳ್ಳಿ ಪ್ರಜಾಸತ್ತಾ
ತ್ಮಕ ರಾಜ್ಯವನ್ನು ಸ್ಥಾಪಿಸಿದರು. ಈ ರಾಜ್ಯದ ವೈಭವವು
ತೀವ್ರವೇ ಹೆಚ್ಚಿತು. ಎಡಬಲವ ಅನೇಕ ರಾಜ್ಯಗಳು ಜೈ
ಸಲ್ಪಟ್ಟು ಇವರ ಆಳಿಕೆಗೆ ಬಳಗಾದವು. ಮತ್ತು ಬಬ್ಬರ
ಹಿಂದೆ ಬಬ್ಬರು ಆಳಿದಂಥ 'ಸೀಝುಸ್ಸ' ರೆಂಬ ಚಕ್ರವರ್ತಿ
ಗಳು ಈ ರಾಜ್ಯವನ್ನು ಅಪರಮಿತವಾಗಿ ಬೆಳಿಸಿದ್ದರಿಂದ,
ಇದು ಬಂದು ದೊಡ್ಡ ರಾಷ್ಟ್ರವೆನಿಸಿಕೊಂಡಿತು. ಆದರೆ
ಇವರ ವೈಭವವು ನಷ್ಟವಾಗುತ್ತ ನಡೆದು ಮುಂದೆ ಸ್ವಲ್ಪ
ಕಾಲವಲ್ಲಿಯೇ ಅಳಿದು ಹೋಯಿತು. ಫ್ರಾನ್ಸಿನ ಪ್ರಜಾಸ
ತ್ತಾತ್ಮಕ ರಾಜ್ಯವಾದರೂ ಕೆಲವು ಕಾಲದವರೆಗೆ ಬಹುಬಲಾ
ಢ್ಯವಾದದ್ದಾಗಿತ್ತು. ಆವರೆ ಪ್ರಜೆಗಳು ಈ ರಾಜ್ಯಭಾರವ
ಕ್ರೂರತನಕ್ಕೂ ಜುಲುಮೆಗೂ ತೀವ್ರವೇ ಬೇಸತ್ತು ಹೋ
ದರು; ಬಳಿಕ ನೆಪೋಲಿಯನನೆಂಬ ಕಲಿಯು ಸರ್ವಾಧಿಕಾರ
ವನ್ನು ಪಡೆದು ತಾನೇ ಚಕ್ರವರ್ತಿಯಾದನು. ಈಗ ಫ್ರಾ
ನ್ಸಿನವರು ಪುನಃ ಪ್ರಜಾಸತ್ತಾತ್ಮಕ ರಾಜ್ಯವನ್ನೇ ಸ್ಥಾಪಿಸಿ
ಕೊಂಡಿದ್ದಾರೆ. ಫ್ರಾನ್ಸಿನಲ್ಲಿ ಚನ್ನಾಗಿ ಸುಧಾರಿಸಿದ ವಿದ್ಯಾಂ

ಸರಿರುವದರಿಂದ ಈ ರಾಜ್ಯಭಾರವು ಬಹುಕಾಲದ ವರೆಗೆ ಎಡತಿಲ್ಲದೆ ನಡೆಯಬಹುದೆಂದು ತೋರುತ್ತದೆ. ಅಮೇರಿಕದ ಸಂಯುಕ್ತ ಸಂಸ್ಥಾನಗಳ ಪ್ರಜಾಸತ್ತಾತ್ಮಕ ರಾಜ್ಯಭಾರವು ಈ ಹೊತ್ತಿಗೆ ಜಗತ್ತಿನಲ್ಲಿ ಅತಿ ಮೇಲಾದದ್ದೂ ಬಹು ಘನತೆಯುಳ್ಳದ್ದೂ ಇರುವದು. ಈ ಸಂಯುಕ್ತ ಸಂಸ್ಥಾನಗಳ ಪ್ರಜೆಗಳು ಮುಖ್ಯವಾಗಿ ಯುರೋಪದ ಯಾವತ್ತು ಸುಧಾರಿಸಿದ ದೇಶಗಳಿಂದ ಬಂದು ವಾಸ ಮಾಡಿದವರಾದದರಿಂದ, ಈ ರಾಜ್ಯಭಾರದ ಪದ್ಧತಿಯು ಅವರಿಗೆ ಬಹು ಹಿತಕರವಾದದ್ದದೆ.

೮. ಸದ್ಯಕ್ಕೆ ಇಂಗ್ಲಿಷರು ಹಿಂದುಸ್ಥಾನದಲ್ಲಿ ಹಿಮೋಲಯ ಪರ್ವತದಿಂದ ಕುಮಾರಿ ಭೂಶಿರದ ವರೆಗೆ ಆಳುತ್ತಾರೆ. ಆದರೂ ಇದರಲ್ಲಿ ಇನ್ನೂ ವರೆಗೆ ಹಲವು ದೇಶೀ ಸಂಸ್ಥಾನಗಳಿರುವವು. ಈ ಸಂಸ್ಥಾನಗಳ ಒಡೆಯರು ಇಂಗ್ಲಂಡದ ಮಹಾರಾಣಿಯವರೇ ತಮ್ಮ ಶ್ರೇಷ್ಠಾಧಿಪತಿಗಳೆಂದು ತಿಳುಕೊಳ್ಳುತ್ತಾರೆ. ಹಿಂದುಸ್ಥಾನದಲ್ಲಿ ಇಷ್ಟು ಪ್ರಬಲವಾದ ರಾಜ್ಯಭಾರವು ಇಂಗ್ಲಿಷರದೇ. ಮತ್ತು ಈ ದೇಶದ ಅಧಿಕಾರವು ಏಕ ಛತ್ರಪತಿಯ ಕೈಕೆಳಗೆ ಇಷ್ಟು ಬಿಕ್ಕಟ್ಟಾಗಿ ಮೊದಲು ಎಂದೂ ಬಂದಿದ್ದಿಲ್ಲ. ಈ ದೇಶದ ರಾಜಕಾರ್ಯಗಳನ್ನು ಮುಖ್ಯವಾಗಿ ವೈಸರಾಯನೆಂಬ ಅಧಿಪತಿಯೇ ನಡಿಸುತ್ತಾನೆ. ಈತನಿಗೆ ಎಲ್ಲ ಕಾರ್ಯಗಳಲ್ಲಿ 'ಕೌನ್ಸಿಲ್' ಎಂಬ ಸಭೆಯವರು ಸಹಾಯ ಮಾಡುವರು. ಈ ಅಧಿಪತಿಯು ಅಧಿಕಾರವು ಅತ್ಯಧಿಕವಾದದ್ದಾದಾಗ್ಯೂ ಎಲ್ಲ ಮಹತ್ಕಾರ್ಯಗಳಲ್ಲಿಯೂ 'ಸೆಕ್ರೆತರಿ ಆಫ್ ಸ್ಟೇತ' ಎಂಬ ಪ್ರಧಾನಿಯ ಸಮ್ಮತಿಯನ್ನೂ ಆತನ ಮುಖಾಂತರವಾಗಿ ಬ್ರಿತಿಶ ಸರಕಾರದವರ ಸಮ್ಮತಿಯನ್ನೂ ಪಡೆಯ ಬೇಕಾಗುತ್ತದೆ. ಹಿಂದು

ಸ್ಥಾನದ ತೀರ ಬಡ ನಿವಾಸಿಗೆ ಸಹ 'ವೈಸರಾಯ' ಎಂಬವರ ಕಡೆಗೆ, ಇಲ್ಲವೆ ಇಂಗ್ಲಂಡದ ಮಹಾರಾಣಿಯವರ ಕಡೆಗೆ ಸಹ ತನ್ನ ಅರಿಕೆಯನ್ನು ಮಾಡಿಕೊಳ್ಳಲಿಕ್ಕೆ ಅಧಿಕಾರವಿರುವದು. ಈ ಮಾತಿನಿಂದ ಬ್ರಿತಿಶ ಆಳಿಕೆಗೆ ಭೂಷಣವೂ ಪ್ರಜೆಗಳಿಗೆ ಹಿತವೂ ಉಂಟಾಗುತ್ತವೆ.

೯. ವೈಸರಾಯನೆಂಬ ಅಧಿಪತಿಯ ಮಂತ್ರೀ ಸಭೆಯಲ್ಲಿ ಮುಖ್ಯವಾಗಿ ವೈಸರಾಯನಿಂದಲೇ ಆರಿಸಿದ ಸಭಾಸದರಿರುವರು. ಅವರು ವಾಡಿಕೆಯಾಗಿ ವಿಂದ್ವಾಂಸರಾಗಿಯೂ ಲೋಕಪ್ರಿಯರಾಗಿಯೂ ಇರುವರು. ಆದರೂ ಅವರು ಹಿಂದುಸ್ಥಾನದೊಳಗಿನ ಲಕ್ಷಾವಧಿ ಜನರ ಅರಿಕೆಗಳನ್ನೂ ಕೋರಿಕೆಗಳನ್ನೂ ಚನ್ನಾಗಿ ಸರಕಾರಕ್ಕೆ ತಿಳಿಸುವದಿಲ್ಲವೆಂದು ಹಿಂದೂ ನಿವಾಶಿಗಳ ಸಾಧಾರಣ ಗ್ರಹಿಕೆಯುಂಟು. ಇತ್ತಲಾಗಿ ಹಿಂದುಸ್ಥಾನದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವರುಷಂಪ್ರತಿ ರಾಷ್ಟ್ರೀಯ ಸಭೆಯು ಕೂಡಹತ್ತಿದೆ. ಈಸಭೆಗೆ ಎಲ್ಲ ಪ್ರಾಂತಗಳಿಂದಲೂ ಪ್ರತಿನಿಧಿಗಳು ಬರುತ್ತಾರೆ. ವೈಸರಾಯನ ಮಂತ್ರೀ ಸಭೆಯಲ್ಲಿ ಪ್ರಜೆಗಳಿಂದ ಆರಿಸಿದ ಕೆಲವು ಸಭಾಸದರು ಇರಬೇಕೆಂದು ಈ ಸಭೆಯವರು ಬ್ರಿಟಿಶ ಸರಕಾರವರಿಗೆ ಅರಿಕೆ ಮಾಡಿಕೊಂಡಿದ್ದಾರೆ. ಬ್ರಿಟಿಶ ಸರಕಾರದವರು ಉದಾರ ಗುಣವುಳ್ಳವರಾಗಿಯೂ ಸ್ವತಂತ್ರತೆಯಲ್ಲಿ ಇಷ್ಟವುಳ್ಳವರಾಗಿಯೂ ಇರುವದರಿಂದ ಹಿಂದುಸ್ಥಾನದ ಜನರಿಗೆ ರಾಜಕಾರ್ಯಗಳಲ್ಲಿ ಬೇಗನೇ ಕೈಹಾಕಗೊಡುವರೆಂದು ತೋರುತ್ತದೆ.

RAO BAHADUR S. V. PATWARDHAN'S ADMINISTRATION.

ರಾವ ಬಹಾದ್ದೂರ ಸೀ. ವಿ. ಪಟವರ್ಧನ ಸಾಹೇಬರ ಆಡಳಿತವು.

ಮಿ. ಪಟವರ್ಧನ ಸಾಹೇಬರವರು ಮಿ. ರಸಲ್ ದೊರೆಗಳ ಪಶ್ಚಾತ್ ಈ ಭಾಗದ ವಿದ್ಯಾಖಾತೆಯ ಮುಖ್ಯಾಧಿಕಾರಿಗಳಾಗಿ ಎಪ್ರಿಲ ೧೮೯೫ರಲ್ಲಿ ಬಂದರು. ರಸಲ್‌ದೊರೆಗಳು ಸ್ವಭಾವತ ಬುದ್ಧಿವಂತರೂ ಗುಣಜ್ಞರೂ ಆದಾಗ್ಯೂ, ಕೆಲಸಕ್ಕೆ ಮೆಚ್ಚಿದವರಿದ್ದಿಲ್ಲ. ಅಭ್ಯಾಸಕ್ಕೆ ಮನಸೋತವರಾವ್ದರಿಂದ ಕೆಲಸವು ಪರಭಾರೆ ಆದಷ್ಟು ಅವರಿಗೆ ಆನಂದವಾಗುತ್ತಿತ್ತು. ಇಂಥ ಕಾಲಕಿರ್ದಿಯಲ್ಲಿ ಬಡ ಮಾಸ್ತರರ ದಾದು ಅಪರೂಪವಾಗಿ ಪತ್ತುತ್ತಿತ್ತು. ಮುಂದೆ ಬಿದ್ದವರು ಮುಂದೆ, ಹಿಂದುಳಿದವರು ಹಿಂದೆ ಉಳಿದು ತಮ್ಮ ಕ್ರಮಕ್ಕೆ ತಕ್ಕ ಫಲ ಸಿಗುವದಿಲ್ಲೆಂಬ ನಂಬಿಗೆಯು ಸರ್ವತ್ರ ಹಬ್ಬುಗೊಂಡು, ಖರೆ ಕೆಲಸ ಮಾಡುವವರ ಸಂಖ್ಯೆಯು ಕ್ಷೀಣವಾಗುತ್ತ ನಡೆದಿತ್ತು. ಅಷ್ಟರಲ್ಲಿಯೇ ಪಟವರ್ಧನ ದೊರೆಗಳು ಬಂದು, ತಮ್ಮ ಸುಧಾರಾವುಗಳನ್ನು ಕಟ್ಟಟ್ಟು, ಛಿಕ ನಿಷ್ಠೆಯಿಂದ ಕೆಲಸದಲ್ಲಿ ತೊಡಗಲು, ಖರೆ ಕೆಲಸ ಮಾಡುವವರಿಗೆ ಉತ್ತೇಜನ ಸಿಕ್ಕು, ಸುಳ್ಳು ಕೆಲಸ ಮಾಡುವವರಿಗೆ ತಕ್ಕ ಶಾಸನವಾಗಿ, ಮಾಸ್ತರ ಜನರಲ್ಲಿ ಮಷ್ಟಕ್ಕೆ ಉತ್ಸಾಹವು ತಲೆದೋರಿದತ್ತಿದೆ.

೧೮೯೫ರ ಮಾರ್ಚದಲ್ಲಿಯೂ ೧೮೯೬ನೆಯ ಜೂನ್ ತಿಂಗಳಲ್ಲಿಯೂ ನಮ್ಮ ಭಾಗವಲ್ಲಿದ್ದ ಶಾಲೆಗಳ ಹಾಗು ವಿದ್ಯಾರ್ಥಿಗಳ ಪಟ್ಟಿಯನ್ನು ಕೆಳಗೆ ಕೊಟ್ಟಿರುತ್ತೇವೆ. ಅದರಿಂದ ಶಾಲೆಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆಗಳಲ್ಲಿ ಎಷ್ಟು ಹೆಚ್ಚು ಕಡಿಮೆಯಾಗಿರುತ್ತದೆಂಬದು ಸ್ಪಷ್ಟವಾಗಿ ತಿಳಿಯುವದು.

ಸಂಖ್ಯೆ	ಮಾಡಿದವರು	ಮೊತ್ತ	ಕಾಲ	ಬಡ್ಡಿ	ಮೊತ್ತ	ಕಾಲ	ಬಡ್ಡಿ
		ರೂ.	ವರ್ಷ	ರೂ.	ರೂ.	ವರ್ಷ	ರೂ.
೧	ಕೃಷ್ಣಪ್ಪ	೨೦೦೦	೨	೪೦೦	೨೦೦೦	೨	೪೦೦
೨	ಚಿಕ್ಕಣ್ಣ	೧೦೦೦	೧	೧೦೦	೧೦೦೦	೧	೧೦೦
೩	ಮಾದಪ್ಪ	೫೦೦	೧	೫೦	೫೦೦	೧	೫೦
೪	ಸಿದ್ದಪ್ಪ	೧೦೦೦	೨	೨೦೦	೧೦೦೦	೨	೨೦೦
೫	ಬಸವಯ್ಯ	೨೦೦೦	೨	೪೦೦	೨೦೦೦	೨	೪೦೦
೬	ಮಲ್ಲಪ್ಪ	೧೦೦೦	೧	೧೦೦	೧೦೦೦	೧	೧೦೦
೭	ಶಿವಣ್ಣ	೫೦೦	೧	೫೦	೫೦೦	೧	೫೦
೮	ಗೌರಮ್ಮ	೧೦೦೦	೨	೨೦೦	೧೦೦೦	೨	೨೦೦
೯	ಪುಟ್ಟಮ್ಮ	೨೦೦೦	೨	೪೦೦	೨೦೦೦	೨	೪೦೦
೧೦	ಲಕ್ಷ್ಮಮ್ಮ	೧೦೦೦	೧	೧೦೦	೧೦೦೦	೧	೧೦೦
೧೧	ಸಾವಿತ್ರಮ್ಮ	೫೦೦	೧	೫೦	೫೦೦	೧	೫೦
೧೨	ಜಯಮ್ಮ	೧೦೦೦	೨	೨೦೦	೧೦೦೦	೨	೨೦೦
೧೩	ಕಾಳಮ್ಮ	೨೦೦೦	೨	೪೦೦	೨೦೦೦	೨	೪೦೦
೧೪	ಗಂಗಮ್ಮ	೧೦೦೦	೧	೧೦೦	೧೦೦೦	೧	೧೦೦
೧೫	ಪಾರ್ವತಮ್ಮ	೫೦೦	೧	೫೦	೫೦೦	೧	೫೦
೧೬	ಸರೋಜಮ್ಮ	೧೦೦೦	೨	೨೦೦	೧೦೦೦	೨	೨೦೦
೧೭	ಶಾಂತಮ್ಮ	೨೦೦೦	೨	೪೦೦	೨೦೦೦	೨	೪೦೦
೧೮	ಲಲಿತಮ್ಮ	೧೦೦೦	೧	೧೦೦	೧೦೦೦	೧	೧೦೦
೧೯	ಮೀನಾಕ್ಷಮ್ಮ	೫೦೦	೧	೫೦	೫೦೦	೧	೫೦
೨೦	ಸುಬ್ಬಮ್ಮ	೧೦೦೦	೨	೨೦೦	೧೦೦೦	೨	೨೦೦
	ಒಟ್ಟು ಸಾಲ ರೂ.						

೧೪೪೫ನೆಯ ವರ್ಷದಲ್ಲಿ ಇಂಗ್ಲಿಷ್‌ಶಿಕ್ಷಣದ ಶಾಲೆಗಳು ಗಂಡು ಹೆಣ್ಣು ಕೂಡಿ ೭೫, ವಿದ್ಯಾರ್ಥಿಗಳು ೪೫೬೦ ಇದ್ದರು. ಈಗ ೧೦೫ ಶಾಲೆಗಳೂ ೭೪೮೬ ವಿದ್ಯಾರ್ಥಿಗಳೂ ಇರುತ್ತಾರೆ. ಪ್ರಾಥಮಿಕ ಶಿಕ್ಷಣದ ಶಾಲೆಗಳು ೧೪೪೫ರಲ್ಲಿ ೧೪೬೧, ವಿದ್ಯಾರ್ಥಿಗಳು ೯೫೬೪ ಇದ್ದದ್ದು ಈಗ ಶಾಲೆಗಳು ೭೬೦೪, ವಿದ್ಯಾರ್ಥಿಗಳು ೧೪೯೧೦೭ ಆಗಿದ್ದಾರೆ. ಆಗ್ಗೆ ಡಾಯಿಂಗ ವರ್ಗಗಳು ೪, ವಿದ್ಯಾರ್ಥಿಗಳು ೧೭೪ ಇದ್ದರು. ಈಗ್ಗೆ ೧೭ ವರ್ಗಗಳೂ ೭೬೧ ವಿದ್ಯಾರ್ಥಿಗಳೂ ಇದ್ದಾರೆ. ೧೪೪೫ರಲ್ಲಿ ಕಲಾಕೌಶಲ್ಯದ ಶಾಲೆಯು ರತ್ನಾಗಿರಿಯಲ್ಲಿ ಬಂದೇ ಇತ್ತು. ಈಗ ೪ ಶಾಲೆಗಳೂ ಅವುಗಳಲ್ಲಿ ಒಟ್ಟು ೭೬೧ ವಿದ್ಯಾರ್ಥಿಗಳೂ ಕಲಿಯುತ್ತಾರೆ. ಗಾವಠೀ ಶಾಲೆಗಳಿಗೆ ಉತ್ತೇಜನ ಕೊಟ್ಟು, ಹಳ್ಳಿ ಪಳ್ಳಿಯ ಹುಡುಗರಿಗೆ ವಿದ್ಯಾ ಸಂಪಾದನೆಯ ಮಾರ್ಗವನ್ನು ಮಾಡಿ ಕೊಡಬೇಕೆಂದು ಸರಕಾರದವರು ಗೊತ್ತು ಮಾಡಿ, ಕೆಲವು ನೇಮುಗಳನ್ನು ಮಾಡಿದರು. ಆ ನೇಮುಗಳಂತೆ ದಕ್ಷಿಣ ಭಾಗದಲ್ಲಿ ೪೪೪ ಶಾಲೆಗಳಿಗೆ ಇನಾಮು ಸಿಕ್ಕಿ ಅವುಗಳಲ್ಲಿ ೧೪೯೭೪ ವಿದ್ಯಾರ್ಥಿಗಳಿಗೆ ಸರಕಾರೀ ರೀತಿಯಂತೆ ಶಿಕ್ಷಣ ದೊರೆಯುತ್ತದೆ.

೧೪೪೫ನೆಯ ಇಸವಿಯಲ್ಲಿ ೯೪೪ ಶಾಲೆಗಳಿದ್ದವು. ಅವುಗಳಲ್ಲಿ ೭೯೬ ಶಾಲೆಗಳಿಗೆ ಮಾತ್ರ ಸರಕಾರದಿಂದ ಕಟ್ಟಿಸಲ್ಪಟ್ಟ ಮನೆಗಳಿದ್ದವು. ಉಳಿದ ಶಾಲೆಗಳನ್ನು ಗುಡಿ ಗುಂಡಾರಗಳಲ್ಲಿಯೂ ಧರ್ಮಶಾಲೆ ಚಾವಡಿಗಳಲ್ಲಿಯೂ ಹಾಕುತ್ತಿದ್ದರಿಂದ ಅಭ್ಯಾಸಕ್ಕೆ ಬಹಳ ತೊಂದರೆಯಾಗುತ್ತಿತ್ತು. ಆ ತೊಂದರೆಯನ್ನು ಪರಿಹರಿಸುವ ಉದ್ದೇಶದಿಂದ ವರ್ಗಣಿ ಹಣವನ್ನು ಕೂಡಿಸಿ, ಸರಕಾರದಿಂದ ಹಣವನ್ನು ದೊರಿಕಿಸಿ, ಆ ಹಣದಿಂದ ಕೆಲವು ಭವ್ಯವಾದ ಇಮಾರತಿಗಳು ಕಟ್ಟಲ್ಪಟ್ಟವು. ಪಟವರ್ಧನ ಸಾಹೇಬರಿಗೆ ಇಮಾರತಿ ಕಟ್ಟಿವ

ಸಂಬಂಧದ ಮೋಹಿತಿಯು ಇದ್ದದ್ದರಿಂದ ಅವರು ಇಮೋರತಿಗ
ಳನ್ನು ಬಹಳ ಕಸೂಸಿಯಿಂದ ಮಾಡಿಸುವರು. ಅದರಿಂದ
ಖರ್ಚಿನಲ್ಲಿ ಹೆಚ್ಚು ಕಡಿವೆಯಾಗುತ್ತಿದ್ದಿಲ್ಲ. ಬಂದು ಪ್ರಸಂ
ಗವಲ್ಲಿ ಇಂಜಿನಿಯರರು ಕಟ್ಟಿದ ಶಾಲಾಗ್ರಹವನ್ನು ಸ್ವತಃ
ನೋಡಿ, ಅದರೊಳಗೆ ಕಂಡು ಬಂದ ದೋಷಗಳನ್ನು ಇಂ
ಜಿನಿಯರ ಸಾಹೇಬರಿಗೆ ತಿಳಿಸಿ, ಹಾಕಿದ ಕೆಟ್ಟ ಮಡಿಗೆಯ
ನ್ನು ತೆಗಿಸಿ, ಹೊಸ ಮಡಿಗೆಯನ್ನು ಹಾಕಿಸಿದರು. ಈಗ್ಗೆ
೧೦೪೪ ಲೋಕಲ ಬೋರ್ಡ ಶಾಲೆಗಳಲ್ಲಿ ೪೬೩ ಶಾಲೆಗ
ಳಿಗೆ ಸ್ವತಂತ್ರ ಶಾಲಾಗ್ರಹಗಳಿರುತ್ತವೆ.

ಸರ್ ೧೮೮೪ನೆಯ ಇಸವಿಯಲ್ಲಿ ಕೆಲವು ಶಾಲೆಗಳ ಹಾಜ
ರಿಗೆ ೧೦೪ ಹುಡುಗರ ಹೆಸರು ದಾಖಲು ಇದ್ದು ೪೦ । ೪೫
ಹುಡುಗರು ಮಾತ್ರ ಶಾಲೆಯಲ್ಲಿ ಹಾಜರು ಇರುತ್ತಿದ್ದರು.
ರಜಿಷ್ಟರದಲ್ಲಿ ಮಾತ್ರ ಹಾಜರಿಗೆ ಕೊರತೆಯೇ ಇಲ್ಲ. ಈ
ಸ್ಥಿತಿಯನ್ನು ಕಂಡು ಅದನ್ನು ಸುಧಾರಿಸುವ ಉದ್ದೇಶದಿಂದ
ಎಲ್ಲ ಡಿಪೂಟಿ ಇನಸ್ಪೆಕ್ಟರರಿಗೆ ಆಗ್ರಹ ಪೂರ್ವಕವಾಗಿ ಸೂ
ಚಿಸಿದ್ದಲ್ಲದೆ ಕೂಡಿದಷ್ಟು ಮಟ್ಟಿಗೆ ಸ್ವತಃ ಹಳ್ಳಿ ಶಾಲೆಗಳ
ನ್ನು ನೋಡಿ, ಈ ದುಃಸ್ಥಿತಿಯನ್ನು ನಿರ್ಮೂಲ ಮಾಡಲಿಕ್ಕೆ
ಶ್ರಮವರು ಯತ್ನಿಸಿದರು. ಅವರ ಯತ್ನವು ತಕ್ಕಮಟ್ಟಿಗೆ ಸಫ
ಲವಾಗಿರುತ್ತದೆ. ಈಗ್ಗೆ ಸರಾಸರಿ ಹಾಜರಿಯು ಶೇಕಡಾ ೭೦
ಕ್ಕೂರವರೆಗೆ ಇರುವದಲ್ಲದೆ ಅಷ್ಟು ಹುಡುಗರು ಬಹುತರ ಶಾ
ಲೆಯಲ್ಲಿ ಹಾಜರು ಇರುತ್ತಾರೆ. ಬಬ್ಬ ದೊಡ್ಡ ಗೃಹಸ್ಥರು
ಹಿಂದಕ್ಕೊಮ್ಮೆ ಹೇಳಿದಂತೆ ಸತ್ತ ಹುಡುಗರ ಹಾಜರಿಯ
ನ್ನು ಹಾಕುವಂಥ ಮಾಸ್ತರರು ಈಗ ಸಿಗುವದು ಅಸಂ
ಭವವೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಸುಳ್ಳು
ಹಾಜರಿ ಇಡುವದು, ಅವಶ್ಯವಾದದ್ದೆಂದು ಕೆಲವು ಮಾಸ್ತರರು

ಎಣಿಸುವರು. ಆದರೆ ಅದು ಬಹುದೊಡ್ಡ ತಪ್ಪು ಆಗುತ್ತದೆ. ವೊನ್ನೆ ವೊನ್ನೆ ಕೆಲವು ಮಾಸ್ತರರಿಗೆ ಸುಳ್ಳು ಹಾಜರಿಯ ಸಂಬಂಧದಿಂದ ಶಿಕ್ಷೆಯಾದದ್ದನ್ನು ನಾವು ಕೇಳಿರುತ್ತೇವೆ. ಆದರೆ ಟ್ರೇನ್ಡ ಮಾಸ್ತರರು ಈ ಮಾತಿಗೆ ಲಕ್ಷ್ಯಗೊಟ್ಟು ಇಂಥ ಕಲಂಕವನ್ನು ತಮಗೂ ತಾವು ಕಲಿತ ಕಾಲೇಜಕ್ಕೂ ಪತ್ತಗೊಡಲಿಕ್ಕಿಲ್ಲವೆಂದು ನಾವು ಕೋರುತ್ತೇವೆ.

ಈ ಪೂರ್ವದಲ್ಲಿ ಬಿನ್ನೆ ಇಯತ್ತೆಯಲ್ಲಿ ಹುಡುಗರು ನಾಲ್ಕು ನಾಲ್ಕು ಐದು ಐದು ವರ್ಷಗಳವರೆಗೆ ಕೊಳಿಯು ತ್ತಿದ್ದರು. ಅದು ಈಗ ಕಡಿಮೆಯಾಗಿರುತ್ತದೆ. ವೊದಲು ಶಾಲೆಯಲ್ಲಿದ್ದ ಹುಡುಗರ ೧೦೦ಕ್ಕೆ ೪೦ರಂತೆ ಕಿಂಬಹುನಾ ಅದಕ್ಕೂ ಕಡಿಮೆ ವಿದ್ಯಾರ್ಥಿಗಳು ಪರೀಕ್ಷೆಗೆ ನಿಲ್ಲುವರು. ಈಗ ಆ ಮಾನವು ತಿರುಗಿ ನೂರಕ್ಕೆ ೬೦ ।೭೦ರ ವರೆಗೆ ಹುಡುಗರು ಪರೀಕ್ಷೆಗೆ ನಿಲ್ಲಿಸಲ್ಪಡುವರು. ಅದರಿಂದ ವಿದ್ಯಾ ನಿವೃದ್ಧಿಯು ತಕ್ಕ ವ್ಯವಸ್ಥೆಯಿಂದ ಆಗುತ್ತದೆಂದು ನೋಡಿ ನವಾರಿಗಾದರೂ ಸಂತೋಷವಾಗಬಹುದು. ಪಟವರ್ಧನ ಸಾ ಹೇಬರು ತಾವು ಸ್ವತಃ ದುಡಿಯುವದಲ್ಲದೆ ಕೈಕೆಳಗಿನ ಜನ ನನ್ನಾದರೂ ಸರಿಯಾಗಿ ದುಡಿಸಿಕೊಳ್ಳುತ್ತಿದ್ದರು. ಸ್ವಲ್ಪ ತಡ್ಡಿ ಹಾದಿಗೆ ಯಾರಾದರೂ ಹೋದದ್ದು ಕಂಡರೆ, ಅವ ುಗೆ ಎಚ್ಚರಿಕೆ ಕೊಟ್ಟು ಹಾದಿಗೆ ತರುವರು. ಆ ಅಧಿಕಾರ ಸ್ಥನು ಎಚ್ಚರಗೊಳ್ಳದೆ ತನ್ನ ಕ್ರಮವನ್ನೇ ಸಾಗಿಸಿದರೆ, ತಕ್ಕ ಶಾಸನವು ತಪ್ಪುತ್ತಿದ್ದಿಲ್ಲ. ಇದರಿಂದ ಎಲ್ಲ ಮಾಸ್ತೆರರಿಗೆ ಎಚ್ಚರಿಕೆ ಹುಟ್ಟಿ, ಅವರು ತಮ್ಮ ಕೆಲಸವನ್ನು ಜಾಗರೂಕ ತನದಿಂದ ಮಾಡುವರು. ಶಾಲೆಯ ಸ್ಥಿತಿಯನ್ನು ಸುಧಾರಿಸು ನದಕ್ಕೆ ತಕ್ಕಮಟ್ಟಿಗೆ ಯತ್ನಿಸುವರು. ಅದರಿಂದ ಈಗ ಯಾ ರಾದರೂ ಶಾಲೆಯನ್ನು ನೋಡಲಿಕ್ಕೆ ಹೋದರೆ ಅವರು ಶಾಲೆ

ಯಲ್ಲಿ ಮಾಸ್ತರನನ್ನು ಎಂದೂ ಕಾಣದೆ ಇರಲಿಕ್ಕಿಲ್ಲವಿಷ್ಟೇ ಅಲ್ಲ ಹುಡುಗರನ್ನು ವ್ಯವಸ್ಥೆಯಿಂದ ಕೂಡ್ರಿಸಿ ಅವರಿಗೆ ಅಭ್ಯಾಸ ಮಾಡಿಸುತ್ತಿರುವದನ್ನು ನೋಡುವರು ಮತ್ತು ಪರೀಕ್ಷೆಯನ್ನು ತೆಗೆದುಕೊಳ್ಳುವ ಮನಸಾದರೆ ಬಾಯಿಲೆಕ್ಕದಲ್ಲಿಯೂ ಉಳಿದ ವಿಷಯಗಳಲ್ಲಿಯೂ ತಕ್ಕಮಟ್ಟಿಗೆ ಸಮರ್ಪಕವಾದ ಉತ್ತರಗಳನ್ನು ಕೇಳಿ ಅವರಿಗೆ ಸಾನಂದಾಶ್ಚರ್ಯವಾಗಬಹುದು. ಕೈಬರಹದಲ್ಲಾದರೂ ಸುಧಾರಣೆಯಾಗಿರುತ್ತದೆ. ಪ್ರತಿ ತಿಂಗಳದ ಕಾಪೀ ಪುಸ್ತಕಗಳನ್ನಿಟ್ಟು ಅವುಗಳನ್ನು ಪರೀಕ್ಷೆಯ ಕಾಲಕ್ಕೆ ಪರೀಕ್ಷಕರಿಗೆ ತೋರಿಸಬೇಕೆಂಬ ನಿರ್ಬಂಧವು ಈ ಪ್ರಕಾರದ ಒಳ್ಳೇ ಪರಿಣಾಮವನ್ನುಂಟು ಮಾಡಿರುವದು.

೧೮೮೫ರ ಪೂರ್ವದಲ್ಲಿ ಶಾಲೆಗಳ ಹಾಜರಿಯನ್ನೂ ಫೀ ಲೆಕ್ಕವನ್ನೂ ತಕ್ಕಷ್ಟು ಎಚ್ಚರದಿಂದ ತಪಾಸಿಸುತ್ತಿದ್ದಂತೆ ತೋರುವದಿಲ್ಲ. ಇತ್ತಲಾಗಿ ೫।೬ ವರ್ಷಗಳಿಂದ ಈ ಕೆಲಸಕ್ಕೆ ಲಕ್ಷ ಪೂರೈಸುವದನ್ನು ಕುರಿತು ಇನಸ್ಪೆಕ್ಟರರು ಹುಕುಮು ಮಾಡಿದ ಮೂಲಕ ಎಷ್ಟೋ ಮಾಸ್ತರ ಜನರಿಗೆ ಬಾಕಿ ನಿಂತ ಫೀ ಹಣವನ್ನು ವಸೂಲು ಮಾಡಿ ಭರಣಾ ಮಾಡುವ ಪ್ರಸಂಗ ಬಂತು. ಈಗ ಆ ಸಂಬಂಧದಿಂದ ತೊಂದರೆ ಉಳದಂತೆ ತೋರುವದಿಲ್ಲ.

NOTICE TO CORRESPONDENTS.
ಪತ್ರ ಬರೆಯುವವರಿಗೆ ಸೂಚನೆ.

ಷ್ಣ ಎಂಬವರು ಶಾಲಾಪತ್ರಕದಲ್ಲಿ ಶಿಷ್ಣಕ ಜನರ ವರ್ಗಾವರ್ಗಿಗಳನ್ನೂ ವರ್ಷಕ್ಕೊಮ್ಮೆ ಎಲ್ಲ ಶಿಷ್ಣಕರ ಹೆಸರುಗಳನ್ನೂ ನೌಕರಿಯ ಮುದ್ದತ್ತನ್ನೂ ಅವರು ಪಡೆದ ಸರ್ಟಿಫಿಕೇಟು ಮುಂತಾದ ಸಂಗತಿಗಳನ್ನೂ ಪುಸ್ತಕರೂಪದಿಂದ ಛಾಪಿಸಬೇಕೆಂದು ಸೂಚಿಸುತ್ತಾರೆ. ಇನ್ನೇದು ಅವಶ್ಯವಿಲ್ಲ ಎನ್ನೇದಕ್ಕೆ ಅನುಕೂಲವಿಲ್ಲ.

ವರ್ಣನೇ ವಸೂಲು.

ಧಾರವಾಡ ಜಿಲ್ಲೆ.

	ರೂ.	ಆ.	ಪೈ.
ಡಾ. ಸಾ. ಡಿ. ಎ. ಇನಸ್ಪೆಕ್ಟರ ಇವರ ಕಡೆಯಿಂದ ೧೪ನೇ ಫೇಬ್ರುವರಿತಿಂಗಳ ಬಾಬತು ಲೋ. ಬೋ. ಶಾಲೆಗಳ ಬಗ್ಗೆ.	೦೬	೧	೬
ಹುಬ್ಬಳ್ಳಿ ೧೪ ಮ್ಯು. ಶಾಲೆಗಳ ಬಗ್ಗೆ ೧೪ನೇ ಇಸವಿಯ ಮೊದಲನೇ ತಿಮಾಹಿ ಮಾರ್ಚ ಅಖೇರವರಿಗೆ.	೪	೪	೬
ರಾಣೇಬಿನ್ನೂರ ಮಾಸ್ತರರಿಂದ ಜುಲೈ ೧೩ರಿಂದ ೧೪ನೇ ಜೂನ ಅಖೇರ ವರೆಗೆ.	೧	೪	೦

ಕಿರುಕುಳ.

ಕ್ಯೂರೇಟರರಿಂದ ನೋಟೀಸಿನ ಬಗ್ಗೆ.	೨	೪	೧೦
ಬಿದರಿ ಶಾಲಾ ಮಾಸ್ತರರಿಂದ ಎಪ್ರಿಲ ೧೪ರರಿಂದ ಮಾರ್ಚ ೧೪ನೇ ಅಖೇರವರೆಗೆ.	೦	೧೪	೦

---

* ಇದರೊಳಗೇನಾದರೂ ತಪ್ಪು ಇದ್ದರೆ ಅದನ್ನು ಧಯಮಾಡಿ ತಿಳಿಸಬೇಕು.

ಕನ್ನಡ ಶಾಲಾಪತ್ರಕದ ವರ್ಗಣಿ ವರ್ಷಕ್ಕೆ ಮುಂಗಡ ...೧೫ ಆಣೆ.
ಒಂದು ಸಂಚಿಕೆಗೆ ... ... ೨ ಆಣೆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ.	೪	ಪಂಕ್ತಿಗಳವರೆಗೆ	೧ ರೂ.
ಮೂರುಸಾರೆ ಇಟ್ಟರೆ	೧೦	,,	,,
ಆರುಸಾರೆ ಇಟ್ಟರೆ	೧೬	,,	,,

ಸೂಚನೆಗಳು.

೧. ಶಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಹಾಸಲು ಬೀಳುವದು.

೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಜಮ್ಮಡಿ ಫೀ ಬೀಳುವದು.

೪. ಪ್ರಕಟನೆಯು ಕೂಡ ಹಣ ಕಳುಹಲಿಕ್ಕೆ ಬೇಕು.

೫. ಖೋಟೀಟು ಇಟ್ಟ ಹೊರ್ತು ಉತ್ತರ ಶಿಗಲಾರದು.

RAOJI B. KARANDIKAR.
ವ್ಯವಸ್ಥಾಪಕ, ಕನ್ನಡ ಶಾಲಾಪತ್ರಕ.

ಕನ್ನಡಶಾಲಾಪತ್ರಿಕೆ.

KANARESE SCHOOL PAPER.

ಪುಸ್ತಕ ೭೯.] ಜೂನ್ ೧೮೯೪. [ಸಂಚಿಕೆ ೬.

ಅನುಕ್ರಮಣಿಕೆ.

		ಪುಟ.
೧.	ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ...	೧೨೧
೨.	ಕನ್ನಡ ಗೆಝೆಟಿಯರದಿಂದ ಅವತರಣಿಗಳು ...	೧೨೮
೩.	ರಾವ ಬಹಾದ್ದೂರ ಸೀ. ವಿ. ಪಟವರ್ಧನ ಸಾಹೇಬರ ಆಡಳಿತವು.	೧೩೩
೪.	ಕಾಲೇಜದ ವಿದ್ಯಾರ್ಥಿಗಳಿಗೆ ರಾ. ರಾ. ಸವದಿಯವರು ಮಾಡಿದ ಉಪದೇಶ	೧೩೮
೫.	ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು ೧೮೯೩.	೧೪೬

CONTENTS.

1.	Educational Intelligence and Useful Notes ...	121
2.	Selections from the Karnatik Gazetteer ...	128
3.	Rao Bahadur S. V. Patwardhan's Administration	133
4.	Address to College Students by Mr. Savadi...	138
5.	Dharwar Training College Certificate Examination—1893.	94

DHARWAR:
PRINTED AT THE KARNATIC BOOK DEPOT PRESS.
1894.

ನೋಟೀಸು.

ಹಿಂದಕ್ಕೆ ನೋಟೀಸು ಕೊಟ್ಟಮೇರೆಗೆ ಸಿಕಂದರಬಾದ ಶಹನ ಚರಿತ್ರೆಯನ್ನು ಮುದ್ರಿಸುವ ಕೆಲಸವು ತೀರಿತು. ಬೈಂಡು ಮಾಡುವ ಕೆಲಸವು ಬತ್ತರದಿಂದ ನಡೆದದೆ. ಪುಸ್ತಕಕ್ಕೆ ಫುಲ್ಲ ಕ್ಯಾಲಿಕೋ ಹಾಕುವ ವ್ಯವಸ್ಥೆ ಮಾಡಿರುತ್ತದೆ. ಬೆಲೆ ೧ ರೂ. ೪ ಆಣೆ. ನೊವಲು ಸಹಿ ಕೊಟ್ಟವರಿಗೂ ಮುಂದಿನ ಜುಲೈ ೧ನೆಯ ತಾರೀಖಿನೊಳಗಾಗಿ ತರಿಸಿಕೊಳ್ಳುವವರಿಗೂ ಅದು ೧ ರೂ. ಕ್ಕೆ ದೊರೆಯುವದು. ಅಂಚೆ ಮೊಹರು ಮನಿಆರ್ಡರ ಕಮಿಶನ್ ಮುಂತಾದ್ದು ಮಾತ್ರ ಹೆಚ್ಚು. ಸಬ್ಯಕ್ಕೆ ಮೆಗ್ಗಣಿದಾರರಾದವರು ತಮ್ಮ ಪತ್ತೆಯಲ್ಲಿ ಏನಾದರೂ ಹೆಚ್ಚು ಕಡಿಮೆಯಾಗಿದ್ದರೆ, ದಯವಾಡಿ ತಿಳಿಸಬೇಕು. ಅಂದರೆ ಅವೇಪತೆಯಮೇಲೆ ವ್ಯಾಲುಪೆಯಬಲ್ ಪೋಸ್ಟಿನಿಂದ ಜೂನಿನ ಅಂತ್ಯಕ್ಕೆ ಪುಸ್ತಕವು ಕಳಿಸಲ್ಪಡುವದು. ಜುಲೈ ೧ನೆಯ ತಾರೀಖಿನ ತರುವಾಯ ಅದಕ್ಕೆ ೧ ರೂ. ೪ ಆಣೆ ಬೆಲೆ ಬೀಳುವದು. ಗ್ರಾಹಕರು ಈ ಸಂಧಿಯನ್ನು ಕಳಕೊಳ್ಳಬಾರದು.

ಧಾರವಾಡ:
ತಾ॥ ೩೦ । ೫ । ೧೯. } ಗುರುಬಸಪ್ಪ ಪ. ಯಳಕಟ್ಟಿ,
ಕ್ಲಾರ್ಕ ಟ್ರೇ. ಕಾಲೇಜ ಧಾರವಾಡ

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಜಯಸುತ್ತಂ ಪ್ರತಿಮಾಸವಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆನೋದುವರ್ಗಸುಗುಣಂ ತೋರಲ್ಕೆಕೈಕೊಂಬುಮೈ ।
ದಯೆಯಿಂದೋಷವತಿದ್ದವೇಳ್ವುದುಚಿತರ್ ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩ನೆ.] ಜೂನ ೧೮೯೯ನೆ ಳ. [ಸಂಚಿಕೆ ೬.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು

ಬಾಂಬೇ "ಎಜ್ಯುಕೇಶನಲ್ ರೆಕರ್ಡ" ಎಂಬ ಇಂಗ್ಲಿಷ ಮಾಸಿಕ ಪುಸ್ತಕದ ಕರ್ತರು ತಮ್ಮ ಎಪ್ರಿಲ ತಿಂಗಳದ ಸಂಚಿಕೆಯಲ್ಲಿ ಬರೆಯುವದೇನಂದರೆ:—ವರಾಡ ಪ್ರಾಂತದ ತರವಾದ ಡೈರೆಕ್ಟರ ಆಫ ಪಬ್ಲಿಕ ಇನಸ್ಟ್ರಕ್ಶನ್ನರ ಸ್ಥಳವನ್ನು ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ರಾವಸಾಹೇಬ ಸೀ. ವಿ. ಪಟವರ್ಧನ ದೊರೆಗಳಿಗೆ ಕೊಟ್ಟರು. ಈ ನೇಮಣೂಕು ಸವ್ಯಕ್ಕೆ ಪಂಗಾಮಿ ಇದ್ದಾಗ್ಯೂ ಅಲ್ಲಿಯು ಕಾಹೀವು ಡೈರೆಕ್ಟರರಾದ ಮಿ. ಜಟಾರ ಇವರು ತಮ್ಮ ಕೆಲಸಕ್ಕೆ ಮರಳಿ ಬರುವಂತಿಲ್ಲದ್ದರಿಂದ ತೀವ್ರವೇ ಕಾಹೀವು ಆಗುವದೆಂದು ಹೇಳಬಹುದು. ವಿದ್ಯಾಖಾತೆಯಲ್ಲಿ ಬಹು ದಿವಸ ಕೆಲಸ ಮಾಡಿ ಮೇಲಾದ ಅನುಭವವನ್ನು ಪಡೆದಂಥ, ಬಳ್ಳಿ ನಿಷ್ಠೆಯಿಂದ ತಮ್ಮ ಕೆಲಸವನ್ನು ಮಾಡುವಂಥ ಮಿ. ಪಟವರ್ಧನ ಸಾಹೇಬರು ಈ ಕೆಲಸಕ್ಕೆ ಪೂರ್ಣವಾಗಿ ತಕ್ಕವರಾಗಿರುತ್ತಾರೆ. ಅವರು ಈ ಕೆಲಸದಲ್ಲಿ ಕೀರ್ತಿಯನ್ನು ಪಡೆಯುವರೆಂದು ನಾವು ಕೋರುತ್ತೇವೆ.

ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರ ಸ್ಥಳಕ್ಕೆ ಪುಣೆಯ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾದ ರಾವ ಸಾಹೇಬ ಬ. ರಾ. ಸಪಸ್ಕಬುದ್ಧೀ ಇವರನ್ನು ನೇಮಿಸಿದ್ದಾರೆ. ಇವರು ಡಿಪೂಟಿ ಇನಸ್ಪೆಕ್ಟರರ ಉದ್ಯೋಗವನ್ನು ಬಹಳ ದಿವಸಗಳವರೆಗೆ ಮಾಡಿರುವದಲ್ಲದೆ ಈಚಾನ್ಯ ಮಧ್ಯ ಭಾಗಗಳ ಎಜ್ಯುಕೇಶನಲ್ ಇನಸ್ಪೆಕ್ಟರರ ಕೆಲಸಗಳನ್ನು ಸಹ ಬಹಳವು ಸಾರೆ ನೋಡಿದ್ದಾರೆ. ಆದದ್ದರಿಂದ ಇವರನ್ನು ದಕ್ಷಿಣ ಭಾಗದ ಇನಸ್ಪೆಕ್ಟರ ಕೆಲಸಕ್ಕೆ ನೇಮಿಸಿದು ಸಯುಕ್ತಿಕವಾದದ್ದೆಂದು ನಮ್ಮ ಅಭಿಪ್ರಾಯ ಉಂಟು. ರಾ. ಸಾ. ಸಪಸ್ಕಬುದ್ಧೀ ಇವರು ಈ ಬಿಗಿಯಾದ ಕೆಲಸವನ್ನು ಜಟುವಟಿಕೆಯಿಂದಲೂ ಜಾಣತನದಿಂದಲೂ ಮಾಡುವರೆಂಬ ನಂಬಿಗೆಯು ನಮಗುಂಟು.

ಹೋದ ವರ್ಷ ಅಲ್ಹಾಬಾದದ ವಿದ್ಯಾಪೀಠದಲ್ಲಿ ಎಮ್. ಏ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಂಥ ಮಿಸ್. ಚಕರಬತ್ತೀ ಎಂಬವಳ ಶಿಕ್ಷಣವನ್ನು ಉದ್ದೇಶಿಸಿ "ಇಂಡಿಯನ್ ಮೆಸೆಂಜರ" ಎಂಬ ಪತ್ರದಲ್ಲಿ ಬರೆಯಲ್ಪಟ್ಟ ಲೇಖನವು ಬಿದಲಿಕ್ಕೆ ತಕ್ಕದ್ದಾಗಿರುವದರಿಂದ ಅದನ್ನು ನಮ್ಮ ವಾಚಕರ ಸಲುವಾಗಿ ಕೆಳಗೆ ಬರೆಯುತ್ತೇವೆ.

ಈ ಸ್ತ್ರೀಯು ತೀರ ಚಿಕ್ಕವಳಿರುವಾಗ ಇವಳ ತಂದೆಯು ತೀರಿದನು. ಬಳಿಕ ಇವಳ ತಾಯಿಯು ಕ್ರಿಸ್ತಧರ್ಮವನ್ನು ಸ್ವೀಕರಿಸಿದಳು. ಈ ತಾಯಿ ಮಕ್ಕಳೂ ಕೂಡಿ ವಿದ್ಯೆ ಕಲಿಯುವ ನಿಶ್ಚಯಮಾಡಿದರು. ಕೆಲವು ವರ್ಷ ದಕ್ಷತೆಯಿಂದ ಅಭ್ಯಾಸ ಮಾಡಿ ಅವರಿಬ್ಬರೂ ಕಲಕತ್ತೆಯ ವಿದ್ಯಾಪೀಠದ ಪ್ರವೇಶ ಪರೀಕ್ಷೆಗೆ ಕುಳಿತರು. ಮಗಳು ಪಾಸಾಗಿ ಮೊದಲನೇ ವರ್ಗದಲ್ಲಿ ಬಂದಳು. ತಾಯಿಯು ತೇರ್ಗ

ಜೆ ಬೊಂದಲಿಲ್ಲ. ಆದರೂ ಅವಳು ಧೈರ್ಯ ಬಿಡದೆ ತಿರುಗಿ ಮತ್ತೊಂದು ವರ್ಷ ಅಭ್ಯಾಸ ಮಾಡಿ ಪರೀಕ್ಷೆಯಲ್ಲಿ ಪಾಸಾ ಗಿ ಎರಡನೇ ವರ್ಗದಲ್ಲಿ ಬಂದಳು. ಆದರೆ ಮುಂದೆ ಮಗ ಳ ಅಭ್ಯಾಸಕ್ಕೆ ಹಣದ ಅಡಚಣೆ ಬರಲು, ಅವಳು ಶಿಕ್ಷಕಿ ಯ ಉದ್ಯೋಗವನ್ನು ಅಂಗೀಕರಿಸಿದಳು. ತಾಯಿಯ ಸಹಾಯದಿಂದ ಮಗಳು ಬೇಥೂನ ಕಾಲೇಜದಲ್ಲಿ ಅಭ್ಯಾಸ ಮಾಡಿ ಬಿ. ಏ. ಪದವಿಯನ್ನು ಪಡೆದಳು. ಬಳಿಕ ಮಗಳಿ ಗೂ ವಾಯವ್ಯ ಪ್ರಾಂತದಲ್ಲಿ ಶಿಕ್ಷಕಿಯ ಕೆಲಸವು ಸಿಕ್ಕಿತು. ಅಮೇಲೆ ಅವಳು ಇಷ್ಟಕ್ಕೆ ತನ್ನ ಅಭ್ಯಾಸ ಕ್ರಮವನ್ನು ಬಿಡದೆ ಮುಂದೆ ಕಲಿತು ಎಮ್. ಏ. ಪರೀಕ್ಷೆಯಲ್ಲಿ ಪಾಸಾ ದಳು. ಈ ಮೇರೆಗೆ ಮಗಳ ಅಭ್ಯಾಸವು ಪೂರ್ಣವಾದದ್ದ ನ್ನು ನೋಡಿ, ತಾಯಿಯೂ ತನ್ನ ಅಭ್ಯಾಸವನ್ನು ಮುಂ ದಕ್ಕೆ ನಾಗಿಸುವ ವಿಚಾರ ನಡಿಸಿದ್ದಾಳೆ. ಈತರದ ಹೆಂಗಳೆ ಯರನ್ನು ಕಾಣುವದು ಅಪರೂಪ. ಇದರಿಂದ ನಮ್ಮ ಜನರಲ್ಲಿ ಉದ್ಯೋಗವೂ ನಿಶ್ಚಯವೂ ಇರುವವೆಂದು ಹೇ ಳುವ ಪ್ರಯೋಜನವಿಲ್ಲ; ಆದರೆ ಮೂಢ ಶ್ರದ್ಧೆಯಿಂದ ಈ ಗುಣಗಳು ಬೈಲಿಗೆ ಬರುವದಿಲ್ಲ. ಈ ಮಾತಿನ ವಿಚಾರ ವನ್ನು ನಮ್ಮ ಜನರು ಅವಶ್ಯವಾಗಿ ಮಾಡಲಿಕ್ಕೆ ಬೇಕು.

ಪುಣೆಯ ಟ್ರೇನಿಂಗ ಕಾಲೇಜದ ಮಾಜೀ ಪ್ರಿನ್ಸಿಪಾಲ ರಾದ ರಾವಸಾಹೇಬ ವಿಷ್ಣು ಬಾಳಕೃಷ್ಣ ಸೋಪನೀ ಇವ ರಿಗೆ ಸರಕಾರದವರು ಕೊಟ್ಟ "ರಾವ ಬಹಾದ್ದೂರ" ಎಂಬ ಪದವಿಯನ್ನು ೧೩ನೇ ಎಪ್ರಿಲ ದಿವಸ ಮಧ್ಯಾಹ್ನ ಇನ ಸ್ಪೆಕ್ಟರರಾದ ಮೆ. ಜೈಲ್ಸ ಸಾಹೇಬರು ಬಳ್ಳೇ ಸಮಾರಂ ಭದಿಂದ ಅವರಿಗೆ ಕೊಟ್ಟರೆಂದು ತಿಳಿಸಲಿಕ್ಕೆ ನಾವು ಬಹಳ ಸಂತೋಷಪಡುತ್ತೇವೆ.

ಮುಂಬಯಿ ಪಟ್ಟಣದಲ್ಲಿ ಹಿಂದು ಜನರ ವಸ್ತಿಯು ಹೆಚ್ಚಿ
ದ್ದರೂ ಸುಶಿಕ್ಷಿತ ಜನರ ಸಂಖ್ಯೆಯು ತಕ್ಕಷ್ಟಿದ್ದರೂ ವ್ಯಾ
ಯಾಮವಿಷಯದಲ್ಲಿ ಅವರಿಗೆ ಇಷ್ಟು ದಿವಸಗಳವರೆಗೆ ಯೋ
ಗ್ಯ ಸೋಯಿಗಳಿದ್ದಿಲ್ಲ. ಎಲ್‌ಫಿನ್‌ಸ್ಟನ್ ಹೈಸ್ಕೂಲದ ಪ್ರಿ
ನ್ಸಿಪಾಲರಾದ ಮಿ. ಜೇಕಬ ಸಾಹೇಬರ ಪ್ರೋತ್ಸಾಹನದಿಂದ
ಸ್ಥಾಪಿಸಲ್ಪಟ್ಟ ಕ್ರಿಕೆಟ್‌ಕ್ಲಬ್ ಮಾತ್ರ ಬಂದಿತ್ತು. ಎಲ್ಲ ವಿಷ
ಯಗಳಲ್ಲಿ ಮುಂದಾದ ಪಾರ್ಸೀಜನರೂ ಹಿಂದೆ ಬಿದ್ದ ಮುಸ
ಲ್ಮಾನ ಜನರೂ ವ್ಯಾಯಾಮ ಭವನಗಳಿಗೆ ತಕ್ಕ ಸ್ಥಳಗ
ಳನ್ನು ಸರಕಾರದಿಂದ ದೊರಿಕಿಸಿಕೊಂಡು, ಕಟ್ಟಡಗಳನ್ನು
ಸಿದ್ಧ ಮಾಡಿದರು. ಆದರೆ ಹಿಂದೂ ಜನರು ಮಾತ್ರ ಏನೂ
ಮಾಡಲಿಲ್ಲ. ಈ ಕುಂದನ್ನು ದೂರ ಮಾಡಲೋಸುಗ ಹಿಂ
ದು ಕ್ರಿಕೆಟ್‌ಕ್ಲಬ್ಬಿನ ಜನರು ಬಹಳ ಶ್ರಮದಿಂದ ಧನವಂತ
ರನ್ನು ಬಲಿಸಿಕೊಂಡು ಪಣ ಕೂಡಿಸಿ, ಸರಕಾರದಿಂದ ಸಮು
ದ್ರ ದಂಡೆಯ ಮೇಲೆ ಬಂದು ರಮಣೀಯವಾದ ಸ್ಥಲವನ್ನು
ದೊರಕಿಸಿ, ಮೊನ್ನೆ ಮೊನ್ನೆ ಬಂದು ವ್ಯಾಯಾಮಭವನ
ವನ್ನು ಕಟ್ಟಿದರು. ಈ ಭವನ-ಪ್ರವೇಶ-ಸಮಾರಂಭವು
ಈನೇ ಮೇ ದಿವಸ ಸಂಭ್ರಮದೊಡನೆ ನಮ್ಮ ಇಲಾಖಾಧಿಪ
ತಿಗಳಿಂದ ನೆರವೇರಿಸಲ್ಪಟ್ಟಿತು. ಆ ಕಾಲಕ್ಕೆ ಗವ್ಹರ್ನರ
ಸಾಹೇಬರು ಮಾಡಿದ ಸಂಭಾಷಣವು ಸಮಯೋಚಿತವಾದ
ದ್ದಲ್ಲದೆ ವಿಚಾರಣೀಯವಾಗಿರುವದು. ಅವರು ಸೂಚಿಸಿ
ದ್ದೇನೆಂದರೆ;—

೧. ಸಣ್ಣ ಸಣ್ಣ ಕ್ಲಬ್ಬುಗಳನ್ನು ಮಾಡಿ ಬೇರೆ ಬೇರೆ
ಯಾಗಿ ವ್ಯವಸ್ಥೆ ಮಾಡುವದರಿಂದ ಹೆಚ್ಚಿನ ಕೆಲಸ ಕೈಗೂ
ಡುವದಿಲ್ಲ. ಎಲ್ಲರೂ ಕೂಡಿ ಕೆಲಸ ಮಾಡುವದರಿಂದ ದ್ರವ್ಯ
ಸಹಾಯವೂ ಜನ ಸಹಾಯವೂ ದೊರೆತು, ಹೆಚ್ಚಿನ ಕೆಲಸ
ಮಾಡಲಿಕ್ಕೆ ಅನುಕೂಲವಾಗುವದು. ೧೮ ಜನರದೊಂದ

ಕ್ಲಬ್ಬು ಪುಣೆಯಲ್ಲಿ ಉಂಟು. ಇಷ್ಟು ಸಣ್ಣ ಕ್ಲಬ್ಬಿನಿಂದ ಕ್ರಿಕೆಟ್ ಆಡಲಿಕ್ಕೆ ಬೇಕಾಗುವ ೧೧ ಜನರ ಮೇಳವು ಯಾವಾಗಲೂ ಹ್ಯಾಗೆ ದೊರೆಯುವದು? ಇಷ್ಟು ತುಸು ಜನರಿಂದ ಯಾವ ಹೆಚ್ಚಿನ ಕೆಲಸವಾಗಬಹುದು?

೨. ಹಾಗೂ ಹೀಗೂ ಆಟವಾಡುವದಕ್ಕಿಂತ ಕ್ರಮಕ್ಕನುಸರಿಸಿ ಉತ್ಕೃಷ್ಟ ರೀತಿಯಿಂದ ಆಟವಾಡುವದು ಒಳ್ಳೇದು. ಆದದ್ದರಿಂದ ಆಟದಲ್ಲಿ ಪೆಸರು ಪಡೆದ ಜನರನ್ನು ಹಣ ಕೊಟ್ಟಾದರೂ ಕಾಲಕಾಲಕ್ಕೆ ಕರೆಯಿಸಿ, ಅವರು ಆಡುವ ಪದ್ಧತಿಗಳನ್ನು ನೋಡುತ್ತಿರಬೇಕು. ಚಿತ್ರ ಬರೆಯುವವರಾದರೂ ಮೇಲಾದ ಚಿತ್ರಗಾರನ ಚಿತ್ರಗಳನ್ನು ಮುಂದಿಟ್ಟುಕೊಂಡು, ಅವನು ಬರೆಯುವ ಪದ್ಧತಿಯನ್ನು ಲಕ್ಷಪೂರ್ವಕವಾಗಿ ನೋಡಬೇಕಾಗುತ್ತದೆ. ಅದೇಮೇರೆಗೆ ಆಟಗಳಲ್ಲಿಯಾದರೂ ಮಾಡುವದು ವಿಹಿತವು.

೩. ಶಾರೀರಶಿಕ್ಷಣವನ್ನು ಬತ್ತಾಯದಿಂದ ನಡಿಸಬೇಕೆಂದು ಕೆಲವರ ಅಭಿಪ್ರಾಯ ಉಂಟು. ಇದೇ ವಿಷಯವನ್ನು ಕುರಿತು ಇಂಗ್ಲಂಡದಲ್ಲಿ ಪಂಡಿತರು ಬಹು ದಿವಸದಿಂದ ವಿಚಾರ ಮಾಡುತ್ತಿಹರು; ಆದರೆ ಇದುವರೆಗೆ ಯಾವದೊಂದು ನಿಶ್ಚಯಾತ್ಮಕವಾದ ಪದ್ಧತಿಯು ಗೊತ್ತಾಗಿಲ್ಲ. ವ್ಯಾಯಾಮವಿಷಯದಲ್ಲಿ ಬತ್ತಾಯವು ಎಷ್ಟಮಾತ್ರವೂ ಪ್ರಯೋಜನಕರವಾದದ್ದಲ್ಲ. ವಿದ್ಯಾಗುರುಗಳೂ ಶಿಕ್ಷಕರೂ ಸ್ವೋದಾಹರಣಗಳಿಂದಲೂ ಉಪದೇಶದಿಂದಲೂ ವಿದ್ಯಾರ್ಥಿಗಳಲ್ಲಿ ಅಭಿರುಚಿಯನ್ನು ಮುಟ್ಟಿಸುವದೇ ವಿಹಿತವು. ವಿದ್ಯಾರ್ಥಿಗಳಿಗೆ ಯಾವದಾದರೊಂದು ಆಟವನ್ನು ಅಡಲಿಕ್ಕೆ ಬತ್ತಾಯದಿಂದ ಹಚ್ಚಿದರೆ ಅದರಿಂದ ಲಾಭಕ್ಕಿಂತ ಹಾನಿಯೇ ಸಂಭವಿಸುವದೆಂದು ನಮ್ಮ ಅಭಿಪ್ರಾಯ ಉಂಟು.

ನಮ್ಮ ಅಲಾಖಾಧಿಪತಿಗಳ ಮನೇ ಸೂಚನೆಯು ಬಹು ವಿಚಾರಣೀಯವಾಗಿರುತ್ತದೆ. ಅನ್ನನೀರುಗಳಂತೆ ವ್ಯಾಯಾಮವಾದರೂ ವಿದ್ಯಾರ್ಥಿಗಳಿಗೆ ಬೇಕೆಂಬ ಮಾತು ಈಗ ಎಲ್ಲರಿಗೆ ಮನವರಿಕೆಯಾಗಿದೆ. ಆದರೆ ತಕ್ಕ ವ್ಯಾಯಾಮವನ್ನು ಯೋಗ್ಯ ರೀತಿಯಿಂದ ಮಾಡಿಸುವ ಭಾರವು ಕೆಲವಂಕದಿಂದ ಶಿಕ್ಷಕ ಜನರ ಮೇಲುಂಟು. ಆದದ್ದರಿಂದ ಗವ್ಹರ್ನರ ಸಾಹೇಬರು ಸೂಚಿಸಿದಂತೆ ಉದಾಹರಣದಿಂದಲೂ ಉಪದೇಶದಿಂದಲೂ ಮುಡುಗರ ಮನಸ್ಸನ್ನು ಅತ್ತ ಬಲಿಯುವಂತೆ ಎಲ್ಲ ಶಿಕ್ಷಕರು ಯತ್ನಿಸತಕ್ಕದ್ದು.

ಹೊದಿಕೆಯಿಂದಾಗತಕ್ಕ ಕೆಲಸಗಳು.

(೧೫೫ನೆಯ ಪುಟದಿಂದ ಮುಂದೆ ಸಾಗಿದ್ದು.)

ಬಣ್ಣಗಳಲ್ಲಿ ನಪ ಬಟ್ಟೆಗಳಿಗೆ ಹೆಚ್ಚು ಕಡಿಮೆ ಉಷ್ಣತೆಯನ್ನು ಕೊಡುವ ಗುಣವಿರುತ್ತದೆ. ಕಪ್ಪು, ನೀಲಿ ಬಣ್ಣಗಳು ಹೊರಗಿನ ಉಷ್ಣತೆಯನ್ನು ಸುಲಭವಾಗಿ ನುಂಗುತ್ತವೆ. ಆವರೆ ಬಿಳಿ ಮತ್ತು ಹಳದಿಯ ಬಣ್ಣಗಳು ಉಷ್ಣತೆಯನ್ನು ಅಷ್ಟು ಸುಲಭವಾಗಿ ನುಂಗುವದಿಲ್ಲ. ಉಷ್ಣ ಪ್ರದೇಶಗಳಲ್ಲಿಯ ಜನರು ವಾಡಿಕೆಯಾಗಿ ಬಿಳಿಯ ವಸ್ತ್ರಗಳನ್ನು ಧರಿಸುವದು ಹಿತಕರವು. ಕರಿಯ ವಸ್ತ್ರಗಳನ್ನು ಛಳಿ ನಾಡಿನವರು ಧರಿಸತಕ್ಕದ್ದು. ಯಾವ ಪ್ರಕಾರದ ಕೈಕಪ್ಪಡವನ್ನು ಮಾಡಿಸುವಂಥ ಜನರು ರೇಸಿಮೆಯಂಥ ನೀರು ಹಿಡಿಯದ ಬಟ್ಟೆಗಳನ್ನು ಧರಿಸುವದು ಲೇಸು. ಉಣ್ಣೆಯ ಬಟ್ಟೆಯನ್ನು ಒಳಗೆ ಧರಿಸಿ, ಮೇಲೆ ರೇಸಿಮೆ ವಸ್ತ್ರವನ್ನು ಧರಿಸುವದು ಹಿತಕರವು. ಬೆವರುವ ಕ್ರಿಯೆಯು ನಿಂತಕೂಡಲೆ ಮೇಲಿನ ರೇಸಿಮೆಯ ವಸ್ತ್ರವನ್ನು ತೆಗೆದುಹಾಕಬಹುದು.

ಮೇಲಿನ ವಿವರಣೆಯಿಂದ ಕೆಳಗೆ ಕಾಣಿಸಿದ ೫ ನಿಯಮಗಳನ್ನು ಮಾಡಬಹುದು.

೧. ಉಣ್ಣೆಯ ವಸ್ತ್ರಗಳನ್ನು ಯಾವಾಗಲು ಶರೀರಕ್ಕೆ ಹತ್ತಿ ಧರಿಸಿದರೆ ಶೀತ ಬಾಧೆಯಾಗಲಾರದು. ಛಳಿ ನಾಡುಗಳಲ್ಲಿ, ವಿಶೇಷವಾಗಿ ಕೆಟ್ಟಗಾಳಿ ಬೀಸುತ್ತಿರುವಾಗ ಮೂತ್ರ ತೊಗಲಿನ ಬಟ್ಟೆಗಳನ್ನು ಧರಿಸಿಕೊಳ್ಳಬಹುದು. ಮೈಮುರಿ ದುಡಿಯದಂಥ ಜನರು ರೇಸಿಮೆಯ ವಸ್ತ್ರಗಳನ್ನು ಹಾಕಿ ಕೊಳ್ಳಬೇಕು. ಛಳಿಗಾಲದಲ್ಲಿ ಅವರು ನೀರು ಹಿಡಿಯದಂಥ ವಸ್ತ್ರಗಳನ್ನು ಧರಿಸಿಕೊಳ್ಳತಕ್ಕದ್ದು.

೨. ದಪ್ಪವಾದ ಬಂದೇ ಉಣ್ಣೆಯ ಅಂಗಿಯನ್ನು ಹಾಕಿ ಕೊಳ್ಳುವದಕ್ಕಿಂತ ಅದರ ಒಳಗೆ ತೆಳ್ಳಗಿನ ಮತ್ತೊಂದು ಅಂಗಿಯನ್ನು ತೊಟ್ಟುಕೊಳ್ಳುವದು ಹಿತಕರವಾದದ್ದು.

೩. ಬಟ್ಟೆಗಳು ಮೈಗೆ ಬಿಗಿಯಾಗಿರಬಾರದು. ಅವು ತಕ್ಕಷ್ಟು ಸೈಲು ಇರತಕ್ಕದ್ದು.

೪. ರಾತ್ರಿಯಲ್ಲಿ ಉಣ್ಣೆಯ ಅರಿವೆಗಳನ್ನು ಹಾಕಿಕೊಂಡ ಮಲಗುವದು ಹಿತಕರವಲ್ಲ. ನೂಲಿನ ಬಟ್ಟೆಗಳೇ ಹಿತಕರವು. ಮೇಲೆ ಕಂಬಳಿ ಅಥವಾ ಬ್ಲ್ಯಾಂಕೆಟು ಹೊತ್ತುಕೊಂಡರೆ ಸಾಕು.

೫. ಉಷ್ಣತೆಯು ಶರೀರದಿಂದಲೇ ಮುಟ್ಟುತ್ತದೆ. ಅದು ಬಟ್ಟೆಗಳಲ್ಲಿರುವದಿಲ್ಲ. ಒಳ್ಳೆ ಆಹಾರ, ತಕ್ಕ ವ್ಯಾಯಾಮಗಳು ಉಷ್ಣತೆಯನ್ನು ಮುಟ್ಟಿಸುತ್ತವೆ. ಈಮೇರೆಗೆ ಮುಟ್ಟಿದ ಉಷ್ಣತೆಯನ್ನು ಕಾದುಕೊಳ್ಳುವದೇ ಪ್ರಾವರಣಗಳ ಕೆಲಸಗಳು.

SELECTIONS FROM THE KARNATIK GAZETTEER.

ಕನ್ನಡ ಗೆಝಿಟಿಯರದಿಂದ ಅವತರಣಿಗಳು.

(೧೦೪ನೇ ಪುಟದಿಂದ ಸಾಗಿದ್ದು)

ತೇಗೂರು—ಧಾರವಾಡದ ವಾಯವ್ಯಕ್ಕೆ ೧೫ ಮೈಲಿನ ಮೇಲೆ ಇರುತ್ತದೆ. ಇಲ್ಲಿ ಕಬ್ಬಿಣದ ಕಲ್ಲುಗಳು ಹೇರಳವಾಗಿ ದೊರೆಯುತ್ತವೆ. ಕಬ್ಬಿಣ ಮಾಡುವ ಕಾರಖಾನೆಯು ಬಂದುಂಟು. ಇಲ್ಲಿಯ ಕರೆವ್ವನ ಗುಡಿಯು ಹೆಸರಾಗಿದೆ. ಊರ ಹೊರಗೆ ಕರೆವ್ವನ ಗವಿ ಇರುತ್ತದೆ.

ಸುಳ್ಳ—ಧಾರವಾಡದಿಂದ ಪೂರ್ವಕ್ಕೆ ೧೦ ಮೈಲಿನ ಮೇಲೆ ಅದೆ. ಕಲಮೇಶ್ವರನ ದೊಡ್ಡ ಗುಡಿಯೂ ನಾಲ್ಕು ಲಿಪಿಗಳೂ ಇರುತ್ತವೆ.

ಉಣ್ಣಿನ ಬೆಟಿಗೇರಿ—ಧಾರವಾಡದ ಉತ್ತರಕ್ಕೆ ೧೦ ಮೈಲಿನ ಮೇಲೆ ಅದೆ. ಎಲ್ಲಮ್ಮನ ಗುಡಿಯುಂಟು. ಇಲ್ಲಿಯೂ ಗರಗದಲ್ಲಿಯೂ ನೂಲಿನ ಉರುಟಿ ಬಟ್ಟೆಗಳು ಹುಟ್ಟುತ್ತವೆ. ಅರಳಿಯ ವ್ಯಾಪಾರವು ತಕ್ಕಮಟ್ಟಿಗೆ ನಡೆಯುತ್ತದೆ. ಸಂತಿಯು ಶನಿವಾರ ನೆರೆಯುತ್ತದೆ.

ಹುಬ್ಬಳ್ಳಿ ತಾಲೂಕು.

ಕ್ಷೇತ್ರಫಲ—ಜಿಲ್ಲೆಯ ಮಧ್ಯಭಾಗದ ಉತ್ತರದಲ್ಲಿ, ಧಾರವಾಡ ತಾಲೂಕಿನ ದಕ್ಷಿಣಕ್ಕೆ ಇರುತ್ತದೆ. ಸರಕಾರೀ ಪಳ್ಳಿಗಳು ೪೬, ದುಮಾಲೀ ೪; ಕ್ಷೇತ್ರಫಲ ೫೧೧ ಚ. ಮೈಲು, ಜನಸಂಖ್ಯೆ ೧೧೯೯೩, ಭೂಮಿಯ ಕಂದಾಯ ೬೬೫೫೦ ರೂಪಾಯಿ.

ಸ್ವರೂಪ—ಸಹ್ಯಾದ್ರಿ ಬೈಲುಸೀಮೆಗಳ ನಡುವಿನ ಕಿರಿ ನೆಲವು ಈ ತಾಲೂಕಿನೊಳಗಿಂದ ಹಾದು ಹೋಗುತ್ತದೆ.

ಅದರ ಪಶ್ಚಿಮದಲ್ಲಿ ಸಣ್ಣ ಸಣ್ಣ ಗುಡ್ಡಗಳೂ ಸಣ್ಣ ಸಣ್ಣ ಬಡಬಕ್ಕಲಿಗರ ಪಳ್ಳಿಗಳೂ ಉಂಟು; ಪೂರ್ವಕ್ಕೆ ವೃಕ್ಷಗಳಿಲ್ಲದ ಕರೆಭೂಮಿಯ ಬೈಲಿನಲ್ಲಿ ಚತುರರಾದ ಒಕ್ಕಲಿಗರ ದೊಡ್ಡ ದೊಡ್ಡ ಪಳ್ಳಿಗಳು ದೂರ ದೂರ ಇರುತ್ತವೆ.

ಭೂಮಿ—ಉತ್ತರ ಪೂರ್ವಗಳಲ್ಲಿ ಪತ್ತಿ ಬೆಳೆಯುವ ಕರೆ ಭೂಮಿಯುಂಟು; ಪಶ್ಚಿಮದಲ್ಲಿಯೂ ಕರೆ ಭೂಮಿಯನ್ನು ಕಾಣಬಹುದು. ಆದಾಗ್ಯೂ ವಾಡಿಕೆಯಾಗಿ ಕೆಂಪು ನೆಲವೇ ಹೆಚ್ಚು.

ಮಳೆ, ಮಳೆ, ನೀರು—ಮಳೆಯು ಮಧ್ಯಮ ಮೊನಚ್ದು; ಪೂರ್ವ ಭಾಗದಲ್ಲಿ ಶಕೆ ಹೆಚ್ಚು. ಬ್ಯಾಹಟ್ಟಿಯ ನೆರೆಯಲ್ಲಿ ಮಳೆ ಕಡಿಮೆ ಆಗುತ್ತಿದ್ದಾಗ್ಯೂ ಭೂಮಿಯು ಬಹು ಬೆಳೆಯುಳ್ಳದ್ದಿರುತ್ತದೆ. ಮುಬ್ಬಳ್ಳಿಯಲ್ಲಿ ಮಳೆ ಸರಾಸರೀ ೮೮ ಇಂಚು ಬೀಳುತ್ತದೆ. ಪಶ್ಚಿಮಭಾಗದಲ್ಲಿ ಬಾಲ್ಮಲಾ ಮುಂತಾದ ಸಣ್ಣ ಸರವುಗಳೇ ಮುಖ್ಯ ಜಲಾಯಗಳು; ಪೂರ್ವ ಭಾಗದಲ್ಲಿ ಬೆಣ್ಣೀಹಳ್ಳವಿರುತ್ತದೆ, ಎಲ್ಲಕಡೆಯಲ್ಲಿ ಸಣ್ಣ ದೊಡ್ಡ ಕರೆಗಳುಂಟು. ಪಶ್ಚಿಮದ ಕೆರೆಗಳ ನೀರು ಬೇ, ವಿಪುಲ; ಪೂರ್ವದ ಕೆರೆಗಳ ನೀರು ಸಾಳು, ಅಲ್ಪ. ಬೀಸಿಗೆಯಲ್ಲಿ ಯಾವತ್ತು ಸರವುಗಳೂ ಕೆರೆಗಳೂ ಬತ್ತಿ ಬಿಸ್ಮೈಮ್ಕ ನೀರಿನ ಕೊರತೆಯಾಗುತ್ತದೆ.

ಗ್ರಾಮಗಳು.

ಮುಬ್ಬಳ್ಳಿ—ಧಾರವಾಡದ ಆಗ್ನೇಯಕ್ಕೆ ೧೩ ಮೈಲಿನ ಮೇಲೆ ಇರುತ್ತದೆ. ಜನಸಂಖ್ಯೆ ೪೬೬೭೭ (೧೮೮೧). ಇದು ದಕ್ಷಿಣ ಮಹಾರಾಷ್ಟ್ರದಲ್ಲಿ ದೆಸರಾದ ಪೇಟೆಯೂ, ತಾಲೂಕಿನ ಮುಖ್ಯಗ್ರಾಮವೂ ಇರುತ್ತದೆ. ಇಲ್ಲಿ ಮಾಮಲೇದಾರ ಕಚೇರಿ, ಮುನಸಿಫ ಕಚೇರಿ, ಪೊಲೀಸ ಕಚೇರಿ

ರಿ, ಟಪಾಲ ಆಫೀಸು, ತಂತೀ ಟಪಾಲ ಆಫೀಸು, ಆಸಪತ್ರಿ, ಇಂಗ್ಲಿಷ ಶಾಲೆ, ಇಷ್ಟು ಸರಕಾರೀ ಸಂಸ್ಥೆಗಳಲ್ಲದೆ ಪತ್ತಿ ಅರಿಯುವ ಕಾರಖಾನೆ, ಅರಳಿಯ ಬತ್ತುವ ಕಾರಖಾನೆ, ನೂಲು ಮಾಡುವ ಯಂತ್ರದ ಕಾರಖಾನೆ, ರೇಲ್ವೆ ವರ್ಕ ಶಾಪೆಂಬ ಕಾರಖಾನೆ, ಎರಡು ಇಂಗ್ಲಿಷ ವ್ಯಾಪಾರಸ್ಥರ ಆಂಗಡಿಗಳು ಇರುತ್ತವೆ.

ಈ ಊರಿನ ಪಶ್ಚಿಮ ಭಾಗಕ್ಕೆ ಪಳೆ ಪುಬ್ಬಳ್ಳಿಯಂತಲೂ ಪೂರ್ವ ಭಾಗಕ್ಕೆ ಹೊಸ ಪುಬ್ಬಳ್ಳಿಯಂತಲೂ ಅನ್ನುವರು. ಎರಡುಗಳ ನಡುವೆ ೪೦೦ ಯಾರ್ಡಿಗಿಂತ ಹೆಚ್ಚು ಅಂತರವಿಲ್ಲ; ಕ್ಷೇತ್ರವು ಸುಮಾರು ೧೬೭೪ ಎಕರು. ಸಮುದ್ರದ ಮೇಲೆ ಎತ್ತರವು ೭೫೦೦ ಫೂಟು. ಪಳೆ ಪುಬ್ಬಳ್ಳಿಯು ಕೃಷ್ಣಾಪುರ, ತಿಮ್ಮಸಾಗರ, ಅಯೋಧ್ಯ ಎಂಬ ನೆರೆ ಪಳ್ಳಿಗಳ ಭೂಮಿಗಳಲ್ಲಿ ಇರುತ್ತದೆ. ಸ್ರ ೧೬೦೭ ರಲ್ಲಿ ಬಸಪ್ಪನೆಂಬವನೊಬ್ಬ ಸಾವಕಾರನಿಗೂ ಪಳೆ ಕೋಟೆಯ ಕಿಲ್ಲೆದಾರನಿಗೂ ಜಗಳವಾದ್ದರಿಂದ ಆ ಸಾವಕಾರನು ಸವಣೂರಿನ ನಬಾಬನ ಅಪ್ಪಣೆಯಿಂದ ಹೊಸ ಪುಬ್ಬಳ್ಳಿಯನ್ನು ಅದರ ಬಳಿಯಲ್ಲಿ ಹೊಸದೊಂದು ಕೋಟೆಯನ್ನೂ ಕಟ್ಟಿಸಿದನು. ಈ ಹೊಸ ಪುಬ್ಬಳ್ಳಿಯು ಎಲ್ಲ ಕಡೆಯಲ್ಲಿ ಬಯಲವಾಗಿ ಬೆಳೆದದ್ದರಿಂದ ಇದರಲ್ಲಿ ಬಂಬತ್ತು ಸಣ್ಣ ಸಣ್ಣ ಪಳ್ಳಿಗಳು ಕೂಡಿಕೊಂಡಿರುತ್ತವೆ.

ಹವೆ—ಪುಬ್ಬಳ್ಳಿಯ ಪವೆಯು ಧಾರವಾಡಕ್ಕಿಂತ ಸ್ವಲ್ಪ ಶೆಕೆಯುಳ್ಳದ್ದು; ಆದದ್ದರಿಂದ ಜ್ವರೋಪದ್ರವವು ತುಸು ಕಡಿಮೆ ಎಂದು ಹೇಳಬಹುದು. ಆದರೆ ಪಟಕೀ ಬೇನೆ ಬಂದಾಗ ಧಾರವಾಡಕ್ಕಿಂತ ಹೆಚ್ಚು ಉಗ್ರ ಸ್ವರೂಪದ್ದಿರುತ್ತದೆ. ಒಟ್ಟಿಗೆ ಪವೆಯು ಆರೋಗ್ಯದ್ದೆಂಬದಕ್ಕೆ ಸಂಶಯವಿಲ್ಲ. ಮಳೆಯು ಸರಾಸರೀ ೩೪ ಇಂಚು ಆಗುತ್ತದೆ.

ನೀರು—ಹೊಸ ಹುಬ್ಬಳ್ಳಿಯ ಉತ್ತರಕ್ಕೆ ಇರುವ ತಿರ
ಕಾರಾಮನ ಕೆರೆಯೇ ಮುಖ್ಯ ಜಲಾಶಯವು. ಸುಮಾರು
೧೦೦ ವರ್ಷಗಳ ಹಿಂದೆ ತಿರಕಾರಾಮನೆಂಬ ರಜಪೂತ ಕುಲ
ದ ಬಕ್ಕಲಿಗನು ಎರಡು ಎತ್ತರವಾದ ದಿನ್ನೆಗಳ ನಡುವೆ
ಒಡ್ಡು ಹಾಕಿ ಈ ಕೆರೆಯನ್ನು ಮಾಡಿದನೆಂದು ಹೇಳುತ್ತಾ
ರೆ. ಹೊಸ ಹುಬ್ಬಳ್ಳಿಯ ಪೂರ್ವಕ್ಕೆ ಅರ್ಧ ಮೈಲಿನ ಮೇ
ಲೆ ಕರಕೀ ಪಳ್ಳದ ಕೆರೆಯುಂಟು. ಇದನ್ನು ಸರ್ ೧೮೫೬
ರಲ್ಲಿ ಗಾರ್ಡನ್ನನೆಂಬ ಅಸಿಸ್ಟೆಂಟ ಕಲೆಕ್ಟರನು ಕರಕೀ
ಪಳ್ಳಕ್ಕೆ ಒಡ್ಡು ಹಾಕಿ ಕಟ್ಟಿಸಿದನು. ಇವಲ್ಲದೆ ಊರಿನ
ಸುತ್ತುಮುತ್ತು ಎರಡು ಮೂರು ಸಣ್ಣ ಸಣ್ಣ ಕೆರೆಗಳಿರು
ತ್ತವೆ. ಊರಲ್ಲಿ ಶೀ ನೀರಿನ, ನಾಳು ನೀರಿನ ಬಾವಿಗಳು
ತಕ್ಕಮಟ್ಟಿಗೆ ಇರುತ್ತವೆ. ಇಷ್ಟು ಜಲಾಶಯಗಳಿದ್ದರೂ
ಬೇಸಿಗೆಯಲ್ಲಿ ನೀರಿನ ತಾಪತ್ರಯವಾಗುತ್ತದೆ. ಆದದ್ದರಿಂ
ದ ಸರಕಾರದವರೂ ರೇಲ್ವೇ ಕಂಪನಿಯವರೂ ಮ್ಯುನಿಸಿ
ಪಾಲಿಟಿಯವರೂ ಕೂಡಿ ಎರಡು ಮೂರು ಲಕ್ಷ ರೂಪಾಯಿ
ವೆಚ್ಚ ಮಾಡಿ ಉಣಕಲ್ಲಿನ ಪತ್ತರ ದೊಡ್ಡದೊಂದು ಕರೆ
ಕಟ್ಟಿಸಿ, ಊರೊಳಗೆ ನಳ ತರುವ ಕೆಲಸ ನಡಿಸಿದ್ದಾರೆ.

ವಿದ್ಯೆಯ ಬೆಳುವಣಿಗೆ—ಹುಬ್ಬಳ್ಳಿಯಲ್ಲಿ ಒಟ್ಟಿಗೆ ೭೬
ಶಾಲೆಗಳಿರುತ್ತವೆ. ಅವುಗಳಲ್ಲಿ ೧೩ ಸರಕಾರೀ, ೧೩ ಮಿಶ
ನರೀ ಮುಂತಾದ ಖಾಸಗೀ ಶಾಲೆಗಳು ಇರುತ್ತವೆ. ಊರೊ
ಳಗೆ ಬಂದು ಪುಸ್ತಕಾಲಯವಿರುತ್ತದೆ. ಅದಕ್ಕೆ ಮ್ಯುನಿಸಿ
ಪಾಲಿಟಿಯವರು ವರ್ಷಕ್ಕೆ ಸುಮಾರು ೧೦೦ ರೂಪಾಯಿ
ಕೊಡುವದಲ್ಲದೆ ವರ್ಗಣಿಯ ಧನವು ಸುಮಾರು ೪೦ ರೂ
ಪಾಯಿ ವರ್ಷಕ್ಕೆ ಬರುತ್ತದೆ. ಅದರೆ ಪುಸ್ತಕಗಳ ಸಂಗ್ರ
ಹವು ತಕ್ಕಷ್ಟು ಇಲ್ಲ.

ಕೈಗಾರಿಕೆಗಳು—ಹುಬ್ಬಳ್ಳಿಯ ವಸ್ತ್ರಗಳೂ, ಪಾತ್ರೆಗಳೂ ಈ ಶೀಮೆಯಲ್ಲಿ ಹೆಸರಾಗಿವೆ. ನೇಕಾರರ ಮನೆಗಳು ಬಟ್ಟಗೆ ೧೪೦೫ ಇರುತ್ತವೆ. ಅವರು ಧೋತ್ರ, ಬಲ್ಲಿ, ಶೀರೆ, ಕೆರಿಗಿ, ಖಣ ಮುಂತಾದ ನಾನಾಪ್ರಕಾರದ ವಸ್ತ್ರಗಳನ್ನು ನೂರಾರು ರೂಪಾಯಿ ಬೆಲೆ ಬೀಳುವ ಹಾಗೆ ನೆಯ್ಯುತ್ತಾರೆ. ಇಲ್ಲಿಯ ನೇಕಾರರು ಬೆಲೆಯುಳ್ಳ ಶೀತಾಂ ಬರಗಳನ್ನು ಸಹ ನೆಯ್ಯುತ್ತಾರೆ. ತಂಬಟಗಾರರ ಮನೆಗಳು ೩೫೦ ಇರುತ್ತವೆ. ಅವರು ದೊಡ್ಡ ಪಂಡೆ, ಕೊಳಗ, ಪಾತೇಲಿಗಳನ್ನೂ ನಿತ್ಯದ ಕೆಲಸಕ್ಕೆ ಬೇಕಾಗುವ ಕೊಡ, ತಪ್ಪೇಲಿ, ಬೋಗೋಣಿ, ಸವಟು ಮುಂತಾದ ಪಾತ್ರೆಗಳನ್ನೂ ಹೇರಳವಾಗಿ ಮಾಡುತ್ತಾರೆ. ಈ ಊರಲ್ಲಿ ಹುಟ್ಟುವ ಪಾತ್ರೆಗಳು ದಕ್ಷಿಣದಲ್ಲಿ ಮೈಸೂರಿನವರೆಗೂ ಉತ್ತರದಲ್ಲಿ ಮಿರಜಿ—ಸಾಂಗಲಿಗಳವರೆಗೂ ಹೋಗುತ್ತವೆಂದು ಹೇಳುತ್ತಾರೆ. ಇದಲ್ಲದೆ ಬೇರೆ ಕೈಗಾರಿಕೆಯ ಒಡವೆಗಳನ್ನು ಮಾಟ್ಟಿಸುವವರ ವಿವರ ಹ್ಯಾಗಂದರೆ:—ಕುಂಬಾರರ ಮನೆಗಳು ೫೫, ಅತ್ತಾರರ ಮನೆಗಳು ೫೫, ಬುರುಡರ ಮನೆಗಳು ೮೦, ನೀಲಗಾರರ ಮನೆಗಳು ೫೦, ಕಂದೀಲು ಮಾಡುವ ರಜಪೂತರ ಅಂಗಡಿಗಳು ೪, ನಾಶೀಪುಡಿ ಮಾಡುವರ ಅಂಗಡಿಗಳು ೪, ಕುಂಕುಮ ಮಾಡುವರ ಮನೆಗಳು ೧೫, ಚಿತ್ರಗಾರರ ಅಂದರೆ ಜೀನಗಾರರ ಮನೆಗಳು ೫೦, ಚರ್ಮದ ಸಾಮಾನುಗಳನ್ನು ಮಾಡುವ ಹೊಲಿಯರು ಮಾದಿಗರು, ಡೋರರು, ಸಮ್ಮಗಾರರು, ಈ ನಾಲ್ಕು ಜಾತಿಯವರ ಮನೆಗಳು ೧೫೦.

ವ್ಯಾಪಾರವು—ಹುಬ್ಬಳ್ಳಿಯು ದಕ್ಷಿಣ ದೇಶದಲ್ಲಿ ಮೊದಲನೇ ಪ್ರತಿಯ ಪೇಟೆಯನಿಸುತ್ತದೆ. ವ್ಯಾಪಾರದ ಕಾರಣ

ದಿಂದಲೇ ಈ ಪಟ್ಟಣದ ಜನ ಸಂಖ್ಯೆಯು ಇಪ್ಪತ್ತ ಬೆಳೆದಿದೆ
ದಕ್ಷಿಣದಲ್ಲಿ ಬೆಂಗಳೂರಿನವರೆಗೂ ಉತ್ತರದಲ್ಲಿ ಪೂನೆಯ
ವರೆಗೂ ಮುಬ್ಬಳ್ಳಿಯಷ್ಟು ದೊಡ್ಡ ಪೇಟೆಯು ಇಲ್ಲೆಂದು
ಹೇಳಬಹುದು. ಮುಬ್ಬಳ್ಳಿಯ ವ್ಯಾಪಾರದ ಮುಖ್ಯ ಸರಕ
ಅರಳೆ ಇರುತ್ತದೆ. ಅರಳೆಯ ಹೊರತು ಧಾನ್ಯ, ವಸ್ತ್ರ
ಪಾತ್ರೆ, ಚರ್ಮ, ಕೋಡು ಮುಂತಾದ ಸರಕುಗಳು ಪಾ
ಪೇಟೆಗೆ ಹೋಗುತ್ತವೆ. ಮುಂಬಯಿಯ ಅರಿವೆ, ಯುರೋಪಿ
ಅರಿವೆ, ನೂಲು, ಧಾನ್ಯ, ನೀಲಿ, ಬೆಲ್ಲ, ತೆಂಗಿನಕಾಯಿ
ಅಡಿಕೆ ಮುಂತಾದವುಗಳು ಪರಪೇಟೆಯಿಂದ ಮುಬ್ಬಳ್ಳಿಗೆ
ಬರುತ್ತವೆ. ಸನ ೧೮೮೩ನೇ ವರ್ಷ ಮುಬ್ಬಳ್ಳಿಯಪೇಟೆ
ಯಲ್ಲಿ ಒಟ್ಟಿಗೆ ೪೦ ಲಕ್ಷ ೮೬ ಸಾವಿರ ರೂಪಾಯಿಗಳ
ವ್ಯಾಪಾರವಾಯಿತು. ಇದರಲ್ಲಿ ೩೦ ಲಕ್ಷ ೩೬ ಸಾವಿರ
ರೂಪಾಯಿಗಳ ಮೂಲು ಹೊರಗಿಂದ ಬಂದದ್ದು. ೮ ಲಕ್ಷ
೫೦ ಸಾವಿರ ರೂಪಾಯಿಗಳ ಮೂಲು ಇಲ್ಲೇ ಮಾಟ್ಟದ್ದು.

RAO BAHADUR S. V. PATWARDHAN'S ADMINISTRATION.

ರಾವ ಬಹಾದ್ದೂರ ಸಿ. ವಿ. ಪಟವರ್ಧನ ಸಾಹೇಬರ ಆಡಳಿತವು.

(೧೨೦ನೆಯ ಪುಟದಿಂದ ಮುಂದೆ ಸಾಗಿದ್ದು)

ಮಿಡಲ್ ಸ್ಕೂಲುಗಳಲ್ಲಿಯೂ ಹೈಸ್ಕೂಲುಗಳಲ್ಲಿಯು
ಕೆಳಗಿನ ಇಯತ್ತೆಗಳ ಅಭ್ಯಾಸವು ಸರಿಯಾಗಿ ಸಾಗುತ್ತಿದ್ದಿ
ಲ್ಲ. ಬಹುತರ ಪಾಠ ಮಾಡುವ ಕೆಲಸವೇ ಪಟ್ಟಾಗಿ ಸಾಗು
ತ್ತಿತ್ತು. ಕನ್ನಡ ಮೂರನೇ ಪುಸ್ತಕದ ಭಾವಾಂತರವನ್ನು
ಎಷ್ಟೋ ಶಾಲೆಗಳಲ್ಲಿ ಮಾಡಿಸುತ್ತಿರಲಿಲ್ಲ. ಕಬ್ಬಕ್ಕೆ ಪ್ರತಿ

ಶಬ್ದಗಳನ್ನು ಪಾಠ ಮಾಡಿಸಿದರೆ ತೀರಿತೆಂಬ ನಂಬಿಕೆಯಿಂದ ವರ್ಗದ ಅಭ್ಯಾಸವನ್ನು ಎಷ್ಟೋ ಜನ ಮಾಸ್ತರರು ಸಾಗಿಸುತ್ತಿದ್ದರು. ಗೃಹ ಪಾಠಗಳು ಹೆಸರಿಗೆ ಮಾತ್ರ ಇದ್ದವು. ಆದರೆ ಇಂಥ ಸ್ಥಿತಿಯು ಈಗಿಲ್ಲ. ಪ್ರತಿಯೊಂದು ಶಾಲೆಯಲ್ಲಿ ಶಬ್ದದ ಪುಸ್ತಕಗಳನ್ನೂ ಗೃಹ ಪಾಠಗಳ ತಕ್ಕ ವ್ಯವಸ್ಥೆಯನ್ನೂ ಇಂಗ್ಲಿಷ್‌ಭಾಷೆಯ ಸರಿಯಾದ ಅಭ್ಯಾಸ ಕ್ರಮವನ್ನೂ ನಡಿಸಿರುವದು ಕಣ್ಣಿಗೆ ಬೀಳುವದು. ಗಿಳಿ ಓದು ಬಂದಾಗಿ ಅಭ್ಯಾಸ ಕ್ರಮವು ತಕ್ಕ ರೀತಿಯಿಂದ ನಡೆದಿರುವದು.

ಅದೇ ಮೇರೆಗೆ ಶಾರೀರ ಶಿಕ್ಷಣವನ್ನು ಕುರಿತು ತಕ್ಕ ಏರ್ಪಾಡುಗಳನ್ನು ಮಾಡಿ, ಕೂಡಿವಮೇರೆಗೆ ಸ್ಥಳಗಳನ್ನು ದೊರಕಿಸಿವ್ದಲ್ಲದೆ ಗರಡಿ ಸಾಮು, ಮುಂತಾದ ವ್ಯಾಯಾಮದ ಪಾಠಗಳನ್ನೂ ಕ್ರಿಕೆಟ್ ಮುಂತಾದ ಆಟಗಳನ್ನೂ ಕಲಿಸಲಿಕ್ಕೆ ಬಲ್ಲಂಥ ಜನರನ್ನು ಹೈಸ್ಕೂಲುಗಳಲ್ಲಿರ ನೇಮಿಸಿರುವರು.

ಪಟವರ್ಧನ ಸಾಹೇಬರು ಈಭಾಗಕ್ಕೆ ವರ್ಗಾಗಿ ಬಂದಾಗ ಸೆಕಂಡ ಗ್ರೇಡ ಶಾಲೆಗಳ ಅಂದರೆ ಇಂಗ್ಲಿಷ ವರ್ಗಗಳುಳ್ಳ ಕನ್ನಡ ಶಾಲೆಗಳ ಸಂಖ್ಯೆಯು ಹೆಚ್ಚಾಗಿತ್ತು. ಇವುಗಳಿಗೆ ಬಗೆ ಬಗೆಯ ಹಾನಿಗಳುಂಟಾಗುತ್ತಿದ್ದವು. ಹ್ಯಾಗೆಂದರೆ:—ಈ ಇಂಗ್ಲಿಷ ವಿದ್ಯಾರ್ಥಿಗಳು ೧೫! ೨೦ ರೂಪಾಯಿ ತಲಬುಳ್ಳ ಸಾಧಾರಣವಾದ ಮಾಸ್ತರರ ಕೈಯಲ್ಲಿದ್ದರು. ಆದ್ದರಿಂದ ವಿದ್ಯಾರ್ಥಿಗಳ ಅಭ್ಯಾಸವು ಚನ್ನಾಗಿ ಆಗುತ್ತಿದ್ದಿಲ್ಲ. ಇಂಗ್ಲಿಷ ಶಬ್ದಗಳ ಉಚ್ಚಾರಗಳೂ ಇಂಗ್ಲಿಷ ಭಾಷಾಭ್ಯಾಸದ ಕ್ರಮವೂ ಸರಿಯಾಗಿ ಸಾಗುತ್ತಿದ್ದಿಲ್ಲ. ಎಷ್ಟೋಜನರು ತಮ್ಮ ಮಕ್ಕಳಿಗೆ ಇಂಗ್ಲಿಷ ಅಭ್ಯಾಸ ಮಾಡಿಸಬೇಕೆಂಬ ಲವಲವಿಕೆಯಿಂದ ಹುಡುಗರನ್ನು ಕನ್ನಡ ಶಾಲೆಗೆ ಇಯತ್ತೆಯ

ಅಭ್ಯಾಸವು ಸಹ ಬಳ್ಳಿ ರೀತಿಯಿಂದ ಆಗುವದಕ್ಕಿಂತ ಮೊದಲೇ ಇಂಗ್ಲಿಷ ವರ್ಗಗಳಲ್ಲಿ ಸೇರಿಸಿ ಬಿಡುತ್ತಿದ್ದರು. ಹೀಗಾಗಿ ಚನ್ನಾಗಿ ತಿದ್ದಲ್ಪಡದ ಇಂಗ್ಲಿಷ ಮಾಸ್ತರರ ಕೈಯಲ್ಲಿ ಅವರು ಕಲಿಯು ಬೇಕಾದದ್ದರಿಂದ, ಅತ್ತ ಇಂಗ್ಲಿಷ ಅಭ್ಯಾಸಕ್ಕೂ, ಇತ್ತ ಕನ್ನಡ ಅಭ್ಯಾಸಕ್ಕೂ, ನೆಲೆ ಇಲ್ಲದೆ ಹೋಗಿ, "ಈಲ್ಲು ಹೋಯಿತು ಬೆಲ್ಲವೂ ಹೋಯಿತು" ಎಂಬ ಗಾದಿಯಂತೆ ಹುಡಗರ ಅಭ್ಯಾಸದ ಸ್ಥಿತಿಯಾಗುತ್ತಿತ್ತು. ಇದನ್ನು ಪಟವರ್ಧನ ಸಾಹೇಬರು ಕಂಡು ಎನೇ ಗ್ರೇಡ ಶಾಲೆಗಳನ್ನು ಬಂದರ ಹಿಂದೊಂದನ್ನು ಬಂದುಮಾಡಿ, ದೊಡ್ಡ ದೊಡ್ಡ ಊರುಗಳಲ್ಲಿ ಎನೇ ಗ್ರೇಡ ಶಾಲೆಗಳನ್ನು ಸ್ಥಾಪಿಸಿ, ಬಳ್ಳಿ ಅನುಭವವುಳ್ಳ ಮಾಸ್ತರರಿಗೆ ಹೆಚ್ಚು ಸಂಬಳ ಕೊಟ್ಟು ಆ ಶಾಲೆಗಳಿಗೆ ನೇಮಿಸಿ, ವಿದ್ಯಾರ್ಥಿಗಳಿಗೆ ಯೋಗ್ಯವಾದ ಇಂಗ್ಲಿಷ ಶಿಕ್ಷಣವು ದೊರೆಯುವಂತೆ ಅನುಕೂಲ ಮಾಡಿ ಕೊಟ್ಟರು. ಇದರಿಂದ ಎನೇ ಗ್ರೇಡ ಶಾಲೆಗಳ ಸಂಖ್ಯೆಯು ಬೆಳೆಯಿತು.

೧೮೮೫ ರಲ್ಲಿ ಕಾಲೇಜದ ಪ್ರ್ಯಾಕ್ಟಿಸಿಂಗ ಸ್ಕೂಲು ತೀರ ಸಂಪುಷ್ಟದಲ್ಲಿ ಬಂದು, ಕಡೆಗೆ ಬಂದಾಯಿತು. ಕಾಲೇಜದ ವಿದ್ಯಾರ್ಥಿಗಳು ಪ್ರತಿದಿವಸ ಊರಲ್ಲಿ ಹೋಗಿ ಎನೇ ನಂಬರ ಶಾಲೆಯಲ್ಲಿ ಕೆಲವು ವರ್ಗಗಳನ್ನು ಕಲಿಸಿ ತಿರುಗಿ ಕಾಲೇಜಕ್ಕೆ ಬರಬೇಕಾಗುತಿತ್ತು. ಇದರಿಂದ ಕಾಲೇಜದ ವಿದ್ಯಾರ್ಥಿಗಳಿಗೆ ಸುಕಷ್ಟ ಪ್ರಯೋಜನವಾಗುತ್ತಿದ್ದಿಲ್ಲ. ಇವನ್ನು ನೋಡಿ ಪಟವರ್ಧನ ಸಾಹೇಬರು ಪುನಃ ಪ್ರ್ಯಾಕ್ಟಿಸಿಂಗ ಸ್ಕೂಲನ್ನು ಸ್ಥಾಪಿಸಿ, ಅದರ ಮೇಲೆ ಲೋಕಲ್ ಬೋರ್ಡ ಶಾಲೆಗಳೊಳಗಿನ ಅನುಭವಿಕರೂ ದೀರ್ಘೋದ್ಯೋಗಿಗಳೂ ಆದ ಮಾಸ್ತರರನ್ನು ಬಬ್ಬರ ಹಿಂದೊಬ್ಬರನ್ನು ನೇಮಿಸಿ, ಅದನ್ನು ಊರ್ಜಿತ ಸ್ಥಿತಿಗೆ ತಂದರು. ಮುಂ

ವೆ ಅಲ್ಲಿ ಉತ್ತಮ ಶಿಕ್ಷಣವು ದೊರೆಯು ಹತ್ತಲು ಊರೊಳ
ಿನ ಜನರು ತಮ್ಮ ಮಕ್ಕಳನ್ನು ಪ್ರ್ಯಾಕ್ಟಿಸಿಂಗ ಸ್ಕೂಲಿಗೆ
ಕಳಿಸಹತ್ತಿದರು. ಪರಸ್ಥಳದ ವಿದ್ಯಾರ್ಥಿಗಳು ಸಹ ಈ
ಶಾಲೆಗೆ ಬರಲಾರಂಭಿಸಿದರು. ಈಗ ಶಾಲೆಯಲ್ಲಿ ೧೬೦ ಹುಡು
ಗರು ಇದ್ದಾರೆ. ಇದರಲ್ಲಿ ಕನ್ನಡ ೧ನೇ ಇಯತ್ತೆಯಿಂದ
೬ನೇ ಇಯತ್ತೆಯವರೆಗೆ ಎಲ್ಲ ವರ್ಗಗಳಲ್ಲಿ ಸಾಕಷ್ಟು ವಿ
ದ್ಯಾರ್ಥಿಗಳು ಇದ್ದಾರೆ. ಇಲ್ಲಿಂದ ಮುಲ್ಕೀಪರೀಕ್ಷೆಗೆಹೋದ
ವಿದ್ಯಾರ್ಥಿಗಳಲ್ಲಿ ಅರ್ಧಕ್ಕಿಂತ ಹೆಚ್ಚು ಹುಡುಗರು ಕಳೆದ
೬ । ೫ ವರ್ಷಗಳಿಂದ ವಾಸುಗ ಹತ್ತಿದ್ದಾರೆ. ಇಷ್ಟೇ ಕಾರ
ಣವು ಅಲ್ಲಿ ಮೇಲಾದ ಶಿಕ್ಷಣವು ದೊರೆಯುತ್ತದೆಂದು ಹೇ
ಳಲಿಕ್ಕೆ ಸಾಕೆಂದು ನಾವು ನೆನಸುತ್ತೇವೆ.

ಪಟವರ್ಧನ ಸಾಹೇಬರು ಇಲ್ಲಿ ಬರುವದಕ್ಕಿಂತ ಮೊದ
ಲು ಟ್ರೇನಿಂಗ ಕಾಲೇಜವನ್ನು ಬಂದು ಮಾಡುವ ವಿಚಾರ
ವು ನಡೆದಿತ್ತು. ಸಾವಿರಗಟ್ಟಲೆ ರೂಪಾಯಿ ಖರ್ಚ ಮಾಡಿ
ಕಟ್ಟಿದಂಥ ಈ ಭವ್ಯವಾದ ಇಮಾರತಿಯನ್ನು ಹುಚ್ಚರ
ಆಸಪತ್ರಿಗೆ ಕೊಡಬೇಕೆಂಬ ಅಲೋಚನೆಯನ್ನು ಮಾಡಿದ್ದ
ರು. ಸುದೈವದಿಂದ ಈ ದೊರೆಗಳು ಇಲ್ಲಿಗೆ ವರ್ಗಾಗಿ ಬಂದ
ಕೂಡಲೆ, ಅವರು ಈ ಕಾಲೇಜವನ್ನು ಬಂದು ಮಾಡಿದರೆ
ದಕ್ಷಿಣ ಭಾಗದಲ್ಲಿ ಶಿಕ್ಷಣದ ಕೆಲಸವು ಸರಿಯಾಗಿ ಸಾಗಲಿಕ್ಕಿ
ಲ್ಲವೆಂದು ಸಪ್ರಮಾಣವಾಗಿ ವರಿಷ್ಠರಿಗೆ ಬರೆದು, ಕಾಲೇಜ
ವನ್ನು ಸ್ಥಿರಗೊಳಿಸಿದರು. ಈ ಮೇರೆಗೆ ಅವರು ಮಾಡಿದ
ಮಹದುಪಕಾರಕ್ಕೆ ನಮ್ಮ ಭಾಗವು ಋಣಿಯಾಗಿರುತ್ತದೆಂದು
ನಾವು ಖಂಡಿತವಾಗಿ ಹೇಳುತ್ತೇವೆ. ಈಗ ೯ ವರ್ಷಗಳಲ್ಲಿ
ಸರಾಸರೀ ಮಾನದಿಂದ ೪೦೦ ಕ್ಕಿಂತ ಹೆಚ್ಚು ಟ್ರೇನ್ಡ ಜನರು
ಈ ಕಾಲೇಜದಲ್ಲಿ ಮೇಲ್ತರದ ಶಿಕ್ಷಣವನ್ನು ಪಡೆದು ಸದ್ಯ
ಕ್ಕೆ ಮಾಸ್ತರರ ಕೆಲಸವನ್ನು ಮಾಡುತ್ತಿರುವರು.

ಅವರು ಮಾಡಿದ ಇನ್ನೊಂದು ಮಹತ್ವದ ತಿದ್ದುಪಾಟು ಏನೆಂದರೆ:—ಮಾಸ್ತರರ ಸಂಬಳವು. ಅವರು ಅದೇ ಅಲ್ಲಿಗೆ ಬಂದಾಗ, ೭ | ೮ ರೂಪಾಯಿ ತಲಬುಳ್ಳ ಹೆಡ್ಡ ಮಾಸ್ತರರೂ ೩ | ೪ ರೂಪಾಯಿ ತಲಬಿನ ಅಸಿಸ್ಟಂಟ ಮಾಸ್ತರರೂ ಇದ್ದರು. ಇಂಥ ಮಾಸ್ತರರಿಂದ ನಡಿಸಲ್ಪಡುತ್ತಿದ್ದ ಆಗಿನ ಶಿಕ್ಷಣದ ಸ್ಥಿತಿಯು ಹ್ಯಾಗೆ ಇರಬಹುದೆಂಬದನ್ನು ವಾಚಕರೇ ಸುಲಭವಾಗಿ ಊಹಿಸಬಹುದು. ಪಟವರ್ಧನ ದೊರೆಗಳು, ಮಾಸ್ತರ ಜನರಿಗೆ ಉತ್ತೇಜನ ಬರಬೇಕು, ಅವರಿಗೆ ಸಾಕಷ್ಟು ಅನ್ನ ವಸ್ತ್ರಗಳು ದೊರೆಯಬೇಕು, ಅವರು ಕೈಕೊಂಡ ಕೆಲಸವನ್ನು ಲಕ್ಷಗೊಟ್ಟು ಮಾಡಬೇಕು, ಎಂಬ ಉದ್ದೇಶದಿಂದ ೧೪೮೬ನೇ ಇಸವಿಯಿಂದಿತ್ತಲಾಗಿ ಮಾಸ್ತರ ಜನರ ಸಂಬಳಗಳನ್ನು ಕೈಲಾದಮಟ್ಟಿಗೆ ಹೆಚ್ಚಿಸಿದರು; ಅಂದರೆ ಅಸಿಸ್ಟಂಟ ಮಾಸ್ತರರಿಗೆ ೭ ರೂ. ಗಳಿಗಿಂತ ಕಡಿಮೆ, ಹೆಡ್ಡ ಮಾಸ್ತರರಿಗೆ ೧೦ ರೂ. ಗಳಿಗಿಂತ ಕಡಿಮೆ ಸಂಬಳ ಇರಕೂಡದೆಂದು ಗೊತ್ತು ಮಾಡಿದರು. ಇದಲ್ಲದೆ ಟ್ರೇನಿಂಗ ಕಾಲೇಜಿನ ಸರ್ಟಿಫಿಕೇಟು ಪಡೆದಂಥ ಜನರಿಗೆ ೨ ವರ್ಷಗಳಲ್ಲಿಯೇ ಅವರ ಸರ್ಟಿಫಿಕೇಟಿನಲ್ಲಿದ್ದಷ್ಟು ಪಗಾರವು ದೊರೆಯಲಿಕ್ಕೆ ಬೇಕೆಂಬ ಬಗ್ಗೆ ಮೇಲಧಿಕಾರಿಗಳಿಗೆ ರಿಪೋರ್ಟು ಮಾಡಿ ಅದರಂತೆ ಕಟ್ಟಳೆಗಳನ್ನು ಮಾಡಿಸಿದರು. ಇದರಿಂದ ಶಿಕ್ಷಣದ ಕೆಲಸವನ್ನು ಕೈಕೊಂಡ ಬಡ ಮಾಸ್ತರರ ಮೇಲೆ ಎಷ್ಟು ಉಪಕಾರ ಮಾಡಿದರೆಂಬದು ಸ್ಪಷ್ಟವಾಗಿ ತಿಳಿಯುತ್ತದೆ.

ಪಟವರ್ಧನ ಸಾಹೇಬರು ವೃಥಾ ಆಡಂಬರಕ್ಕೆ ಮೊಚ್ಚಿದವರಲ್ಲ. ನಿಜವಾಗಿ ಕೆಲಸ ಮಾಡುವವರಿಗೆ ಇವರಿಂದ ಪ್ರೋತ್ಸಾಹನವು ತಪ್ಪದೆ ಸಿಗುತ್ತಿತ್ತು. ಕನ್ನಡವು ಇವರಿಗೆ ಬರುತ್ತಿ

ದ್ದಿಲ್ಲ. ಆದಾಗ್ಯೂ ಕವಿಯಾಟಯವರ ಅಭಿಪ್ರಾಯಾನುಸಾರವಾಗಿ ತಕ್ಕ ಪುಸ್ತಕಗಳಿಗೆ ಇವರು ದ್ರವ್ಯದ ಸಹಾಯವನ್ನು ಕೊಡಿಸುವರು. ಇವರ ಕಾಲಕ್ಕೆ ಆದ ಗ್ರಂಥಗಳನ್ನೂ ಅವುಗಳಿಗೆ ದೊರೆದ ದ್ರವ್ಯಸಹಾಯವನ್ನೂ ಕೆಳಗೆ ಕಾಣಿಸಿರುತ್ತೇವೆ.

ಗ್ರಂಥಗಳು.		ಉತ್ತೇಜನಾರ್ಥವಾಗಿ ದೊರೆದ ಹಣ.
೧	ಮುಳಬಾಗಲಕೃತ ವೇಣೀಸಂಹಾರ ನಾಟಕ	ರೂ. ೨೬೦
೨	ಸದರ	ಮೈಚ್ಛಕಟಿಕ ,, ೪೦೦
೩	ವಿನಾಯಕರಾವ ಜೋಸೀಕೃತ	ಅರ್ಥಶಾಸ್ತ್ರ ,, ೪೦೦
೪	ಮುಳಬಾಗಲಕೃತ	ಛಂದಸ್ಸಾರ ,, ೬೦
೫	ಹಳಕಟ್ಟೀಕೃತ	ಸಿದ್ಧಾಂತ ,, ೩೦೦
೬	ಹೂಲೀಕೃತ	ಜಮಾಖರ್ಚು ಪ್ರೆಸ್ಸಿನಲ್ಲಿ ಅದೆ.

ಮೆ. ರಸಲ್ ದೊರೆಗಳು ವರ್ಷಪ್ರಾಯಿಜ ಎಂಬ ೪೦ ರೂಪಾಯಿಗಳ ಇನಾಮು ಇಟ್ಟದ್ದು ಬಹುಕಃ ಎಲ್ಲರಿಗೂ ಗೊತ್ತುಂಟು. ಈ ಇನಾಮಿನ ಸಂಬಂಧವಾದ ಪರೀಕ್ಷೆಗಳು ಪಟವರ್ಧನ ಸಾಹೇಬರು ಈ ಭಾಗಕ್ಕೆ ಬರುವದಕ್ಕಿಂತ ಮುಂಚೆ ಕೆಲವು ವರ್ಷ ಬಂದಾಗಿದ್ದವು. ಇವರು ಬಂದ ಮೇಲೆ ೪೦ ರೂಪಾಯಿದ್ದು ಬಂದು, ೬೦ ರೂಪಾಯಿದ್ದು ಮತ್ತೊಂದು, ಹೀಗೆ ಎರಡು ಇನಾಮುಗಳನ್ನು ಮಾಡಿ ಪ್ರತಿವರ್ಷ ಪಾಸಾದ ಜನರಿಗೆ ಇವನ್ನು ಕೊಡುವ ವ್ಯವಸ್ಥೆ ಮಾಡಿದರು.

ADDRESS TO COLLEGE STUDENTS BY Mr. SAVADI.

ಕಾಲೇಜಿನ ವಿದ್ಯಾರ್ಥಿಗಳಿಗೆ ರಾ. ರಾ. ಸವದಿ ಯವರು ಮಾಡಿದ ಉಪದೇಶವು.

(೧೮೬೯ ಫುಟವಿಂದ ಮುಂದೆ ಸಾಗಿದ್ದು.)

ಊರ ಜನರ ಸಂಬಂಧದಿಂದ ಗುರುವಿನ ಕರ್ತವ್ಯ ಕರ್ಮವು—ಯಾವ ರೀತಿಯಿಂದ ನಡೆದರೆ ಊರವರ ಪ್ರೀತಿ

ಯೂ ಪೂಜ್ಯಬುದ್ಧಿಯೂ ತನ್ನ ವಿಷಯ ಉಂಟಾಗು
ವೋ ಆ ಸಂಗತಿಗಳ ವಿಷಯಕ್ಕೆ ಮಾಸ್ತರನು ಮೊದಲೆ
ವಿಚಾರ ಮಾಡುವದು ಲೇಸು. ಸಾಲೆಯ ಹೊತ್ತಿನಲ್ಲಿ ಊ
ರವರಲ್ಲಿ ಯಾರೇ ಬರಲಿ, ಅವರಿಗೆ ತಕ್ಕ ಮಾನಮರ್ಯಾ
ಗಳನ್ನು ಕೊಟ್ಟು, ಅವರ ಮಕ್ಕಳು ಸಾಲೆಯಲ್ಲಿದ್ದರೆ, ಅ
ರ ವಿಷಯವಾಗಿ ತಿಳಿಸತಕ್ಕ ಮಾತುಗಳನ್ನು ಸ್ವಲ್ಪದರಲ್ಲಿ
ತಿಳಿಸಿ, ತನ್ನ ಕೆಲಸವನ್ನು ಸಾಗಿಸಬೇಕು. ಕೆಲವು ಗುರು
ಗಳು ತಾವು ತಮ್ಮ ಕೆಲಸವನ್ನು ಬಿಟ್ಟು ಬಂದವರ ಕೂಡ
ಅವರ ಮಡುಗರ ವಿಷಯವಾಗಿ ಮಾತಾಡುತ್ತ ಕೂತರೆ ಸರ
ಕಾರದ ಕೂಡ ಕೃತಘ್ನತೆಯಿಂದ ನಡೆದಂತೆ ಆಗುವದೆಂದು
ತಿಳಿದು, ಸಾಲೆಗೆ ಬಂದವರಿಗೆ, ಬರ್ರಿ; ಯಾಕೆ ಬಂದಿದ್ದೀರಿ;
ನಿಮ್ಮ ಮಡುಗರ ಅಭ್ಯಾಸವು ಚನ್ನಾಗಿ ನಡೆದದೆ ಇಲ್ಲವೆ
ನಡೆದಿಲ್ಲ ಮುಂತಾದ ಸಭ್ಯತನದ ಮಾತುಗಳನ್ನಾಡದೆ ತಮ್ಮ
ಕೆಲಸವನ್ನೇ ಮಾಡುತ್ತ ಕುಳಿತು, ಬಂದವರು ಕಣ್ಣಿಗೆ ಬಿದ್ದ
ರೂ ಅವರನ್ನು ಲೆಕ್ಕಿಸದೆ ಇರುವದು, ಹಳ್ಳಿಯ ಸಾಲೆಗಳ
ನ್ನು ಕೆಡಿಸುವವಕ್ಕೆ ಬಳ್ಳೀ ಸಾಧನವಾಗಿರುವದು. ಸಾಲೆಯ
ನ್ನು ನೋಡಲಿಕ್ಕೆ ಬಂದವರನ್ನು ಆದರಿಸಬೇಕೆಂದು ಹೇಳಿ
ದ್ದರಿಂದ, ಬಹಳಾದರೆ ಮೂರು ಮಿನಿಟಿಗಿಂತ ಹೆಚ್ಚು ಕಾಲ
ಕಳೆಯಬಾರದೆಂಬದೇ ನಮ್ಮ ತಾತ್ಪರ್ಯವು. ಕೆಲವು ಗು
ರುಗಳು ಯಾರಾದರೂ ಸಾಲೆಗೆ ಬಂದರಾಯಿತು, ತಮ್ಮ
ಕೆಲಸವನ್ನು ಬಿಟ್ಟುಕೊಟ್ಟು, ವರ್ಗದ ಹುಡುಗರಿಗೆ ಏನಾ
ದರೂ ಮಾಡಲಿಕ್ಕೆ ಹೇಳಿ, ತಾವೂ ಬಂದವರೂ ಒತ್ತಟ್ಟಿಗೆ
ಕಾಷ್ಟಾಸನದ ಮೇಲೆ ಕಾಲುಚಾಚಿಕೊಂಡು ಕುಳಿತು, ಊರ
ಸುಸಾಬರೆ, ಗೌಡಶಾನಭೋಗರ ತಂಟೆ, ಹಾಳುಹರಟೆ
ಮುಂತಾದವರಲ್ಲಿ ಕಾಲದ ಅಪವ್ಯಯವನ್ನು ಮಾಡಿದರೆ, ಅವ

ರು ಪಗಾರ ಕೊಟ್ಟು ತಮ್ಮನ್ನು ಇಟ್ಟವರಿಗೆ ವಂಚಿಸಿದಂ ತಾಗುತ್ತದೆ. ಇದಲ್ಲದೆ ಸಾಲೆಯ ಶಿಕ್ಷಣವು ಕೆಲವು ತಾಸು ನಿಂತು ಹೋಗುವದರಿಂದ, ಶಿಕ್ಷಣದಲ್ಲಿ ಗುರುವಿಗೆ ಆಸಕ್ತಿ ಇಲ್ಲದ್ದನ್ನು ವಿದ್ಯಾರ್ಥಿಗಳು ಕಂಡು, ಅವರಲ್ಲಿ ಆಲಸ್ಯ ನೇ ರುವದಲ್ಲದೆ ಗುರುವಿನ ವಿಷಯವಾಗಿ ಅವರಲ್ಲಿದ್ದ ಪೂಜ್ಯಬು ದ್ಧಿಯು ಅಳಿದು ಹೋಗಿ, ಅವನ ಅಧಿಕಾರವನ್ನು ಅವರು ಅಸಡ್ಡೆ ಮಾಡಲಾರಂಭಿಸುತ್ತಾರೆ. ಆದದ್ದರಿಂದ ಸಾಲೆಯು ವೇಳೆಯಲ್ಲಿ ಬಂದವರ ಕೂಡ ತಕ್ಕಷ್ಟೇ ಮಾತುಗಳನ್ನಾಡಿ, ತನ್ನ ಕೆಲಸಕ್ಕೆ ತಡಮಾಡದೆ ಪತ್ತಿದರೆ, ಬಂದವರು ಹರಟೆ ಕೊಚ್ಚುವವರಾದರೂ ಅವರಿಗೆ ಗುರುವಿನ ಸ್ವಕಾರ್ಯದಕ್ಷ ತೆಯ ಬಗ್ಗೆ ಆಶ್ಚರ್ಯವಾಗಿ, ಇಲ್ಲಿ ತಮ್ಮ ಬೇಳೆ ಬೆಯ್ಯುವ ದಿಲ್ಲೆಂದು ಅವರು ಹೊರಟು ಹೋಗುವರು.

ಊರಲ್ಲಿ ಋಣಗಳಿದ್ದರಂತೂ ಗುರುವು ಬಹಳ ಎಚ್ಚರಿಕೆ ಯಿಂದ ಇರತಕ್ಕದ್ದು. ತಾನಾಯಿತು, ತನ್ನ ಮನೆಯಾಯಿ ತು ಹೀಗೆ ಇರಬೇಕು. ಜನರ ಮನೆಗೆ ಹೋಗುವ ರೂಢಿ ಯು ಗುರುವನ್ನು ಕೆಡಿಸುವದು. ಶಾನಭೋಗನ ಮನೆಗೆ ಹೋದರೆ ಗೌಡನಿಗೆ ಸಿಟ್ಟು, ಅನ ಮನೆಗೆ ಹೋದರೆ ಬ ನಿಗೆ ಸಿಟ್ಟು, ಹೀಗಿದ್ದಲ್ಲಿ ಗುರುವು ಕರಿಸಿದರೂ ಯಾರ ಮನೆ ಗೂ ಹೋಗಬಾರದು. ಆದಿತ್ಯವಾರ ಇಲ್ಲವೆ ಹಬ್ಬದ ದಿವಸ ದೊಡ್ಡ ಊರಿದ್ದರೆ ಬಂದೆರಡು ಓಣಿಗಳಿಗೆ ಹೋಗಿ, ಸಣ್ಣದಿ ದ್ದರೆ ಊರೆಲ್ಲ ತಿರುಗಾಡಿ, ಅಭ್ಯಾಸ ಮಾಡದ ಹುಡುಗರ ವಿಷ ಯವಾಗಿ ಅವರ ತಾಯಿತಂದೆಗಳಿಗೆ ನಾಲ್ಕು ಒಳ್ಳೆ ಮಾತುಗಳ ನ್ನು ಹೇಳಬೇಕು. ಓಣಿಯಲ್ಲಿ ಯಾವ ಯಾವ ಹುಡುಗರು ಯಾವ ಯಾವ ಕೆಲಸಗಳನ್ನು ಮಾಡುತ್ತಾರೆ, ಯಾರು ಯಾವ ಆಟಗಳನ್ನು ಆಡುತ್ತಾರೆ, ಎಂಬದನ್ನು ನೋಡಿ ಅವರವ ರಿಗೆ ತಕ್ಕ ಉಪದೇಶವನ್ನು ಮಾಡುತ್ತಾ ಪ್ರೋತ್ಸಾಹನ

ಕೂಡುತ್ತಾ ಹೋಗಬೇಕು. ಹೀಗೆ ಮಾಡುವದರಿಂದ ಮನೆಯಲ್ಲಿ ಅಭ್ಯಾಸ ಮಾಡದ ಹುಡುಗರು ಅಭ್ಯಾಸ ಮಾಡಲಿಕ್ಕೆ ಹತ್ತಿ ಬುದ್ಧಿವಂತರಾದರೆ ಅವರ ತಾಯಿ-ತಂದೆ-ಬಂಧು-ಬಳಗದವರಿಗೆ ಎಷ್ಟು ಆನಂದವಾಗಬಹುದು? ವಿದ್ಯಾರ್ಥಿಗಳ ಶಿಕ್ಷಣದಲ್ಲಿರುವ ಗುರುವಿನ ಅತ್ಯುತ್ಕಟವಾದ ಆಸಕ್ತಿಯು ಜನರ ದೃಷ್ಟಿಗೆ ಈ ಪ್ರಕಾರದಿಂದ ಬಿದ್ದರೆ, ತಮ್ಮ ಹುಡುಗರನ್ನು ಸಾಲೆಗೆ ಕಳಿಸಬಾರದೆಂಬುವವರು ಸಹ ಅವರನ್ನು ಸಾಲೆಗೆ ಕಳಿಸುವರು. ಅದರಿಂದ ಸಾಲೆಯಲ್ಲಿ ಬಾಲಕರ ಸಂಖ್ಯೆಯು ಬೆಳೆದು, ಅದೇ ಪ್ರಮಾಣದಿಂದ ಶಿಕ್ಷಣವೂ ಬಳಿತಾದರೆ ಬಡತಿಯು ವಿಷಯಕ್ಕೆ ವರಿಷ್ಠರಿಗೆ ಅರ್ಜಿಗಳನ್ನು ಮಾಡುವ ಕಾರಣ ಬದಗಲಾರದು.

ವರ್ತಮಾನ ಪತ್ರವು ಬಂದು ದೊಡ್ಡ ಶಕ್ತಿ (Fourth estate of the realm ಅಂದರೆ ಇದಕ್ಕೆ ರಾಜನಷ್ಟು ಅಧಿಕಾರವಿರುತ್ತದೆ) ಎಂದು ಇಂಗ್ಲಂಡದವರು ತಿಳಿಯುತ್ತಾರೆ. ಲೈಬ್ರರಿಗಳು (ಪುಸ್ತಕಾಲಯಗಳು) ಸಾಮಾನ್ಯ ಜ್ಞಾನದಾಯಕ ಶಾಲೆಗಳೇ. ಆದಕಾರಣ ಗುರುವು, ತಾನೂ ಊರಲ್ಲಿಯ ಪ್ರಮುಖ ಜನರೂ ಕೂಡಿ, ಕೊಂಚಕೊಂಚ ವರ್ಗಣಿಯನ್ನು ಹಾಕಿ, ಪಣವು ಕೂಡಿದಂತೆ ಬಂದೆರಡು ವರ್ತಮಾನ ಪತ್ರಗಳನ್ನು ತರಿಸಬೇಕು. ಸುರಕ್ಷಿತದಿಂದ ನಡಿಸಲ್ಪಟ್ಟವೂ ವ್ಯಕ್ತಿ ಮಾತ್ರಕ್ಕಿಂತ ಸಾರ್ವಜನಿಕ ಮಾತುಗಳನ್ನೇ ಸಂಗ್ರಹಿಸುವಂಥವೂ ಆದ ವರ್ತಮಾನಪತ್ರ ಮಾಸಿಕ ಪುಸ್ತಕಗಳನ್ನು ತರಿಸಬೇಕು. ಅಂದರೆ ಧಾರವಾಡ ಪಹರದಲ್ಲಿರುವ ಟ್ರೇನಿಂಗ ಕಾಲೇಜವೆಂಬ ಮಹಾಸಾಗರದೊಳಗಿಂದ ಹೊರಟು, ಹಳ್ಳಿಯ ಸಾಲೆ ಎಂಬ ಕೂಪದಲ್ಲಿ ಬಿದ್ದಂತೆ ಗುರುವಿಗೆ ಆಗಲಿಕ್ಕಿಲ್ಲ. ಯಾವನೊಬ್ಬ ಮನುಷ್ಯನು ಕೆಲಸದಲ್ಲಿ ತೊಡಗಿದ್ದಾಗ್ಗೆ ಅವಕಾಶವಿಲ್ಲದ ಕಾರಣ ಕೆಟ್ಟ ಕೆಲಸಗ

ಳನ್ನು ಮಾಡಲಾರನು. ಆದರೆ ಕೈಗಳಿಗೂ ಮಿದುಳಿಗೂ
ಕೆಲಸವಿಲ್ಲದಾಯಿತೆಂದರೆ ಇಲ್ಲದ ದುರ್ವಿಚಾರಗಳು ತಲೆಯ
ಲ್ಲಿ ಸೇರಿ ಕೈಗಳಿಂದ ಪ್ರಗಟವಾಗುತ್ತವೆ. ಕಾರಣ ನೀತಿಯ
ಪುಸ್ತಕಗಳೂ ಬಳ್ಳಿ ವರ್ತಮಾನ ಪತ್ರಗಳೂ ಬಳಿಯಲ್ಲಿದ್ದ
ರೆ ಗುರುವು ತನ್ನ ಪುರುಸೊತ್ತಿನ ಕಾಲವೆನ್ನು ಉಪಯು
ಕ್ತವಾಗಿ ಕಳೆಯುವನು. ಊರಲ್ಲಿ ಕತಿಬೆಗಳನ್ನು ಬರೆಯು
ವದೂ, ಸುಳ್ಳು ಹಾಕುವದೂ ಫೌಜದಾರಿ, ದಿವಾನಿ ಇಲ್ಲವೆ
ಮುಲ್ಕಿ ಖಾತೆಗಳಲ್ಲಿ ನಡೆದ ವ್ಯಾಜ್ಯಗಳಲ್ಲಿಯೂ ಪಕ್ಷಕಾರರ
ನ್ನು ಬೆನ್ನುಗಟ್ಟಿಕೊಂಡು, ಕಚೇರಿಯಿಂದ ಕಚೇರಿಗೆ ತಿ
ರುಗಾಡುವದೂ, ರೈತರ ಬೆನ್ನುಪತ್ತಿ ನೊಂದಣಿಯು ಕಚೇ
ರಿಗೆ ಎಡತಾಕುವದೂ, ಗುರುವಿಗೆ ನಷ್ಟವಾಡದೆ ಎಂದೂ
ಬಿಡವು. ಗುರುವು ಯಾವನ ಪಕ್ಷವಿಡಿಯುವನೋ ಅವನ
ಶತ್ರುಗಳೆಲ್ಲ ಪರಸ್ಥಳದಲ್ಲಿ ಇವನ ಶತ್ರುಗಳಾಗುವರು
ಹೀಗಾದ ಮೇಲೆ ಗುರುವಿನ ಪೇಚಾಟ ಕೇಳುವದೇನದೆ
ಅವರಿಂದ ಗುರುವು ಊರವರ ಎಲ್ಲ ವ್ಯಾಜ್ಯದ ಕೆಲಸಗಳನ್ನೆ
ತಟಸ್ಥವೃತ್ತಿಯನ್ನು ಸ್ವೀಕರಿಸಿ ಇರತಕ್ಕದ್ದು ವಿಹಿತವು
ಊರ ಜನರ ಪ್ರೀತಿಯು ಗುರುವಿನಲ್ಲಿ ಉಂಟಾದರೆ ಅವರಿ
ದ ಬೇಕಾದಷ್ಟು ವರ್ಗಣಿಯನ್ನು ಕೂಡಿಸಿ, ತಾಲೀಮು
ಸಾಮಾನುಗಳನ್ನು ತನ್ನ ಸಾಲೆಗೆ ಪೂರೈಸಬಹುದು.
ವರ್ಗಣಿಯಿಂದ ಬಡ ಮಕ್ಕಳಿಗೆ ಪುಸ್ತಕ ಫೀ ಮುಂತಾ
ವುಗಳನ್ನು ಕೊಟ್ಟು ಸಹಾಯ ಮಾಡಬಹುದು. ವಿದ್ಯಾರ್ಥಿ
ಳಿಗೆ ಇನಾಮುಗಳನ್ನು ಕೊಡಲಿಕ್ಕೆ ಪುಸ್ತಕಗಳನ್ನು ತರಿಸ
ಹುದು. ಆವರೆ ಇಷ್ಟೆಲ್ಲ ಆಗಬೇಕಾದರೆ ಊರೊಳಗಿನ ಎ
ಜನರಿಗೂ ಮಾಸ್ತರನು ಬೇಕಾಗಿರುವದು ಅಗತ್ಯವು. ಪ
ವಿತ್ತ ಪರಸ್ತ್ರೀಯರನ್ನು ವಿಷಕ್ಕೆ ಸರಿಯಾಗಿ ಎಣಿಸಿದ
ಯಾರ ಗೊಂದಲದಲ್ಲಿಯೂ ಸೇರದಿದ್ದರೆ, ಗುರುವು ಎಲ್ಲರಿಗ
ಪ್ರಿಯನಾಗುವನು.

DHARWAR TRAINING COLLEGE CERTIFICATE EXAMINATION—1893.

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

ಎನೇ ವರ್ಷದ ವರ್ಗ.

ಅಂಕಗಣಿತ ಮತ್ತು ಬೀಜಗಣಿತ.

(ರೀತಿಯ ಹೊರತು ಉತ್ತರ ನೋಡಲಾಗದು.)

(ಬಲಕ್ಕೆ ಬರೆದ ಅಂಕಿಗಳು ಪ್ರಶ್ನೆಗಳ ಪೂರ್ಣ ಗುಣಗಳು.)

೧. ದೃಢಭಾಜಕ ಅಂದರೇನು? ದೃಢಭಾಜಕದ ರೀತಿಯನ್ನು ಬರೆದು ಸಿದ್ಧ ಮಾಡಿ ತೋರಿಸಿರಿ.

೨. (ಅ) ದಶಾಂಶ ಅಪೂರ್ಣಾಂಕದ ಸಂಕ್ಷಿಪ್ತ ಗುಣಾಕಾರದ ರೀತಿಯನ್ನು ಬರೆಯಿರಿ; ಮತ್ತು ಆ ರೀತಿಯಿಂದ ·೯೯೪೭೫೩೫ ಈ ಸಂಖ್ಯೆಯನ್ನು ೨೪·೩೦೬೯ ಇದರಿಂದ ಎರಡೆರಡು ದಶಾಂಶಸ್ಥಳ ಬರುವಂತೆ ಗುಣಾಕಾರ ಮಾಡಿರಿ. ೫

(ಬ) ·೩೪೪ ಪೌ.+·೦೦೭೦೪ ಪೌ.+·೯೦೦೭ ಪೌ. ಇದರ ಕಿಮ್ಮತ್ತನ್ನು ವ್ಯವಹಾರಿ ಅಪೂರ್ಣಾಂಕ ರೂಪ ಕೊಡದೆ ತೆಗದು ಅದಕ್ಕೆ ಪೆನ್ಸಿನ ರೂಪ ಕೊಡಿರಿ. ೫

೩. ಎರಡು ಅಂಕೆಗಳ ದೃಢಭಾಜಕವು ೪೮, ಲಘುತನು ಸಾಧಾರಣ ಭಾಜ್ಯವು ೩೫ ಉಂಟು. ಆ ಅಂಕಿಗಳಲ್ಲಿ ಸಣ್ಣ ಅಂಕಿ=೧೪೪ ಆದರೆ, ಆ ಅಂಕಿಗಳ ಭಾಗಾಕಾರವೆಷ್ಟು? ೫

೪. ಅ, ಬ, ಕ, ಈ ನೂರು ನುಂದಿ ಕೂಡಿ ಕೆಲಸ ಮಾಡಲಿಕ್ಕೆ ಪ್ರಾರಂಭ ಮಾಡಿದರು. ಅವರು ಒಂದೇ ಸನನೇ ಕೆಲಸ ಮಾಡಿದರೆ ೩೦ ದಿವಸಗಳಲ್ಲಿ ಅದನ್ನು ಮುಗಿಸುತ್ತಿದ್ದರು. ಆದರೆ ಮೊದಲು ಅ· ಎಂಬವನು ೫ ದಿವಸಗಳ ತನಕ ಗೈರಹಾಜರಾದನು; ಆದ್ದರಿಂದ ಅವರಿಗೆ ಆ ಕೆಲಸ ಮುಗಿಸಲಿಕ್ಕೆ ೬೫ ದಿವಸ ಹೆಚ್ಚಿಗೆ ಹತ್ತಿದವು ಆ ಗೈರಹಾಜರಾಗದೆ ಅಷ್ಟೇ ದಿವಸ ಬ ಗೈರಹಾಜರಾಗಿದ್ದರೆ ೩೦೬ ದಿವಸಗಳಲ್ಲಿ ಆ ಕೆಲಸ ಮುಗಿಯುತ್ತಿತ್ತು. ಅವರೆ ಪ್ರತಿ ಒಬ್ಬನು ಎಷ್ಟು ದಿವಸಗಳಲ್ಲಿ ಆ ಕೆಲಸ ಮುಗಿಸುವನು? ೧೦

೫. ಒಂದು ಬೆಳೆಯುವ ಹುಲ್ಲುಗದ್ದೆಯನ್ನು ೨೪ ಕುದುರೆಗಳು ೩೦ ದಿವಸಗಳಲ್ಲಿ, ಇಲ್ಲವೆ ೨೦ ಕುದುರೆಗಳು ೪೦ ದಿವಸಗಳಲ್ಲಿ ತಿಂದರೆ ೧೫ ಕುದುರೆಗಳು ಅದನ್ನು ಎಷ್ಟು ದಿವಸಗಳಲ್ಲಿ ತಿನ್ನುವವು?

೬. ೫೦ ಮೈಲು ಸುತ್ತಳತೆಯುಳ್ಳ ಒಂದು ನಡುಗಡ್ಡೆಯ ಸುತ್ತು ಪ್ರದಕ್ಷಿಣೆ ಮಾಡುವದಕ್ಕೆ, ಅ, ಬ, ಕ ಮೂರು ಮಂದಿ ಏಕಕಾಲಕ್ಕೆ ಒಂದೇ ಸ್ಥಳದಿಂದ ಒಂದೇ ದಿಕ್ಕಿಗೆ ಹೊರಟರು. ಅವರು ಅನುಕ್ರಮವಾಗಿ ಒಂದು ದಿವಸದಲ್ಲಿ ೧೮, ೨೫ ಮತ್ತು ೪೫ ಮೈಲಿನಂತೆ ನಡೆಯುತ್ತಾರೆ ಆದರೆ ಎಷ್ಟು ದಿವಸಗಳ ಮೇಲೆ ಅವರು ಮೂರು ಮಂದಿ ಒತ್ತಟ್ಟಿಗೆ ಕೂಡುವರು?

೭. ವ್ಯೋಳಾಪ್ರಕಾಶಕ ಮತ್ತು ಘಾತಪ್ರಕಾಶಕ ಅಂದರೇನು? ಘಾತಪ್ರಕಾಶಕದ ಬೇರೀಜು, ನಜಾಬಾಕಿ, ಗುಣಾಕಾರ ಮತ್ತು ಭಾಗಾಕಾರಗಳಿಂದಾಗುವ ಕಾರ್ಯಗಳು ಯಾವವು?

೮. $(\text{ಕ})\ \frac{೩\,\text{ಕ}^{೩}+೨\,\text{ಕ}^{೨}-೧೩\,\text{ಕ}-೬}{೩\,\text{ಕ}^{೩}-೪\,\text{ಕ}^{೨}-೨೦\,\text{ಕ}+೧೨}$ ಇದಕ್ಕೆ ಅತಿ ಸಂಕ್ಷೇಪ ರೂಪವನ್ನು ಕೊಡಿರಿ.

$$(ಇ)\quad \frac{ಕ^{೩}(ಇ+ಕ)+ಇ^{೩}(ಅ+ಕ)+ಕ^{೩}(ಅ+ಇ)}{(ಅ-ಇ)(ಅ+ಕ)(ಇ-ಕ)-(ಅ+ಇ)(ಅ-ಕ)(ಇ-ಕ)-(ಅ-ಇ)(ಅ-ಕ)(ಇ+ಕ)}$$ ಇದಕ್ಕೆ ಸರಳ ರೂಪ ಕೊಡರಿ.

೯. ಕೆಳಗಿನ ಸವಿಾಕರಣದಲ್ಲಿ ಕ ದ ಕಿಮ್ಮತ್ತು ತೆಗೆಯಿರಿ.

$$\frac{ಕ-ಅ}{ಕ-ಅ-೧}+\frac{ಕ-ಇ}{ಕ-ಇ-೨}=\frac{೨}{ಕ-ಅ-೧}+\frac{೨}{ಕ-ಇ-೨}$$

೧೦ ಒಬ್ಬ ಗೃಹಸ್ಥನ ಹತ್ತರ ೯೦೦ ಪೌಂಡುಗಳಿದ್ದವು. ಅವುಗಳಲ್ಲಿ ಕೆಲವು ದರಸಾಲ ದರಶೇಕಡಾ ೪ ಪೌಂಡಿನಂತೆಯೂ ಕೆಲವು ೫ ಪೌಂಡಿನಂತೆಯೂ ಬಡ್ಡಿಗೆ ಹಚ್ಚಿದನು. ಎರಡೂ ರಕಮುಗಳ ಬಡ್ಡಿಯು ಸಮವಾಗಿ ಬರಬೇಕಾದರೆ ೪ ಪೌ ನಂತೆ ಎಷ್ಟು ಪೌ. ಗಳನ್ನು ಬಡ್ಡಿಗೆ ಹಚ್ಚಬೇಕು?

ಪರ್ಗಣೀ ವಸೂಲು.

ವಿಜಾಪೂರ ಜಿಲ್ಲೆ.

	ರೂ.	ಆ.	ಪೈ.
ವಿಜಾಪುರ ಡಿ. ಎ. ಇನಸ್ಪೆಕ್ಟರರ ಕಡೆಯಿಂದ ವಿಜಾಪುರ ಜಿಲ್ಲೆಯೊಳಗಿನ ಯಾವತ್ತು ಲೋಕಲ ಬೋರ್ಡ ಮತ್ತು ಮ್ಯುನಿಸಿಪಾಲ ಶಾಲೆಗಳ ಬಾಬತು ಸನ್ನ ೧೮೯೫ನೇ ಇಸವಿ ಮಾರ್ಚಿ ತಿಂಗಳಬಗ್ಗೆ.	೧೯	೯	೪
ಸದರೀಯವರಕಡೆಯಿಂದ ಸನ್ನ ೧೮೯೫ನೇ ಇಸವಿ ಎಪ್ರಿಲ ತಿಂಗಳಬಗ್ಗೆ.	೧೯	೯	೪

ಕಾನಡಾ ಜಿಲ್ಲೆ.

ಕಾನಡಾ ಡಿ. ಎ ಇನಸ್ಪೆಕ್ಟರರ ಕಡೆಯಿಂದ ಕಾನಡಾ ಜಿಲ್ಲೆಯೊಳಗಿನ ಯಾವತ್ತು ಲೋಕಲ ಬೋ. ಸಾಲೆಗಳ ಬಾಬತು ಸನ್ನ ೧೮೯೫ನೇ ಇಸವಿಯ ಅಕ್ಟೋಬರದಿಂದ ಡಿಸೆಂಬರವರೆಗೆ ಮತ್ತು ಜನವರಿ ೧೮೯೬ ರಿಂದ ಮಾರ್ಚದವರೆಗೆ ೬ ತಿಂಗಳ ಬಾಬತು.	೬೪	೧೩	೩

ಕೆರುಕುಳ.

ಮಹಾಲಿಂಗಪುರ ಹೆಣ್ಣು ಮಕ್ಕಳ ಶಾಲೇ ಮಾಸ್ತರರಾದ ಅಣ್ಣಾಜಿ ಬಿಂದೋ ಇವರಿಂದ ಸನ್ನ ೧೮೯೫ನೇ ಜೂನ ತಿಂಗಳದಿಂದ ೧೮೯೬ನೇ ಇಸವಿ ಮೇ ತಿಂಗಳ ಅಖೇರ ವರೆಗೆ.	೦	೧೪	೦
ದೊಡ್ಡ ಬುಳ್ಳಾಪುರ ಶಾಲೇ ಮಾಸ್ತರರಾದ ಕೊಂಗಾಡಿಯಪ್ಪ ಇವರಿಂದ ಸನ್ನ ೧೮೯೫ನೇ ಇಸವಿ ಜಾನೆವಾರಿಯಿಂದ ಡಿಸಂಬರ ಅಂತ್ಯದ ವರೆಗೆ.	೦	೧೪	೦
ಕಾನಡಾ ಜಿಲ್ಲಾ ರಾ॥ ಸಾ॥ ಡಿ. ಎ. ಇನಸ್ಪೆಕ್ಟರರಿಂದ ೧೮೯೫ನೇ ಸಾಲಿನ ಬಗ್ಗೆ.	೦	೧೪	೦

---

* ಇದರೊಳಗೇನಾದರೂ ತಪ್ಪು ಇದ್ದರೆ ಅವನ್ನು ವಯನೂಡಿ ತಿಳುಹಬೇಕು

ಕನ್ನಡ ಶಾಲಾಪತ್ರಕದ ವರ್ಗಣಿ ವರ್ಷಕ್ಕೆ ಮುಂಗಡ ...೧೫ ಆಣೆ.
ಒಂದು ಸಂಚಿಕೆಗೆ ... ... ೨ ಆಣೆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ.	೪	ಪಂಕ್ತಿಗಳವರೆಗೆ	೧ ರೂ.
ಮೂರುಸಾರೆ ಇಟ್ಟರೆ	೧೨	,,	,,
ಆರುಸಾರೆ ಇಟ್ಟರೆ	೧೬	,,	,,

ಸೂಚನೆಗಳು.

೧. ಶಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨. ಶಿಲೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಹಾಸಲು ಬೀಳುವದು.

೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇಮ್ಮಡಿ ಕೀ ಬೀಳುವದು.

೪. ಪ್ರಕಟನೆಯ ಕೂಡ ಹಣ ಕಳುಹಲಿಕ್ಕೆ ಬೇಕು.

೫. ಟಿಕೀಟು ಇಟ್ಟ ಹೊರ್ತು ಉತ್ತರ ಶಿಗಲಾರದು.

RAOJI B. KARANDIKAR.
ವ್ಯವಸ್ಥಾಪಕ, ಕನ್ನಡ ಶಾಲಾಪತ್ರಕ.

ಕನ್ನಡ ಶಾಲಾಪತ್ರಿಕೆ.

KANARESE

SCHOOL PAPER.

ಪುಸ್ತಕ ೭೯.] ಜುಲೈ ೧೮೯೪. [ಸಂಚಿಕೆ ೭.

ಅನುಕ್ರಮಣಿಕೆ.

		ಪುಟ.
೧.	ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ...	೧೪೫
೨.	ಕಾಲೇಜದ ವಿದ್ಯಾರ್ಥಿಗಳಿಗೆ ರಾ. ರಾ. ಸವದಿಯವರು ಮಾಡಿದ ಉಪದೇಶ	೧೫೧
೩.	ಕನ್ನಡ ಗೆಜೆಟಿಯರಿನಿಂದ ಆವತರಣಿಗಳು ...	೧೫೮
೪.	ಕಲಿಸುವ ಪದ್ಧತಿಗಳು	೧೬೩
೫.	ನೋಟೀಸುಗಳು	೧೬೭

CONTENTS.

1.	Educational Intelligence and Useful Notes ...	145
2.	Address to College Students by Mr. Savadi...	151
3.	Selections from the Karnatik Gazetteer ...	158
4.	Methods of Teaching	163
5.	Departmental Notices	167

DHARWAR:
PRINTED AT THE KARNATIC BOOK DEPOT PRESS,
1894.

ನೋ ಟೀ ಸು .

ಟ್ರೇನಿಂಗ ಕಾಲೇಜದ ಕಳೆದ ಟರ್ಮಿನಲ್ ಪರೀಕ್ಷೆಯಲ್ಲಿ ನಾಪಾಸಾಗಿ ಹೋದ ಕೆಲವು ಪಗಾರಿ ವಿದ್ಯಾರ್ಥಿಗಳ ಏಪ್ರಿಲ್ ೧ನೇಯಿಂದ ೧೬ನೇ ತಾರೀಖಿನ ವರೆಗಿನ ಪಗಾರ ಟ್ರೇನಿಂಗ ಕಾಲೇಜದಿಂದ ಮುಟ್ಟಿಸಕ್ಕದ್ದಿದೆ; ಆದರೆ ಅವರು ತಮ್ಮ ನೇಮಣೂಕಿಯ ಸ್ಥಳಕ್ಕೆ ಹೋಗಿ ಹಾಜರಾದ ಹೂಡಲೆ ಈ ಪಗಾರವನ್ನು ಮನಿಆರ್ಡರಿನಿಂದ ಕಳಿಸಬೇಕೆಂದಾಗಲಿ ಬೇರೆ ರೀತಿಯಿಂದ ಅದರ ವ್ಯವಸ್ಥೆ ಮಾಡಬೇಕೆಂದಾಗಲಿ ಅಲ್ಲಿಯ ಹೆಡ್ಡ ಮಾಸ್ತರರ ಮುಖಾಂತರವಾಗಿ ನಮ್ಮ ಹಡೆಗೆ ರಿಪೋರ್ಟು ಮಾಡಬೇಕು. ಅಂದರೆ ಆಮೇಲೆಗೆ ಅವರ ಪಗಾರದ ವ್ಯವಸ್ಥೆ ಮಾಡಲಾಗುವದು. ಆರು ತಿಂಗಳಿನ ತರುವಾಯ ಪಗಾರ ದೊರೆಯಲಿಕ್ಕಿಲ್ಲ; ಅಂದರೆ ಸೆಪ್ಟಂಬರದ ತರುವಾಯ ಪಗಾರ ದೊರೆಯಲಿಕ್ಕಿಲ್ಲ.—ಡಿ. ಎ. ಅನಸ್ಪೆಕ್ಟರರಿಂದ ಜಾಗಾ ಶಿಗದವರು ಅದರಂತೆ ಬರೆದು ಪಗಾರದ ವ್ಯವಸ್ಥೆಯನ್ನು ತಿಳಿಸಬೇಕು.

Raoji B. Karandikar,
ಪ್ರಿನ್ಸಿಪಾಲ,
ಟೀಚಿಂಗ ಕಾಲೇಜ,
ಧಾರವಾಡ.

ಧಾರವಾಡ;
ತಾ|| ೧೬ನೇ ಜೂನ
ಸನ ೧೯೧೪.

ಶಾಲಾ ಪತ್ರಿಕೆ.

ಪದ್ಯಂ.

ಪ್ರಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಬಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆಕ್ಕೆಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೭ನೆ.] ಜುಲೈ ೧೮೯೯ನೆ. [ಸಂಚಿಕೆ ೭ನೆ.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಸನ ೧೮೯೯-೧೯೦೦ನೇ ಇಸವಿಯ ೨ನೇ ೩ನೇ ಗ್ರೇಡ ಮುಲ್ಕೀ ಸರ್ಟಿಫಿಕೇಟಿನ ಪರೀಕ್ಷೆಗಳು, ೧೮೮೮ನೇ ಇಸವಿಯ ಮುಂಬಯಿ ಗವರ್ನಮೆಂಟ ಗ್ಯಾಝೆಟಿನ ೧ನೇ ಭಾಗದ ೩೨೩ನೇ ಪುಟದಲ್ಲಿ ಪ್ರಸಿದ್ಧಿಸಲ್ಪಟ್ಟ ನಿಯಮಗಳ ಅ. ಬ. ಶಿಡ್ಯೂಲಗಳಿಗೆ ಸರಿಯಾಗಿ, ಸಪ್ಟಂಬರ ೨೪ನೇ ತಾರೀಖಿನ ದಿವಸ ದಕ್ಷಿಣ ಭಾಗದ ಎಲ್ಲ ಸೆಂಟರುಗಳಲ್ಲಿಯೂ ಪ್ರಾರಂಭವಾಗುವವು. ಉಮೇದವಾರರು ತಮ್ಮ ಅರ್ಜಿಗಳನ್ನು ಆಯಾ ಸೆಂಟರುಗಳ ಪರೀಕ್ಷಾ ಕಮಿಟಿಯ ಪ್ರೆಸಿಡೆಂಟರ ಕಡೆಗೆ ಆಗಸ್ಟ ೧ನೇ ತಾರೀಖಿನ ಒಳಗಾಗಿ ಕಳಿಸಿಕೊಡತಕ್ಕದ್ದೆಂದು ಅಧಿಕಾರಸ್ಥರು ವಿಧಿಸಿರುತ್ತಾರೆ.

ಹಿಂದುಸ್ಥಾನದಲ್ಲಿ ಶಿಕ್ಷಣದ ಪ್ರಸಾರವು ಎಷ್ಟು ಆಗಿದೆ ಎಂಬ ಸಂಗತಿಯು ಸನ ೧೮೯೯ನೇ ವರ್ಷ ಆದಂಥ ಜನ ಗಣಿತದೊಳಗಿನ ಅಂಕಿಗಳಿಂದ ಸ್ಪಷ್ಟವಾಗಿ ತಿಳಿಯುವದು.

೧೦೦ ಪುರುಷರಲ್ಲಿ ೨೯.೯ ಜನರು ಕಲಿತವರೂ, ೪.೦೬ ಜನರು ಓದು ಬರಿಯ ಬಲ್ಲವರೂ, ಉಳಿದವರು ಅಜ್ಞಾನಿಗಳೂ ಆಗಿದ್ದಾರೆ. ೧೦೦ ಸ್ತ್ರೀಯರಲ್ಲಿ ೦.೨೦ ಜನ ಕಲಿತವರೂ ೦.೩೪ ಜನ ಓದು ಬರಿಯ ಬಲ್ಲವರೂ ಮಿಕ್ಕವರು ಅಂದರೆ ೯೯.೪೫ ಜನರು ಪೂರ ಮೂಢರೂ ಇರುತ್ತಾರೆ. ಇದು ಅಡಿ ಹಿಂದುಸ್ತಾನದ ಸ್ಥಿತಿಯು. ೧೦೦ ಜನರಲ್ಲಿ ೪೬೦ ಜನರಿಗೆ ಮುಂಬಯಿ ಇಲಾಖೆಯಲ್ಲಿ, ೯೭೦ ಜನರಿಗೆ ಪೌಂಧ ಪ್ರಾಂತದಲ್ಲಿ, ೩೭೪ ಜನರಿಗೆ ಬ್ರಹ್ಮದೇಶದಲ್ಲಿ ಶಿಕ್ಷಣದ ಗಾಳಿಯು ಸಹ ಇನ್ನೂ ತಾಗಿಲ್ಲ. ಪಾರ್ಸೀ ಜನರಲ್ಲಿ ೧೦೦ಕ್ಕೆ ೪೯.೯ ಜನ ಸ್ತ್ರೀಯರಿಗೆ, ಬ್ರಾಹ್ಮಣರಲ್ಲಿ ೧೦೦ಕ್ಕೆ ೯೯.೬ ಜನ ಸ್ತ್ರೀಯರಿಗೆ, ಓದಲಿಕ್ಕೂ ಬರಿಯಲಿಕ್ಕೂ ಬರುವದಿಲ್ಲ. ಬ್ರಾಹ್ಮಣರಲ್ಲಿ ೧೦೦ಕ್ಕೆ ೪೯.೪ ಜನರು ಅಕ್ಷರ ಶತ್ರುಗಳಾಗಿದ್ದಾರೆ. ಶಿಕ್ಷಣದ ಪ್ರಸಾರವು ಬ್ರಾಹ್ಮಣರಲ್ಲಿ ವಿಶೇಷವಾಗಿರುತ್ತದೆಂದು ಎಲ್ಲರ ಗ್ರಹಿಕೆ ಇರುತ್ತದೆ. ಆದರೆ ಖಾನೇ ಸುಮಾರಿಯಿಂದ ತಿಳಿದು ಬರುವ ಈ ಸಂಗತಿಯನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ.

ಈಗ ಶಾಲೆಗಳಲ್ಲಿ ನಡೆಯುತ್ತಿರುವ ಧರ್ಮಶಿಕ್ಷಣದಿಂದಲೂ ನೀತಿಶಿಕ್ಷಣದಿಂದಲೂ ವಿದ್ಯಾರ್ಥಿಗಳಲ್ಲಿ ತಕ್ಕಷ್ಟು ನೀತಿ ಹುಟ್ಟುವದಿಲ್ಲ; ಈ ಶಿಕ್ಷಣಗಳಿಂದ ಬುದ್ಧಿವಿಕಾಸಕ್ಕೆ ಮಾತ್ರ ಜೆಕ್ಕು ಸಹಾಯವಾಗುತ್ತದೆ; ಎಂದು ಪ್ರೊಫೇಸರ ಜೇ. ಎಚ್. ಹಿಸ್ಲಾಪ್ ಎಂಬವರ ಅಭಿಪ್ರಾಯವುಂಟು. ಅವರು ಹೇಳುವದೇನೆಂದರೆ :—

ನೀತಿಶಿಕ್ಷಣವು ಇಚ್ಛಾಪ್ರವರ್ತಕಶಕ್ತಿಯುಳ್ಳದ್ದಾಗಿರಬೇಕು. ಕೇವಲ ಪಾಂಡಿತ್ಯವಾಗಲಿ ತರ್ಕಶಾಸ್ತ್ರಪಟುತ್ವವಾಗಲಿ ಇವರ ಲಕ್ಷಣವಲ್ಲ ಉಪದೇಶವು ಯಾವ ಬಗೆಯ

ಬೇ ಇರಲ್ಲಿ, ಬರಿ ಅವರಿಂದ ಇದು ಪೂರ್ಣತ್ವವನ್ನೈದಲಾರದು. ಉಪದೇಶದಿಂದ ಸ್ಮರಣಶಕ್ತಿಯೂ ವಿಚಾರಶಕ್ತಿಯೂ ಬೆಳೆಯುವವಷ್ಟೇ ಹೊರತು ಸದಸದ್ವಿವೇಕಶಕ್ತಿಯು ಎಂದೂ ಬೆಳೆಯದು.

ನೀತಿಶಿಕ್ಷಣದ ಮುಖ್ಯವಾದ ಉಪಾಯಗಳನ್ನು ಮೂರು ಶಬ್ದಗಳಲ್ಲಿ ಸಂಗ್ರಹಿಸಬಹುದು. ಅವು ಯಾವವೆಂದರೆ:— ೧ ಉದಾಹರಣೆ. ೨ ಭೂತದಯೆ. ೩ ನಿಯಮ ನಿಷ್ಠೆ. ಈ ಮೂರು ಕ್ರಮವಾಗಿ ಮಾಸ್ತರನ ಸ್ವಂತ ಗುಣಸ್ವಭಾವಾದಿಗಳನ್ನೂ, ವಿದ್ಯಾರ್ಥಿಗಳ ಮೇಲಿರುವ ಅವನ ಪ್ರೀತಿಯನ್ನೂ, ಸುವ್ಯವಸ್ಥೆ, ಅಚ್ಚುಕಟ್ಟುತನ, ಸ್ವಚ್ಛತೆ ಮುಂತಾದ ತಿಳುವಳಿಕೆಯ ತಿದ್ದುಪಡಿಯನ್ನು ನೆಲೆಗೊಳಿಸುವ ಅವನ ನಿಯಮ ನಿಷ್ಠೆಯನ್ನೂ ಸೂಚಿಸುತ್ತವೆ. ಈ ಉಪಾಯವಿಶಿಷ್ಟಶಿಕ್ಷಣದಿಂದ ವಿದ್ಯಾರ್ಥಿಗಳಲ್ಲಿ ನೀತಿಯು ನೆಲೆಗೊಳ್ಳುವದು. ನೀತಿಯು ಕೇವಲ ಜ್ಞಾನಾಭಿವೃದ್ಧಿಯ ಅಥವಾ ಶಾಸ್ತ್ರಾಭ್ಯಾಸದ ಫಲವಲ್ಲ; ವಿಶೇಷವಾಗಿ ಸಮಾಜ ಸ್ಥಿತಿಯನ್ನು ಅವಲಂಬಿಸಿರುವದು. ಪ್ರತ್ಯಕ್ಷ ಉದಾಹರಣೆಯೂ ಸಯಾರ್ದ್ರ ಬುದ್ಧಿಯೂ ನೀತಿಯ ಮೂಲಾಧಾರಗಳಾಗಿರುತ್ತವೆ ಇದನ್ನು ತಿಳುಕೊಂಡು, ಅದಕ್ಕೆ ಸರಿಯಾಗಿ ಶಿಕ್ಷಣ ಸಲಿಸಿದರೆ ನೀತಿಯು ವಿದ್ಯಾರ್ಥಿಗಳಲ್ಲಿ ತನ್ನಿಷ್ಟಕ್ಕೆ ತಾನೇ ತಲೆದೋರುವದು. ಸಾರಾಂಶ ಶಾಲೆಗಳೂ ಪಾಠಶಾಲೆಗಳೂ ಜ್ಞಾನದ ಕ್ರಯವಿಕ್ರಯದ ಅಂಗಡಿಗಳಲ್ಲ. ಸುಗಂಧದಿಂದಲೂ ನೆರಳಿನಿಂದಲೂ ಜನರಿಗೆ ಸೌಖ್ಯವಿತ್ತು ಬಾಳುವ ವೃಕ್ಷಗಳು ಬಾಳುವ ಗೃಹಗಳಾಗಿರುತ್ತವೆಂಬುದನ್ನು ಲಕ್ಷದಲ್ಲಿಟ್ಟು ಮೇಲೆ ಹೇಳಿದಂತೆ ಶಿಕ್ಷಣವನ್ನು ಸಲಿಸಿದರೆ ನೀತಿಶಿಕ್ಷಣವು ಸಫಲವಾಗುವದೆಂಬುದಕ್ಕೆ ಸಂದೇಹವಿಲ್ಲ.

ಅನ್ನದಿಂದಾಗತಕ್ಕ ಕೆಲಸಗಳು—(೧) ಶರೀರವು ಆರೋಗ್ಯದಿಂದಿರಬೇಕಾದರೆ, ಅದರಲ್ಲಿ ತಕ್ಕಷ್ಟು ಅಂತಸ್ಥ ಉಷ್ಣತೆಯು ಇರಲಿಕ್ಕೆ ಬೇಕು. ಈ ಉಷ್ಣತೆಯು ಹೊರಟು ಹೋಗಿಬಿಟ್ಟರೆ ಮರಣವು ಬರುತ್ತದೆ. ಆ ಮೇಲೆ ಶರೀರವನ್ನು ಎಷ್ಟು ಕಾಸಿದರೂ, ಬೆಚ್ಚಗಿನ ವಸ್ತ್ರಗಳನ್ನು ಎಷ್ಟು ಹೊಚ್ಚಿದರೂ ಪ್ರಾಣವು ತಿರುಗಿ ಬರುವದಿಲ್ಲ. ಲಾಪಲಾಂಡ ದೇಶದಲ್ಲಿ ಅತಿಶಯ ಚಳಿಯೂ, ಮಧ್ಯಆಫ್ರಿಕದಲ್ಲಿ ಮಿತಿಮೀರಿದ ಉಷ್ಣತೆಯೂ ಇರುವದರಿಂದ ಇವೆರಡು ದೇಶಗಳಲ್ಲಿ ಶರೀರದ ಉಷ್ಣತೆಯನ್ನು ಸರಿಯಾಗಿ ಇಡಲಿಕ್ಕೆಬೇಕು. ಈ ಉಷ್ಣವು ಹೆಚ್ಚಾದರೆ ಜ್ವರ ಪುಟ್ಟುವದು. ಕಡಿಮೆಯಾದರೆ ರಕ್ತವು ಮಂದವಾಗಿ ಜಾಡ್ಯ ಬರುವದು.

ಚಳಿ ನಾಡುಗಳಲ್ಲಿ ಅಂತಸ್ಥ ಉಷ್ಣತೆಯನ್ನು ಕಾಯ್ದುಕೊಳ್ಳುವದಕ್ಕೆ ಮತ್ತು ಉಷ್ಣದೇಶಗಳಲ್ಲಿ ಹೊರಗಿನ ಉಷ್ಣತೆಯನ್ನು ಕಡಿಮೆ ಮಾಡುವದಕ್ಕೆ ಯಾವದಾದರೊಂದು ಸಾಧನವು ಇರಲಿಕ್ಕೆ ಬೇಕು. ಇವೆರಡೂ ಕೆಲಸಗಳನ್ನು ನಾವು ತಿನ್ನುವಂಥ ಅನ್ನವು ಮಾಡುತ್ತದೆ. ಅಂತಸ್ಥ ಉಷ್ಣತೆಯನ್ನು ಹುಟ್ಟಿಸಲಿಕ್ಕೆ ಬೇಕಾಗುವ ಉರವಲವನ್ನೂ, ಹೊರಗಿನ ಹೆಚ್ಚಿನ ಉಷ್ಣತೆಯನ್ನು ಕಡಿಮೆ ಮಾಡಲಿಕ್ಕೆ ಬೇಕಾಗುವ ಹೆಸಿಯನ್ನೂ ಅದು ಪೂರೈಸುತ್ತದೆ. ಶರೀರದಿಂದ ಹೊರಡುವ ಬೆವರು ಉಗಿಯಾಗಿ ಹೋದ ಕೂಡಲೆ ಶರೀರವು ತಂಪಾಗಿ ಅಂತಸ್ಥ ಉಷ್ಣತೆಯ ಪ್ರಮಾಣವು ಸರಿಯಾಗಿ ಉಳಿಯುತ್ತದೆ.

೨. ಶರೀರಕ್ಕೆ ದಾಗದೂಜಿಯು ಅಗತ್ಯವಾದರೂ ಇರುತ್ತದೆ. ಪ್ರಾಣಿಗಳ ದೇಹವು ಯಾವಾಗಲೂ ಸವೆಯುತ್ತಿರುತ್ತದೆ. ಆದರೆ ಅದು ಮುಪ್ಪಿನ ಹೊರತು ಉಳಿದ ಕಾಲ

ದಲ್ಲಿ ಯಾವದೊಂದು ವಿಶೇಷ ಕಾರಣದ ಹೊರತು ಬಹಳ ಸವಿಯುವದಿಲ್ಲ. ಅದರ ಯಾವದೊಂದು ಅವಯವವು ಮುರಿದರೆ ಇಲ್ಲವೆ ಅದನ್ನು ಕಡಿದರೆ, ಆ ಗಾಯವು ಮಾಯುತ್ತದೆ. ಈ ಸವೆಕಳಿಯನ್ನು ಪೂರ್ಣ ಮಾಡುವಂಥಾದೂ ಆ ಗಾಯವನ್ನು ಮಾಯಿಸುವಂಥಾದೂ ಅನ್ನವೇ ಇರುತ್ತದೆ. ಶರೀರದ ಪ್ರತಿಯೊಂದು ಭಾಗಕ್ಕೆ ಅವಶ್ಯವಾದ ಮಾಂಸವನ್ನೂ ಬಲವನ್ನೂ ಅನ್ನವೇ ಕೊಡುತ್ತದೆ. ಅನ್ನದಲ್ಲಿ ಮುಖ್ಯವಾಗಿ ಮೂರು ಪ್ರಕಾರಗಳಿರುತ್ತವೆ. ಅವು ಮೂರೂ ತಮ್ಮ ತಮ್ಮ ಕೆಲಸಗಳನ್ನು ಮಾಡುವದಲ್ಲದೆ ಶಕ್ತಿಯನ್ನು ಸಹ ಹುಟ್ಟಿಸುತ್ತವೆ. ಅವು ಯಾವವೆಂದರೆ :—

೧. ಉಷ್ಣತೆಯನ್ನು ಹುಟ್ಟಿಸುವ ಅನ್ನವು-ಜಿಗಟು, ನಿಣ, ಸಕ್ಕರಿ ಇರುವ ಪದಾರ್ಥಗಳು.

೨. ಮಾಂಸೋತ್ಪಾದಕ ಅನ್ನವು—ಹಾಲು, ಗೋದಿಗಳಲ್ಲಿರುವ ದ್ರವ್ಯಗಳುಳ್ಳ ಪದಾರ್ಥಗಳು. ಅವು ಮಾಂಸವನ್ನು ಹುಟ್ಟಿಸುವದಲ್ಲದೆ ಬಲವನ್ನಾದರೂ ಹೆಚ್ಚಿಸುತ್ತವೆ.

೩. ಎಲುವುಗಳನ್ನು ಹುಟ್ಟಿಸುವ ಅನ್ನವು—ಉಪ್ಪು, ಕಾಯಿಪಲ್ಲೆಗಳು, ತಾಜಾಹಣ್ಣುಗಳು.

ಶರೀರಕ್ಕೆ ಮಾಂಸೋತ್ಪಾದಕ ಅನ್ನ ೧ ಪಾಲು, ಉಷ್ಣೋತ್ಪಾದಕ ಅನ್ನ ೨ ಪಾಲು, ಎಲುವುಗಳನ್ನು ಹುಟ್ಟಿಸುವ ಅನ್ನ ೩ ಪಾಲು ಬೇಕು. ಈ ಪ್ರಮಾಣದಲ್ಲಿ ಹೆಚ್ಚು ಕಡಿಮೆಯಾದರೆ, ಶರೀರಕ್ಕೆ ಅಪಾಯ ಸಂಭವಿಸುವದು.

ಇಜಿಪ್ತ, ಚೀನ, ಜಪಾನ ಈ ಮೂರು ದೇಶದವರು ಮಾತ್ರ ಪ್ರಾಚೀನ ಕಾಲದಲ್ಲಿಯೇ ಕಾಗದ ಮಾಡುವ ಕಲೆಯನ್ನು ಅರಿತಿದ್ದರೆಂದು ತಿಳಿಯುತ್ತದೆ. ೮ನೆ ಶತಮಾನದವರೆಗೆ ಯುರೋಪಖಂಡದವರು ಇಜಿಪ್ತನ ಕಾಗದಗಳನ್ನೇ

ಉಪಯೋಗಿಸುತ್ತಿದ್ದರು. ಅವುಗಳನ್ನು ಇಜಿಪ್ತದವರು ಗಿಡದ ತೊಗಟೆಯಿಂದ ಮಾಡುತ್ತಿದ್ದರು. ಅರಳಿ ಮುಂತಾದ ಪದಾರ್ಥಗಳಿಂದ ಕಾಗದ ಮಾಡುವ ಯುಕ್ತಿಯನ್ನು ಇತ್ತೀಚ್ಗೆ ಲಾಗಿ ಚೀನದ ಜನರು ತೆಗೆದರು. ಅದನ್ನು ಅರಬರು ಕಲಿತುಕೊಂಡು ಯುರೋಪಖಂಡಕ್ಕೆ ಬಯ್ದರು. ಚೀನದ ಜನರು ಈ ಯುಕ್ತಿಯನ್ನು ಸರ್ ೦೦ ನೇ ವರ್ಷದ ಸುಮಾರಿನಲ್ಲಿ ತೆಗೆದರೆಂದು ಅವರ ಗ್ರಂಥಗಳಿಂದ ತಿಳಿಯುತ್ತದೆ. ಸ್ಪೇನ ದೇಶದವರು ೧೦ನೇ ಶತಮಾನದಲ್ಲಿ ಕಾಗದ ಮಾಡುವ ಕಾರಖಾನೆಯನ್ನು ತಮ್ಮ ದೇಶದಲ್ಲಿ ಸ್ಥಾಪಿಸಿದರು.

ಆಕಾಶದಲ್ಲಿ ನಮಗೆ ಕಾಣಿಸುವಂಥ ಅಸಂಖ್ಯ ನಕ್ಷತ್ರಗಳಲ್ಲಿ 'ಸಿರಿಅಸ' (ವ್ಯಾಧ) ಎಂಬ ನಕ್ಷತ್ರವು ಅತಿಶಯ ತೇಜಃಪುಂಜವಿರುತ್ತದೆ. ಅದಕ್ಕೂ ಸೂರ್ಯನಿಗೂ ಹಚ್ಚಿ ನೋಡಿದರೆ, ಸೂರ್ಯನು ಅದರ ಮುಂದೆ ತೀರ ಸಣ್ಣವನೆಂದು ತೋರುವನು. ಅದು ಸೂರ್ಯನಿಗಿಂತ ಎಷ್ಟೊಂದು ದೊಡ್ಡದಿರುತ್ತದೆಂದು ವಿದ್ವಾಂಸರ ತರ್ಕವಿರುತ್ತದೆ. ಪೃಥ್ವಿಯಿಂದ ಸೂರ್ಯನು ಇರುವಷ್ಟು ಅಂತರದ ಮೇಲೆ ಆ ನಕ್ಷತ್ರವಿದ್ದರೆ, ಅದರ ಪ್ರಕಾಶವು ನಮಗೆ ತೀರ ದುಸಹವಾಗುತ್ತಿತ್ತು. ಒಂದು ವೇಳೆ ಸೂರ್ಯನೇ ಅದರಷ್ಟು ದೂರವಿದ್ದರೆ ಅವನ ಪ್ರಕಾಶವು ಭೂಮಿಯ ಮೇಲೆ ಬೀಳುತ್ತಿತ್ತೋ ಇಲ್ಲವೋ ಸಂಶಯವದೆ. ಅದು ಈಗ ಪೃಥ್ವಿಯಿಂದ ೧೦ ಖರ್ವ ಮೈಲಿನ ಮೇಲಿದೆ. ಕೆಲವರು ಅದು ಸೂರ್ಯನಿಗಿಂತ ೪೮ ಪಾಲು ಮಾತ್ರ ಹೆಚ್ಚು ಪ್ರಕಾಶವುಳ್ಳದ್ದಾಗಿರುತ್ತದೆಂತಲೂ ಇನ್ನು ಕೆಲವರು ನೂರಾರು ಸೂರ್ಯರನ್ನು ಕೂಡಿಸಿದರೂ ಅದರ ಪ್ರಕಾಶಕ್ಕೆ ಹತ್ತಲಿಕ್ಕಿಲ್ಲೆಂತಲೂ ಹೇಳುತ್ತಾರೆ.

ADDRESS TO COLLEGE STUDENTS BY Mr. SAVADI.

ಕಾಲೇಜಿನ ವಿದ್ಯಾರ್ಥಿಗಳಿಗೆ ರಾ. ರಾ. ಸವದಿ ಯವರು ಮಾಡಿದ ಉಪದೇಶವು.

(೧೪೦ನೇ ಪುಟದಿಂದ ಮುಂದೆ ಸಾಗಿದ್ದು.)

ಗುರುವು ಶಾಲಾಧಿಕಾರಿಗಳ ಕೂಡ ಹ್ಯಾಗೆ ನಡೆದುಕೊಳ್ಳಬೇಕೆಂಬ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವದು ಉಚಿತವು. आज्ञा भंगो नरेंद्राणां विप्राणां मान खंडनं प्रथक् शय्याच नारीणां अशस्त्र वध मुच्यते. ನರ ಶ್ರೇಷ್ಠರ (ಅರಸರ) ಆಜ್ಞಾಭಂಗ ಮಾಡುವದೂ, ಬ್ರಾಹ್ಮಣರ (ಬ್ರಹ್ಮನನ್ನು ತಿಳಿದವರ) ಮಾನ ಖಂಡನೆಯನ್ನು ಮಾಡುವದೂ ಪತ್ನಿಗೆ ಬೇರೆ ಹಾಸಿಕೆಯನ್ನು ಮಾಡಿಕೊಡುವದೂ ಶಸ್ತ್ರವಿಲ್ಲದೆ ಅವರ ವಧೆಗೈದಂತಾಗುವದು ಎಂದು ಈ ಶ್ಲೋಕದ ಅರ್ಥವು. ಎಲ್ಲ ಅಧಿಕಾರಿಗಳಲ್ಲಿ ರಾಜನ ಅಂಶವು ಇದ್ದೇ ಇರುತ್ತದೆ. ಆದದ್ದರಿಂದ ಮೇಲಧಿಕಾರಿಗಳ ಅಪ್ಪಣೆಗಳನ್ನು ಮನ್ನಿಸದೆ ಇರುವದು ಬಂದು ದೊಡ್ಡ ತಪ್ಪಾಗಿದೆ. ಅವರ ಕೂಡ ವಿನಯದಿಂದ ಮಾತಾಡಬೇಕು. ಅವರ ಬಳಿಗೆ ಕಳುಹಲ್ಪಡುವ ರಿಪೋರ್ಟಗಳು ಎಚ್ಚರಿಕೆಯಿಂದ ಸುವಾಚ್ಯವಾಗಿ ಬರೆಯಲ್ಪಟ್ಟವುಗಳಾಗಿರಬೇಕಲ್ಲದೆ ಭಾಷಾಸರಣಿಯುಳ್ಳವರೂ ವಿನಯವುಳ್ಳದ್ದಾಗಿರಬೇಕು. ಮೇಲಧಿಕಾರಿಗಳಿಗೆ ಅಂತಸ್ಥಿತಿಯು ತಿಳಿಯದೆ ಹೋದ ಕಾರಣ ಅವರು ಬಂದುವೇಳೆ ಏನಾದರು ಹುಕುಮು ಕಳಿಸಿರಲು ಅದರ ವಿರುದ್ಧವಾಗಿ ಬರೆಯುವ ಪ್ರಸಂಗವು ಗುರುವಿಗೆ ಬಂದರೆ, ಅವನು ಆರಂಭದಲ್ಲಿ ಕ್ಷಮೆಯನ್ನು ಬೇಡಿಕೊಂಡು "ಇಂಥ

ತೂತು ಹೀಗದೆ, ತಮ್ಮ ಪುಕುಮಿನೆಲ್ಲಂತು ಈ ಪ್ರಕಾರ
ಪ್ಪನೆಯಾಗಿದೆ, ಇದ್ದ ಸಂಗತಿಯನ್ನು ಸನ್ನಿಧಾನಕ್ಕೆ ಅರಿ
ಕೆ ಮಾಡಿಕೊಂಡಿದ್ದೀನೆ. ದಿವ್ಯ ಚಿತ್ತಕ್ಕೆ ಬಂದಂತೆ ಅಪ್ಪಣೆ
ಯಾದೀತೆಂದು ವಿನಯ ಪೂರ್ವಕವಾಗಿ ಅಪೇಕ್ಷಿಸುತ್ತೀನೆ"
ಎಂದು ರಿಪೋರ್ಟು ಮಾಡಿದರೆ ವರಿಷ್ಠರಿಗೆ ಸಿಟ್ಟು ಬರುವ
ಂತು ಬತ್ತಿಟ್ಟಗಿರಲಿ, ಸತ್ಯಮಾತಿನ ಹಾದಿಯನ್ನು ವಿನಯ
ದಿಂದ ತೋರಿಸಿದ್ದಕ್ಕಾಗಿ ಆ ರಿಪೋರ್ಟು ಮಾಡಿದ ಗುರುವಿ
ನ ವಿಷಯವಾಗಿ ಒಳ್ಳೆ ಅಭಿಪ್ರಾಯವು ಅವರಲ್ಲಿ ಪುಟ್ಟಿ,
ಗುರುವಿನ ರಿಪೋರ್ಟಿನಲ್ಲಿ ಬರೆದ ಸಂಗತಿಗಳ ವಿಷಯಕ್ಕೆ
ವಿಚಾರಣೆ ಮಾಡಿ, ತಾವು ಕೊಟ್ಟ ಮೊದಲಿನ ಹುಕುಮಿನ
ಬದಲಾಗಿ ತಿದ್ದಲ್ಪಟ್ಟ ಎರಡನೇ ಹುಕುಮನ್ನು ಕೊಡುವ
ರು. ಹೀಗೆ ಮಾಡದೆ ದುಷ್ಪಬ್ದಪ್ರಚುರವಾದ ಮತ್ತು ಕಠಿ
ಣೋಕ್ತಿಗಳುಳ್ಳ ಗುರುವಿನ ರಿಪೋರ್ಟಿನಿಂದ ಸತ್ಯ ಮಾತಿ
ಗೂ ಹಾನಿ ಬರುವದು. " ಮಾನದಿಂದ ಮಾನ, ಪ್ರೀತಿಯಿಂದ
ಪ್ರೀತಿ" ಎಂಬವಕ್ಕೆ ಸರಿಯಾಗಿ ವರಿಷ್ಠರಿಗೆ ಸನ್ಮಾನ ತೋರಿ
ಸುವ ಗುರುವಿಗೆ ಮಾನವು ದೊರೆಯದೆ ಎಂದೂ ಇರದು.
ತ್ರಿಕರಣ ಪೂರ್ವಕನಾಗಿ ತನ್ನ ಕೆಲಸವನ್ನು ಮಾಡಿ, ಸೂಲೆ
ಯ ವಿದ್ಯಾರ್ಥಿಗಳನ್ನು ಬುದ್ಧಿವಂತರಾಗಿ ಮಾಡುವದರಿಂದ
ವರಿಷ್ಠ ಅಧಿಕಾರಿಗಳು ಮೆಚ್ಚುವಷ್ಟು ಮತ್ತ್ಯಾತರಿಂದಲೂ
ಮೆಚ್ಚುವದಿಲ್ಲ. ಕೆಲವು ಗುರುಗಳು ಮೇಲಧಿಕಾರಿಗಳು ಪ
ರೀಕ್ಷೆಗೆ ಬಂದ ಕಾಲಕ್ಕೆ ಮಾತ್ರ ಸೂಲೆಯ ಸುತ್ತುಮುತ್ತಲಿ
ನ ಸ್ಥಳವನ್ನು ಸ್ವಚ್ಛಮಾಡಿಸಿ, ಬುರ್ಚಿ, ಮೇಜು, ಕರಿಪ
ಲಿಗೆ ಮುಂತಾದವುಗಳನ್ನು ನೀರು ಎಣ್ಣೆಗಳಿಂದ ಬರಿಸಿ, ನ
ಕಾಶಗಳನ್ನು ಝಾಡಿಸಿ, ತಾವೂ ತಮ್ಮ ವಿದ್ಯಾರ್ಥಿಯರೂ
ಸ್ವಚ್ಛ ಉಡತೊಡಿಗೆಗಳನ್ನು ಹಾಕಿಕೊಳ್ಳುತ್ತಾರೆ. ಇದು

ತೀರ ಮೋಸದ ಕೆಲಸವು. ಸುಜ್ಞಾ ಮೇಲಧಿಕಾರಿಯು ಈ ವ್ಯವಸ್ಥೆಯು ನಿಜವಾದ ಬೆಲೆಯನ್ನು ಅರಿಯದೆ ಎಂದೂ ಇರನು. ಪ್ರತಿದಿನ ನಡೆಯುವ ಕೆಲಸಕ್ಕೂ ಮೋರೆ ಪೂರ್ತಿ ಮಾಡಿದ ಕೆಲಸಕ್ಕೂ ಅಜಗಜ ಸಾಮ್ಯವಿರುತ್ತದೆ. ಸಾಲೆಯ ಹಾಗು ಗುರುವಿನ ಸತ್ಯ ಸ್ಥಿತಿಯನ್ನು ತಿಳುಕೊಳ್ಳಲಿಕ್ಕೆ ಮೇಲಧಿಕಾರಿಗೆ ಅನೇಕ ಸಾಧನಗಳಿರುತ್ತವೆ. ಕುಚೋದ್ಯಗಾರರ ತಳ್ಳೀ ಅರ್ಜಿ ಎಂಬ ತಂತೀ ಟಪಾಲವಂತು ಯಾವಾಗಲು ನಡದೇ ಇರುತ್ತದೆ. ಅಂದಮೇಲೆ ಮಾಸ್ತರನು ಬಳಗೊಂದು ಹೊರಗೊಂದು ತೋರಿಸಿದರೆ ಅವನು ಪಾರಾಗುವ ಬಗೆ ಹ್ಯಾಗೆ? ಲವದ್ದರಿಂದ ತಿದ್ದುವಿಕೆಯೂ ವ್ಯವಸ್ಥೆಯೂ ಕಾರ್ಯಗಳ ಸಹಾಯ್ಯಕಾರಿಗಳೆಂದು ತಿಳಿದು ಅವುಗಳನ್ನು ಹಿಂಬಾಲಿಸಿದರೆ, ಶಿಕ್ಷಣವ ಕೆಲಸವು ತೀವ್ರವಾಗಿಯೂ ಜೊಕ್ಕಾಗಿಯೂ ಸಾಗುವದು. "ಜೋ ಆಪನಾ ಕಾಮ ಅಚ್ಛಾ ಕರತಾಹೈ ಓ ಖುದಾಕೋ ಭೀ ನ ಡರತಾಹೈ" "ತನ್ನ ಕೆಲಸವನ್ನು ಮನವುಟ್ಟಿ ಚನ್ನಾಗಿ ಮಾಡುವವನು ದೇವರಿಗೂ ಅಂಜುವದಿಲ್ಲ" ಎಂದು ಈ ಉಡದೂ ಭಾಷೆಯು ವಾಕ್ಯವು ಹೇಳುತ್ತದೆ. ಇಂಗ್ಲಂಡದಲ್ಲಿ ಬಬ್ಬ ಸ್ಕೂಲ ಇನಸ್ಪೆಕ್ಟರನು ಬಂದು ಸಾಲೆಯನ್ನು ನೋಡಲಿಕ್ಕೆ ಹೋದಾಗ, ಸಾಲೆಯಲ್ಲೆಲ್ಲ ಕಾಗದಗಳ ತುಂಡುಗಳು ಬಿದ್ದಿರುವದನ್ನು ನೋಡಿ, ಈ ಸಾಲೆಯ ಸ್ಥಿತಿಯು ಬಳಿತಾಗಿಲ್ಲವೆಂದು ತನ್ನ ಮಿತ್ರನಿಗೆ ಹೇಳಿದನು. ಆಗ ಅಮಿತ್ರನು ಅದು ಹ್ಯಾಗೆ ಎಂದು ಕೇಳಲು, " ಈ ಸಾಲೆಯ ಗುರುವು ಸಣ್ಣ ಸಣ್ಣ ಮಾತಿನೆಡೆ ಲಕ್ಷಕೊಡುವದಿಲ್ಲನಾದದ್ದರಿಂದ ಉಳಿದ ಹೆಚ್ಚಿನ ವಿಷಯುಗಳ ಹಾಡು ಹಾಗೇ ಇರುವದು" ಎಂದು ನುಡಿದನಂತೆ. ಈ ಮಾತಿಗೆ ಅಪವಾದಗಳಿರಬಹುದು; ಅವರೆ ಎಚ್ಚರಿಕೆಗೇಡಿತ

ನವೂ ಆಲಸ್ಯವೂ ಮಾತ್ರ ಧಾರಾಳವಾಗಿ ರಾಜ್ಯ ಮಾಡುವಲ್ಲಿ ಬಳ್ಳಿ ಕೆಲಸವನ್ನು ಅಪೇಕ್ಷಿಸುವದು ಲವಣೋದಧಿಯು ಬಳಿಯಲ್ಲಿ ಹೋಗಿ, ಹಾಲು ಬಯಸಿದವನೋಪಾದಿಯಲ್ಲಿ ಆಗುವದು.

ಸ್ತ್ರೀ ಶಿಕ್ಷಣದ ವಿಷಯವಾಗಿ ಗುರುವು ಮಾಡತಕ್ಕ ಕೆಲಸಗಳು—ಬಂದು ಗಾಲಿಯಿಂದ ಬಂಡಿಯು ಹ್ಯಾಗೆ ನಡೆಯುವದೋ, ಬಂದೇ ರೆಕ್ಕೆಯಿಂದ ಪಕ್ಷಿಯು ಹ್ಯಾಗೆ ಹಾರಲಾರದೋ, ಬಂದೇ ಕೈಯಿಂದ ಕೆಲಸಗಳು ಹ್ಯಾಗೆ ಆಗಲಾರವೋ ಅದರಂತೆಯೇ ಒಬ್ಬ ಪುರುಷನಿಂದ ಸಂಸಾರ ಯಾತ್ರೆಯು ಸಾಗಲಾರದು. ಕಾರಣ ಸಂಸಾರ ರಥಕ್ಕೆ ಸ್ತ್ರೀಪುರುಷರ ಜತ್ತಾದ ಜೋಡಿಯಾಗಿರಲಿಕ್ಕೆ ಬೇಕು. ಗಂಡನೂ ವಿದ್ಯಾಗಲಿತವನು ಹೆಂಡತಿಯೂ ವಿದ್ಯಾಗಲಿಯದವಳು ಇದ್ದರೆ, 'ಎತ್ತು ಎರಿಗೆಳದರೆ ಕೋಣ ಕೆರಿಗೆಳಿಯಿತು' ಎಂಬಂತೆ ಆಗುವದು. ಪ್ರತಿಯೊಬ್ಬನ ಹೆಂಡತಿ ಅಂದರೆ ಅವನ ಶ್ರೇಷ್ಠ ಮಿತ್ರಳು. ಯಾಕೆಂದರೆ ಗಂಡನಿಗೆ ಯತ್ಕಿಂಚಿತ ಸುಖವಾಗಲಿ, ದುಃಖವಾಗಲಿ ಎಲ್ಲರಿಗಿಂತ ಮೊದಲು ಅವಳಿಗೆ ಅನಂದ ವ್ಯಸನಗಳುಂಟಾಗುವವು. ನಮ್ಮ ಮಿತ್ರನು ಬುದ್ಧಿ ಹೀನನೂ, ಅಕ್ಷರಶತ್ರುವೂ ಆಗಿದ್ದರೆ ನಮಗೆ ಹ್ಯಾಗೆ ಲಜ್ಜೆ ಉಂಟಾಗುವದೋ ಹಾಗೆಯೇ ಪ್ರತಿಯೊಬ್ಬನ ಹೆಂಡತಿಯು ಮೂಢಳಿದ್ದರೆ ಅವಳ ಗಂಡನಿಗೆ ಲಜ್ಜೆ ಉಂಟಾಗಬೇಕು. ಆದರೆ ವಸ್ತುಸ್ಥಿತಿಯು ವಿಪರೀತವಾಗಿ ಕಂಡುಬರುವದು. ಸರ್ವ ಸ್ವತಂತ್ರನಾದ ಅರಸು ತನ್ನ ಅಧಿಕಾರವು ಆನಿಯಮಿತವಾಗಿ ನಡೆಯಬೇಕೆಂದು ಪ್ರಜೆಗಳನ್ನು ಯಾವಾಗಲೂ ಅಜ್ಞಾನ ಸ್ಥಿತಿಯಲ್ಲಿಡುವಂತೆ ಹಿಂದು ಪುರುಷರು ಹೆಂಡಂದಿರನ್ನು ವಿದ್ಯಾಜ್ಞಾನವಿಹೀನರಾಗಿ ಮಾಡಿ, ಅವರ ಮೇಲೆ

ತಮ್ಮ ಸಾರೋದ್ಧಾರ ವಿಶ್ವಂಭರ ಅಧಿಕಾರವನ್ನು ಅನ್ಯಾಯ ದಿಂದ ನಡಿಸುತ್ತಲಿದ್ದಾರೆ. यत्रनार्यस्तुपूज्यंते रमंते तत्रदेवताः ಯಾವ ಸ್ಥಳದಲ್ಲಿ ಹೆಂಗಳೆಯರು ಸುಪೂಜಿತರಾಗಿರು ವರೋ ಅಲ್ಲಿಯೇ ದೇವತೆಗಳು ಆನಂದದಿಂದ ಇರುವರು ಎಂಬ ಗೀರ್ವಾಣ ಭಾಷೆಯ ಶ್ಲೋಕವು ಕೈಗಳನ್ನೆತ್ತಿ ಸಾರಿ ಹೇಳುತ್ತದೆ. ವೈದಿಕ ಪೌರಾಣಿಕ ಕಾಲಗಳಲ್ಲಿ ಸ್ತ್ರೀಪುರು ಷರು ವಿದ್ವಾಂಸರಾಗಿದ್ದ ಉದಾಪರತೆಗಳು ಅನೇಕ ಉಂಟು. ಇವರಿಂದ ಸ್ತ್ರೀಶಿಕ್ಷಣವು ಶಾಸ್ತ್ರ ಸಮ್ಮತವಾದದ್ದಾಗಿಯೂ ಸಂಸಾರ ಯಾತ್ರೆಗೆ ಸಾಕಾರ್ಯಪನ್ನುಂಟು ಮಾಡುವಂಥಾ ದ್ದಾಗಿಯೂ ಇರುವದೆಂಬ ಸಂಗತಿಯು ಸಿದ್ಧವಾಗುತ್ತದೆ. ಪಾಶ್ಚಿಮಾತ್ಯ ಎಲ್ಲ ದೇಶಗಳಲ್ಲಿಯು ಹೆಂಗಳೆಯರು ವಿದ್ಯಾ ಸಂಪನ್ನೆಯರಾಗಿದ್ದುದರಿಂದ ಅಲ್ಲಿಯ ದಂಪತಿಗಳಿಗೆ ಗೃಹ ಸೌಖ್ಯವು ಪೂರ್ಣವಾಗಿ ದೊರೆಯುತ್ತದೆ. ಅವರ ಎಲ್ಲ ವಿಷ ಯಗಳ ಪ್ರಗತಿಗೆ ಸ್ತ್ರೀ ಶಿಕ್ಷಣವೇ ಉತ್ತಮ ಕಾರಣಗಳಲ್ಲಿ ಒಂದಾಗಿದೆ. ಬಾಲಕರ ಸಂಬಂಧವು ತಂದೆಗಿಂತ ತಾಯಿಂದ ರಿಗೆ ಹೆಚ್ಚಿರುವ ಕಾರಣ ತಾಯಿಯು ನಿಂತಾಗ ಕೂತಾಗ ವಿದ್ಯಾಮೃತವನ್ನು ಬಾಲಕರಿಗೆ ಕುಡಿಸಿದರೆ, ಅವರು ಸಾ ಲಿಗೆ ಹೋಗುವ ಮುಂಚಿತವಾಗಿಯೇ ವಿದ್ಯಾ ಸಂಪಾದನೆಗೆ ಹೆಚ್ಚಿನ ಅಧಿಕಾರಿಗಳಾಗುವರು. An educated mother is equal to one thousand teachers ಒಬ್ಬ ಸು ಶಿಕ್ಷಿತ ತಾಯಿಯು ಸಾವಿರ ಶಾಲಾ ಗುರುಗಳಿಗೆ ಸರಿಯಾದ ವಳೆಂದು ಸ್ಕಾಚ್ ಜನರ ಒಂದು ಗಾದೆಯ ಮಾತು ತಿಳಿಸು ತ್ತದೆ. ಆವಕಾರಣ ಸ್ತ್ರೀ ಶಿಕ್ಷಣದ ಬಗ್ಗೆ ಗುರುವು ಎಷ್ಟು ಶ್ರಮ ಮಾಡಿದರೂ ಅಲ್ಪವೇ. ಗಾಳ ಹಾಕಿ ಒಂದು ಮೀನ ವನ್ನು ಹಿಡಿಯುವದಕ್ಕಿಂತ ಬಲೆಯೊಡ್ಡಿ ನೂರಾರು ಮೀನಗ

ಗಳನ್ನು ಹಿಡಿಯುವದಕ್ಕೂ ಇದ್ದ ಭೇದವೇ ಪುರುಷ ಸ್ತ್ರೀ ಶಿಕ್ಷಣಗಳಲ್ಲಿ ಇರುವದು. ಪುರುಷನ ವಿದ್ಯೆಯು ಬಬ್ಬ ವ್ಯಕ್ತಿಯನ್ನು ಮಾತ್ರ ಅಂಟಿಕೊಂಡಿರುವದು; ಆದರೆ ಸ್ತ್ರೀ ಶಿಕ್ಷಣವು ನೀರಿನ ಮೇಲೆ ಎಣ್ಣೆಯನ್ನು ಹಾಕಿದಂತೆ ಕುಟುಂಬವನ್ನೆಲ್ಲ ಆಕ್ರಮಿಸುವದು. ಇನ್ನು ಹೆಂಗಸರಿಗೆ ಅವಶ್ಯವಾಗಿ ಕೊಡತಕ್ಕ ಶಿಕ್ಷಣದ ವಿಷಯಗಳನ್ನರುಹುತ್ತೇವೆ. ಬರಪ, ಓದು, ವ್ಯಾಕರಣಶಾಸ್ತ್ರ, ಆರೋಗ್ಯಶಾಸ್ತ್ರ, ಅರ್ಥಶಾಸ್ತ್ರ, ವೈದ್ಯಶಾಸ್ತ್ರ, ಕಸೂತಿ, ಹೊಲಿಗೆ, ಚಿತ್ರಕಲೆ, ಗಾಯನ ಮುಂತಾದವುಗಳನ್ನೇ ಕಲಿಸಿದರೆ ಗೃಹಸೌಖ್ಯವೂ ಆನಂದವೂ ನಿಶ್ಚಯವಾಗಿ ಬೆಳೆಯುವವು. ನಮ್ಮ ಸುದೈವದಿಂದ ಕನ್ನಡ ಫೀಮೇಲ ಟ್ರೇನಿಂಗ ಕಾಲೇಜವು ಈ ಕರ್ನಾಟಕದ ಉತ್ತರ ಭಾಗದಲ್ಲಿ ಸ್ಥಾಪನವಾದರೆ ಸ್ತ್ರೀ ಶಿಕ್ಷಣವು ಈಗಿನಗಿಂತ ಹೆಚ್ಚು ರಭಸದಿಂದ ನಡೆಯುವದು. ಸದ್ಯ ಸ್ಥಿತಿಯಲ್ಲಿ ಚಿಕ್ಕ ಬಾಲಿಕೆಯರ ಸ್ವತಂತ್ರ ಶಾಲೆಗಳನ್ನೂ ಮಿಶ್ರಿತ ಶಾಲೆಗಳನ್ನೂ (ಬಾಲಕರೂ ಬಾಲಿಕೆಯರೂ ಕೂಡಿ ಕಲಿಯುವ ಶಾಲೆಗಳನ್ನೂ) ಸ್ಥಾಪಿಸುವ ಕೆಲಸಕ್ಕೆ ನೀವು ಮನಮುಟ್ಟಿ ಸಹಾಯವನ್ನು ಮಾಡಿದರೆ ದೇಶದ ಮೇಲೆ ನಿಮ್ಮ ಉಪಕಾರವು ಎಂದಿಗೂ ಮರೆಯದಂಥಾದ್ದಾಗುವದು.

ಇದುವರೆಗೆ ಹೇಳಿದ್ದರ ಹೊರತು ಇನ್ನೂ ಹೆಚ್ಚಿಗೆ ಹೇಳತಕ್ಕ ಕೆಲವು ವಿಷಯಗಳುಂಟು. ಆದರೆ ಕಾಲಾವಧಿಯು ಸ್ವಲ್ಪವಿರುವದರಿಂದ ಅವುಗಳ ಕೇವಲ ಉಲ್ಲೇಖವನ್ನು ಮಾಡಿ ನಮ್ಮ ಭಾಷಣವನ್ನು ಮುಗಿಸುತ್ತೇವೆ. ದೇಶಾಭಿಮಾನವೂ ಸ್ವಾಭಿಮಾನವೂ ಭಾಷಾಭಿಮಾನವೂ ಸ್ವಾವಲಂಬನವೂ ನಿಮ್ಮಿಂದ ನಿಮ್ಮ ಪಿಪ್ಪರಲಿ ಸೇರತಕ್ಕ

ವಾವಕಾರಣ ಈ ಗುಣಗಳನ್ನು ಪಡೆಯಲಿಕ್ಕೆ ನೀವು ಆದ ಷ್ಟು ಪ್ರಯತ್ನ ಮಾಡತಕ್ಕದ್ದು. शिष्याद्विच्छेत्पराजयं ಶಿಷ್ಯನಿಂದ ಪರಾಜಿತನಾಗಬೇಕೆಂಬ ಇಚ್ಛೆಯು ನಿಮ್ಮಲ್ಲಿ ನೆಲೆಗೊಳ್ಳಲಿ; ಮಾಜಿಟ್ಟು ವಿದ್ಯಾದಾನವನ್ನು ಮಾಡಬೇಡರಿ; ನೀವು ಸ್ವತಃ ಅಸ್ತಿಕ್ಯ ಬುದ್ಧಿಯವರೂ, ದೇವರಿಗಂಜಿ ನಡೆಯುವವರೂ ಆದರೆ ನಿಮ್ಮ ವಿದ್ಯಾರ್ಥಿಗಳು ಸಹ ಹಾಗೇ ಆಗುವರು. "ದೇವರಿಗಂಜಿ ನಡೆಯುವವನು ಎಂದಿಗೂ ಅಂಜುವದಿಲ್ಲ; ಆದರೆ ದೇವರಿಗಂಜದವನು ಎಲ್ಲರಿಗೂ ಅಂಜುವನು" ಎಂಬ ತತ್ವವನ್ನು ಸ್ವಂತ ಆಚರಣೆಯಿಂದ ವಿದ್ಯಾರ್ಥಿಗಳಲ್ಲಿ ಬಿಂಬಿಸಿರಿ. ದೊಡ್ಡವರ ಬಾಯಿಯಿಂದಲೂ ಗ್ರಂಥಾಧಾರಗಳಿಂದಲೂ ನಮಗೆತಿಳಿದಷ್ಟು ವಿಚಾರಗಳನ್ನೆಲ್ಲ ನಿಮ್ಮ ಮುಂದೆ ಇರಿಸಿದ್ದೇವೆ. ನಮ್ಮ ದೇಶದ ಭಾವೀಪ್ರಗತಿಯು ನಿಮ್ಮನ್ನು ಅವಲಂಬಿಸಿರುವದರಿಂದ ನಿಮ್ಮ ಮೇಲೆ ಎಂಥ ಘನವಾದ ಜವಾಬುದಾರಿಯು ಬಿದ್ದಿರುತ್ತದೆಂಬದನ್ನು ಯಾವಾಗಲೂ ಮರೆಯದೆ ಜಗನ್ನಿಯಂತನೂ ಮನುಷ್ಯನೂ ತಲೆದೂಗುವಂತೆ ನಿಮ್ಮ ಕರ್ತವ್ಯಗಳನ್ನು ಜರಿಗಿಸಿರಿ. ವಿಶ್ವಚಾಲಕನೂ, ಜಗತ್ಪಾಲಕನೂ ಆದ ದೇವರು ನಿಮಗೆ ಸುಜ್ಞಾನವನ್ನಿತ್ತು, ನೀವು ಕೈಕೊಂಡ ಘನ ಕೆಲಸವು ಚನ್ನಾಗಿ ಕಡೆಗಾಣುವಂತೆ ನಿಮಗೆ ಧೈರ್ಯವನ್ನೂ ಬಲವನ್ನೂ ಉತ್ಸಾಹವನ್ನೂ ಆಯುರಾರೋಗ್ಯ ಸಂಪತ್ತಿ ಸಮೃದ್ಧಿಗಳನ್ನೂ ದಯಪಾಲಿಸಲೆಂದು ಆ ಮಹಾ ಮಹಿಮನನ್ನು ಶರಣೊಡ್ಡಿ ಬೇಡಿಕೊಂಡು ಈ ಭಾಷಣವನ್ನು ಮುಗಿಸುತ್ತೇವೆ.

SELECTIONS FROM THE KARNATIK GAZETTEER.

ಕರ್ನಾಟಕ ಗೆಜೆಟಿಯರ್‌ದಿಂದ ಅವತರಣಿಗಳು.

(೧೫೬ನೇ ಪುಟದಿಂದ ಸಾಗಿದ್ದು)

ನೂಲುವ ನೆಯ್ಯುವ ಯಂತ್ರ—"ಸದರ್ನ್ ಮರಾಠಾ ಸ್ಪಿನ್ನಿಂಗ ಆಂಡ್ ವೀವಿಂಗ ಕಂಪನಿಯು' (ದಕ್ಷಿಣ ಮಹಾರಾಷ್ಟ್ರದ ನೂಲುವ ನೆಯ್ಯುವ ಸಂಘ) ಸನ್ ೧೮೮೧ ರಲ್ಲಿ ಸ್ಥಾಪನೆಯಾಯಿತು. ಈ ಕಂಪನಿಯ ಬಂಡವಾಳ ೬ ಲಕ್ಷ ದ್ದಿರುತ್ತದೆ. ಇದರಲ್ಲಿ ೨೫೦ ರೂಪಾಯಿಗಳದ್ದು ಒಂದೊಂದ ರಂತೆ ೨೪೦೦ ಭಾಗಗಳು (ಶೇಯರ್‌ಗಳು) ಮಾಡಲ್ಪಟ್ಟಿವೆ. ಈ ಯಂತ್ರದಲ್ಲಿ ೧೮೦೦೦ ಕದರುಗಳು ಪಿಕಕಾಲಕ್ಕೆ ನೂಲುತ್ತವೆ; ನೆಯ್ಯುವ ಮಗ್ಗಗಳನ್ನು ಮೂಲ ಗ್ರಂಥದ ರಚನೆಯಾದಾಗ (೧೮೮೪) ಇನ್ನೂ ಮಾಡಿದ್ದಿಲ್ಲ. ಈ ನೂಲುವ ನೆಯ್ಯುವ ಯಂತ್ರವನ್ನು ನಡಿಸಲಕ್ಕೆ ೪೦೦ ಕುದುರೆಗಳ ಶಕ್ತಿಯುಳ್ಳದ್ದೊಂದು ಉಗಿ ಯಂತ್ರವನ್ನು ಹಚ್ಚಿದ್ದಾರೆ. ಅದು ೨೪ ಫೂಟು ಆಗಲಾದದ್ದೊಂದು ಭಾರವುಳ್ಳ ಕಬ್ಬಿಣದ ಗಾಲಿಯನ್ನು ತಿರುಗಿಸುತ್ತದೆ. ಆ ಗಾಲಿಯಿಂದ ಯಾವತ್ತು ಕದರುಗಳೂ ಮಗ್ಗಗಳೂ ನಡಿಯುತ್ತವೆ. ಈ ಕಾರಖಾನೆಯ ಕೆಲಸವು ಆರಂಭದಲ್ಲಿ ಎರಡು ವರ್ಷ ಚನ್ನಾಗಿ ನಡೆಯಲಿಲ್ಲ. ಆದರೆ ಈಗ ಭಾಗೀದಾರರಿಗೆ ಬಳಿತಾಗಿ ಲಾಭವಾಗುತ್ತದೆ. ಈ ಯಂತ್ರದಲ್ಲಿ ಮಾಡ್ದ ವ ನೂಲು ಧಾರವಾಡ, ಮುಬ್ಬಳ್ಳಿ, ಗದಗು ಮುಂತಾದ ನೆರೆ ಹೊರೆಯ ಗ್ರಾಮಗಳಲ್ಲಿಯೇ ಖರ್ಚಾಗುತ್ತದೆ.

ಹತ್ತಿ ಆರಿಯುವ ಯಂತ್ರ—ಅರಳಿಯ ಸುಗ್ಗಿಯ ಕಾಲಕ್ಕೆ ನಿಳುಯಂತ್ರಗಳು ಹತ್ತಿಯನ್ನು ಆರಿಯುತ್ತವೆ. ಉಗಿ

ಯಂತ್ರದ ಸಹಾಯದಿಂದ ನಡೆಯುವ ಎರಡು ಗಮನಾರ್ಹ ವಾದ ಕಬ್ಬಿಣದ ರೂಲುಗಳ ಬಾಯಿಗೆ ಪತ್ತಿಯನ್ನು ಕೊಡಲಾಗಿ, ಅದರೊಳಗಿನ ಕಾಳು ಮುಂದೇ ಉದುರಿ ಬಿದ್ದು ಅರಿವ ಅರಳೆಯು ರೂಲುಗಳ ಅಚ್ಚಿಯಲ್ಲಿ ಹೋಗಿ ಬೀಳುತ್ತದೆ. ಒಂದೊಂದು ಯಂತ್ರವು ಪ್ರತಿ ದಿವಸ ೬೬೧೪ ಪೌಂಡು ಪತ್ತಿಯನ್ನು ಅರಿಯುತ್ತದೆ; ಅಂದರೆ ಸುಮಾರು ೧೪೬ ಜನ ಹೆಂಗಸರು ಅರಿಯುವಷ್ಟು ಪತ್ತಿಯನ್ನು ಒಂದು ಯಂತ್ರವು ಅರಿಯುತ್ತದೆ. ಇಂಥಾ ಏಳು ಯಂತ್ರಗಳಲ್ಲಿ ಕೂಡಿ ೧೦೨೦ ಜನ ಹೆಂಗಸರು ಮಾಡುವಷ್ಟು ಕೆಲಸವಾಗುತ್ತದೆ.

ಅರಳೆಯನ್ನು ಒತ್ತುವ ಯಂತ್ರ—ಈ ಯಂತ್ರಗಳು ಎರಡು ನಡೆಯುತ್ತವೆ. ಇವಕ್ಕೂ ಉಗಿ ಯಂತ್ರವೇ ಬಲ ಕ ಶಕ್ತಿಯು. ಒಂದು ಯಂತ್ರವು ೧೦ ತಾಸಿನೊಳಗೆ ೧೦೦ ಗಂಟುಗಳನ್ನು ಒತ್ತಿ ಕಟ್ಟುತ್ತದೆ; ಒಂದು ಗಂಟಿನೊಳಗೆ ೩೯೦ ಪೌಂಡು, ಅಂದರೆ ೧೪ ಮಣ ಅರಳೆ ಇರುತ್ತದೆ. ಒಂದು ಗಂಟು ಕಟ್ಟಲಿಕ್ಕೆ ೪ ರೂಪಾಯಿ ಕೂಲಿ ತಕೊಳ್ಳುವರು. ಅರಳೆಯನ್ನು ಬಳಿತಾಗಿ ಒತ್ತಿ ಸಣ್ಣ ಗಂಟು ಕಟ್ಟಿದರೆ, ಪರದೇಶಕ್ಕೆ ಕಳಿಸುವಾಗ ಪಡಗದೊಳಗೆ ಸ್ವಲ್ಪ ಸ್ಥಳ ಪಲ್ಲಿ ಬಹಳ ಅರಳೆ ನಿಲ್ಲುತ್ತದೆ. ಅದ್ದರಿಂದ ಹೀಗೆ ಒತ್ತಿ ಗಂಟು ಕಟ್ಟುವರು.

ಮಾರ್ಕೆಟ್ಟು—ಧಾರವಾಡದ ಕಲೆಕ್ಟರರಾದ ಮಿ. ರಾಬರ್ಟಸನ್ ಸಾಹೇಬರು ಇದನ್ನು ಸನ ೧೮೬೪ ರಲ್ಲಿ ಕಟ್ಟಿಸಿದರು. ಇವಕ್ಕೆ ೬೫೦೦ ರೂಪಾಯಿ ಖರ್ಚು ಆಯಿತು. ಈ ಮಾರ್ಕೆಟ್ಟು ಸೊಸ ಮಬ್ಬಳ್ಳಿಯ ಮಧ್ಯಭಾಗದಲ್ಲಿ ಇದೆ. ಇವರಲ್ಲಿ ೬೬೪ ಮಾರಾಟದ ವಿಭಾಗಗಳನ್ನು ಮಾಡಿ

ದ್ದಾರೆ. ಇವುಗಳ ಹೊರತು ಮಾರ್ಕೆಟಿನ ಸುತ್ತಮುತ್ತ ಬಹಳ ಅಂಗಡಿಗಳಿರುತ್ತವೆ. ಈ ಮಾರ್ಕೆಟಿನಿಂದ ಮ್ಯುನಿಸಿಪಾಲಿಟಿಗೆ ೬೩೦೦ ರೂಪಾಯಿ ಆದಾಯವಾಗುತ್ತದೆ.

ಮ್ಯುನಿಸಿಪಾಲಿಟಿ—ಹುಬ್ಬಳ್ಳಿಯ ಮ್ಯುನಿಸಿಪಾಲಿಟಿಯು ಸ್ಥ ೧೮೫೫ ರಲ್ಲಿ ಪುಟ್ಟಿತು. ಸ್ಥ ೧೮೮೫—೮೪ ರಲ್ಲಿ ಇದರ ಆದಾಯವು ೩೫೦೦ ರೂಪಾಯಿ ಇತ್ತು. ಜಕಾತಿ, ಮನೆ ಪಟ್ಟಿ ಇವೆರಡೇ ಮುಖ್ಯ ಆದಾಯದ ಬಾಬುಗಳು ಮ್ಯುನಿಸಿಪಾಲಿಟಿಯವರು ಮಾರ್ಕೆಟನ್ನೂ ಕಟ್ಟಿಸಿದ್ದಲ್ಲದೆ ನೀರಿನ ಪುರೈಕೆಗಾಗಿ ೬೯೫೦೦ ರೂ. ವೆಚ್ಚ ಮಾಡಿದರು. ಇವಲ್ಲದೆ ಊರೊಳಗಿನ ಸಡಕುಗಳನ್ನು ಮಾಡುವದು, ಬೀದಿಗಳನ್ನು ಉಡುಗಿಸುವದು, ರಾತ್ರಿಯಲ್ಲಿ ಕಂದೀಲುಗಳನ್ನು ಪಚ್ಚುವದು ಮುಂತಾದ ಕೆಲಸಗಳು ನಿರಂತರವಾಗಿ ನಡೆದವೆ.

ಪೇಶ್ಯಾ ಸ್ಥಳಗಳು—ಹುಬ್ಬಳ್ಳಿಯಲ್ಲಿ ೩೭ ಗುಡಿಗಳು, ೨೭ ಮಠಗಳು ೧೭ ಮಸೀದಿಗಳು, ಒಂದು ಪ್ರೊಟೆಸ್ಟಂಟ ಚರ್ಚವು, ಒಂದು ರೋಮನ್ ಕ್ಯಾಥೋಲಿಕ್ ಚರ್ಚವು ಇಷ್ಟು ಧರ್ಮ ಸಂಬಂಧದ ಸಂಸ್ಥೆಗಳು ಇರುತ್ತವೆ. ಭವಾನೀ ಶಂಕರನ ಗುಡಿಯು ಪುರಾತನ ಕಾಲದ್ದಿರುತ್ತದೆ. ಇದರ ಸಭಾಮಂಟಪದ ಎದುರಿಗೆ, ಅಂದರೆ ಪಶ್ಚಿಮಕ್ಕೆ ದೊಡ್ಡದೊಂದು ಗರ್ಭಾಗಾರವಲ್ಲದೆ, ಎಡಕ್ಕೂ ಬಲಕ್ಕೂ ಒಂದೊಂದು ಸಣ್ಣ ಗರ್ಭ ಗುಡಿಗಳಿರುತ್ತವೆ. ಈ ಎಡಬಲದ ಗರ್ಭ ಗುಡಿಗಳಲ್ಲಿ ಒಂದರೊಳಗೆ ಲಿಂಗವೂ ಮತ್ತೊಂದರೊಳಗೆ ಗಣಪತಿಯೂ ಉಂಟು. ಇವೆರಡೂ ಸಾಮಾನ್ಯ ತರದ ಮೂರ್ತಿಗಳವೆ. ಪಶ್ಚಿಮದ ದೊಡ್ಡ ಗರ್ಭಾಗಾರದಲ್ಲಿ ಮೂರು ಫೂಟು ಎತ್ತರವಾದ ಕರಿ ಶಿಲೆಯಿಂದ ಒಡಮ

ಸುಂದರನಾಗಿ ಮಾಡಿದಂಥ ನಾರಾಯಣನ ಮೂರ್ತಿಯುಂ
ಟು. ಈ ಮೂರ್ತಿಯು ಹಿಂದಿನ ಪ್ರಭಾವಳಿಯಲ್ಲಿ ಮನೋ
ಹರವಾಗಿ ಕೊರಿದಂಥ ಬೇರೆ ಮೂರ್ತಿಗಳು ಬಲವುಂಟು.
ಈ ನಾರಾಯಣನ ಮೂರ್ತಿಯನ್ನು ಒಳಗಡೆಯಲ್ಲಿ ಕೂ
ಡ್ರಿಸಿದಂತೆ ಕಾಣುತ್ತದೆ. ಅಷ್ಟಬದಿಯ ಗರ್ಭ ಗುಡಿಯಲ್ಲಿ
ಇರುವ ಲಿಂಗವೇ ಮೊದಲು ಈ ದೊಡ್ಡ ಗರ್ಭಾಗಾರದಲ್ಲಿ
ಇತ್ತೆಂದು ಹೇಳುತ್ತಾರೆ. ಇದೇ ಕಾರಣದಿಂದ ಈ ಗುಡಿಗೆ
ನಾರಾಯಣನ ಗುಡಿಯನ್ನೆದೆ ಭವಾನೀಶಂಕರನ ಗುಡಿ
ಯೆಂದೆನ್ನುತ್ತಾರೆಂದು ತೋರುತ್ತದೆ. ಈ ಗುಡಿಯ ಹೊ
ರಗೆ ಒಂದು ಶಿಲಾಲಿಪಿಯುಂಟು. ಅದರಲ್ಲಿ ಕಾಲಿಮಾಪನ
ಪಕದ ೧೦ನೇ ಶತಕದಲ್ಲಿ ಚಾಲುಕ್ಯರ ಭುವನೈಕಮಲ್ಲ
ನೆಂಬ ಅರಸು ಭವಾನೀಶಂಕರನಿಗೆ ಕಲವು ಭೂಮಿಯನ್ನು
ಕೊಟ್ಟ ಬಗ್ಗೆ ಲೇಖವಿರುತ್ತದೆ.

ಲಿಂಗವಂತರ ಮತಗಳಲ್ಲಿ ಮೂರು ಸಾವಿರ ಅಯ್ಯನ
ಮತವು ದೊಡ್ಡದಿರುತ್ತದೆ. ಇದನ್ನು ಭದ್ರವಾಗಿ ಕಟ್ಟಿದ್ದಾ
ರೆ. ಮೂರು ಸಾವಿರದ ಅಯ್ಯನವರ ಇತಿಹಾಸವನ್ನು ಈ
ಪ್ರಕಾರ ಹೇಳುತ್ತಾರೆ;—ಬಸವೇಶ್ವರನ ಇಪ್ಪತ್ತೊಂದು
ಸಾವಿರ ಜನ ಶಿಷ್ಯರಲ್ಲಿ ಪನ್ನೆರಡು ಸಾವಿರ ಗೃಹಸ್ಥರು,
ಆರು ಸಾವಿರ ಜಂಗಮರು, ಮೂರು ಸಾವಿರ ವಿರಕ್ತರು
ಇದ್ದರು. ಈ ವಿರಕ್ತರ ಮುಖ್ಯಸ್ಥನಿಗೆ ಮೂರು ಸಾವಿರದ
ಸ್ವಾಮಿಯೆನ್ನುವರು. ಈ ಸ್ವಾಮಿಯೂ ಮುರಗೀ ಸ್ವಾ
ಮಿಯೂ ಕೂಡಿ ಮೊದಲು ಚಿತ್ರಗಲ್ಲ ದುರ್ಗದಲ್ಲಿ ಇರುತ್ತಿ
ದ್ದರು. ಆದರೆ ಮುಂದೆ ಅವರವರೊಳಗೆ ವ್ಯಾಜ್ಯ ಪುಟ್ಟ
ದ್ದರಿಂದ ಮೂರು ಸಾವಿರದ ಸ್ವಾಮಿಯು ಅಲ್ಲಿಂದ ಹೊರಟು
ಮಬ್ಬಳ್ಳಿಗೆ ಬರಲಾಗಿ ಬಸಪ್ಪನೆಟ್ಟಿಯು ಅವನನ್ನು ಸತ್ಕರಿ

ಸಿ ಇಟ್ಟುಕೊಂಡನು. ಬಸಪ್ಪನು ಸ್ವ ೧೭೨೨ ರಲ್ಲಿ ಹೊಸ ಹುಬ್ಬಳ್ಳಿಯನ್ನು ಕಟ್ಟಿಸಿದಾಗ ಈ ಸ್ವಾಮಿಗೆ ಈಗಿನ ವಿಸ್ತಾರವಾದ ಮಠವನ್ನು ಕಟ್ಟಿಸಿ ಕೊಟ್ಟನು. ಈ ಮಠಕ್ಕೆ ಕೆಲವು ಇನಾಮು ಭೂಮಿಗಳು ನಡಿಯುತ್ತವೆ.

ಇತಿಹಾಸವು—ಹುಬ್ಬಳ್ಳಿಯು ಪುರಾತನ ಕಾಲದಿಂದ ಹೆಸರಾದ ಗ್ರಾಮವಿರುತ್ತದೆ. ಮೇಲೆ ಹೇಳಿದ ಭವಾನೀ ಶಂಕರನ ಗುಡಿಯಲ್ಲಿಯ ಲಿಪಿಯಿಂದ ಹುಬ್ಬಳ್ಳಿಯು ಚಾಲುಕ್ಯರ ಶಕದ ೧೦ನೇ ಶತಕದಲ್ಲಿ ಇತ್ತೆಂದು ತಿಳಿಯುತ್ತದೆ. ಅದರೆ ಅದಕ್ಕೂ ಪೂರ್ವದ ಲಿಪಿಗಳಲ್ಲಿ ಹುಬ್ಬಳ್ಳಿಯ ಉಲ್ಲೇಖವನ್ನು ಕಾಣಬಹುದು. ಹಳೆ ಹುಬ್ಬಳ್ಳಿಗೆ ರಾಯರ ಹುಬ್ಬಳ್ಳಿಯೆಂದೆನ್ನುವರು. ರಾಯರೆಂದರೆ ವಿಜಯನಗರದ ಅರಸರು. ಈ ಅರಸರ ಆಳಿಕೆಯಲ್ಲಿ ಹುಬ್ಬಳ್ಳಿಯು ಅವರ ರಾಜ್ಯಕ್ಕೆ ಸೇರಿತ್ತು. ಸ್ವ ೧೬೭೩ ರಲ್ಲಿ ಶಿವಾಜಿಯು ಸರದಾರನಾದ ಅಣ್ಣಾಜೀ ದತ್ತೋ ಎಂಬವನು ವಿಜಾಪುರದ ರಾಜ್ಯವನ್ನು ಹಾಳು ಮಾಡುತ್ತ ಹುಬ್ಬಳ್ಳಿಗೆ ಬಂದು ಅದನ್ನು ಸುಲಿದನು. ಅವನಿಗೆ ಅಪರಿಮಿತ ದ್ರವ್ಯ ದೊರೀತೆಂದು ಹೇಳುತ್ತಾರೆ. ಸ್ವ ೧೬೭೭ ರಲ್ಲಿ ದಿಲ್ಲಿಯ ಔರಂಗಜೇಬ ಬಾದಶಹನು ತಾರಿನ್ನನೆಂಬ ಸರದಾರನ ಮಗನಾದ ಶಹಾನುಪಮ್ಮದಖಾನನೆಂಬವನಿಗೆ ಹುಬ್ಬಳ್ಳಿ ಸಹಿತ ಕೆಲವು ಶೀಮೆಯನ್ನು ಜಹಾಗೀರು ಹಾಕಿ ಕೊಟ್ಟಿದ್ದನು. ಮುಂದೆ ಸ್ವ ೧೭೮೯ ರಲ್ಲಿ ಶಿತ್ತೂರಿನ ದೇಸಾಯಿಯ ವಶಕ್ಕೆ ಹುಬ್ಬಳ್ಳಿ ಹೋಯಿತು. ಸ್ವ ೧೭೨೨ ರಲ್ಲಿ ಬಸಪ್ಪಶೆಟ್ಟಿಯು ಹೊಸ ಹುಬ್ಬಳ್ಳಿಯನ್ನು ಕಟ್ಟಿಸಿದನೆಂದು ಮೇಲೆ ಹೇಳಿದ್ದೇವೆ. ಆಗ ಹುಬ್ಬಳ್ಳಿಯು ಸವಣೂರಿನ ನಬಾಬನ ವಶದಲ್ಲಿತ್ತು. ಸ್ವ ೧೭೫೫ ರಲ್ಲಿ ಆ ನಬಾಬನು ಈ ಪಟ್ಟಣವ

ನ್ನು ಪೇಶವನಿಗೆ ಕೊಟ್ಟನು. ಸ್ರ ೧೬೭೪ರಲ್ಲಿ ಹೈದರನು ದಕ್ಷಿಣ ಮಹಾರಾಷ್ಟ್ರದ ಶೀಮೆಗಳನ್ನು ಆಕ್ರಮಿಸಿದಾಗ ಈ ಊರು ಅವನ ರಾಜ್ಯಕ್ಕೆ ಶೇರಿತು. ಬಾಜೀರಾಯನ ಆಳಿಕೆಯಲ್ಲಿ ಅದು ಸಾಂಗಲಿಯ ಪಟವರ್ಧನನ ರಾಜ್ಯಕ್ಕೆ ಶೇರಿತ್ತು. ಸ್ರ ೧೮೧೮ರಲ್ಲಿ ಬಾಜೀರಾಯನ ರಾಜ್ಯವನ್ನು ಇಂಗ್ಲಿಷರು ತಕ್ಕೊಂಡಾಗ ಜನರಲ್ ಮನ್ರೋನ್ ಮಬ್ಬಳ್ಳಿಯನ್ನು ತಕ್ಕೊಂಡನು. ಆದರೂ ಇದು ಆಗ ಸಾಂಗಲಿಯ ಸಂಸ್ಥಾನಿಕನ ವಶದಲ್ಲಿಯೇ ನಿಂತಿತು. ಮುಂದೆ ಸ್ರ ೧೮೭೦ರಲ್ಲಿ ಸಾಂಗಲಿಯ ಚಿಂತಾಮಣಿರಾವ ಅಪ್ಪಾಸಾಹೇಬನು ಇಂಗ್ಲಿಷರ ಚಾಕರಿಗೆ ರಾಮುತರನ್ನು ಇಡುವದಕ್ಕೆ ಬದಲಾಗಿ ಅವರಿಗೆ ಮಲವು ಶೀಮೆಯನ್ನು ಕೊಟ್ಟದ್ದರಲ್ಲಿ ಹುಬ್ಬಳ್ಳಿಯು ಇಂಗ್ಲಿಷರ ವಶಕ್ಕೆ ಬಂತು. ಸ್ರ ೧೮೭೪ನೇ ವರ್ಷ ಮಬ್ಬಳ್ಳಿಯಲ್ಲಿ ೩೫೦೦ ನಿವಾಸಿಗಳು ಇರುತ್ತಿದ್ದರೆಂದು ಈಷ್ಟಾನ ವಿಂಗೇಟನೆಂಬ ಸರದಾರನು ಬರೆದು ಇಟ್ಟದ್ದಾನೆ.

METHODS OF TEACHING.

ಕಲಿಸುವ ಪದ್ಧತಿಗಳು

ನಿ ಬಂ ಧ.

ವಿದ್ಯೆ.

೧. ವಿದ್ಯೆಯೆಂದರೇನು?

(ಅ) ವಿದ್ಯೆಗೂ ಶಿಕ್ಷಣಕ್ಕೂ ಭೇದವು.

೨. ಮನುಷ್ಯನೊಬ್ಬನೇ ವಿದ್ಯೆಕಲಿಯಲಿಕ್ಕೆ ಯೋಗ್ಯನು.

(ಅ) ಇತರ ಪ್ರಾಣಿಗಳು ಇದ್ದ ಹಾಗೇ ಇರುವವು.

(ಬ) ಪ್ರತಿ ಬಂದು ಜನಾಂಗದವರು ತಮ್ಮ ಪೂರ್ವಜರಿಂದ ಪಡೆದ ಜ್ಞಾನವನ್ನು ಬೆಳಿಸುತ್ತಾರೆ.

(ಕ) ಮನುಷ್ಯನ ಬುದ್ಧಿಯನ್ನು ಅಪರಿಮಿತವಾಗಿ ಬೆಳೆಸಬಹುದು.

೩. ತರಗಳು.

(ಅ) ಮಾನಸಿಕ ವಿದ್ಯೆ.

(೧) ತಿಳುವಳಿಕೆ.
(೨) ನೆನಪು.
(೩) ಕಲ್ಪನೆ.
(೪) ನಿರ್ಣಯ.

(ಬ) ಶಾರೀರಿಕ ವಿದ್ಯೆ.

(೧) ಶರೀರವು ಮನಸ್ಸಿಗೆ ವಿಧೇಯವಾಗಿರುವದು.
(೨) ಆರೋಗ್ಯತೆ, ಶಕ್ತಿ, ಗಾಂಭೀರ್ಯ, ಸೊಬಗು.
(೩) ದೇಹ ಸ್ಥಿತಿಯುಂತೆ ಮನಸ್ಸು ಇರುವದು.
(೪) ಗಂಡಾಂತರಕ್ಕೆ ಉಪಾಯ.

(ಕ) ಅಲಂಕಾರಿಕ ವಿದ್ಯೆ.

(೧) ಸತ್ಯ, ಒಳ್ಳೇತನ, ಸೌಂದರ್ಯಗಳ ಕಲ್ಪನೆ.
(೨) ಕ್ರಮ, ಸಮಗಟ್ಟು, ನಿಷ್ಕರ್ಷೆ.
(೩) ಸೌಂದರ್ಯದ ಉದ್ದೀಪಕಗಳು.

(ಡ) ನೀತಿ ಶಿಕ್ಷಣ.

(೧) ಬೋಧನೆಗಿಂತ ಕೃತಿಯು ಒಳ್ಳೇದು.
(೨) ಜೊತೆಗಾರರನ್ನು ಆರಿಸಿಕೊಳ್ಳುವಿಕೆ.
(೩) ವರ್ಗದೊಳಗಿನ ನೀತಿ ಪಾಠಗಳು.
(೪) ಹಿರಿಮಸ್ಥಾನದೊಳಗಿನ ಎಡರುಗಳು.

(೪) ರಾಷ್ಟ್ರೀಯ ಶಿಕ್ಷಣ.

(ಅ) ಪ್ರಾಥಮಿಕ ಶಿಕ್ಷಣ.

(ಬ) ಬಲಾತ್ಕಾರದಿಂದ ವಿದ್ಯೆ ಕಲಿಸೋಣ.

(ಕ) ಮೇಲ್ತರದ ಶಿಕ್ಷಣ.

(ಡ) ಸ್ತ್ರೀ ಶಿಕ್ಷಣ.

(೫) ಅಧ್ಯಾಪಕನ ಯೋಗ್ಯತೆಗಳು.

(ಅ) ಶಿಷ್ಯನ ಸ್ವಭಾವದ ಜ್ಞಾನವು.

(ಬ) ಅವನ ಸ್ವಭಾವವನ್ನು ತಿದ್ದುವದು.

(ಕ) ಪ್ರತಿ ಬಂದು ಕಾರ್ಯದಲ್ಲಿ ಶರೀರವೂ ಮನಸ್ಸೂ ಅಗಲದೆ ಇರುವವು.

(೧) ಬಾಲ್ಯದಲ್ಲಿ ದುರ್ಬಲತೆ.

(೨) ಪ್ರಾಯದಲ್ಲಿ ಬಲವು.

(೩) ಮುಪ್ಪಿನಲ್ಲಿ ಅಶಕ್ತತೆ.

(ಡ) ಕಲಿಸುವವನ ಪಾಂಡಿತ್ಯವು.

(ಇ) ಪ್ರತಿ ಬಬ್ಬನು ತನಗೆ ಚನ್ನಾಗಿ ಬರುವಂಥ ವಿಷಯ ಕಲಿಸೋಣ.

(ಫೆ) ಗುರುಗಳಲ್ಲಿ ವಿದ್ಯಾರ್ಥಿಗಳ ಮಾನ್ಯತೆಯೂ ಮೆಚ್ಚಿಕೆಯೂ.

(ಗ) ಶಿಷ್ಯರ ತಾದಾತ್ಮ್ಯ ಅಥವಾ ಸಹಪ್ರವೃತ್ತಿಯನ್ನುಂಟು ಮಾಡಿಕೊಳ್ಳುವ ಜಾಣತನವು.

(ಹ) ಯೋಗ್ಯತಾ ಪತ್ರಗಳು. (ಸರ್ಟಿಫಿಕೇಟುಗಳು)

(೬) ವಿದ್ಯಾರ್ಥಿಗಳ ಗುಣಗಳು.

(ಅ) ವಿಧೇಯತ್ವವೂ ವಿನಯವೂ.

(ಬ) ಶಿಕ್ಷಣವನ್ನು ವಿಶೇಷವಾಗಿ ಮನ್ನಿಸೋಣ.

(ಕ) ಕಲಿಯುವ ಚಿಂತೆ.

(ಡ) ಆಸಕ್ತಿಯೂ ಉದ್ಯೋಗವೂ.

(೭) ಲಾಭಗಳು.

(ಅ) ಬುದ್ಧಿಯು ಬೆಳವಣಿಗೆ.

(ಬ) ಸದ್ಗುಣಾಭಿವೃದ್ಧಿ.

(ಕ) ಕೆಲಸದ ಮರ್ಮವನ್ನು ಬಹ್ಮೇಲೆ ತಿಳುಕೊಂಡು ತಟ್ಟನೆ ಮಾಡೋಣ.

(ಡ) ಭೂತ ಭವಿಷ್ಯಗಳನ್ನು ತಿಳುಕೊಳ್ಳುವ ಶಕ್ತಿಯು ಮನುಷ್ಯನಲ್ಲಿ ಹುಟ್ಟೋಣ.

(ಇ) ಜನ ಸಂಘಕ್ಕೆ ಬಹಳ ಉಪಯೋಗವಾಗೋಣ.

(ಫ) ಪಂಚಭೂತಗಳನ್ನು ಜಯಿಸಲಿಕ್ಕೆ ನೆರವಾಗೋಣ.

(ಗ) ಜೀವಾತ್ಮದ ಸುಖವನ್ನು ವಿಶೇಷವಾಗಿ ಬೆಳಿಸೋಣ.

(ಹ) ಚಲೋ ರೀತಿಯಿಂದ ಸಾಯುವದಕ್ಕೆ ಮನಸ್ಸನ್ನು ಸಿದ್ಧಪಡಿಸೋಣ.

(೮) ಬಹು ಲಾಭದಾಯಕ ವಿದ್ಯೆ.

(ಅ) ತಾಯಿ ತಂದೆಗಳ ಚಿಂತೆ.

(ಬ) ಹರ್ಬರ್ಟ್ ಸ್ಪೆನ್ಸರನೆಂಬವನ ಅಭಿಪ್ರಾಯಗಳು.

(ಕ) ಶಿಲ್ಪಶಾಸ್ತ್ರ.

(೯) ಹಿಂದುಸ್ಥಾನದೊಳಗಿನ ವಿದ್ಯೆ.

(ಅ) ಪೂರ್ವಕಾಲದಲ್ಲಿ.

(ಬ) ತುರ್ಕರ ಆಳಿಕೆಯಲ್ಲಿ.

(ಕ) ನೂತನ ಪದ್ಧತಿ.

DEPARTMENTAL NOTICES.

ನೋ ಟೀ ಸು ಗ ಳು .

ನಂಬರು ೧೧೪೪.

ಈ ನೋಟೀಸಿನಿಂದ ಪ್ರಸಿದ್ಧ ಪಡಿಸುವದೇನಂದರೆ :—

ಹೈಸ್ಕೂಲ ಮತ್ತು ಮಿಡಲ್ ಸ್ಕೂಲ ಸ್ಕಾಲರಷಿಪ್ಪ ಪರೀಕ್ಷೆಗಳು ಕೆಳಗೆ ಬರೆದ ಸೆಂಟರುಗಳಲ್ಲಿ ೧೦ನೇ ಸಪ್ಟಂಬರ ದಿವಸ ಬೆಳಗಿನ ೧೧ ಘಂಟೆಗೆ (ಮದ್ರಾಸ ದಿನಮಾನ) ಪ್ರಾರಂಭವಾಗುವವು. ಅಲಿಬಾಗದ ಪರೀಕ್ಷಾ ಕಮಿಟಿಯ ಅಧ್ಯಕ್ಷರು ಅಲ್ಲಿಯ ಮಿಶನ್ ಹೈಸ್ಕೂಲದ ಮ್ಯಾನೇಜರರು. ಉಳಿದ ಕಡೆಯಲ್ಲೆಲ್ಲ ಅಲ್ಲಲ್ಲಿಯ ಹೈಸ್ಕೂಲ ಹೆಡ್ಡ ಮಾಸ್ತರರು ಪರೀಕ್ಷಾ ಕಮಿಟಿಯ ಅಧ್ಯಕ್ಷರಿರುತ್ತಾರೆ. ಹೈಸ್ಕೂಲ ಸ್ಕಾಲರಷಿಪ್ಪ ಪರೀಕ್ಷೆಗೆ ಕೂಡ್ರಲಿಚ್ಛಿಸುವ ವಿದ್ಯಾರ್ಥಿಗಳು ಸನ್ ೧೮೮೮ನೇ ಇಸವಿಯ ೫ನೇ ಎಪ್ರಿಲದ ಸರಕಾರೀ ಗ್ಯಾಝೆಟಿನ ೧ನೇ ಭಾಗದ ೩೦೪ನೇ ಪುಟದಲ್ಲಿ ಪ್ರಸಿದ್ಧವಾದ ನಿಯಮಗಳಿಗನುಸರಿಸಿ, ಮಿಡಲ್ ಸ್ಕೂಲ ಸ್ಕಾಲರಷಿಪ್ಪ ಪರೀಕ್ಷೆಗೆ ಕೂಡುವವರು ಸನ್ ೧೮೮೮ನೇ ಇಸವಿಯ ೧೩ನೇ ಮೇ ತಾರಿಖಿನ ಸರಕಾರೀ ಗ್ಯಾಝೇಟಿನ ೧ನೇ ಭಾಗದ ೪೩೧ನೇ ಪುಟದಲ್ಲಿ ಪ್ರಸಿದ್ಧವಾದ ನಿಯಮಗಳಿಗನುಸರಿಸಿ, ಅಗಷ್ಟ ೧೦ನೇ ತಾರೀಖಿನೊಳಗಾಗಿ ತಮ್ಮ ಅರ್ಜಿಗಳನ್ನು ಅಧ್ಯಕ್ಷರ ಕಡೆಗೆ ಕಳಿಸಿ ಕೊಡಬೇಕು. ಇವನ್ನು ಛಾಪೀ ನಮೂನೆಗಳ ಮೇಲೆ ಮಾಡತಕ್ಕದ್ದು. ಈ ನಮೂನೆಗಳು ಪರೀಕ್ಷಾಕಮಿಟಿಯ ಅಧ್ಯಕ್ಷರ ಕಡೆಗೆ ಅಥವಾ ನಮ್ಮ ಕಡೆಗೆ ಅರ್ಜಿ ಮಾಡಿದರೆ ಸಿಗುವವು.

ಹೈಸ್ಕೂಲ ಸ್ಕಾಲರಷಿಪ್ಪ ಪರೀಕ್ಷೆಯ ಸೆಂಟರುಗಳು.	ಮಿಡಲ್‌ಸ್ಕೂಲ ಸ್ಕಾಲರಷಿಪ್ಪ ಪರೀಕ್ಷೆಯ ಸೆಂಟರುಗಳು.
೧. ಧಾರವಾಡ ಹೈಸ್ಕೂಲು.	೧. ಧಾರವಾಡ ಹೈಸ್ಕೂಲು.
೨. ಬೆಳಗಾವ ಹೈಸ್ಕೂಲು.	೨. ಬೆಳಗಾವ ಹೈಸ್ಕೂಲು.
೩. ಕಾರವಾರ ಹೈಸ್ಕೂಲು.	೩. ಕಾರವಾರ ಹೈಸ್ಕೂಲು.
೪. ರತ್ನಾಗಿರಿ ಹೈಸ್ಕೂಲು.	೪. ಬಿಜಾಪುರ ಹೈಸ್ಕೂಲು.
೫. ಬಿಜಾಪುರ ಹೈಸ್ಕೂಲು.	೫. ಅಲಿಬಾಗ ಜಾನ್ ಎಲ್ ಫಿನ್‌ಸ್ಟನ್ ಮಿಶನ್ ಹೈಸ್ಕೂಲು.
೬. ಅಲಿಬಾಗ ಜಾನ್ ಎಲ್ ಫಿನ್‌ಸ್ಟನ್ ಮಿ. ಹೈಸ್ಕೂಲು.	

ಧಾರವಾಡ :
ತಾ॥ ೧೫ ನೇ ಮೇ
ಸನ್ ೧೮೯೪ ನೇ ಇ.

B. R. Sahasrabudhe,
Ag. Educational Inspector.
S. D.

ನೋಟೀಸು.

ನಂಬರು ೫೯.

ಮೆ॥ ಕ್ಯೂರೇಟರ ಗವರ್ನಮೆಂಟ ಸೆಂಟ್ರಲ ಬುಕ್ ಡಿಪೋ ಮುಂಬೈ ಇವರಿಂದ ತಿಳಿಸಲ್ಪಡುವದೇನಂದರೆ :—

ಕೆಳಗೆ ಬರೆದ ಪುಸ್ತಕಗಳು ಮುದ್ರಿತವಾಗಿ ಮಾರಾಟಕ್ಕೆ ಸಿದ್ಧವಾಗಿವೆ. ಅವುಗಳ ವಿವರ :—

ಪುಸ್ತಕ.	ಜೆಲೆ.
ಸಂಸ್ಕೃತ ರಾಜತರಂಗಿಣೀ ಭಾಗ ೨	ರೂ. ೨ ಆ. ೮.
ಕನ್ನಡ ೬ನೇ ಪುಸ್ತಕ	ರೂ. ೧ ಆ. ೪.

ಮುಂಬಯಿ :
ತಾ॥ ೫ನೇ ಜೂನ,
ಸನ್ ೧೮೯೪ನೇ ಇಸವಿ.

G. B. Nene,
ಕ್ಯೂರೇಟರ ಗವರ್ನಮೆಂಟ,
ಸೆಂಟ್ರಲ್ ಬುಕ್ ಡಿಪೋ,
ಮುಂಬಯಿ.

ವರ್ಗಣಿ ವಸೂಲು.

ಧಾರವಾಡ ಜಿಲ್ಲೆ.

	ರೂ. ಆ. ಪೈ.
೦೫॥ ಸಾ॥ ಡಿ. ಎ. ಇನಸ್ಪೆಕ್ಟರ ಇವರಿಂದ ಲೋಕಲ ಬೋರ್ಡ ಶಾಲೆಗಳ ಬಾಬತು ಮಾರ್ಚ ೯೪ ರ ಬಗ್ಗೆ.	೦೫ ೮ ೬
ಸದರೀಯವರಿಂದ ಎಪ್ರೆಲ ೯೪ ರ ಬಗ್ಗೆ	೦೫ ೮ ೯

ವಿಜಾಪೂರ ಜಿಲ್ಲೆ.

೦೩॥ ಸಾ॥ ಡಿ. ಎ. ಇನಸ್ಪೆಕ್ಟರ ಇವರಿಂದ ಲೋಕಲ ಬೋರ್ಡ ಮ್ಯು. ಸಾಲೆಗಳ ಬಾಬತು ಮೇ ೧೮೯೪ ಇಸವಿಯ ಬಗ್ಗೆ	೧೯ ೯ ೯

ಕಾರವಾರ ಜಿಲ್ಲೆ.

೦೩॥ ಸಾ॥ ಡಿ. ಎ. ಇನಸ್ಪೆಕ್ಟರ ಇವರಿಂದ ಮ್ಯು. ಸಾಲೆಗಳ ಬಾ॥ ಅಕ್ಟೋಬರ ೯೩ ರಿಂದ ಮಾರ್ಚ ೯೪ ಅಖೇರವರೆಗೆ	೧೧ ೪ ೦

ಕಿರುಕುಳ.

ಡ್ ಮಾಸ್ತರ ಕನುಡೋಳಿ ಇಲಾಖಾ ಜಮಖಂಡಿ ಇವರಿಂದ ಜೂನ ೯೪ ರಿಂದ ಮೇ ೯೫ ಅಖೇರವರೆಗೆ	೦ ೧೫ ೦
೩ಕ್ಕಲ್ ಮಾಸ್ತರ ಎಲಿವಾಳ ತಾ॥ ಕುಂದಗೋಳ ಇವರಿಂದ ಜುಲೈ ೯೪ ರಿಂದ ಜೂನ ೯೫ ಅಖೇರ ವರೆಗೆ	೦ ೧೫ ೦

ತಪ್ಪು ತಿದ್ದಿದ್ದು.

ಮೇ ತಿಂಗಳ ಸಂಚಿಕೆಯಲ್ಲಿ ರಾಣೇಬೆನ್ನೂರ ಮಾಸ್ತರರಿಂದ ೧ ೪೪ ೯೦ ವಸೂಲು ಇದ್ದಲ್ಲಿ ೬ ೪೪ ೯೦ ಆರು ರೂಪಾಯಿ ನಾಲ್ಕು ಆಣೆ ಎಂದು ತಿಳಿಯತಕ್ಕದ್ದು.

---

* ಇದರೊಳಗೇನಾದರೂ ತಪ್ಪು ಇದ್ದರೆ ಅದನ್ನು ದಯಮಾಡಿ ತಿಳುಹಬೇಕು.

ಕನ್ನಡ ಶಾಲಾಪತ್ರಕದ ವರ್ಗಣಿ ವರ್ಷಕ್ಕೆ ಮುಂಗಡ ...೧೫ ಆಣೆ.
ಒಂದು ಸಂಚಿಕೆಗೆ ... ... ೨ ಆಣೆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ.	೪	ಪಂಕ್ತಿಗಳವರೆಗೆ	೧ ರೂ.
ಮೂರುಸಾರೆ ಇಟ್ಟರೆ	೧೫	,,	,,
ಆರುಸಾರೆ ಇಟ್ಟರೆ	೧೬	,,	,,

ಸೂಚನೆಗಳು.

೧. ಶಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಹಾಸಲು ಬೀಳುವದು.

೩ ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇಮ್ಮಡಿ ಫೀ ಬೀಳುವದು.

೪. ಪ್ರಕಟನೆಯ ಕೂಡ ಹಣ ಕಳುಹಲಿಕ್ಕೆ ಬೇಕು.

೫. ಟಿಕೇಟು ಇಟ್ಟ ಹೊರ್ತು ಉತ್ತರ ಶಿಗಲಾರದು.

RAOJI B. KARANDIKAR.
ವ್ಯವಸ್ಥಾಪಕ, ಕನ್ನಡ ಶಾಲಾಪತ್ರಕ.

ಕನ್ನಡಶಾಲಾಪತ್ರಿಕೆ.

KANARESE

SCHOOL PAPER.

ಪುಸ್ತಕ ೭೯.] ಆಗಸ್ಟ ೧೮೯೪. [ಸಂಚಿಕೆ ೮.

ಅನುಕ್ರಮಣಿಕೆ.

		ಪುಟ.
೧.	ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ...	೧೬೯
೨.	ಮಕ್ಕಳ ನೀತಿ ಶಿಕ್ಷಣವು	೧೭೫
೩.	ಕನ್ನಡ ಗಝೆಟಿಯರದಿಂದ ಅವತರಣಿಗೆಗಳು ...	೧೮೧
೪.	ಕಲಿಸುವ ಪದ್ಧತಿಗಳು	೧೮೭
೫.	ಪತ್ರವ್ಯವಹಾರ	೧೯೧

CONTENTS.

1.	Educational Intelligence and Useful Notes ...	169
2.	The Moral Training of Children	175
3.	Selections from the Karnatik Gazetteer ...	181
4.	Methods of Teaching	187
5.	Correspondence	191

DHARWAR:
PRINTED AT THE KARNATIC BOOK DEPOT PRESS,
1894.

NOTICE.

ನೋಟೀಸು.

ಈ ವರ್ಷ ಟ್ರೇನಿಂಗ ಕಾಲೇಜದ ಸರ್ಟಿಫಿಕೇಟ ಪರೀಕ್ಷೆಗೆ ಹೊರಗಿನಿಂದ ಬರತಕ್ಕ ಉಮೇದವಾರರು ಸದರಿ ಪರೀಕ್ಷೆಗೆ ಕೂಡುವ ಸಂಬಂಧದಿಂದ ತಮಗೆ ದೊರೆತ ಮೆ. ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ಬಹಾದೂರ ದಕ್ಷಿಣಭಾಗ ದೊರೆಗಳವರ ಹುಕುಮನ್ನು ಅಥವಾ ರಾವಸಾಹೇಬ ಡಿಪ್ಪೊಟಿಯವರ ಮುಖಾಂತರವಾಗಿ ತಮಗೆ ಸಿಕ್ಕಂಥ ಮೆ. ಎಜ್ಯುಕೇಶನಲ್ ಇನಸ್ಪೆಕ್ಟರ ದೊರೆಗಳವರ ಹುಕುಮಿನ ನಕಲನ್ನು ತಮ್ಮ ಸಂಗಡ ತೆಗೆದುಕೊಂಡು ಬರಬೇಕು.

ಧಾರವಾಡ ಟ್ರೇ. ಕಾ.
ತಾ॥ ೧೫ ಜುಲೈ ೧೮೯೪. } Raoji B. Karandikar,
ಪ್ರಿನ್ಸಿಪಾಲ.

ಪ್ರಕಟನೆ.

ಮುಲ್ಕಿ ಪರಿಕ್ಷೆ ಕೊಡುವ ಉಮೇದವಾರರಿಗೂ ಮತ್ತು ಆರನೆಯ ಇಯತ್ತೆಯಂತೆ ಅಭ್ಯಾಸ ಮಾಡುವವರಿಗೂ ಸುಲಭವಾಗಿ ಜಮಾ ಖರ್ಚಿನ ಪದ್ಧತಿ ತಿಳಿಯಬೇಕೆಂದು ಮು. ರಾ. ರಾ. ವಿರುಪಾಕ್ಷಪ್ಪ ಅಂಣಾ ಹೂಲಿ ಇವರು ಬಹು ಶ್ರಮವಟ್ಟು ತಯಾರ ಮಾಡಿ, ಪುಸ್ತಕ ಪರೀಕ್ಷಕರಿಂದ ಪಾಸಾಗಿರುವದನ್ನು ನಾವು ಬಳ್ಳೇ ದಪ್ಪ ಕಾಗದದ ಮೇಲೆ ಸುವಾಚ್ಯ ಅಕ್ಷರಗಳಿಂದ ಮುದ್ರಿಸಿ ವಿಕ್ರಿಗೆ ತಯಾರ ಮಾಡಿದ್ದೇವೆ. ಇದರಲ್ಲಿ ವಿವರಿಸಿರುವ ವಿಷಯಗಳನ್ನು ಪುಸ್ತಕ ನೋಡಿದ ಮಾತ್ರದಿಂದ ತಿಳಿಯುವದು. ಇದರ ಬೆಲೆ ತೀರ ಕಡಿಮೆ ಅಂದರೆ ಪ್ರತಿ ಬಂದಕ್ಕೆ ೫೮ ಆಣೆ. ಅಂಚೆ ವೆಚ್ಚ ೫೮ ಆಣೆ. ೧೦ ಪ್ರತಿಗಳನ್ನು ಒಟ್ಟಿಗೆ ತೆಗದುಕೊಳ್ಳುವವರಿಗೆ ೧ ಪ್ರತಿ ಹೆಚ್ಚಿಗೆ ಕೊಡಲಾಗುವದು. ಈ ಪ್ರತಿಯು ಕವಿಯಾಟಯವರಿಂದ ಪಾಸಾಗಿರುತ್ತದೆ.

ಧಾರವಾಡ,
ತಾ॥ ೨೫-೬-೯೪. } ಚನವೀರೆ ಫೀರಪ್ಪಾ,
ಮ್ಯಾನೇಜರ ಕ. ವೃತ್ತ

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಣೋತ್ಕರ್ಷಮಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆಸುಗುಣಂ ತೋರಲ್ಕೆಕ್ಕೈಕೊಂಬುದೈ ।
ದಯೆಯಿಂದೋಷವತಿದ್ದ ಪೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೭ನೆ.] ಅಗಸ್ಟ ೧೮೬೯ನೆ ಇ. [ಸಂಚಿಕೆ ೮.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ಗೋಹನಾ ಸರೋವರ—ಈ ಸರೋವರದ ಸಂಬಂಧವಾಗಿ ತಂತಿಯ ಸುದ್ದಿಗಳು ಸದ್ಯಕ್ಕೆ ಮೇಲಿಂದ ಮೇಲೆ ಪ್ರಸಿದ್ಧವಾಗುತ್ತವೆ. ಇಷ್ಟು ದಿವಸಗಳ ವರೆಗೆ ಈ ಸರೋವರದ ಸುದ್ದಿಯೇ ಇದ್ದಿಲ್ಲ. ಈಗ ಇದರ ವಿಷಯವಾಗಿ ತಂತಿಯಿಂದ ಸುದ್ದಿಯನ್ನು ಕಳಿಸುವಷ್ಟು ಮಹತ್ವವು ಇದಕ್ಕೆ ಯಾಕೆ ಬಂದಿರುತ್ತದೆ, ಎಂಬ ವೃತ್ತಾಂತವನ್ನು ನಾವು ನಮ್ಮ ವಾಚಕರ ಸಲುವಾಗಿ ಸ್ವಲ್ಪದರಲ್ಲಿಯೇ ಇಲ್ಲಿ ಹೇಳುತ್ತೇವೆ. ನಯಿನಿತಾಲದ ಉತ್ತರಕ್ಕೆ ಸುಮಾರು ೧೩ ಮೈಲಿನ ಮೇಲೆ, ಹರಿದ್ವಾರದಿಂದ ೧೬೦ ಮೈಲಿನ ಮೇಲೆ ಇರುವ ಜ್ರಿಟಿಶ ಗವರ್ಣಾಲ ಎಂಬ ಸೀಮೆಯಲ್ಲಿ ಗೋಹನಾ ಎಂಬ ಹೆಸರಿನದೊಂದು ಊರು ಇರುತ್ತದೆ. ಈ ಊರು ಜಿಪಾರೀಗಂಗಾ ಎಂಬ ನದಿಯ ಮೇಲೆ ಸ್ಥಾಪಿತವಾಗಿದೆ. ಹೋದ ಸಪ್ಟಂಬರ ೬ನೇ ತಾರೀಖಿನ ದಿವಸ

CONTD IN
NEXT ROLL

CONTD IN
NEXT ROLL

END

END

END